ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾಂತ ರತ್ನಮಾಲಾ
ದ್ವಿತೀಯ ರತ್ನವು— ನೂರನೆಯ ಸಂಚಿಕೆಯು.

ಶ್ರೀಮನ್ನಿಗಮಾನ್ತ ಮಹಾದೇಶಿಕ ಪ್ರಣೀತ

...ರುದ್ರಹಸ್ಯತ್ರಯಸಾರದ

...ಧಾನ ಪ್ರತಿತಂತ್ರಾಧಿಕಾರಃ—ತೃತೀಯಃ
ಅರ್ಥಪಞ್ಚಕಾಧಿಕಾರಃ—ಚತುರ್ಥಃ

...ಭ್ಯಾಸದ ಇಲಾಖಾ ರಿಟೈರ್ಡು ಸರ್ಕಲ್ ಇನ್ಸ್ಪೆಕ್ಟರು
ಸಿ. ಯಂ. ವಿಜಯರಾಘವಾಚಾರ್ಯರಿಂದ
ರಚಿಸಲ್ಪಟ್ಟ

ಆಚಾರ್ಯ ಹೃದಯಾನ್ವೇಷಿಣೀ
ಎಂಬ ಕನ್ನಡ ಅರ್ಥ ತಾತ್ಪರ್ಯಗಳೂ

ಬೆಂಗಳೂರು ಸಿಟಿ:
ಯೂನಿವರ್ಸಲ್ ಪವರ್ ಪ್ರೆಸ್‌ನಲ್ಲಿ ಮುದ್ರಿಸಲ್ಪಟ್ಟಿತು.

1928

ಕ್ರಯ 12 ಆಣೆಗಳು

೦॥

ಚೇತನಕ್ಕಾ
ಿ, ಹಾಗೆ ಸರ್ವ
ಇದು ತಿಳಿ

ಶ್ರಿಯೈನಮಃ.
ಶ್ರೀ ಶ್ರೀನಿವಾಸಾಯನಮಃ.
ಶ್ರೀಮತೇ ರಾಮಾನುಜಾಯನಮಃ.
ಮತೇ ನಿಗಮಾಂತ ಮಹಾದೇಶಿಕಾಯನಮಃ.

ಥಪ್ರಧಾನ ಪ್ರತಿತನ್ತ್ರಾಧಿಕಾರಃ ॥೩॥

ಸುತ್ವಪ್ರಭೃತಿನಿಯಮ್ಯೈ ರಾದಿಕರ್ತುಶ್ಶರೀರಂ
ವಿದ್ವ್ಯಸ್ಥೇಮಪ್ರಯತನಫಲೇ ಷ್ವೇತದಾಯತ್ತಮೇತತ್ ।

ಅವತಾರಿಕೆ:—ಹಿಂದಿನ ಅಧಿಕಾರದಲ್ಲಿ ವೇದವೇದಾಂತಗಳಲ್ಲಿ ಮವಾದುದು **ಶ್ರೀಮದ್ರಹಸ್ಯತ್ರಯ** ವೆಂದು ಹೇಳುವ ಸಂದ ಈ ರಹಸ್ಯತ್ರಯವು ತತ್ವಹಿತ ಪುರುಷಾರ್ಥಗಳನ್ನು ಸಂಗ್ರ ಬಹು ಸ್ವಾರಸ್ಯವಾಗಿ ಸೂಚಿಸುತ್ತವೆಂದು ಹೇಳಲ್ಪಟ್ಟಿತು. ಧಿಕಾರದಲ್ಲಿ ನಮ್ಮ ಸಿದ್ಧಾನ್ತಕ್ಕೇ ಅಸಾಧಾರಣವಾಗಿ ಪ್ರಧಾನ ವ ತತ್ವವು, **ಪ್ರಧಾನಪ್ರತಿತಂತ್ರ** ವೆಂದು ಹೇಳಿಸಿಕ್ಕೊಳ್ಳು ಯಾವುದೆಂಬುವದು ಉಪಪಾದಿಸಲ್ಪಡುತ್ತದೆ. ಆ ಪ್ರಧಾನತ ಯಾವುದು ಎಂಬುವದನ್ನು ಸಂಗ್ರಹವಾಗಿ ಬಂದು ಶ್ಲೋಕರೂ ಅನುಗ್ರಹಿಸುತ್ತಾರೆ.

ಪ್ರತಿತಂತ್ರಾರ್ಥವೇನೆಂದರೆ:—ಸರ್ವಚೇತನಾ ಚೇತನವೂ (1) ರಂವೈಹರೇಸ್ತನುಃ" ಎಂದು ಹೇಳಿರುವಹಾಗೆ ಸರ್ವೇಶ್ವರನಿಗೆ ರವು, ಸರ್ವೇಶ್ವರನೇ ಶರೀರಿಯಾಗಿ (2) "ಐತದಾತ್ಮ್ಯಮಿದಗ್ಂ

(1) ವಿ. ಪು. (2) ಛಾಂ. 6. 8. 7.

ವಿಶ್ವಂ ಪಶ್ಯನ್ನಿತಿ ಭಗವತಿ ವ್ಯಾಪಕಾದರ್ಶ ದೃಷ್ಟೇ ।
ಗಂಭೀರಾಣಾಮುಕೃತಿಕ ಗಿರಾ ಜ್ಞಾಹತೇ ಚಿತ್ತವೃತ್ತಿಂ ॥೧

ಸರ್ವಂ" ಎಂದು ಹೇಳಿರುವಹಾಗೆ, ಎಲ್ಲಾ ಚೇತನಾ... ಆತ್ಮನು. ನಮ್ಮ ಶರೀರಕ್ಕೆ ನಮ್ಮ ಆತ್ಮಾ ಹೇಗೊ... ವಿಶ್ವಕ್ಕೂ ವಿಶ್ವೇಶನು ಆತ್ಮನು. ಇದೇ ಪ್ರತಿತಂತ್ರವು... ಯದೇ ಹೋದರೆ ನಮ್ಮ ಸಿದ್ಧಾಂತಗಳಲ್ಲಿ ಯಾವುದೂ ... ವಾಗುವದಿಲ್ಲವೆಂಬ ಭಾವವು. ಅದೂ ಅಲ್ಲದೆ, ಈ ಅಭಿಪ್ರಾಯ ತಿಳಿಯ... ದಿದ್ದರೆ, ಅನೇಕ ಶ್ರುತಿಗಳಿಗೆ ಸಾಮಂಜಸ್ಯವೂ ಉಂಟಾಗುವದಿಲ್ಲವು.

ಅರ್ಥ:—**ಏತತ್**–ಈ, **ವಿಶ್ವಂ**–ಲೋಕವೆಲ್ಲಾ (ಚೇತನಾ ಚೇತನಾತ್ಮಕವಾದ ಸಮಸ್ತವಿಶ್ವವೂ ಎಂಬ ಭಾವವು. ಇದರಿಂದ ಉಭಯ ವಿಭೂತಿಗಳೂ ಹೇಳಲ್ಪಟ್ಟವು,) **ಆಧೇಯತ್ವ ಪ್ರಭೃತಿ ನಿಯಮ್ಯೈಃ**—**ಅಧೇಯತ್ವ**-ಆ ಪರಮಾತ್ಮನನ್ನೇ ಮುಖ್ಯಾಧಾರವಾಗಿ ಉಳ್ಳ ಭಾವವೇ, **ಪ್ರಭೃತಿ** - ಮೊದಲಾದ, (ಮೊದಲಾದ ಎಂಬುವದರಿಂದ ನಿಯಾಮ್ಯತ್ವ ಶೇಷತ್ವಗಳು ಹೇಳಲ್ಪಟ್ಟವು. ನಿಯಾಮ್ಯತ್ವವೆಂದರೆ ಪರಮಾತ್ಮನನ್ನೇ ಮುಖ್ಯನಿಯಾಮಕನಾಗಿ ಉಳ್ಳ ಭಾವವು. ಶೇಷತ್ವವೆಂದರೆ ಆ ಪರಮಾತ್ಮನಿಗೇನೆ ಪ್ರಯೋಜನ ಉಳ್ಳವುಗಳಾಗಿಯೂ ಸ್ವಪ್ರಯೋಜನ ಸ್ವಲ್ಪವೂ ಇಲ್ಲದಿರುವ ಭಾವವು.) ಇವೇ ಮೊದಲಾದ, **ನಿಯಮ್ಯೈಃ**-ಕ್ರಮಗಳಿಂದ, **ಆದಿಕರ್ತುಃ**-ಜಗತ್ಸೃಷ್ಟಿಗೆ ಆದಿಕಾರಣನಾದ ಪರಮಪುರುಷನ, **ಶರೀರಂ**-ಶರೀರವು; ಎಂದರೆ ಶರೀರವಾಗಿರುತ್ತದೆ ಎಂಬದಾಗಿ ವಾಕ್ಯಪೂರಣವು. ಮತ್ತೂ, **ಸತ್ತಾಸ್ಥೇಮಪ್ರಯತನ ಫಲೇಷು**, **ಸತ್ತಾ** - ಸ್ವರೂಪಲಾಭದಲ್ಲಿಯೂ, **ಸ್ಥೇಮ**-ಅನಂತರವಿರುವ ಸ್ಥಿತಿಯಲ್ಲಿಯೂ, **ಪ್ರಯತನ**-ವ್ಯಾಪಾರದಲ್ಲಿಯೂ, **ಫಲೇಷು**-ಭೋಗ ಮೋಕ್ಷ ಮೊದಲಾದ ಫಲಗಳಲ್ಲಿಯೂ ಕೂಡ, **ಏತದ್ವಿಶ್ವಂ**-ಈ ವಿಭೂತಿಯೆಲ್ಲವೂ, **ಏತದಾಯತ್ತಂ**-ಈ ಭಗವಂತನಿಗೆ ಅಧೀನವಾದುದು; **ಇತಿ**-ಹೀಗೆ, (ಅಂದರೆ ತಾನು ಸ್ವಾಮಿಗೆ ಶರೀರವು ತನಗೆ ಸ್ವಾಮಿಯೇ ಆತ್ಮಾ, ತನ್ನ ಸ್ವರೂಪ, ಸ್ಥಿತಿ ಪ್ರವೃತ್ತಿ, ತನಿಗುಂಟಾಗುವ ಫಲಗಳು ಎಲ್ಲಾ ಭಗವದಧೀನವು ಎಂ...

ದಾಗಿ) ಈ ಎಲ್ಲಾ ಅಭಿಪ್ರಾಯವನ್ನು, **ವ್ಯಾಪಕಾ ದರ್ಶದೃಷ್ಟೇ, ವ್ಯಾಪಕ**-ಮೂಲಮಂತ್ರವೆಂಬ (ಈ ಶರೀರ ಶರೀರಿಭಾವ, ಶೇಷ ಶೇಷಿಭಾವವೆಲ್ಲವೂ ಈ ಮಂತ್ರದಲ್ಲಿ ಉಪಪಾದಿತವಾಗಿ, ಸಮಸ್ತ ಅರ್ಥಗಳ ವ್ಯಾಪನೆಯೂ ಇದರಲ್ಲಿರುವದರಿಂದ ಇದಕ್ಕೆ **ವ್ಯಾಪಕ ಮಂತ್ರ** ವೆಂದು ಹೆಸರು.) **ಆದರ್ಶ**-ಕನ್ನಡಿಯಲ್ಲಿ, **ದೃಷ್ಟೇ**-ತೋರುವ, **ಭಗವತಿ**-ಷಾಡ್ಗುಣ್ಯ ಪರಿಪೂರ್ಣನಾದ ಪರಮಾತ್ಮನಲ್ಲಿ, **ಪಶ್ಯ**-ನೋಡುವವನು, **ಗಂಭೀರಾಣಾಂ**-ಅಲ್ಪಶ್ರುತರಿಂದಲೂ ಸ್ವಾಮಿಕೃಪೆ ಇಲ್ಲದಿರುವವರಿಂದಲೂ ತಿಳಿಯಲಶಕ್ಯಗಳಾದ, **ಅಕೃತಕ ಗಿರಾಂ**-ಯಾರಿಂದಲೂ ಮಾಡಲ್ಪಡದೇ ಅನಾದಿಯಾಗಿರುವ ವೇದಗಳ, **ಗಿರಾಂ**- ವಾಕ್ಕುಗಳ, **ಚಿತ್ತವೃತ್ತಿಂ**- ಯಥಾರ್ಥವಾದ ಅಭಿಪ್ರಾಯವನ್ನು (ಅಂದರೆ ಶರೀರವಾಚಕ ಶಬ್ದಗಳಿಗೆ ಶರೀರಿವರಿವಿಗೂ ಅನ್ವಯವೆಂಬ ಮುಖ್ಯತಾತ್ಪರ್ಯವನ್ನು) **ಗಾಹತೇ**-ಗ್ರಹಿಸುವನು.

ತಾತ್ಪರ್ಯ:—ತತ್ವದಲ್ಲಿ ನಮ್ಮ ಸಿದ್ಧಾಂತಕ್ಕೆ ಮಾತ್ರವೇ ಅಸಾಧಾರಣವಾಗಿರುವ ವಿಷಯ ವ್ಯಾವುದೆಂಬುವದು ಮುಖ್ಯವಾಗಿ ತಿಳಿಯತಕ್ಕದ್ದು. ಅದು ತಿಳಿದರೇನೇ ಸರ್ವವಿಷಯವು ವಿಶದವಾಗಿ ತಿಳಿಯುತ್ತದೆ. ಅದು ತಿಳಿದರೇನೆ ತನ್ನ ಸ್ವರೂಪಸ್ಥಿತಿ ಪ್ರವೃತ್ತಿಗಳು ಎಂಥಾದ್ದೆಂಬುವದು ತಿಳಿಯುತ್ತದೆ. ಅದು ತಿಳಿದರೇನೇ, ಸರ್ವೋತ್ಕೃಷ್ಟವಾದ ಪುರುಷಾರ್ಥ ವ್ಯಾವುದೆಂದು ತಿಳಿಯುತ್ತದೆ. ಅದು ತಿಳಿದರೇನೇ ಆ ಫಲಪ್ರಾಪ್ತಿಗೆ ಏನು ಪ್ರಯತ್ನವೆಂಬುವದು ತಿಳಿಯುತ್ತದೆ. ಅದು ತಿಳಿದರೇನೇ ಪ್ರಾಪ್ಯನಾದ ಪರಬ್ರಹ್ಮಸ್ವರೂಪವೆಂತಾದ್ದು ಎಂಬುವದು ವಿದಿತವಾಗುತ್ತದೆ. ಅದು ತಿಳಿದರೇನೇ ವಿಶಿಷ್ಟಾದ್ವೈತ ಸಿದ್ಧಾಂತದ ಮರ್ಮವು ಗೋಚರವಾಗುತ್ತದೆ. ಅದು ತಿಳಿದರೇನೇ ಸರ್ವ ಶ್ರುತಿಗಳಿಗೂ ಸಮಂಜಸವಾದ ಅರ್ಥವು ಅವಗಾಹನೆಗೆ ಬರುತ್ತದೆ. ಆದುದರಿಂದಲೇ ಅದು ನಮಗೆ **ಪ್ರಧಾನವಾದ, ಮುಖ್ಯವಾದ ಪ್ರತಿತಂತ್ರವು.** ಈ ಅಭಿಪ್ರಾಯವನ್ನು ಇತರ ಮತದವರು ಸರಿಯಾಗಿ ವೇದೋಕ್ತಿಗಳಿಂದ ಗ್ರಹಿಸಲಿಲ್ಲವಾದುದರಿಂದ ಅವರಿಗೆ ಯಥಾರ್ಥವಾದ ಅರ್ಥ ತಾತ್ಪರ್ಯವು ಸಿಕ್ಕಲಿಲ್ಲವು. ಆದುದರಿಂದಲೇ ವೇದವನ್ನು "ಗಂಭೀರ" ವಾದ "ಅಕೃತಿಕಗಿರ" ವೆಂದು ಹೇಳಿರುತ್ತಾರೆ. ಯಥಾ

ರವು. ಯಾವ ಚೇತನನಿಗೆ ಯಾವದ್ರವ್ಯವು ಸ್ವಪ್ರಯೋಜನಕ್ಕಾಗಿಯೇ ಇತರರಿಗೆ ಪ್ರಯೋಜನವಿಲ್ಲದೆ ಇಧೆಯೋ ಅದು ಆತನಿಗೆ ಶರೀರವು" ಎಂಬದಾಗಿ ವ್ಯಾಸಾರ್ಯರು ಹೇಳಿರುತ್ತಾರೆ. ಆದುದರಿಂದ ಶರೀರಭಾವಕ್ಕೆ ಲಕ್ಷಣಗಳು ಒಬ್ಬ ಚೇತನನಿಂದಲೇ ಧರಿಸಲ್ಪಡುವಿಕೆ, ನಿಯಮಿಸಲ್ಪಡುವಿಕೆ, ಭೋಗ್ಯವಾಗಿರುವಿಕೆ; ಇವು ಮೂರೂ ಈ ಜಗತ್ತಿಗಿರುವದರಿಂದ, ಜಗತ್ತೆಲ್ಲಾ ಆದಿಕಾರಣನಾಗಿರುವ ಜಗದೀಶ್ವರನಿಗೆ ಶರೀರವು; ಅವುಗಳಿಗೆಲ್ಲಾ ಸ್ವಾಮಿಯು ಆತ್ಮವು. ಜಗತ್ತಿಗೂ ಈಶ್ವರನಿಗೂ ಇರುವ ಈ ಶರೀರ ಶರೀರಿ ಭಾವವು ಬೃಹದಾರಣ್ಯಕ ಪಂಚಮಾಧ್ಯಾಯ (ಬ್ರಾ ೭) ದಲ್ಲಿ ಬಹುಚನ್ನಾಗಿ ಉಪಪಾದಿತವಾಗಿರುತ್ತದೆ. ಇದೂ ಅಲ್ಲದೆ ಇನ್ನೂ ಅನೇಕ ಪ್ರಮಾಣಗಳಿವೆ,

"ತತ್ರೈಕಸ್ಥಂ ಜಗತ್ಕೃತ್ಸ್ನಂ ಪ್ರವಿಭಕ್ತಮನೇಕಧಾ।
ಅಪಶ್ಯದ್ದೇವದೇವಸ್ಯ ಶರೀರೇ ಪಾಣ್ಡವಸ್ತದಾ॥

ಗೀತಾ. ೧೧. ೧೩.

ಸಮಸ್ತ ಜಗತ್ತುಗಳೂ ಸ್ವಾಮಿಯ ಶರೀರದ ಒಂದು ದೇಶದಲ್ಲಿದ್ದವೆಂದು ಹೇಳಲ್ಪಟ್ಟಿರುತ್ತದೆ. **"ಸೋಽಭಿಧ್ಯಾಯ ಶರೀರಾತ್ಸ್ವಾತ್"** (ಮನುಸ್ಮೃತಿ) **"ಜಗತ್ಸರ್ವಂ ಶರೀರಂತೆ,"** (1). **"ಯದಮ್ಬುವೈಷ್ಣವಃ ಕಾಯಃ" "ತಾನಿಸರ್ವಾಣಿತದ್ವಪುಃ," "ತತ್ಸರ್ವಂ ವೈಹರೇಸ್ತನುಃ"** ಹೀಗೆ ಅನೇಕ ಪ್ರಮಾಣವಚನಗಳಿವೆ.

೨. "ಏತದ್ವಿಶ್ವಂ ಸತಾ ಸ್ಥೇಮಪ್ರಯತನಫಲೇಷು

ಏತದಾಯತ್ತಂ. ಸ್ವರೂಪಲಾಭವೇನು, ಸ್ಥಿತಿಯೇನು, ಪ್ರವೃತ್ತಿಯೇನು, ಫಲಗಳೇನು, ಇವುಗಳಲ್ಲೆಲ್ಲಾ ಈ ಜಗತ್ತು ಸರ್ವೇಶ್ವರನಿಗೆ ಅಧೀನವು ಎಂಬುವದರಿಂದ ಅದು ಸ್ವಾಮಿಯ ಸ್ವರೂಪ ಸಂಕಲ್ಪಗಳಿಗೆ ಅಧೀನವೆಂಬಭಿಪ್ರಾಯವು. ಜಗತ್ತುಗಳಲ್ಲಿರುವ ಎಲ್ಲಾ ಚಿದಚಿತ್ತುಗಳಿಗೆಲ್ಲಾ ಸ್ವರೂಪಲಾಭವೂ ಪರಮಾತ್ಮ

(1) ವಿಷ್ಣುಪುರಾಣವಚನಗಳು. 2. 12. 37 1 22. 87 1. 22. 38

ಸ್ವರೂಪ ಸಂಕಲ್ಪಗಳಿಂದಲೇ; ಅವುಗಳ ಸ್ಥಿತಿ ಮತ್ತು ವ್ಯಾಪಾರಾದಿಗಳೆಲ್ಲಾ ಕೂಡ ಹಾಗೆಯೇ ಆತನಿಗೆ ಅಧೀನವಾದವು. ಚೇತನನ ಐಹಿಕಸರ್ವಭೋಗಗಳೂ, ಸ್ವರ್ಗ ಬ್ರಹ್ಮಲೋಕ ಪ್ರಾಪ್ತಿಗಳೂ, ಕೈವಲ್ಯಮೋಕ್ಷಗಳೂ, ಎಲ್ಲವೂ ಪರಮಾತ್ಮನ ಅಧೀನವು. ಸ್ವಾಮಿಯ ಸ್ವರೂಪಕ್ಕೆ ಅಧೀನವಾದ **ಸತ್ತಾಸ್ಥಿತಿಪ್ರಯತನ** ವಿರುವಿಕೆಯೇ **ಆಧೇಯತ್ವ** ವೆನ್ನುವದು. ಆತನ ಇಚ್ಛಾಮೂಲಕವಾಗಿ ಆತನಿಗೆಮಾತ್ರವೇ ಪ್ರಯೋಜನ ಉಳ್ಳದ್ದಾಗಿ ಸಂಪ್ರೀಣನೆಯುಂಟಾಗುವದೇ **ಶೇಷತ್ವವು.** ಹೀಗೆ ಸರ್ವವೂ ಭಗವಚ್ಛರೀರವಾಗಿರುವದರಿಂದಲೇ ಜಗತ್ತಿನ ಸತ್ತಾ ಸ್ಥಿತಿ ಪ್ರಯತನಾದಿಗಳು ಆತನಿಗೆ ಅಧೀನವೆಂಬ ಭಾವವು. ಅಥವಾ, ಈ ಜಗತ್ತಿನ ಸತ್ತಾ ಸ್ಥಿತಿ ಪ್ರಯತನ ಫಲಾದಿಗಳು ಆತನಧೀನವಾಗಿರುವದರಿಂದ, ಆಧೇಯತ್ವ ವಿಧೇಯತ್ವ ಶೇಷತ್ವಾದಿಗಳು ಈ ಜಗತ್ತಿಗೆ ಪ್ರಾಪ್ತವಾಗಿರುತ್ತವೆ. ಆದುದರಿಂದ ಈ ಜಗತ್ತೆಲ್ಲಾ ಆತನಿಗೆ ಶರೀರವು. ಆತನು ಈ ಎಲ್ಲಕ್ಕೂ ಆತ್ಮಾ ಎಂಬುವದು ಮುಖ್ಯ ಸಿದ್ಧಾನ್ತವೆಂಬ ಭಾವವು.

ಈ ಮೇಲಿನ ಅಭಿಪ್ರಾಯಕ್ಕೆ ಶ್ರುತಿ ಸ್ಮೃತಿ ಇತಿಹಾಸ ಪುರಾಣಪ್ರಮಾಣಗಳಿರು ಲ್ಲದೆ, ಈಗ ಬೇರೇ ಶಾಸ್ತ್ರಗಳ ಅಪೇಕ್ಷೆ ಇಲ್ಲದೇನೇ, ಶಾಸ್ತ್ರದಲ್ಲಿ ರತಮ ಭಾಗವೆಂದು ನಿರ್ಧರಿಸಲ್ಪಟ್ಟ ರಹಸ್ಯತ್ರಯಗಳಲ್ಲಿ ಈ ಪ್ರತಿತನ ವು ವ್ಯಕ್ತಪಡುತ್ತದೆಯೋ ಎಂಬ ಶಂಕಾವಿಗೆ ಉತ್ತರವನ್ನು ಹೇಳುತ್ತಾರೆ--ಮೂಲಮಂತ್ರದಲ್ಲಿ ಈ ಅಭಿಪ್ರಾಯಗಳು ಬಹು ಸ್ವಾರಸ್ಯವಾಗಿ ಉಪಪಾದಿತವಾಗಿರುತ್ತವೆಂದು ತಿಳಿಸುವುದಕ್ಕಾಗಿ **"ವ್ಯಾಪಕಾದರ್ಶ ದೃಷ್ಟೇ ಭಗವತಿ"** ಎಂದು ಪ್ರಯೋಗಿಸಿರುತ್ತಾರೆ. ಬಹುಸ್ಫುಟವಾಗಿ ಕನ್ನಡಿಯಲ್ಲಿ ತೋರುವಹಾಗೆ ಈ ಅಭಿಪ್ರಾಯಗಳು ತೋರಿಬರುತ್ತವೆ ಎಂಬ ಭಾವದಿಂದ ಆದರ್ಶ ಶಬ್ದವು ಪ್ರಯೋಗಿಸಲ್ಪಟ್ಟಿರುತ್ತದೆ. ಈ ವಿಧವಾದ ಭಾವಗಳನ್ನೆಲ್ಲಾ ವ್ಯಾಪ

ಕಮಂತ್ರವೆನಿಸುವ ಅಷ್ಟಾಕ್ಷರ ಮಂತ್ರವೆಂಬ ಕನ್ನಡಿಯಲ್ಲಿ ಕಾಣುವ ಭಗವಂತನಲ್ಲಿ ಯಾವನುನೋಡುವನೋ, ಅವನೀಗ (1) ಭೇದಾಭೇದ ಘಟಕಶೃತಿಗಳುಳ್ಳದ್ದಾಗಿ, ಸಮಂಜಸಾರ್ಥಗಳು ಸುಲಭವಾಗಿ ಸ್ಫುಟವಾಗಿರುವ ಕಾರಣದಿಂದ "ಗಂಭೀರ" ವಾದುದೆಂದೆನಿಸುವ, ವೇದವಾಕ್ಕುಗಳ ಯಥಾರ್ಥಾಭಿಪ್ರಾಯವನ್ನು ಗ್ರಹಿಸಿದವನೆಂದು ಭಾವಿಸತಕ್ಕದ್ದು. ಸೂಕ್ಷ್ಮವಾಗಿರುವ ವಸ್ತುವು ಭೂತಕನ್ನಡಿಯ ಸಹಾಯದಿಂದ ಹೇಗೆ ಸ್ಫುಟವಾಗಿ ತೋರುತ್ತದೋ ಹಾಗೆ ಶಾಸಗಳಲ್ಲಿ ಸ್ವಲ್ಪ ಸೂಕ್ಷ್ಮವಾಗಿ ತೋರಿಬರುವ ಪರಮಾತ್ಮಭಾವವು ಈ ವ್ಯಾಪಕಮಂತ್ರದಲ್ಲಿ ಬಹು ಸ್ಫುಟವಾಗಿ ತೋರಿಬರುತ್ತದೆಂಬಭಿಪ್ರಾಯವೂ ಕೂಡ ಇಲ್ಲಿ ಸೂಚಿಸಲ್ಪಟ್ಟಿತು. ನಮ್ಮಗಳ ಪ್ರತಿತಂತ್ರ ಬಲದಿಂದ ಭೇದಾಭೇದ ಘಟಕಶ್ರುತಿಗಳಿಗೆಲ್ಲಾ ಮುಖ್ಯಾರ್ಥವನ್ನೇ ಹೇಳಿ ಅವುಗಳಿಗೆ ಇರುವ ಪರಸ್ಪರ ಸಾಮಂಜಸ್ಯವನ್ನು ನಮ್ಮ ಆಚಾರ್ಯರುಗಳು ಸ್ಥಾಪಿಸಿರುತ್ತಾರೆ. ಇತರ ಸಿದ್ಧಾಂತಿಗಳು ಇವುಗಳು ಪರಸ್ಪರ ವಿರುದ್ಧಾರ್ಥಗಳುಳ್ಳವೆಂದು ಭಾವಿಸಿ ಅವುಗಳಿಗೆ ಸಾಮಂಜಸ್ಯವನ್ನು ಕಲ್ಪಿಸುವದಕ್ಕಾಗಿ ಲಾಕ್ಷಣಿಕಾರ್ಥಗಳನ್ನು ಹೇಳುವದರಿಂದ ಶ್ರುತಿಗಳಿಗೆ ಅಪಾರ್ಥಗಳನ್ನು ಕಲ್ಪಿಸಿರುತ್ತಾರೆಂಬ ಭಾವವು.

ಆದುದರಿಂದ ನಮ್ಮ ಮುಖ್ಯಸಿದ್ಧಾಂತವೇನಂದರೆ:— ಎಲ್ಲಾ ಲೋಕಗಳಲ್ಲೂ ಇರುವ ಚಿದಚಿತ್ತುಗಳೆಲ್ಲಾ ಆತನಿಗೆ ಶರೀರವು, ಸ್ವಾಮಿಯೇ ಶರೀರಿಯಾಗಿ ಆತ್ಮಾ. ಆತನಿಂದಲೇ ಎಲ್ಲಾ ವಸ್ತುಗ

---

(1) **ಭೇದಶ್ರುತಿಗಳು** ಜೀವಪರಮಾತ್ಮ ಭೇದವನ್ನು ಹೇಳುವ ಶ್ರುತಿಗಳು:— **"ದ್ವಾಸುಪರ್ಣಾಸಯುಜಾ" "ಜ್ಞಾಜ್ಞೌ ಈಶನೀಶಾ" "ಭೋಗ್ಯಂ ಭೋಕ್ತಾ ಪ್ರೇರಿತಾರಂಚಮತ್ವಾ"** ಇತ್ಯಾದಿಗಳು.

ಅಭೇದ ಶ್ರುತಿಗಳು ಶರೀರವನ್ನು ಹೊಂದಿರುವ ಶರೀರಿಯನ್ನು ಹೇಳುವವು. **"ಸದೇವ ಸೋಮ್ಯೇದಮಗ್ರಆಸೀತ್" "ಸರ್ವಂ ಖಲ್ವಿದಂಬ್ರಹ್ಮ"** ಮುಂತಾದವು.

ಘಟಕಶ್ರುತಿಗಳು "ಯಸ್ಯ ಪೃಥಿವೀ ಶರೀರಂ" "ಯಸ್ಯಾತ್ಮಾ ಶರೀರಂ" "ಐತದಾತ್ಮ ಮಿದಗ್ಂ ಸರ್ವಂ. ಇತ್ಯಾದಿ.

ಳಿಗೆ ಸ್ವರೂಪ ಸ್ಥಿತಿ ಪ್ರವೃತ್ತ್ಯಾದಿಗಳು. ಆದುದರಿಂದ ಶರೀರವಾಚಕಶಬ್ದಗಳಿಗೆ ಶರೀರಿಯಾದ ಪರಮಾತ್ಮನಲ್ಲೇ ಅನ್ವಯವು. ಅಂದರೆ ಈ ಲೋಕಗಳ ಪ್ರತಿಯೊಂದು ಪದಾರ್ಥವೂ ತತ್ತಚ್ಛರೀರಕನಾಗಿರುವ ಪರಮಾತ್ಮನನ್ನೇ ಬೋಧಿಸುತ್ತವೆ.

ಈ ವಿಧವಾದ ಪ್ರತಿತಂತ್ರಾಭಿಪ್ರಾಯಗಳೆಲ್ಲಾ ಮೂಲಮಂತ್ರದಲ್ಲಿ ಎಲ್ಲಿ ಬೋಧಿತವಾಗಿರುತ್ತದೆ ಎಂದರೆ:— ಈ ಮಂತ್ರದಲ್ಲಿರುವ ನಾರಾಯಣ ಪದದಿಂದ, **ನಾರಾಣಾಂ ಅಯನಂ** ಎಂಬ ಷಷ್ಟಿ ತತ್ಪುರುಷ ಸಮಾಸರೀತ್ಯಾ, ನಿತ್ಯವಾದ ಪದಾರ್ಥಗಳಿಗೆಲ್ಲಾ ಆಧಾರನು, ಎಂಬುವದರಿಂದ ಜಗತ್ತಿನ ಆಧೇಯತ್ವವು ಶಿಕ್ಷಿತವಾಯಿತು. "ಓಂ" ಎಂಬ ಪ್ರಣವದಲ್ಲಿರುವ ಅಕಾರ, ಉಕಾರ, ಮಕಾರಗಳಿಂದಲೂ, "ನಮಃ" ಎಂಬ ಪದವನ್ನು ಸಖಂಡವಾಗಿ ಅಂದರೆ ನ, ಮಃ ಎಂದು ಬೇರೆಬೇರೆಯಾಗಿ ಇಟ್ಟುಕೊಂಡರೆ, ಅಕಾರವು ಲೋಪವನ್ನು ಹೊಂದಿದ ಚತುರ್ಥಿಯಾದುದರಿಂದಲೂ, ಉ ಎಂಬುವದು ಅವಧಾರಣವಾದುದರಿಂದಲೂ, **ಮ್**-ಮಕಾರವಾಚ್ಯನಾದ ಜೀವನು, **ಆಯ್ಯೈವ**-ವಿಷ್ಣುವಿಗೇನೇ ವಿನಾ, **ಮಃ**-ನನಗೆ, **ನ**-ಅಲ್ಲವು ಅಂದರೆ ಜೀವನು ವಿಷ್ಣುವಿಗೆ ಶೇಷಭೂತನೇ ವಿನಾ ತನಗಲ್ಲವು ಎಂಬರ್ಥವು ಉಂಟಾಗುತ್ತದೆ. ಇದರಿಂದ **ಶೇಷತ್ವವು** ತೋರಿಬಂದು, ಆ ಪರಮಾತ್ಮನಿಂದಲೇ ಸ್ವರೂಪ ಲಾಭವೆಂಬುವದು ವ್ಯಕ್ತವಾಗುತ್ತದೆ. ಸಖಂಡ ಅಖಂಡ ನಮಶ್ಶಬ್ದಗಳಿಂದ, ಸ್ವರಕ್ಷಣದಲ್ಲಿ ತನಗೆ ಸ್ವಾತಂತ್ರ್ಯವಿಲ್ಲವೆಂದು ಅರ್ಥವು ತೋರಿಬರುತ್ತದೆ. ಇದರಿಂದ ನಿಯಾಮ್ಯತ್ವವು ಏರ್ಪಟ್ಟಿತು. ನಾರಾಯಣ ಶಬ್ದದಲ್ಲಿ **ನಾರಾಣಾಂ ಅಯನಂ** ಎಂಬ ವ್ಯುತ್ಪತ್ತಿಯಿಂದಲೇ ಆತನು ಪ್ರಾಪಕನೂ, ಪ್ರಾಪ್ಯನೂ, ಎಂಬುವದು ಏರ್ಪಡುತ್ತದೆ. ಇದರಿಂದಲೂ ಮತ್ತು **ನಾರಾಯಣಾಯ** ಎಂಬ ಚತುರ್ಥಿಯಿಂದ ಸರ್ವವಿಧ ಕೈಂಕರ್ಯಗಳೂ ನಾರಾಯಣನಿಗೇನೇ ವಿನಾ, **ಮಃ**-ನನಗೆ, **ನ**, ಅಲ್ಲವು ಎಂಬ ಯೋಜನೆಯಿಂದಲೂ, ಪ್ರವೃತ್ತಿ ಫಲಗಳೂ ಕೂಡ ಸ್ವಾಮಿಗೆ ಅಧೀನವಾದವೆಂಬುವದು ತೋರಿಬರುತ್ತಧೆ, ಆದುದರಿಂದ ಈ ಎಲ್ಲಾ ಭಾವಗಳೂ ಮೂಲಮಂತ್ರದಲ್ಲಿ ವ್ಯಕ್ತಪಡುತ್ತದೆಂಬಭಿಪ್ರಾಯವು. ವ್ಯಾಪಕಮಂತ್ರವೆಂಬುವದರಿಂದ ಅಷ್ಟಾಕ್ಷರವಲ್ಲದೆ, ಷಡಕ್ಷರ ದ್ವಾದ

ಪ್ರತಿತಂತ್ರಶಬ್ದಾರ್ಥ ಪ್ರತಿಪಾದನಂ.

ಪ್ರತಿತಂತ್ರಮಾವದು? ಮಟ್ರುಮುಳ್ಳ ಸಿದ್ಧಾಂತಿಗಳೊರುವರು (1) ಇಶಿಯಾದೆ ತನ್ನುಡೈಯ ಸಿದ್ಧಾನ್ತಕ್ಕೇ ಯಸಾಧಾರಣಮಾನವರ್ಥಂ.

ಶಾಕ್ಷರಗಳಾದ ವಿಷ್ಣುವಾಸುದೇವ ಮಂತ್ರಗಳೂ ಬೋಧಿಸಲ್ಪಟ್ಟವು. ಪ್ರಕೃತಪ್ರಕರಣಕ್ಕೆ ಬೇಕಾದ ಮಂತ್ರವು ಅಷ್ಟಾಕ್ಷರವಾದುದರಿಂದ ಅದನ್ನು ಕುರಿತೇ ಹೇಳಲ್ಪಟ್ಟಿತೆಂದು ಭಾವಿಸಬಹುದು. ಇತರ ಮಂತ್ರಗಳಲ್ಲೂ ಅಂತರ್ಯಾಮಿಯಾಗಿ ಸಕಲವನ್ನೂ ಸರ್ವೇಶ್ವರನು ವ್ಯಾಪಿಸಿರುವದರಿಂದ, ಎಲ್ಲಕ್ಕೂ ಸ್ವಾಮಿಯು ಆತ್ಮವಾಗಿರುವ ಭಾವವು, ಸ್ಫುಟವಾಗಿ ತೋರಿಬರುತ್ತದೆ ಎಂಬಭಿಪ್ರಾಯದಿಂದ, ವ್ಯಾಪಕಶಬ್ದವನ್ನು ಶ್ರೀಮದಾಚಾರ್ಯರವರು ಇಲ್ಲಿ ಉಪಯೋಗಿಸಿರಬಹುದು.

ಪ್ರತಿತಂತ್ರಶಬ್ದದ ಅರ್ಥಬೋಧನವು.

(ಎಲ್ಲರಿಗೂ ತತ್ವವಿಷಯಗಳು ಸುಲಭವಾಗಿ ವೇದ್ಯವಾಗಲಿ ಎಂಬಭಿಪ್ರಾಯದಿಂದ ಅಂತಹ ಭಾಗಗಳನ್ನು ಪ್ರಶ್ನೋತ್ತರರೂಪದಿಂದ ತಿಳಿಸುತ್ತಾರೆ.)

"ಪ್ರತಿತಂತ್ರ" ವೆಂದರೇನು?--ಇತರ ಸಿದ್ಧಾಂತಿಗಳು ಯಾರೊಬ್ಬರೂ ಅಂಗೀಕರಿಸದೆ ತಮ್ಮ ಸಿದ್ಧಾಂತಕ್ಕೆಮಾತ್ರವೇ ಅಸಾಧಾರಣವಾದ ಅಭಿಪ್ರಾಯವು. (ಯಾವ ಸಿದ್ಧಾಂತವೇ ಆಗಲಿ ಯಥಾರ್ಥವಾಗಿ ಪ್ರಧಾನ ಪ್ರತಿತಂತ್ರವೆಂದು ಹೇಳಿಸಿಕೊಳ್ಳುವದಕ್ಕೆ, ಅದರಿಂದ ಮೂರುವಿಧವಾದ ಸಹಾಯಗಳುಂಟಾಗಬೇಕು:—(1) ಅದರ ಸಹಾಯದಿಂದ ಸರ್ವಶ್ರುತಿಗಳಿಗೂ ಪರಸ್ಪರ ವಿರೋಧವಿಲ್ಲದೆ ಸಮಂಜಸವಾದ ಅರ್ಥಹೇಳಲು ಸಾಧ್ಯವಾಗಬೇಕು. (2) ನಮ್ಮ ಸಿದ್ಧಾಂತಕ್ಕೆ ಸಂಪೂರ್ಣವಾಗಿ ಸಾಧನವಾಗಿರಬೇಕು. (3) ಪ್ರತಿಕಕ್ಷಿಗಳಾದ ಇತರ ಅಪಸಿದ್ಧಾಂತಗಳ ನಿರಸನಕ್ಕೆ ಸಾಧಕವಾಗಿರಬೇಕು. ಅಧಿಕಾರಾರ್ಥವನ್ನು ಸೂಚಿಸುವ ಆಧೇಯತ್ವ ಶ್ಲೋಕದಿಂದ ಮೊದಲಿನ ಅಂಶವೂ,

---

(1) ಇಶಿಯಾದೆ - ಅಂಗೀಕರಿಸದೆ.

ಶರೀರ ಶರೀರಿಭಾವವು.

2. ಇಙ್ಗು ವೇದಾನ್ತಿಗಳಾನ ನಮ್ಮುಡೈಯ ದರ್ಶನತ್ತುಕ್ಕೇ ಅಸಾಧಾರಣಮುಮಾಯ್ ಪ್ರಧಾನಮುಮಾನ ಅರ್ಥಮೇದೆನ್ನಿಲ್? ಚೇತನಾಚೇತನಙ್ಗಳುಕ್ಕು ಮೀಶ್ವರನುಕ್ಕು ಮುಣ್ಡಾನ ಶರೀರಾತ್ಮಭಾವ ಸಂಬನ್ಧಾದಿಗಳ್.

ಅಧಿಕಾರಾರ್ಥ ಉಪಪಾದನೆ ಮಾಡುವದರಲ್ಲಿ ಎರಡನೇ ಅಂಶವೂ, ಅಧಿಕಾರಸಂಗ್ರಹವಾದ "ಯದ್ಯೇದಂಯತಿಸಾರ್ವಭೌಮಕಥಿತಂ" ಎಂಬುವ ಶ್ಲೋಕದಿಂದ ಮೂರನೇ ಅಂಶವೂ ಪ್ರತಿಪಾದಿಸಲ್ಪಡುವದು.)

2. ಈ ಸಂದರ್ಭದಲ್ಲಿ ವೇದಾಂತಾರ್ಥಗಳನ್ನು ಚನ್ನಾಗಿ ಗ್ರಹಿಸಿದ ನಮ್ಮ ಪೂರ್ವಾಚಾರ್ಯರುಗಳ ಸಿದ್ಧಾಂತಕ್ಕೆ ಮಾತ್ರವೇ ಅಸಾಧಾರಣವಾಗಿಯೂ ಮುಖ್ಯವಾಗಿಯೂ ಇರುವ ಅರ್ಥವ್ಯಾವುದೆಂದರೆ? ಚೇತನಾಚೇತನಗಳಿಗೂ ಈಶ್ವರನಿಗೂ ಇರುವ ಶರೀರಾತ್ಮಭಾವದ ಸಂಬಂಧವೇ ಮೊದಲಾದವುಗಳು. (ಈ ಜಗತ್ತು ಅಂದರೆ ಇದರಲ್ಲಿರುವ ಚಿದಚಿದ್ರೂಪದಲ್ಲಿರುವ ಸರ್ವವಸ್ತುಗಳೂ ಸ್ವಾಮಿಯ ಶರೀರವು, ಪರಮಾತ್ಮನು ಆತ್ಮಾ, ಶರೀರಿಯು ಎಂಬಭಾವವು. ಆದುದರಿಂದ, ಇವು ಬೇರೆಬೇರೆಯಾಗಿರಲು ಸಾಧ್ಯವಿಲ್ಲವೆಂಬರ್ಥವು. (1) **"ಯಸ್ಯಪೃಥಿವೀಶರೀರಂ, ಯಸ್ಯಾಪಶ್ಶರೀರಂ, ಯಸ್ಯಸರ್ವಾಣಿಭೂತಾನಿಶರೀರಂ"** ಇತ್ಯಾದಿ ಶ್ರುತಿಪ್ರಮಾಣಗಳಿರುವದರಿಂದ, ಸಮಸ್ತ ಚೇತನಾಚೇತನಗಳೂ ಸ್ವಾಮಿಗೆ ಶರೀರವು. (2) **"ಐತದಾತ್ಮ್ಯಮಿದಂ ಸರ್ವಂ"** ಎಂದು ಹೇಳಿರುವದರಿಂದ ಈಶ್ವರನು ಶರೀರಿಯಾಗಿ ಇವೆಲ್ಲಕ್ಕೂ ಆತ್ಮವು. ಇಲ್ಲಿ **"ಸಂಬನ್ಧಾದಿಗಳ್"** ಎಂದು ಆದಿಶಬ್ದವನ್ನು ಪಯೋಗಿಸುವದರಿಂದ ಸ್ವಾಮಿಯ ಸರ್ವಶಬ್ದವಾಚ್ಯತ್ವವೂ, ಸರ್ವಕರ್ಮಾರಾಧ್ಯತ್ವವೂ ಹೇಳಲ್ಪಟ್ಟವು. ಸರ್ವಶಬ್ದವಾಚ್ಯತ್ವವೆಂದರೆ ಸರ್ವಶಬ್ದಗಳೂ ಸ್ವಾಮಿಯನ್ನು ಬೋಧಿಸುತ್ತವೆ ಎಂಬಭಾವವು. ಘಟಪಟದೇವಮನುಷ್ಯ ಪಶುವೃಕ್ಷಾದಿ ಶಬ್ದಗಳೆಲ್ಲಾ ಸ್ವಾಮಿಯ ಶರೀರವಾಗಿ ಆತನಿಗೆ ವಿಶೇಷಣಗಳು, ವಿಶೇಷಣಾರ್ಥಗಳೆಲ್ಲಾ ವಿಶೇಷ್ಯದಲ್ಲೇ

(1) ಬೃ. 5. 7. (2) ಛಾಂ. 6. 8. 7.

3. ಅತಿಲ್ ಈಶ್ವರನುಕ್ಕು ಶರೀರಿತ್ವಮಾವತು? ಚೇತನಾ ಚೇತನ ದ್ರವ್ಯಂಗಳೈ ಪ್ರಿನಿಯಮೇನ ಧಾರಕನುಮಾ ಯ್, ನಿಯನ್ತಾವುಮಾಯ್, ಶೇಷಿಯುಮಾ ಯಿರುಕ್ಕೈ.

ಅನ್ವಯ ಉಳ್ಳವುಗಳಾದುದರಿಂದ, ಶರೀರವಾಚಕ ಶಬ್ದಗಳೆಲ್ಲಾ ಶರೀರಿಯಾದ ಸ್ವಾಮಿಯಲ್ಲೇ ಅನ್ವಯ ಉಳ್ಳವುಗಳು. ಮನುಷ್ಯತ್ವವು ಆತ್ಮನ ಶರೀರವನ್ನು ಬೋಧಿಸುತ್ತದೆ. ಆದರೂ ಮನುಷ್ಯನು ಎಂಬುವದರಿಂದ ಮನುಷ್ಯಶರೀರಕನಾದ ಆತ್ಮವು ಹೇಗೆ ಗ್ರಹಿಸಲ್ಪಡುವದೋ ಹಾಗೆ ಎಂಬಭಾವವು. ಆದುದರಿಂದ ದೇವದತ್ತನೆಂದರೆ ತಚ್ಛರೀರಕ ಪರಮಾತ್ಮನು, ಘಟವೆಂದರೆ ಘಟಶರೀರಕ ಪರಮಾತ್ಮನು ಬೋಧಿಸಲ್ಪಟ್ಟನು. ಆದಕಾರಣ (1) "ಸರ್ವಾಗಿರಸ್ತ್ವಯಿಪತನ್ತಿ" ಅಂದರೆ ಎಲ್ಲಾಶಬ್ದಗಳೂ ನಿನ್ನಲ್ಲಿ ಬೀಳುತ್ತವೆ, ನಿನ್ನನ್ನು ಬೋಧಿಸುತ್ತವೆಂಬ ಭಾವವು. ಹೀಗೆ ಸ್ವಾಮಿಯು ಸರ್ವಶಬ್ದವಾಚ್ಯನು, ಇದೂ ಅಲ್ಲದೆ ಸರ್ವಕರ್ಮಾರಾಧ್ಯನು, ಸಾಧುಕರ್ಮಗಳು ಯಜ್ಞ ಯಾಗ ತಪ ದಾನ ಕ್ರಿಯೆಗಳು ಯಾವ ದೇವತೆಯನ್ನು ಯಾವ ಭಾಗವತರನ್ನು ಕುರಿತು ಮಾಡಿದಾಗ್ಯೂ ಅವು ಸ್ವಾಮಿಗೆ ಅರ್ಪಿತವಾದುವು ಆಗುತ್ತವೆ. ಆದಿಶಬ್ದದಿಂದ ಇವೆಲ್ಲಾ ಹೇಳಲ್ಪಟ್ಟವು.)

3. ಅದರಲ್ಲಿ ಈಶ್ವರನಿಗೆ ಶರೀರಿಯಾಗಿರುವ ಭಾವವು ಎಂಥಾದ್ದು? ಚೇತನಾಚೇತನ ವಸ್ತುಗಳನ್ನು ಕುರಿತು ಅವುಗಳಿಗೆ ಎಷ್ಟರವರಿವಿಗೂ ಅವುಗಳಿಗೆ ಸತ್ತೆ ಮೊದಲಾದವು ಉಂಟೋ ಅದುವರಿವಿಗೆ ಆಧಾರನಾಗಿ, ನಿಯಮಿಸುವನಾಗಿ, ಶೇಷಿಯಾಗಿರುವಿಕೆಯು. (ನಿಯಮೇನ ಎಂದು ಹೇಳಿದುದರಿಂದ ಆಧಾರ, ನಿಯನ್ತಾ, ಶೇಷಿಯಾಗಿರುವ ಭಾವವು ಎಂದಿಗೂ ತಪ್ಪಿದ್ದಲ್ಲವೆಂಬ ಭಾವವು. ಅವುಗಳು ಎಲ್ಲಿಯವರಿವಿಗೆ ಈಶ್ವರನಿಗೆ ಅಪೃಥಕ್ಸಿದ್ಧವಿಶೇಷಣವೋ ಅಲ್ಲಿಯವರಿವಿಗೂ ಈತನು ಅವುಗಳಿಗೆ ಆಧಾರನು, ನಿಯನ್ತಾ ಮತ್ತು ಶೇಷಿಯೂ ಎಂಬ ಭಾವವು. ವಿಶೇಷಣಗಳು ಎರಡುವಿಧವು. ವಿಶೇಷ್ಯದಿಂದ ಪ್ರತ್ಯೇಕಿಸಲು ಸಾಧ್ಯವಾದುದು ಪೃಥಕ್ಸಿದ್ಧವಿಶೇಷಣವು, ಕುಂಡಲಧಾರಿಯಾದ ರಾಮ

---

(1) ಶರಣಾಗತಿದೀಪಿಕೆ. 7.

ನು, ಇಲ್ಲಿ ರಾಮನಿಂದ ಕುಂಡಲವನ್ನು ಬೇರೆ ಮಾಡಬಹುದು. ಬಿಳೀ ಬಟ್ಟೆ, ಇಲ್ಲಿ ಬಿಳುಪನ್ನು ಬಟ್ಟೆಯಿಂದ ಪ್ರತ್ಯೇಕಿಸುವದು ಸಾಧ್ಯವಿಲ್ಲ. ಆದುದರಿಂಚ ಅಪೃಥಕ್ಸಿದ್ಧವಿಶೇಷಣವು, ಈಶ್ವರನಿಗೆ ಚಿದಚಿತ್ತುಗಳು ಅಪೃಥಕ್ಸಿದ್ಧವಿಶೇಷಣಗಳಾಗಿರುವದರಿಂದ ಶರೀರಭಾವವು ಕೂಡುತ್ತದೆ. ಆದುದರಿಂದ ಈಶ್ವರನು **ನಿಯಮೇನ ಧಾರಕನು, ನಿಯಂತಾ ಮತ್ತು ಶೇಷಿಯೂ ಆಗಿರುತ್ತಾನೆ.** ಸುಮ್ಮನೇ ಧಾರಕನಿಯಂತಾ, ಶೇಷಿ ಎಂದರೆ ಶರೀರಾತ್ಮಭಾವವು ಉಂಟಾಗುವದಿಲ್ಲವು. ಒಂದು ಹೊರೆಯನ್ನು ನಾವು ಹೊರುತ್ತೇವೆ, ಅದು ಧಾರ್ಯವಾಯಿತು, ನಾವು ಧಾರಕರಾದೆವು; ಹೊರೆಯು ನಮಗೆ ಶರೀರವಾಗುವದಿಲ್ಲವು. ನಾವು ಇರುವತನಕವೂ ಅದು ಧಾರ್ಯವಾಗಿ ಅನ್ಯಥಾಸ್ಥಿತಿಯು ಸಾಧ್ಯವೇ ಇಲ್ಲವಾದುದಾದರೆ ಆಗ **ನಿಯಮೇನ** ನಾವು ಧಾರಕರು ಅದು ಧಾರ್ಯವು. ಅಗ ಶರೀರಿ ಶರೀರಭಾವವು ಕೂಡುತ್ತದೆ. ಹಾಗೆಯೇ ಬರೀ ನಿಯಂತಾವಾದರೆ ಶರೀರಿಭಾವ ಉಂಟಾಗುವದಿಲ್ಲವು. ಸೇವಕನಿಗೆ ನಾವು ನಿಯಂತಾವಾಗಿರುತ್ತೇವೆ, ಆತನು ನಮಗೆ ಶರೀರವಲ್ಲವು. **ನಿಯಮೇನ** ನಿಯಂತಾವಾಗಲು ಶರೀರಿ ಶರೀರಭಾವವು ಅವಶ್ಯಕವು. ಹಾಗೆಯೇ ಬರೀ ಶೇಷಿಯಾದರೂ ಶರೀರಿಯಾಗುವದಿಲ್ಲವು. ಒಂದು ಭೂಷಣವು ನಮಗೆ ಭೋಗ್ಯವಾಗಿರಬಹುದು. ಆದುದರಿಂದ ಅದು ನಮಗೆ ಶರೀರವಲ್ಲವು. ಚಿದಚಿತ್ತುಗಳಾದರೋ **ನಿಯಮೇನ** ಶೇಷಭೂತಗಳು, ಈಶ್ವರನು ಶೇಷಿ ಆದುದರಿಂದ ಶರೀರಿ ಶರೀರಭಾವವು ಸಲ್ಲುತ್ತದೆ, ಆದುದರಿಂದ ನಿಯಮೇನ ಧಾರ್ಯವಾದುದೂ, ನಿಯಮೇನ ನಿಯಾಮ್ಯವಾದುದೂ, ನಿಯಮೇನ ಶೇಷವಾದುದೂ ಶರೀರಗಳು ಎಂಬ ಭಾವವು.)

ಆದುದರಿಂದ ಈ ಚೇತನ ದ್ರವ್ಯವು ಎದುವರಿವಿಗೆ ಇರಲು ಸಾಧ್ಯವೋ ಅದುವರಿವಿಗೂ ಈಶ್ವರನಿಂದ ಧರಿಸಲ್ಪಡುವದರಿಂದ ನಾವು ಸ್ವಾಮಿಗೆ ಶರೀರವು. ಹಾಗೆಯೇ ಈ ಚೇತನ ದ್ರವ್ಯವು ಎದುವರಿವಿಗೆ ಇರಲು ಸಾಧ್ಯವೋ ಅದುವರಿವಿಗೆ ಈಶ್ವರನಿಂದ ನಿಯಮಿಸಲ್ಪಡುವದರಿಂದ ಸ್ವಾಮಿಗೆ ಶರೀರವು. ಈ ಚೇತನನು ಎದುವರಿವಿಗೆ ಇರಲು ಸಾಧ್ಯವೋ ಅದುವರಿವಿಗೂ ಈತನು ಈಶ್ವರನಿಗೆ ಭೋಗ್ಯ

4. ಚೇತನಾಚೇತನಙ್ಗಳುಕ್ಕು ಶರೀರತ್ವಮಾವದು ?–ನಿಯಮೇನ ಈಶ್ವರನೈಪ್ಪತ್ತ ಧಾರ್ಯಮುಮಾಯ್, ನಿಯಾಮ್ಯಮುಮಾಯ್, ಶೇಷಮುಮಾನ ದ್ರವ್ಯಮಾಯಿರುಕ್ಕೈ.

5. ಚೇತನಾಚೇತನಙ್ಗಳೈಪ್ಪತ್ತ ಧಾರಕನುಮಾಯ್, ನಿಯನ್ತಾವುಮಾಕ್ಕೈಯಾವುದು ? ತನ್ ಸ್ವರೂಪತ್ತಾಲುಂ ಸಙ್ಕಲ್ಪತ್ತಾಲುಂ ಯಥಾರ್ಹಂ ಸತ್ತಾ ಸ್ಥಿತಿ ಪ್ರವೃತ್ತಿಗಳುಕ್ಕು ಪ್ರಯೋಜಕನಾಯಿರುಕ್ಕೈ.

ವಾಗಿ ಶೇಷನಾದುದರಿಂದ ಈತನು ಈಶ್ವರನಿಗೆ ಶರೀರವು. ಆದರೆ ಚೇತನನು ನಿತ್ಯನಾದುದರಿಂದ ಈತನು ಸದಾ ಸ್ವಾಮಿಗೆ ಶರೀರವು ಎಂಬ ಭಾವವು.

(ಶರೀರಭಾವಕ್ಕೆ ಆಧೇಯತ್ವ ನಿಯಾಮ್ಯತ್ವ ಶೇಷತ್ವ ಮೂರೂ ಅವಶ್ಯಕವೇ ಒಂದೊಂದೇ ಸಾಕೇ ಎಂಬ ವಿಷಯದಲ್ಲಿ ಶ್ರೀ ಭಗವಾನ್ ಭಾಷ್ಯಕಾರರವರು ಮೂರೂ ಅಂಗವಾಗಿ ಭಾವಿಸಿದಹಾಗೆ ತೋರುತ್ತದೆ. ಆದರೆ ಒಂದೊಂದು ವಿಷಯವೇ ಶರೀರಭಾವಕ್ಕೆ ಸಾಕಾಗಿದೆ ಎಂಬಭಿಪ್ರಾಯವನ್ನು ಶ್ರೀ ಮನ್ನಿಗಮಾಂತ ಮಹಾದೇಶಿಕರವರು ಸೂಚಿಸಿರುತ್ತಾರೆ.)

4. ಚೇತನಾಚೇತನಗಳಿಗೆ ಶರೀರಭಾವವೆಂದರೇನು? ಈಶ್ವರನೊಂದಿಗೆ ಸದಾಸೇರಿ, ಯಾವಾಗಲೂ ಆತನಿಂದ ಧರಿಸಲ್ಪಟ್ಟದ್ದಾಗಿ ನಿಯಮಿಸಲ್ಪಟ್ಟದ್ದಾಗಿ ಶೇಷವಾಗಿ (ಭೋಗ್ಯವಸ್ತು) ವಾಗಿರುವ ದ್ರವ್ಯವಾಗಿರುವಿಕೆಯು.

5. ಈಶ್ವರನು ಚೇತನಾಚೇತನಗಳನ್ನು ಕುರಿತು ಧಾರಕನಾಗಿಯೂ, ನಿಯನ್ತಾವಾಗಿ ಆಗುವದು ಎಂದರೇನು? ಈಶ್ವರನು ತನ್ನ ಸ್ವರೂಪದಿಂದಲೂ, ಸಂಕಲ್ಪದಿಂದಲೂ ಆಯಾ ದ್ರವ್ಯಗಳಿಗೆ ಯೋಗ್ಯವಾದ ಸತ್ತಾ, ಸ್ಥಿತಿ, ವ್ಯಾಪಾರಗಳನ್ನುಂಟುಮಾಡಲು ಸಾಧಕವಾಗಿರುವದು. (ತನ್ನ ಸ್ವರೂಪದಿಂದ ಚೇತನಾಚೇತನಗಳಿಗೆ ಸ್ವರೂಪಲಾಭವನ್ನೂ, ಅವುಗಳಿಗೆ ಸ್ಥಿತಿಯನ್ನೂ ಅವುಗಳಿಗೆ ಪ್ರವೃತ್ತಿಯನ್ನೂ ಉಂಟುಮಾಡುವುದೇ **ಧಾರಕತ್ವವು.** ತನ್ನ ಸಂಕಲ್ಪದಿಂದ ಅವುಗ

6. (1) ಅದೆಙ್ಙನೇ ಯೆನ್ನಿಲ್ ?—ಈಶ್ವರರ್ ತರ್ ಸ್ವರೂಪ ನಿರೂಪಕಧರ್ಮಙ್ಗಳುಕ್ಕುಂ, ನಿರೂಪಿತ ಸ್ವರೂಪ ವಿಶೇಷಣ ಙ್ಗಳಾನ ಗುಣಙ್ಗಳುಕ್ಕುಂ ಪೋಲೆ ಸ್ವವ್ಯತಿರಿಕ್ತ ಸಮಸ್ತ ದ್ರವ್ಯಙ್ಗಳುಕ್ಕು (2) ಮವ್ಯವಹಿತಮಾಕ ಸ್ವರೂಪೇಣ ವಾಧಾ ರಮಾಯಿರುಕ್ಕುಂ, ಅವ್ವೋ ದ್ರವ್ಯಙ್ಗಳೈ ಯಾಶ್ರಯಿತ್ತಿರು ಕ್ಕುಮ್ ಗುಣಾದಿಗಳುಕ್ಕುಂ ಅವ್ವೋ ದ್ವಾರಾ ಆಧಾರಮಾ ಯಿರುಕ್ಕುಮ್.

ಳಿಗೆ ಸತ್ತಾ ಸ್ಥಿತಿ ಪ್ರವೃತ್ತಿಗಳನ್ನುಂಟುಮಾಡುವದೇ **ನಿಯಾಮ್ಯತ್ವ ವು.** ದಿವ್ಯಾತ್ಮಸ್ವರೂಪವು ಮೂರ್ತವಲ್ಲದೇ ಇರುವಾಗ ಘಟಕ್ಕೆ ನೆಲ ಆಧಾರವಾಗುವ ಆಧಾರಭಾವ ಹೇಗೆ ಸಮಂಜಸವೆಂಬ ಶಂಕೆಗೆ ಸಮಾ ಧಾನವಾಗಿ, ಚೇತನಾಚೇತನಗಳ ಸತ್ತಾ ಸ್ಥಿತಿ ಪ್ರವೃತ್ತಿಗೆ ಕಾರಣ ವಾಗಿರುವದೇ ಧಾರಕತ್ವವೆಂಬದಾಗಿ ಹೇಳಲ್ಪಟ್ಟಿತು; ಮತ್ತು ಅಚೇತ ನಕ್ಕೆ ಸ್ವಾಮಿಯು **ನಿಯನ್ತಾ** ಎಂಬುವದು ಹೇಗೆ ಎಂಬ ಶಂಕೆಗೆ ಸಮಾ ಧಾನವಾಗಿ ತನ್ನ ಸಙ್ಕಲ್ಪದಿಂದ ಅಚೇತನಗಳಿಗೆ ಸತ್ತಾ ಸ್ಥಿತಿ ಪ್ರವೃ ತ್ತಿಗಳನ್ನುಂಟುಮಾಡುವದೇ ಸಿಯಾಮ್ಯತ್ವವೆಂದು ಹೇಳಲ್ಪಟ್ಟಿತು.)

6. ಅದು ಹೇಗೆ ಎಂದರೆ ?—ಈಶ್ವರನು ತನ್ನ ಸ್ವರೂಪವನ್ನು ಸಾಕ್ಷಾತ್ತಾಗಿ ಬೋಧಿಸುವ ಧರ್ಮಗಳಿಗೂ, ಹಾಗೆ ನಿರ್ಧರಿಸಲ್ಪಟ್ಟ ಸ್ವರೂಪವುಳ್ಳ ಈಶ್ವರನಿಗೆ ಸಂಬಂಧಿಸಿದ ಇತರ ಕಲ್ಯಾಣಗುಣಗಳಿ ಗೂ ಕೂಡ ಹೇಗೆ ಆಧಾರಭೂತನೋ ಹಾಗೆಯೇ ತಾನಲ್ಲದೇ ಇರುವ ಸಮಸ್ತ ದ್ರವ್ಯಗಳಿಗೂ ಸಾಕ್ಷಾತ್ತಾಗಿ ತನ್ನ ಸ್ವರೂಪಮೂಲಕ ಆಧಾ ರವಾಗಿರುತ್ತಾನೆ. ಮತ್ತೂ ಆ ದ್ರವ್ಯಗಳನ್ನು ಆಶ್ರಯಿಸಿರುವ ಗುಣ ಗಳಿಗೂ ಕೂಡ ಆಯಾ ದ್ರವ್ಯಗಳ ಮೂಲಕವಾಗಿ ಆಧಾರವಾಗಿರು ತ್ತಾನೆ. (ಗುಣಗಳು ಎರಡುವಿಧವು:—(1) ಸ್ವರೂಪ ನಿರೂಪಕಧರ್ಮ ಗಳು:–ಇವುಗಳು ವಸ್ತುವಿನ ಸ್ವರೂಪವನ್ನು ನಿರ್ಧರಿಸಲು ಅವಶ್ಯಕ ವಾದ ಗುಣಗಳು. ಗೋವಿಗೆ ಸಾಸ್ನಾದಿಮತ್ತ್ವ ಅಂದರೆ ಕತ್ತಿನಕೆಳಗೆ

---

(1) **ಅದೆಙ್ಗನೇ = ಅದೆಪ್ಪಡಿ, ಅದು ಹೇಗೆ ?** (2) **ಅವ್ಯವಹಿತಮಾಕ – ಸಾಕ್ಷಾ ತ್ತಾಗಿಯೇ.**

ಜೀವರ್‌ಗಳಾಲೆ ಧರಿಕ್ಕಪ್ಪಡುಗಿರ ಶರೀರಙ್ಗಳುಕ್ಕು ಜೀವದ್ವಾರಾ ನಾಧಾರಮಾಯಿರುಕ್ಕು ಮೆನ್ರು ಶಿಲರ್ ಶೊಲ್ಲುವರ್‌ಗಳ್, ಜೀವನೈದ್ವಾರ ಮಾಕಕ್ಕೊಣ್ಣುಮ್ ಸ್ವರೂಪತ್ತಾಲು ಮಾಧಾರಮಾಯಿರುಕ್ಕುಮೆನ್ರು ಶಿಲವಾಚಾರ್ಯರ್‌ಗಳ್ ಶೊಲ್ಲುವರ್‌ಗಳ್. ಇಪ್ಪಡಿ ಸ್ವರಮುಂ ಈಶ್ವರಸ್ವರೂಪತ್ತಿಲ

ಜೋಲಾಡುವ ಚರ್ಮವು ಸ್ವರೂಪ ನಿರೂಪಕಧರ್ಮವು. ಇದು ಗೋವಿಗೆ ಮಾತ್ರವೇ ಅಸಾಧಾರಣವಾದ ಧರ್ಮವು. (2) ನಿರೂಪಿತಸ್ವರೂಪ ವಿಶೇಷಣ--ಇದು ಕೆಲವು ಧರ್ಮಗಳಿಂದ ಸ್ವರೂಪ ನಿರ್ಧರಿಸಲ್ಪಟ್ಟನಂತರ, ಅದರಲ್ಲಿ ತೋರುವ ಮಿಕ್ಕ ಗುಣಗಳು. ಗೋವಿಗೆ ಶೀಳಿದ ಗೊರಸುಗಳಿರುವದು, ಎರಡು ಕೊಂಬುಗಳಿರುವದು ಇವೇ ಮೊದಲಾದವುಗಳು ನಿರೂಪಿತ ಸ್ವರೂಪ ವಿಶೇಷಣಗಳು. ಈಶ್ವರನಿಗೆ ಸ್ವರೂಪ ನಿರೂಪಕ ಧರ್ಮಗಳ್ಯಾವವೆಂದರೆ ಸತ್ಯತ್ವ, ಜ್ಞಾನತ್ವ, ಅನಂತತ್ವ, ಆನಂದತ್ವ, ಅಮಲತ್ವಗಳು. ನಿರೂಪಿತ ಸ್ವರೂಪ ವಿಶೇಷಣಗಳು:--ಜ್ಞಾನ ಶಕ್ತಿ ಕರುಣಾ ವಾತ್ಸಲ್ಯಾದಿಗಳು ದ್ರವ್ಯಗಳಿಗೇನೋ ಸಾಕ್ಷಾತ್ತಾಗಿ ಸ್ವಾಮಿಯು "ನಾರಾಯಣ" ಶಬ್ದವ್ಯುತ್ಪತ್ತಿಯಿಂದ ತೋರಿಬರುವ ಹಾಗೆ ಆಧಾರನು. ಆ ದ್ರವ್ಯಗಳಲ್ಲಿರುವ ಗುಣಗಳಿಗೂ ಹೇಗೆ ಆಧಾರನೆಂದರೆ, ಇದು ಕೈಮುತಿಕನ್ಯಾಯಪ್ರಕಾರ ಆ ದ್ರವ್ಯಗಳದ್ವಾರ ಆಧಾರವೆಂದು ಹೇಳುತ್ತಾರೆ. ಜೀವರುಗಳೇನೋ ಈಶ್ವರನಿಗೆ ಶರೀರವು, ಆ ಜೀವರುಗಳ ಶರೀರವೂ ಸ್ವಾಮಿಗೆ ಶರೀರವೇ ಎಂದರೆ, ಅವೂ ಶರೀರವೆಂದು ಹೇಳುತ್ತಾರೆ.) ಜೀವರುಗಳು ಧರಿಸುವ ಶರೀರಗಳಿಗೆ ಅವರುಗಳ ಮೂಲಕವಾಗಿ ಸ್ವಾಮಿಯು ಆಧಾರವೆಂದು ಕೆಲವರು ಹೇಳುತ್ತಾರೆ. ಜೀವರುಗಳ ಮೂಲಕವಾಗಿ ಅವರ ಶರೀರಗಳಿಗೆ ಸ್ವರೂಪದಿಂದಲೂ ಸ್ವಾಮಿಯೇ ಆಧಾರವೆಂದು ಕೆಲವು ಆಚಾರ್ಯರುಗಳು ಹೇಳುತ್ತಾರೆ. (ಜೀವನೇನೋ ಸ್ವಾಮಿಗೆ ಶರೀರವು. ಆ ಜೀವನು ಧರಿಸಿರುವ ಶರೀರದ ವಿಷಯದಲ್ಲಿ ಅಭಿಪ್ರಾಯ ಹೇಗೆಂದರೆ, ಅದೂ ಶರೀರವೇ ಎಂದು ಹೇಳುತ್ತಾರೆ. ಅದೂ ಶರೀರ ಎಂಬುವದಕ್ಕೆ ಎರಡಭಿಪ್ರಾಯಗಳನ್ನು ತಿಳಿಸುತ್ತಾರೆ. ಯಾವಾಗ ಜೀವನೇ ಶರೀರವೋ ಕೈಮುತಿಕನ್ಯಾ

**ಪತ್ತ (1) ಅಪೃಥಕ್ಸಿದ್ಧ ವಿಶೇಷಣ ಮಾಕ್ಕೈಯಾಲೇ ಇವತ್ತಿ
ನ್ ಸತ್ತಾದಿಗಳಾಶ್ರಯ ಸತ್ತಾಧೀನಂಗಳ್.**

**7. ಸರ್ವವಸ್ತುಕ್ಕಳುಡೈಯವುಮ್ ಸತ್ತೈಸಙ್ಕಲ್ಪಾಧೀನೈ
ಯಾಕ್ಕೈಯಾವತು ?—ಅನಿತ್ಯಙ್ಕಳ್ ಅನಿತ್ಯೇಚ್ಛೈಯಾಲೆ
ಉತ್ಪನ್ನಙ್ಕಳಾಯುಮ್, ನಿತ್ಯಙ್ಗಳ್ ನಿತ್ಯೇಚ್ಛಾ ಸಿದ್ಧಙ್ಗ**

ಯದಿಂದ ಜೀವನಶರೀರವೂ ಶರೀರವೆಂದು ಹೇಳುತ್ತಾರೆ. ಆದರೆ
ಪೃಥಿವ್ಯಪ್ತೇಜೋ ವಾಯುರಾಕಾಶಾದಿಗಳಾಗಿ ಸರ್ವವೂ ಸ್ವಾಮಿಗೆ
ಶರೀರವಾದುದರಿಂದ ಹೀಗೆ ಸಾಕ್ಷಾತ್ತಾಗಿಯೂ ಅದೂ ಆತನಿಗೆ ಶರೀರ
ವೆಂದು ತಮ್ಮ ಆಚಾರ್ಯರುಗಳು ಹೇಳುತ್ತಾರೆಂದು ಹೇಳಿರುವದರಿಂದ
ಈ ಅಭಿಪ್ರಾಯದಲ್ಲೇ ಅಂದರೆ ಹೀಗೆ ಎರಡು ವಿಧವಾಗಿಯೂ ಶರೀರ
ವೆಂದು ತಮಗೂ ಅಭಿಮತವೆಂದು ತಾತ್ಪರ್ಯವು. "ಜೀವನೈದ್ವಾರ
ಮಾಕಕ್ಕೊಣ್ಡು" ಎಂದು ಹೇಳಿರುವದರಭಿಪ್ರಾಯವೇನೆಂದರೆ:—
ಜೀವನು ಎಷ್ಟುಕಾಲ ಈ ಶರೀರವನ್ನು ಧರಿಸಿರುವನೋ ಅಷ್ಟುಕಾಲ
ದವರಿವಿಗೂ ಎಂಬಭಿಪ್ರಾಯವು.) ಇಪ್ಪಡಿ ಅಂದರೆ ಹೀಗೆ ಎರಡು
ವಿಧವಾಗಿ ಭಾವಿಸಿದರೂ, ಸಮಸ್ತವೂ (ಅಂದರೆ ಲೀಲಾವಿಭೂತಿ ನಿತ್ಯ
ವಿಭೂತಿಗಳಲ್ಲಿರುವ ಸಮಸ್ತ ಚಿದಚಿದ್ವಸ್ತುಗಳೂ) ಈಶ್ವರನೊಂದಿಗೇ
ಯಾವಾಗಲೂ ಸೇರಿ ಆತನಿಂದಗಲದೇ ಇರುವವುಗಳಾದುದರಿಂದ ಅವು
ಗಳ ಸತ್ತೆಯೂ, ಆದಿಪದದಿಂದ ಅವುಗಳ ಸ್ಥಿತಿಯೂ ಕೂಡ, ಇವುಗ
ಳಿಗೆ ಆಶ್ರಯನಾದ ಸರ್ವೇಶ್ವರನ ಸ್ವರೂಪಕ್ಕೆ ಅಧೀನವಾದವುಗಳು.

(ಹಿಂದೆ ಸಮಸ್ತ ವಸ್ತುಗಳ ಸತ್ತೆ ಮೊದಲಾದವು ಈಶ್ವರಸ್ವ
ರೂಪ ಮತ್ತೂ ಸಂಕಲ್ಪಕ್ಕೂ ಅಧೀನವಾದವುಗಳೆಂದು ಹೇಳಿದರು.
ಈಗ ಎಲ್ಲವೂ ಆತನ ಸ್ವರೂಪಕ್ಕೆ ಅಧೀನವಾದವುಗಳೆಂದು ಉಪಪಾ

---

(1) ಅಪೃಥಕ್ಸಿದ್ಧವಿಶೇಷಣ—ಮೇಲೆ ಈಶ್ವರನು ಶರೀರಿ ಎಂದೂ ಚೇತನಾಚೇತನ
ವೆಲ್ಲಾ ಶರೀರವೆಂದು ಹೇಳಲ್ಪಟ್ಟಿತು. ಆದುದರಿಂದ ಈಶ್ವರನನ್ನು ವಿಶೇಷ್ಯವೆಂದೂ,
ಸಮಸ್ತ ಚೇತನಾಚೇತನವನ್ನೂ ವಿಶೇಷಣವೆಂದೂ ಭಾವಿಸಲ್ಪಟ್ಟಿರುತ್ತದೆ. ಈ ಚೇತನಾ
ಚೇತನಗಳಿಗೆಲ್ಲಾ ಆತನು ಆತ್ಮಾವಾಗಿ ಅವುಗಳನ್ನು ಎಂದಿಗೂ ಬಿಟ್ಟಿರುವದೇ ಇಲ್ಲವಾದು
ದರಿಂದ ಅವುಗಳೆಲ್ಲಾ ಸ್ವಾಮಿಗೆ ಅಪೃಥಕ್ಸಿದ್ಧವಿಶೇಷಣಗಳು.

ಳಾಯು ಮಿರುಕ್ಕೈ. ಇವ್ವರ್ಥತ್ತೈ (1) "ಇಚ್ಛಾತ ಏವ ತವ ವಿಶ್ವಪದಾರ್ಥ ಸತ್ತಾ" ಎಙ್ಗಿರ

ದಿಸಿ, ಮುಂದೆ ಅವೆಲ್ಲವೂ ಆತನ ಸಂಕಲ್ಪಕ್ಕೂ ಹೇಗೆ ಅಧೀನವೆಂಬುವದನ್ನು ತಿಳಿಯಪಡಿಸುತ್ತಾರೆ.)

7. ಸರ್ವವಸ್ತುಗಳ ಸತ್ತೆಯೂ ಈಶ್ವರನ ಸಂಕಲ್ಪಕ್ಕೆ ಅಧೀನವಾಗಿವೆ ಎಂಬುವದರಭಿಪ್ರಾಯವೇನು? ಅನಿತ್ಯವಾದ ವಸ್ತುಗಳೆಲ್ಲವೂ ಸ್ವಾಮಿಯ ಅನಿತ್ಯವಾದ ಸಂಕಲ್ಪದಿಂದ ಉತ್ಪನ್ನವಾದವುಗಳು; ನಿತ್ಯವಾದವುಗಳೆಲ್ಲಾ ಆತನ ನಿತ್ಯವಾಗಿರಲಿ ಎಂಬ ಸಂಕಲ್ಪದಿಂದ ಯಾವಾಗಲೂ ಒಂದೇರೀತಿಯಲ್ಲಿ ಪರಿಣಾಮಗಳಿಲ್ಲದೇ ಇರುತ್ತವೆ. (ಇಲ್ಲಿ ಅನಿತ್ಯವಾದ ಸಂಕಲ್ಪವೆಂದರೆ ಆಯಾಯಾ ಸಮಯಗಳಲ್ಲುಂಟಾಗುವ ಸಂಕಲ್ಪವು. ನಿತ್ಯಸಂಕಲ್ಪವೆಂದರೆ ಕೆಲವು ವಸ್ತುಗಳು ಯಾವಾಗಲೂ ನಿತ್ಯಗಳಾಗಿರಲಿ ಎಂದು ಸಂಕಲ್ಪಿಸುವದು, ಆ ಸಂಕಲ್ಪವು ಎಂದಿಗೂ ವ್ಯತ್ಯಸ್ತವನ್ನು ಹೊಂದುವದಿಲ್ಲವು. ಸ್ವಾಮಿಸಂಕಲ್ಪಕ್ಕೆ ಅಧೀನವಾದುವು ಎನ್ನುವದರಿಂದ ಅವುಗಳು ಸ್ವಾಮಿಸಂಕಲ್ಪದಿಂದ ಉತ್ಪನ್ನವಾದವುಗಳಾಗಿಯೇ ಇರಬೇಕೆಂಬ ನಿಯಮವಿಲ್ಲವು. ಹಾಗೆ ಉತ್ಪನ್ನವಾದರೆ ನಿತ್ಯವಸ್ತುಗಳೆಂದ ಜೀವಾತ್ಮ ಮೊದಲಾದವುಗಳೆಲ್ಲಾ ಉತ್ಪನ್ನವಾದವುಗಳೆಂದು ಹೇಳಬೇಕಾಗುತ್ತದೆ. ಅದು ಯುಕ್ತವಲ್ಲವು. **ಸಂಕಲ್ಪಾಧೀನ**ವೆಂಬುದರಭಿಪ್ರಾಯವೇನೆಂದರೆ ಹಾಗೆ ಈಶ್ವರನ ಸಂಕಲ್ಪವಿಲ್ಲದೆ ಹೋದರೆ, ನಿತ್ಯಾನಿತ್ಯಗಳಾದ ಇವುಗಳೂ ಇಲ್ಲದೇ ಹೋಗುವ ಯೋಗ್ಯತೆಯನ್ನು ಹೊಂದುವುಗಳಾಗುವವು ಎಂಬುವದು ಮುಖ್ಯಾಭಿಪ್ರಾಯವು. ನಿತ್ಯವಾದುವುಗಳ ವಿಷಯದಲ್ಲಿ ಸ್ವಾಮಿಸಂಕಲ್ಪವು ವ್ಯತಿರೇಕಭಾವವನ್ನು ಎಂದಿಗೂ ಹೊಂದುವದಿಲ್ಲವೆಂಬುವದು ತಾತ್ಪರ್ಯವು. ನಿತ್ಯವಾದುವು ಯಾವುವೆಂದರೆ :—

1. ಸ್ವಾಮಿಯ ಸ್ವರೂಪ ನಿರೂಪಕ ಧರ್ಮಗಳೂ ಆತನ ಕಲ್ಯಾಣಗುಣಗಳ ಸಮೂಹವೂ.

---

(1) ಕೂರತ್ತಾಳ್ವಾರ್ರವರ ಪಞ್ಚಸ್ತವಗಳಲ್ಲೊಂದಾದ ಶ್ರೀ ವೈಕುಂಠಸ್ತವದ ೩೭ನೇ ಶ್ಲೋಕ.

2. ನಿತ್ಯವಿಭೂತಿಯಲ್ಲಿರುವ ಸಮಸ್ತವೂ:—ಶುದ್ಧಸತ್ವವೂ, ಅಲ್ಲಿನ ಸ್ವಾಮಿಯ ಭೋಗೋಪಕರಣವೂ, ಛತ್ರಚಾಮರವೂ, ದಿವ್ಯ ಭೂಷಣ, ದಿವ್ಯಾಯುಧಗಳೂ, ದಿವ್ಯಮಹಿಷಿಗಳೂ, ದ್ವಾರಪಾಲಕ ರೂ, ಮುಕ್ತಾತ್ಮರೂ, ಸ್ವಾಮಿಯ ದಿವ್ಯಮಂಗಳವಿಗ್ರಹವೂ.

3. ಈ ಲೀಲಾವಿಭೂತಿಯ ಪ್ರಕೃತಿ, ಜೀವಾತ್ಮರೂ.

ಅನಿತ್ಯಗಳು ಸ್ವಾಮಿಸಂಕಲ್ಪದಿಂದ ಉತ್ಪನ್ನವಾಗುವದೂ ಅಲ್ಲದೆ ಅವುಗಳು ಸ್ವಾಮಿಸಂಕಲ್ಪರೀತ್ಯಾ ಪರಿಣಾಮವನ್ನು ಹೊಂದುವುದಲ್ಲದೆ ಅವುಗಳ ಈಗಿರುವ ಸ್ವಭಾವಕ್ಕೆ ವಿರೋಧವಾಗಿ ಸಂಕಲ್ಪಿಸಿದರೆ ವ್ಯತಿ ರೇಕಸ್ವಭಾವಗಳನ್ನು ಹೊಂದುತ್ತವೆ. ಇದನ್ನು ನಿದರ್ಶಿಸುವ ಒಂದು ಇತಿಹಾಸ ಉಂಟು. ದೇವಾಸುರಯುದ್ಧದಲ್ಲಿ ಸ್ವಾಮಿಸಂಕಲ್ಪಾನುಸಾರ ದೇವತೆಗಳಿಗೆ ಜಯ ಉಂಟಾಯಿತಷ್ಟೆ. ಆಗ ದೇವತೆಗಳು ತಾವೇ ಅಸುರರನ್ನು ಜಯಿಸಿದೆವೆಂಬ ಅಹಂಕಾರಗ್ರಸ್ತರಾಗಿರಲು; ಅವರ ಗರ್ವಭಂಗಮಾಡಬೇಕೆಂಬಭಿಪ್ರಾಯದಿಂದ ಸ್ವಾಮಿಯು ಒಬ್ಬ ಯಕ್ಷ ನ ರೂಪವನ್ನು ತಳೆದು ಅವರಿಗೆ ಕಾಣಿಸಿಕೊಳ್ಳಲು; ಆಗ ಅಗ್ನಿಯು ಅಭಿಮುಖವಾಗಿ ಬರಲು; ಆತನಂ ಕುರಿತು ಈ ಯಕ್ಷನು ನಿನಗೆ ಯಾವಶಕ್ತಿಯುಂಟೆಂದು ಪ್ರಶ್ನಿಸಲಾಗಿ, ತನಗೆ ದಹಿಸುವ ಶಕ್ತಿಯುಂ ಟೆಂದು ಹೆಮ್ಮೆಯಿಂದ ಉತ್ತರವೀಯಲಾಗಿ, ಸ್ವಾಮಿಯು ಒಂದು ತೃಣವನ್ನು ಮುಂದೇ ಇಟ್ಟು ಇದನ್ನು ಸುಡು ಎಂದು ಕೇಳಲು, ಅಗ್ನಿಗೆ ಶಕ್ತಿ ಇಲ್ಲದೆ ಹೋಯಿತು. ಅನಂತರ ವಾಯುವು ಬರಲು, ನಿನಗೆ ಯಾವಶಕ್ತಿಯುಂಟೆಂಬ ಪ್ರಶ್ನೆಗೆ ತನಗೆ ಎಲ್ಲವನ್ನೂ ಬೀಸಿ ಕೊಂಡು ಹೋಗುವ ಶಕ್ತಿಯುಂಟೆಂದು ಹೇಳಲು; ಹಾಗಾದರೆ ಈ ತೃಣವನ್ನಲ್ಲಾಡಿಸು ಎಂದು ಯಕ್ಷನು ಪೇಳಲು; ಆಗ ವಾಯುವು ಅಸಮರ್ಥನಾಗಿ ತಲೆ ಬಾಗಿಸಿ ನಿಂತನು. ಆದುದರಿಂದ ಸ್ವಾಮಿಯ ಸಂಕಲ್ಪವಿಲ್ಲದಿದ್ದರೆ, "ತೇನವಿನಾ ತೃಣಮಪಿನಚಲತಿ" ಎಂಬುವ ಹಾಗೆ ಆ ಸತ್ಯಸಂಕಲ್ಪನ ಸಂಕಲ್ಪವಿಲ್ಲದಿದ್ದರೆ ಯಾವ ಪದಾರ್ಥಗಳಿಗೂ ಸತ್ತಾಸ್ಥಿತಿಗಳು ಇಲ್ಲವೆಂಬುವದು ಏರ್ಪಟ್ಟಿತು.)

ಶ್ಲೋಕತ್ತಾಲೆ (1) ಅಭಿಯುಕ್ತರ್ ವಿವೇಕಿತ್ತಾರ್‌ಗಳ್. ಇತ್ತಾಲೆ ಸರ್ವತ್ತಿನುಡೈಯವುಮ್ ಸತ್ತಾನುವೃತ್ತಿ ರೂಪೈಯಾನ ಸ್ಥಿತಿಯುಮ್ ಈಶ್ವರೇಚ್ಛಾಧೀನೈಯಾನ ಪಡಿಯಾಲೇ, ಸರ್ವಮುಮ್ ಈಶ್ವರ ಸಂಕಲ್ಪಾಶ್ರಿತ ಮೆನ್ರು ಶೊಲ್ಲುಕಿ

(ಈ ಅಭಿಪ್ರಾಯವನ್ನೇ ಪೂಜ್ಯರಾದ ಕೂರತ್ತಾಳ್ವಾರ್ರವರು, ಶ್ರೀ ವೈಕುಂಠಸ್ತವದಲ್ಲಿ "ಇಚ್ಛಾತಏವ" ಎಂಬ ಶ್ಲೋಕದಿಂದ ಸಂಗ್ರಹಿಸಿ ವಿವೇಚನೆಮಾಡಿ ಹೇಳಿದರು; ಅಂದರೆ ನಿತ್ಯಾನಿತ್ಯಗಳು ಹೇಗೆ ಈಶ್ವರಸಂಕಲ್ಪಾಧೀನವೆಂಬುವದನ್ನು ವಿವೇಚನೆಮಾಡಿ ಹೇಳಿದರೆಂಬ ಭಾವವು. **ಇಚ್ಛಾತ ಏವ ತವ ವಿಶ್ವಪದಾರ್ಥಸತ್ತಾ ನಿತ್ಯಂಪ್ರಿಯಾಸ್ತವತು ಕೇಚನ ತೇಹಿನಿತ್ಯಾಃ । ನಿತ್ಯಂ ತ್ವದೇಕ ಪರತನ್ತ್ರ ನಿಜಸ್ವರೂಪಾ ಭಾವತ್ಕಮಂಗಳ ಗುಣಾಹಿ ನಿದರ್ಶನಂ ನಃ॥"** ಎಂಬುವದು ಪೂರಾಶ್ಲೋಕವು. ಇದರಭಿಪ್ರಾಯವೇನೆಂದರೆ:—ಈ ವಿಶ್ವದಲ್ಲಿರುವ ಪದಾರ್ಥಗಳಿಗೆಲ್ಲಾ ಸ್ವರೂಪಲಾಭವು ನಿನ್ನ ಸಂಕಲ್ಪದಿಂದಲೇ, ಅವುಗಳಲ್ಲಿ ಯಾವುವು ಕೆಲವು ನಿನಗೆ ಯಾವಾಗಲೂ ಪ್ರಿಯವೋ, ಅವೆಲಾ ನಿತ್ಯಗಳಾಗಿ ಏರ್ಪಟ್ಟವಷ್ಟೆ; ಮತ್ತೂ ಅವು ಯಾವಾಗಲೂ ನಿನಗೊಬ್ಬನಿಗೇನೇ ಅಧೀನವಾದ ಸ್ವಕೀಯವಾದ ಸ್ವರೂಪವುಳ್ಳವುಗಳು, ಇದರಿಂದ ಅವುಗಳ ವಿಷಯದಲ್ಲಿ ನಿನ್ನ ಸಂಕಲ್ಪವು ಎಂದಿಗೂ ವ್ಯತ್ಯಸ್ತವಾಗುವದಿಲ್ಲವೆಂಬ ಭಾವವು. ಹೀಗೆ ಹೇಳಲು ಏನಾದರೂ ನಿದರ್ಶನ ಉಂಟೋ ಎಂದರೆ, ನಿನ್ನ ಕಲ್ಯಾಣಗುಣಗಳೇ ಇದಕ್ಕೆ ಸಾಕ್ಷಿ. ನಿನ್ನ ಅಮೋಘವಾದ ಸರ್ವೋತ್ಕೃಷ್ಟವಾದ ಕಲ್ಯಾಣಗುಣಗಳು ಯಾವಾಗಲೂ ವ್ಯತ್ಯಸ್ಥಭಾವವನ್ನು ಹೊಂದದೆ ಸದಾನಿತ್ಯಗಳಾಗಿರುವದನ್ನೇ ನಿದರ್ಶನವಾಗಿಟ್ಟುಕೊಂಡು, ಸರ್ವವಸ್ತುಸ್ವರೂಪವೂ ಸ್ವಾಮಿಯ ಸಂಕಲ್ಪಾಧೀನವೆಂಬದಾಗಿಯೂ, "ನಾರಾಯಣ" ಶಬ್ದದಲ್ಲಿ ನಾರ ಎಂಬ ಪದದಿಂದ ಬೋಧಿತವಾದ ನಿತ್ಯವಸ್ತುಗಳೆಲ್ಲಾ ನಿನ್ನ ಸಂಕಲ್ಪದಿಂದ ಸದಾ ನಿನಗೆ ಪ್ರಿಯವಾಗಿವೆ ಎಂಬಭಿಪ್ರಾಯವು.) ಇದರಿಂದ, ಅಂದರೆ, ಯಾವಾಗ ಸರ್ವವಸ್ತುವಿನ ಸ್ವರೂಪವೂ ಈಶ್ವರೇಚ್ಛೆಗೆ ಅಧೀನವಾ

(1) **ಅಭಿಯುಕ್ತರ್ – ಪೂಜಾರ್ಥವಾಚಕವು**

ರದು. ಗುರುದ್ರವ್ಯಂಗಳ್ ಸಂಕಲ್ಪತ್ತಾಲೇ ಧೃತಙ್ಗಳೆನ್ರು ಶಾಸ್ತ್ರಙ್ಗಳಿಲ್ ಶೊಲ್ಲುಮದು (1) ದ್ಯಾಸ್ಸಚಂದ್ರಾರ್ಕ ನಕ್ಷತ್ರಂ ಖಂದಿಶೋಭೂರ್ಮಹೋದಧಿಃ। ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ" ಎನ್ಗಿರ ಓರೊರು ಪಡಿಯೇ ದೇಶವಿಶೇಷಙ್ಗಳಿಲೆ ವಿಳಾದಪಡಿ ನಿರುತ್ತೈಪ್ಪ ದ್ರ್ರ.

ಯಿತೋ, ಆಗ ಸರ್ವವಸ್ತುವನ್ನನುಸರಿಸಿರುವ ಸ್ಥಿತಿಯೂ ಕೂಡ ಈಶ್ವರೇಚ್ಛೆಗೆ ಅಧೀನವಾಗುತ್ತದೆಯಾದುದರಿಂದಲೇ ಸರ್ವವೂ ಈಶ್ವರ ಸಂಕಲ್ಪದಿಂದ ಆಶ್ರಯಿಸಲ್ಪಟ್ಟಿರುತ್ತದೆಂದು ಹೇಳಿಸಿಕೊಳ್ಳಲ್ಪಡುತ್ತವೆ.

(ಸ್ವರೂಪದಿಂದ ಧಾರಕತ್ವವು ಹೇಗೋ ಹಾಗೆಯೇ ಸಂಕಲ್ಪದಿಂದಲೂ ಧಾರಕತ್ವವೂ ಕೂಡ ಉಂಟೆಂಬುದನ್ನು ಮುಂದೆ ಸ್ಥಾಪಿಸುತ್ತಾರೆ. "ಏತಸ್ಯವಾ ಅಕ್ಷರಸ್ಯ ಪ್ರಶಾಸನೆಗಾರ್ಗಿ ದ್ಯಾವಾ ಪೃಥಿವ್ಯಾ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ" "ಓ ಗಾರ್ಗಿಯೇ ಈ ನಾಶ ರಹಿತನಾದ ವಾಸುದೇವನ ಸಂಕಲ್ಪಾನುಸಾರವಾಗಿ ನಿಯಮನ ಮಾಡುವದರಿಂದ ಸ್ವರ್ಗ ಪೃಥಿವೀಗಳೂ, ಸೂರ್ಯಚಂದ್ರರೂ ಸತ್ತೆಯನ್ನು ಹೊಂದಿದವರಾಗಿ, ಆ ನಿಯಮನ ಪ್ರಕಾರ ವ್ಯಾಪಾರಗಳನ್ನೂ ಹೊಂದಿದವರಾಗಿದ್ದಾರೆ. ಈ ಅಭಿಪ್ರಾಯವನ್ನೇ ಆಚಾರ್ಯರವರು ಮುಂದೆ ತಿಳಿಸುತ್ತಾರೆ.)

ಗ್ರಹನಕ್ಷತ್ರಗಳಾದ ಗುರುವಾದ ಅಂದರೆ ದೊಡ್ಡದಾಗಿ ಭಾರವಾಗಿರುವ ದ್ರವ್ಯಗಳೂ ಆತನ ಸಙ್ಕಲ್ಪದಿಂದಲೇ ಧರಿಸಲ್ಪಟ್ಟು ಆತನ ನಿಯಮನಾನುಸಾರ ಸುತ್ತುತ್ತಲಿವೆ ಎಂಬದಾಗಿ ಶಾಸ್ತ್ರಗಳಲ್ಲಿ ಹೇಳಿರೋಣದರಭಿಪ್ರಾಯವೇನೆಂದರೆ:—"**ದ್ಯಾಃ**-ಸ್ವರ್ಗವೂ, **ಸಚಂದ್ರಾರ್ಕನಕ್ಷತ್ರಂ**-ಚಂದ್ರ ಸೂರ್ಯ ನಕ್ಷತ್ರಗಳಿಂದೊಡಗೂಡಿದ, **ಖಂ**-ಆಕಾಶವೂ, **ದಿಶಃ**-ದಿಕ್ಕುಗಳೂ, **ಭೂಃ**-ಭೂಮಿಯೂ, **ಮಹೋಧಧಿಃ**-ಸಮುದ್ರವೂ, ಇವುಗಳೆಲ್ಲವೂ, **ಮಹಾತ್ಮನಃ**-ಮಹಾನುಭಾವನಾದ, **ವಾಸುದೇವಸ್ಯ**-ಎಲ್ಲಾಕಡೆಯಲ್ಲೂ ಇರುವ ಪರಮಾತ್ಮನ, **ವೀರ್ಯೇಣ**-ಎಲ್ಲವನ್ನೂ ನಿಯಮಿಸುವ ಮತ್ತು ಧರಿಸುವ ಶಕ್ತಿಯಿದ್ದರೂ ಸ್ವಲ್ಪವೂ ವಿಕಾ

ಭಾರ, ಅನು, 254–136.

ರವನ್ನು ಹೊಂದದೇ ಇರುವ ಶಕ್ತಿಯಿಂದ, **ವಿಧೃತಾನಿ**-ಧರಿಸಲ್ಪಟ್ಟವು ಗಳಾಗಿವೆ," ಎಂದು ಹೇಳಿರುವಹಾಗೆ ಬಂದೊಂದು ಪ್ರದೇಶಗಳಲ್ಲೇ ಇದ್ದುಕೊಂಡು ಅವು ಬೀಳದ ಹಾಗೆ ಅಲ್ಲಲ್ಲೇ ಇರುವ ಹಾಗೆ ಮಾಡುವದನ್ನು ಕುರಿತು ಹೇಳೋಣವು. (ಆದರೆ ಹಿಂದೆ ಸ್ವಾಮಿಯ **ಸ್ವರೂಪ**ದಿಂದ ಚೇತನಾ ಚೇತನಗಳ ಸತ್ತಾಸ್ಥಿತಿ ಪ್ರವೃತ್ತಿಗಳ ಪ್ರಯೋಜನವನ್ನುಂಟುಮಾಡುವದನ್ನೇ **ನಿಯಮನತ್ವ**ವೆಂದೂ ಹೇಳ ಲ್ಪಟ್ಟಿತು. ಹಾಗಾದರೆ, ಚಂದ್ರ ಸೂರ್ಯ ನಕ್ಷತ್ರಗಳು ಸ್ವಾಮಿ **ಸಂಕ ಲ್ಪ**ದಿಂದ **"ವಿಧೃತಾನಿ"** ಎಂದು ಹೇಳುವುದು ಸರಿಯೋ ಎಂಬ ಆಕ್ಷೇಪಕ್ಕೆ ಸ್ವಾಮಿಯವರು ಸಮಾಧಾನ ಹೇಳುವುದೇನೆಂದರೆ, ಆ ಗುರುದ್ರವ್ಯಗಳು ಬೀಳದ ಹಾಗೆ ತಮ್ಮ ತಮ್ಮ ಸ್ಥಳದಲ್ಲೇ ನಿಯತ ವಾಗಿದ್ದುಕೊಂಡು ಇರುವುವಕ್ಕೆ ಸ್ವಾಮಿಯ ಸಂಕಲ್ಪವು ಕಾರಣ ವೆಂದು ಶಾಸ್ತ್ರಗಳಲ್ಲಿ ಹೇಳಿದೆ. ಇದಕ್ಕೆ ದೃಷ್ಟಾಂತವನ್ನು ಹೇಳ ಬಹುದು. ತ್ರಿಶಂಕುವನ್ನು ವಿಶ್ವಾಮಿತ್ರ ಮಹರ್ಷಿಯು ಹೇಗೆ ತನ್ನ ಸಂಕಲ್ಪದಿಂದ ಅಂತರಾಳದಲ್ಲಿ ನಿಲ್ಲಿಸಿದನೋ ಹಾಗೆಯೇ ಸ್ವಾಮಿಯು ಸಮಸ್ತ ಗುರುದ್ರವ್ಯಗಳನ್ನು ಸಂಕಲ್ಪಿಸಿ ನಿಯತ ಪ್ರದೇಶಗಳಲ್ಲಿ ಮಾತ್ರ ಸಂಚಾರವಿರುವ ಹಾಗೆ ಮಾಡಿರುತ್ತಾನೆಂಬ ಭಾವವು. ಸ್ವರೂಪದಿಂದಲೂ ಹಾಗೆಯೇ ಸಂಕಲ್ಪದಿಂದಲೂ ಧಾರ ಕತ್ವ ಉಂಟೆಂಬುದು ಇದರಿಂದ ಸ್ಥಾಪಿತವಾಯಿತು. **"ಏತಸ್ಯವಾ ಅಕ್ಷ ರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾ ಪೃಥಿವ್ಯೌ ಸೂರ್ಯಾ ಚಂದ್ರಮಸೌ ವಿಧೃತೌ ತಿಷ್ಠತಃ"** "ಓ ಗಾರ್ಗಿಯೇ, ಈ ನಾಶರಹಿತನಾದ ವಾಸುದೇ ವನ ಸಂಕಲ್ಪಾನುಸಾರ ನಿಯಮನ ಮಾಡುವದರಿಂದ ಸ್ವರ್ಗಪೃಥಿವ್ಯಾದಿ ಲೋಕಗಳೂ ಸೂರ್ಯ ಚಂದ್ರರೂ ಸತ್ತೆಯನ್ನು ಹೊಂದಿದವರಾಗಿ ಆ ನಿಯಮಾನುಸಾರ ವ್ಯಾಪಾರಗಳನ್ನು ಹೊಂದಿದವರಾಗುತ್ತಾರೆಂಬ ದಾಗಿ ಶ್ರುತಿಯೂ ಹಾಗೆಯೇ ಹೇಳುತ್ತದೆ. ಹಾಗಾದರೆ ಸ್ವಾಮಿ ಸಂಕಲ್ಪವೇ ಸರ್ವ ವಸ್ತುಗಳ ಸತ್ತಾಸ್ಥಿತಿ ಪ್ರವೃತ್ತಿಗಳಿಗೆ ಪ್ರಯೋ ಜಕವಾಗಿದ್ದರೆ, ಸ್ವಾಮಿ ಸ್ವರೂಪದಿಂದೇನು ಪ್ರಯೋಜನವೆಂಬ ಶಂಕೆಯು ಉಂಟಾಗಬಹುದಾಗಿ ಊಹಿಸಿ ಮುಂದೆ ಅದನ್ನು ಪರಿಹ ರಿಸುತ್ತಾರೆ.)

8. ಇಪ್ಪಡಿ ಇಚ್ಛಾಧೀನ ಸತ್ತಾಸ್ಥಿತಿ ಪ್ರವೃತ್ತಿಗಳಾನ ವಸ್ತುಕ್ಕಳಕ್ಕು ಪರಮಾತ್ಮನ ಸ್ವರೂಪ ಪೆನ್ ಶೆಯ್ಯಾಗಿರತೆನ್ನಿಲ್? ಪರಮಾತ್ಮಾವಿನುಡೈಯ ಇಚ್ಛೈ ಇವ್ವಸ್ತುಕ್ಕಳೈ ಪರಮಾತ್ಮಾವಿನ್ ಸ್ವರೂಪಾಶ್ರಿತಙ್ಗಳಾಕ (1) ವಕುತ್ತು

---

8. ಹೀಗೆ ಸ್ವಾಮಿಯ ಸಂಕಲ್ಪಕ್ಕೆ ಅಧೀನವಾದ ಸತ್ತಾಸ್ಥಿತಿ ಪ್ರವೃತ್ತಿಗಳುಳ್ಳ ವಸ್ತುಗಳಿಗೆಲ್ಲಾ ಪರಮಾತ್ಮನ ಸ್ವರೂಪವು ಏನು ಮಾಡುತ್ತದೆ ಎಂದರೆ? ಸ್ವಾಮಿಯ ಸಂಕಲ್ಪವೂ ಎಲ್ಲಾ ವಸ್ತುಗಳನ್ನೂ ಪರಮಾತ್ಮನ ಸ್ವರೂಪವನ್ನೇ ಆಶ್ರಯ ಉಳ್ಳವುಗಳ ಹಾಗೆ ಮಾಡಿ ("ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯ" ಆ ಪರಮಾತ್ಮನು ಬಹುವಾಗಿ ಆಗುವೆನು, ಅದಕ್ಕಾಗಿ ಬಹುವಾಗಿ ಹುಟ್ಟುವನೆಂದು ಸಂಕಲ್ಪಸಿದನು" ಎಂದು ಹೇಳಿರುವ ಹಾಗೆ) ಎಲ್ಲಾ ಚೇತನಾಚೇತನಗಳೂ ಶರೀರವಾದುದರಿಂದ ಸಂಕಲ್ಪಕ್ಕೆ ಅಧೀನಗಳು, ಸ್ವರೂಪವನ್ನು ಆಶ್ರಯಿಸದವು, ಎಂದು ಹೀಗೆ ಪ್ರತ್ಯೇಕಿಸಿ ಇಡುತ್ತದೆ. (ಯಾವಾಗ ಚೇತನಾ ಚೇತನಗಳು ಶರೀರವಾದವೋ ಆಗ ಎಲ್ಲವೂ ಸಂಕಲ್ಪಾಧೀನವೂ ಅಲ್ಲದೆ ಆ ಸಂಕಲ್ಪದಿಂದಲೇ ಸ್ವರೂಪಾಶ್ರಿತಂಗಳೂ ಹೌದು. ಸ್ವರೂಪಾಶ್ರಿತವಾಗಿರುವದು ನಿಷ್ಪ್ರಯೋಜನವಲ್ಲವೆಂದೂ, ಹಾಗೆ ಸ್ವಾಮಿ ಸಂಕಲ್ಪಕ್ಕಧೀನವಾಗಿಯೂ, ಸ್ವರೂಪಾಶ್ರಿತವಾಗಿಯೂ ಇರಬೇಕೆಂದು ಮುಂದಿನ ವಾಕ್ಯದಲ್ಲಿ ಪುನಃ ಸಮರ್ಥನಮಾಡಿ ಹೇಳುತ್ತಾರೆ. ಅದೂ ಅಲ್ಲದೆ ಲೋಕದೃಷ್ಟಾಂತದಿಂದ ಸ್ವರೂಪಾಶ್ರಿತತ್ವಭಾವವನ್ನು ವಿಶದೀಕರಿಸುತ್ತಾರೆ. ಆದರೆ ಮೇಲಿನ ಉಪಪಾದನೆಯಲ್ಲಿ ಸತ್ತಾಸ್ಥಿತಿಗಳು ಮಾತ್ರ ಸ್ವಾಮಿ ಸಂಕಲ್ಪ ಸ್ವರೂಪಗಳಿಗೆ ಅಧೀನವೆಂದು ಹೇಳಿ ಪ್ರವೃತ್ತಿಗಳ ವಿಷಯವಾದ ಉಪಪಾದನೆ ಮಾಡದಿರುವದರಭಿಪ್ರಾಯವೇನೆಂದರೆ:- ಯಾವಾಗ ಸತ್ತಾಸ್ಥಿತಿಗಳು ಸ್ವಾಮಿ ಸಂಕಲ್ಪ ಸ್ವರೂಪಗಳಿಗೆ ಅಧೀನವೆಂದು ಹೇಳಲ್ಪಟ್ಟಿತೋ, ಆಗ ಸತ್ತೆಗೆ ಅನುಸಾರವಾದ ಪ್ರವೃತ್ತಿಗಳೂ ಕೂಡ ಹಾಗೆಯೇ ಅಧೀನವೆಂಬುದು ಸ್ವತಸ್ಸಿದ್ಧವಾದುದರಿಂದ, ಶ್ರೀ ನಿಗಮಾಂತಮಹಾದೇಶಿಕರ

---

(1) **ವಕುತ್ತುವೈಕ್ಕುಂ – ವಿಭಾಗಮಾಡಿ ಅಥವ ಪ್ರತ್ಯೇಕಿಸಿ ಇಡುತ್ತದೆ**

ನೈಕ್ಯಂ. ಇಪ್ಪಡಿ ಸರ್ವ ವಸ್ತುವುಮ್ ಈಶ್ವರ ಸ್ವರೂಪಾಶ್ರಿತಮಾಯ್ ಈಶ್ವರೇಚ್ಛಾಧೀನಮಾಯ್‌ಯಿರುಕ್ಕುಮ್. ಲೋಕತ್ತಿಲುಂ ಶರೀರಂ ಶರೀರಿಯ ನುಡೈಯ ಸ್ವರೂಪಾಶ್ರಿತಮುಮಾಯ್ ಸಙ್ಕಲ್ಪಾಶ್ರಿತಮುಮಾಯಿರುಕ್ಕ (1) ಕಾಣಾನಿನ್ರೋಮ್. ಜೀವನಿರುನ್ದಕಾಲಮಿರುನ್ದು, ಇವನ್ ವಿಟ್ಟುಪೋದ ಳಿಕ್ಕೈಯಾಲೆ ಸ್ವರೂಪಾಶ್ರಿತಂ. ಇನ್ನರ್ಥಂ ಸಙ್ಕಲ್ಪ

ವರು ಆ ಭಾಗವನ್ನು ಉಪಪಾದಿಸದೆ ಮುಂದಕ್ಕೆ "ಇಪ್ಪಡಿ ಸರ್ವ" ಎಂಬ ವಾಕ್ಯದಿಂದ ಹೇಳಿದಭಿಪ್ರಾಯವನ್ನೇ ಪುನಃ ಸ್ಥಾಪಿಸುತ್ತಾರೆ.) ಹೀಗೆ ಸಮಸ್ತ ವಸ್ತುಗಳೂ (ಅಂದರೆ ಚೇತನಾ ಚೇತನವರ್ಗವೂ,) ಈಶ್ವರ ಸ್ವರೂಪವನ್ನು ಆಶ್ರಯಿಸಿರುವದಾಗಿಯೂ, ಆತನ ಸಂಕಲ್ಪಕ್ಕಧೀನವಾಗಿಯೂ ಇರುತ್ತವೆ. (ಇವುಗಳಿಗೆ ಶರೀರಭಾವವು ಯಾವಾಗ ಉಂಟಾಯಿತೋ ಸ್ವರೂಪಾಶ್ರಿತತ್ವ ಉಂಟೇ ಉಂಟೆಂಬುವದನ್ನು ಒಂದು ದೃಷ್ಟಾಂತ ಮೂಲಕ ತೋರ್ಪಡಿಸುತ್ತಾರೆ.) ಲೋಕದಲ್ಲೂ ಶರೀರವಾಗಿರುವುದು ಆ ಶರೀರವನ್ನು ಧರಿಸಿರುವ ಆತ್ಮಾವಿನ ಸ್ವರೂಪವನ್ನಾಶ್ರಯಿಸಿದುದಾಗಿಯೂ, ಆ ಆತ್ಮಾವಿನ ಸಂಕಲ್ಪಕ್ಕೆ ಅಧೀನವಾಗಿರುವುದನ್ನೂ ಪ್ರತ್ಯಕ್ಷದಲ್ಲಿ ಕಂಡಿರುವೆವು. (ಪ್ರಾಣಿವರ್ಗದ) ಶರೀರವು ಜೀವಾತ್ಮನಿರುವ ತನಕ ಸರಿಯಾದ ಸ್ಥಿತಿಯಲ್ಲಿದ್ದು, ಜೀವಾತ್ಮನು ಶರೀರವನ್ನು ಬಿಟ್ಟು ಹೋದ ಒಡನೆಯೇ ಕೊಳತು ಹೋಗುವುದರಿಂದ, ಶರೀರವು ಜೀವಾತ್ಮನ ಸ್ವರೂಪವನ್ನು ಆಶ್ರಯಿಸಿರುತ್ತದೆಂದು ಹೇಳಬಹುದು. (ಹೀಗೆ ವ್ಯತಿರೇಕಭಾವದಿಂದ ಶರೀರ ಸ್ವರೂಪಾಶ್ರಿತವೆಂದು ಸ್ಥಾಪಿಸಿ ಅನ್ವಯರೂಪದಲ್ಲೂ ಉಪಪಾದಿಸುತ್ತಾರೆ.) ಜೀವಾತ್ಮನ ಸಙ್ಕಲ್ಪವಿಲ್ಲದೇ ಇರುವ ನಿದ್ರಾ ಮೊದಲಾದ ಅವಸ್ಥೆಗಳಲ್ಲಿಯೂ (ಇಲ್ಲಿ, ಮೊದಲಾದ ಅವಸ್ಥೆಗಳೆಂದು "ಆದಿ" ಪದ ಪ್ರಯೋಗದಿಂದ ಸ್ವಪ್ನ ಮೂರ್ಛಾ ಮೊದಲಾದವು ಹೇಳಲ್ಪಟ್ಟವು.) ದೇಹವು ಕೊಳೆಯದೇ ಇರುವದರಿಂದ ಸ್ವರೂಪಾಶ್ರಿತವೆಂಬುದನ್ನು ಗ್ರಹಿಸಬಹುದು. (ಹಾಗೆಯೇ ಸಮಸ್ತ ಚೇತನಾ ಚೇತನವೂ ಇದರ

---

(1) **ಪ್ರತ್ಯಕ್ಷದಲ್ಲಿ ಕಂಡಿರುವೆವು**

ಮಿಲ್ಲಾದ ಸುಷುಪ್ತ್ಯಾದ್ಯವಸ್ಥೈಗಳಿಲೇ ತೆಳಿವದು. ಜಾಗರಾದಿ ದಶೈಗಳಿಲ್ ಸಙ್ಕಲ್ಪತ್ತಾಲೆನಿಳಾದಪಡಿ (1) ತಾಙ್ಗಂಪೋದು ಸಙ್ಕಲ್ಪಾಶ್ರಿತ (2) ಮೆನ್ನಕ್ಕಡವದು. ಇದಿಲ್ ಸ್ವರೂಪಾಶ್ರಿತ ಮಾಯಿರುಕ್ಕಿರ ಪಡಿಯ್ಯೆ ಆಧೇಯತ್ವಮೆನ್ರುಂ, ಸಙ್ಕಲ್ಪಾಧೀನ ಮಾಯಿರುಕ್ಕಿರ ಪಡಿಯ್ಯೆ ನಿಯಾಮತ್ವಮೆನ್ರುಂ ಶೊಲ್ಲುಗಿರುದು.

ಹಾಗೆಯೇ ಈಶ್ವರ ಸ್ವರೂಪಾಶ್ರಿತವೂ ಹೌದು ಎಂಬುವದೇ ತಾತ್ಪರ್ಯವು. ಹಾಗೆಯೇ ಸಙ್ಕಲ್ಪಾಧೀನವೆಂಬುವದನ್ನೂ ವಿಶದಪಡಿಸುತ್ತಾರೆ. ಇದನ್ನು ಏತಕ್ಕೆ ಹೇಳಬೇಕೆಂದರೆ, ಈ ಜೀವನ ಶರೀರವು ಸಂಪೂರ್ಣವಾಗಿ ತನ್ನ ಸಂಕಲ್ಪಕ್ಕೆ ಅಧೀನವಾಗಲಾರದು. ಏಕೆಂದರೆ, ತನ್ನ ಸಂಕಲ್ಪವಿಲ್ಲದೇನೇ ಮರಣಹೊಂದುತ್ತದೆ. ಅದು ಹೇಗೆ ಈತನ ಸಙ್ಕಲ್ಪಾಧೀನವೆಂದರೆ, ಅದಕ್ಕೆ ಸಮಾಧಾನ ಹೇಳುತ್ತಾರೆ.) ಎಚ್ಚರವಾಗಿರುವ ಅವಸ್ಥೆಗಳಲ್ಲಿ ಆತ್ಮನ ಸಙ್ಕಲ್ಪದಿಂದ ಈ ದೇಹವು ಬಿದ್ದುಹೋಗದೆ ಇರುವುದರಿಂದ, ಅದು ಸಙ್ಕಲ್ಪಾಶ್ರಿತವೆಂದು ಹೇಳಿಸಿಕೊಳ್ಳುವದು. (ಆದರೆ ಪರಮಾತ್ಮನ ಶರೀರದ ವಿಷಯದಲ್ಲೂ ಜೀವಾತ್ಮನ ಶರೀರದ ವಿಷಯದಲ್ಲೂ ಒಂದು ಮಾತ್ರ ವಿಶೇಷವುಂಟು. ಪರಮೇಶ್ವರನು ಸತ್ಯಸಂಕಲ್ಪನಾದುದರಿಂದ ತನ್ನ ಶರೀರದ ಸತ್ತಾಸ್ಥಿತಿಗಳು ತನ್ನ ಸಙ್ಕಲ್ಪಕ್ಕೆ ಅಧೀನವಾದವು. ಜೀವಾತ್ಮನಾದರೋ ಪಾರಂತತ್ರ್ಯ ಉಳ್ಳವನಾದುದರಿಂದ ಆತನ ಶರೀರದ ಸತ್ತೆಯು ಆತನ ಸಂಕಲ್ಪಕ್ಕೆ ಅಧೀನವಲ್ಲವು. ಆದುದರಿಂದ ಜರಾಮರಣಾದಿಗಳು ಜೀವನ ಸಂಕಲ್ಪಾಧೀನವಲ್ಲವಾಗಿರುತ್ತವೆ. ಆದರೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗೋಣವೂ, ನಿಂತ ಸ್ಥಳದಲ್ಲಿ ಬೀಳದ್ದೆ ಇರೋಣವೂ, ಇವೇ ಮೊದಲಾದವುಗಳಿಗೆಲ್ಲಾ ಆತನ ಸಂಕಲ್ಪವು ಸಹಕಾರಿಯಾಗಿರುತ್ತದೆ. ಮುಂದೆ ಆಧೇಯತ್ವ ನಿಯಾಮ್ಯತ್ವಗಳ ಸ್ವರೂಪಕ್ಕೆ ಅರ್ಥವನ್ನು ನಿಷ್ಕರ್ಷೆ ಮಾಡಿ ಹೇಳುತ್ತಾರೆ.) ಆದುದರಿಂದ ಇವುಗಳಲ್ಲಿ, ಆಶ್ರಯವಾಗಿರುವ ಭಾವವನ್ನೇ ಆಧೇಯತ್ವ

---

(1) ತಾಙ್ಗಂಪೋದು – ಇರುವ ಸಮಯದಲ್ಲಿ (2) ಎನ್ನಕ್ಕಡವದು – ಹಾಗೆ ಆಗುವುದು

9. ಈಶ್ವರನ್ ಸರ್ವಶೇಷಿಯಾಕೈಯಾವದು ?

(1) "ಉಪಾದತ್ತೇ ಸತ್ತಾಸ್ಥಿತಿ ನಿಯಮನಾದ್ಯೈಶ್ಚಿದಚಿತೌ ।
ಸ್ವಮುದ್ದಿಶ್ಯ ಶ್ರೀಮಾ ನಿತಿ ವಾಗೌಪನಿಷದೀ ॥

ವೆಂದೂ, ಸಙ್ಕಲ್ಪಕ್ಕೆ ಅಧೀನವಾಗಿರುವ ಭಾವವನ್ನೇ ನಿಯಾಮ್ಯತ್ವ ವೆಂದೂ ಹೇಳಲ್ಪಡುವದು.

(ಹೀಗೆ ಈ ಉಭಯ ವಿಭೂತಿಗಳೂ ಈಶ್ವರನ ಆಧೇಯತ್ವ ವಿಧೇಯತ್ವಗಳಿಂದ ಸತ್ತಾಸ್ಥಿತಿ ನಿಯಮನಾದಿಗಳನ್ನು ಹೊಂದಿವೆ ಎಂಬುವದನ್ನು ವಿಶದವಾಗಿ ತಿಳಿಯಪಡಿಸಿ, ಈಶ್ವರನು ಈ ಉಭಯ ವಿಭೂತಿಗೂ ಹೇಗೆ ಶೇಷಿ ಯೆಂಬುವದನ್ನು ತಿಳಿಸುತ್ತಾರೆ.)

ಶೇಷಿಭಾವ ನಿರೂಪಣವು.

9. ಸರ್ವೇಶ್ವರನು ಎಲ್ಲಾದಕ್ಕೂ ಶೇಷಿಯಾಗಿದ್ದಾನೆಂಬುವದರ ಭಿಪ್ರಾಯವೇನು ? ("ಎಲ್ಲಾ" ಎಂದು ಹೇಳಿ ತನಗಿತರವಾದ ಸಮಸ್ತಕ್ಕೂ ಶೇಷಿ ಎಂದು ಹೇಳಿರುವದರಿಂದ, ಎರಡು ವಿಭೂತಿಗಳಿಗೂ, ಅಂದರೆ ಅಲ್ಲಿರುವ ಚೇತನಾ ಚೇತನರಿಗೂ, ಅಲ್ಲದೆ ಈಶ್ವರಕೋಟಿಯಲ್ಲೇ ಸೇರಿದ ಮಹಾಲಕ್ಷ್ಮಿಗೂ ಸಹ, ಶೇಷಿ ಎಂದು ಹೇಳಿದಂತಾಯಿತು.

(2) **"ನಚಸೀತಾ ತ್ವಯಾಹೀನಾ ನಚಾಹಮಪಿರಾಘವ ಮುಹೂರ್ತಮಪಿ ಜೀವಾವ"** ಎಂಬ ಲಕ್ಷ್ಮಣೋಕ್ತಿಯೂ, ಮತ್ತೂ **" ಮಚ್ಛೇಷಭೂತಾಸರ್ವೇಷಾ ಮೀಶ್ವರೀವಲ್ಲಭಾಮಮ "** ಭಗವಚ್ಛಾಸ್ತ್ರದ ಸ್ವಾಮಿವಾಕ್ಯಗಳೂ ಇದಕ್ಕೆ ಪ್ರಮಾಣಗಳು.)

---

(1) ಶ್ರೀಪರಾಶರ ಭಟ್ಟರ ಶ್ರೀರಂಗರಾಜಸ್ತವ ಉ. 87. (2) ರಾ. ಅ. ಇದರಭಿಪ್ರಾಯವೇನೆಂದರೆ:— ಲಕ್ಷ್ಮಣನು ಶ್ರೀರಾಮನನ್ನು ಕುರಿತು ಹೇಳುತ್ತಾನೆ. ಓ ರಾಘವನೇ ನಿನ್ನನ್ನು ಬಿಟ್ಟು ಸೀತೆಯಾಗಲಿ ನಾನಾಗಲಿ ಒಂದು ಮುಹೂರ್ತವಾದರೂ ಬದುಕಿರಲಾರೆವು ಅಂದರೆ ಸತ್ತೆಯನ್ನು ಹೊಂದಿರಲಾರೆವು. ಎರಡನೇ ಶ್ಲೋಕದಭಿಪ್ರಾಯ ವೇನೆಂದರೆ ಎಲ್ಲಕ್ಕೂ ಶೇಷ ಎನಿಸಿ ಈಶ್ವರಳಾದ ನನ್ನ ಪ್ರೇಮವನ್ನು ಪಡೆದಿರುವ ನನ್ನ ಪತ್ನಿಯು, ಮಚ್ಛೇಷಭೂತಾ–ನನಗೆ ಶೇಷ ಭೂತಗಳು. ಈ ಒಂದು ವಿಷಯವನ್ನು ಬಿಟ್ಟು ಇನ್ನು ಮಿಕ್ಕ ವಿಷಯಗಳಲ್ಲಿ ನಾವಿಬ್ಬರೂ ಸಮಾನರು ಎಂಬದಾಗಿ ಸ್ವಾಮಿಯು ಸೇನೇಶರನ್ನು ಕುರಿತು ಹೇಳುತ್ತಾರೆ.

ಈಶ್ವರನ ಆಧಾರ ಭಾವ ನಿಯಮನಗಳೊಂದಿಗೆ ಶೇಷಿಯಾಗಿ ರುವ ಭಾವವೂ ಸ್ಫುಟವಾಗಿ ಪ್ರಮಾಣಗಳೊಂದಿಗೆ ತೋರಿಸಿರುತ್ತಾರೆಂ ಬಭಿಪ್ರಾಯದಿಂದ ಪೂಜ್ಯರಾದ ಪರಾಶರಭಟ್ಟರ ಶ್ಲೋಕದಿಂದ ಶೇಷ ತ್ವಭಾವವನ್ನು ಉಪಪಾದಿಸುತ್ತಾರೆ. "**ಶ್ರೀಮಾನ್** - ಶ್ರೀಮಹಾ ಲಕ್ಷ್ಮೀಯುಕ್ತನಾದ ನಾರಾಯಣನು, **ಚಿದಚಿತೌ** - ಸಮಸ್ತ ಚೇತ ನಾಚೇತನಗಳನ್ನು, **ಸ್ವಮುದ್ದಿಶ್ಯ** - ತನ್ನನ್ನು ಕುರಿತೇ, ಅಂದರೆ ತನ್ನ ಭೋಗ ಅಥವಾ ಲೀಲಾರೂಪವಾದ ಪ್ರಯೋಜನಕ್ಕಾಗಿಯೇ, "**ಸತ್ತಾಸ್ಥಿತಿ ನಿಯಮನಾದ್ಯೈಃ,**" **ಸತ್ತಾ** - ಸ್ವರೂಪ, **ಸ್ಥಿತಿ** - ಇರು ವಿಕೆ, **ನಿಯಮನ** - ಅವಗಳನ್ನು ಸುಪ್ರವೇಶಮಾಡಿ ನಿಯಮಿಸೋಣ, **ಆದ್ಯೈಃ** - ಇವೇ ಮೊದಲಾದವುಗಳಿಂದ ಅಂದರೆ ಭೋಗವನ್ನುಂಟು ಮಾಡುವುದೂ, ಮೋಕ್ಷವನ್ನೂ ಕೊಡುವುದೂ ಇವುಗಳಿಂದಲೂ, **ಉಪಾದತ್ತೆ** - ಅಂಗೀಕರಿಸಿರುತ್ತಾನೆ, **ಇತಿ** - ಎಂಬದಾಗಿ, **ಔಪನಿ ಷದೀ** - ಉಪನಿಷತ್ಸಂಬಂಧವಾದ, **ವಾಕ್** - ವಾಕ್ಯು, **ವದತಿ** - ಹೇ ಳುತ್ತದೆ. **ತತ್** - ಆ ಕಾರಣದ್ದೆಶೆಯಿಂದ, **ಇಹ** - ಈ ಜೀವಾತ್ಮನ, ವಿಷಯದಲ್ಲಿ, **ಉಪಾಯೋಪೇಯತ್ವೇ** - ಪ್ರಾಪಕನಾಗಿಯೂ, ಪ್ರಾ ಪ್ಯನಾಗಿಯೂ ಇರುವ ಎರಡು ಭಾವಗಳೂ, **ತತ್ವಂ** - ಸ್ವರೂಪಮೂ ಲಕ ಉಂಟಾದವುಗಳು, **ನತುಗುಣೌ** - ಈಚೆಗೆ ಬಂದ ಗುಣಗಳಲ್ಲವು, ಅಥವಾ ನಿನಗೆ ಅತಿಶಯ ಉಂಟುಮಾಡಲು ಏರ್ಪಟ್ಟ ಗುಣಗಳಲ್ಲವು, ಔಪಾಧಿಕವಾಗಿ ಬಂದುದಲ್ಲವು; **ಅತಃ** - ಆ ಕಾರಣದ್ದೆಶೆಯಿಂದ, **ಶ್ರೀ ರಂಗೇಶಯ** - ಶ್ರೀರಂಗದಲ್ಲಿ ಪವಡಿಸಿರುವ ರಂಗನಾಥನೇ, **ತ್ವಾಂ** - ನಿನ್ನನ್ನು, **ಅವ್ಯಾಜಂ** - ವ್ಯಾಜರಹಿತನಾಗಿರುವ, ಬೇರೇ ಪ್ರಯೋ ಜನ ಬೇಕಾಗದಿರುವ, ಅಂದರೆ ಪ್ರತ್ಯುಪಕಾರವನ್ನು ಅಪೇಕ್ಷಿಸದೇ ಇರುವ, **ಶರಣಂ** - ರಕ್ಷಕನನ್ನಾಗಿ, **ಅಭಜಂ** - ಹೊಂದಿದೆವು. "**ಅವ್ಯಾಜಂ**" ಎಂಬುವದನ್ನು ಕ್ರಿಯವಿಶೇಷಣವಾಗಿಯೂ ಭಾವಿಸ ಬಹುದು. ಆಗ ಅನನ್ಯ ಪ್ರಯೋಜನಭಾವವಿರೋಣವು ಹೇಗೋ ಹಾಗೆ, ಎಂದು ಅರ್ಥವನ್ನು ಹೇಳಬಹುದು.

ತಾತ್ಪರ್ಯ.—ಓ ಶ್ರೀರಂಗನಾಥನೇ ಉಪನಿಷದ್ವಾಕ್ಯಗಳು ಏನು ಬೋಧಿಸುತ್ತವೆಂದರೆ:— ಈ ಚಿದಚಿತ್ತುಗಳೆಲ್ಲಾ ನಿನ್ನವುಗಳೇ,

ಪ್ರಳಯದಲ್ಲಿ ಸೂಕ್ಷ್ಮಾವಸ್ಥೆಯಲ್ಲಿದ್ದುದನ್ನೇ ಸ್ಥೂಲಾವಸ್ಥೆಗೆ ಸೃಷ್ಟಿ ಕಾಲದಲ್ಲಿ ತಂದು, ಅವುಗಳಿಗೆ ನಾಮರೂಪಗಳನ್ನು ಹೊಂದುವ ಅವಸ್ಥೆಯನ್ನುಂಟುಮಾಡಿ, ಅವುಗಳನ್ನೇ ಶರೀರವಮಾಡಿಕೊಂಡು, ಅವುಗಳನ್ನೆಲ್ಲಾ ಅನುಪ್ರವೇಶವಮಾಡಿ, ಅವುಗಳಿಗೆಲ್ಲಾ ಆತ್ಮಾವಾಗಿ, ಹೀಗೆ ಲೀಲೆಯಲ್ಲಿ ಪ್ರವರ್ತಿಸಿರುವದರಿಂದ, ಅವುಗಳ ಸತ್ತಾಸ್ಥಿತಿನಿಯಮನಾದಿಗಳೆಲ್ಲಾ ನಿನ್ನ ಅಧೀನವಾಗಿರುವದು. ಇಷ್ಟುಮಾತ್ರವೇ ಅಲ್ಲದೆ, ಚೇತನರಿಗೆ ಭೋಕ್ತೃಭಾವವನ್ನುಂಟುಮಾಡಿ, ಅಚೇತನಕ್ಕೆ ಭೋಗ್ಯಭಾವವನ್ನುಂಟುಮಾಡಿರುವದೂ ಎಲ್ಲಾ ನೀನೇ. ಆದುದರಿಂದ ಹೀಗೆಲ್ಲಾ ಮಾಡಿರುವದು ಏತಕ್ಕೆಂದರೆ :-**"ಸ್ವಮುದ್ದಿಶ್ಯ"** ನಿನ್ನ ಪ್ರಯೋಜನಕ್ಕಾಗಿಯೇ, ಈ ಅಭಿಪ್ರಾಯವನ್ನು **"ಲೋಕವತ್ತು ಲೀಲಾಕೈವಲ್ಯಂ"** ಎಂಬ ಬ್ರಹ್ಮಸೂತ್ರವೂ, **"ಮೋದತೇ ಭಗವಾನ್ ಭೂತೈಃ ಬಾಲಃಕ್ರೀಡನ ಕೈರಿವ"** "ಬಾಲನು ಆಟದ ಸಾಮಾನುಗಳಿಂದ ಹೇಗೆ ಆಡುವನೋ ಹಾಗೆಯೇ ಸ್ವಾಮಿಯೂ ಚಿದಚಿತ್ತುಗಳೊಂದಿಗೆ ಲೀಲೆಯಲ್ಲಿ ಪ್ರವರ್ತಿಸಿ ಆನಂದಪಡುತ್ತಾನೆ" ಎಂಬ ವಾಕ್ಯವೂ ಸಮರ್ಥನೆ ಮಾಡುತ್ತವೆ. ಹೀಗೆ ತನ್ನದಾಗಿರುವ ಚಿದಚಿತ್ತುಗಳ ಸೃಷ್ಟಿಕ್ರಮ, ಅವುಗಳ ಸತ್ತಾಸ್ಥಿತಿ ನಿಯಮನ, ಮುಂತಾದ ಲೀಲೆಗಳ ವಿಷಯವನ್ನು ಅನೇಕ ಉಪನಿಷದ್ವಾಕ್ಯಗಳಲ್ಲಿ ತೋರಿಬರುವದರಿಂದ **"ವದತಿವಾಗೌಪನಿಷದೀ"** ಎಂದು ಪ್ರಯೋಗವಮಾಡಿರುತ್ತಾರೆ. ಇದೂ ಅಲ್ಲದೆ **"ಅಜಸ್ಯನಾಭಾವಧ್ಯೇಕಮರ್ಪಿತಂ। ಯಸ್ಮಿನ್ನಿದಂ ವಿಶ್ವಂಭುವನ ಮಧಿಶ್ರಿತಂ"** ಎಂಬಿವೇ ಮೊದಲಾದ ವಾಕ್ಯಗಳಿಂದಲೂ ಸಮಸ್ತವೂ ಸ್ವಾಮಿಯನ್ನು ಆಶ್ರಯಿಸಿ ಸ್ವಾಮಿಯ ಲೀಲಾಪ್ರಯೋಜನಕ್ಕಾಗಿಯೇ ಇರುವುವುಗಳೆಂಬುದು ವ್ಯಕ್ತಪಡುತ್ತದೆ. ಇಂತಹ ಸರ್ವವಿಧ ದಿವ್ಯ ಲೀಲಾಚೇಷ್ಟೆಗಳಲ್ಲಿ ಸ್ವಾಮಿಯು ತಾನೊಬ್ಬನೇ ಪ್ರವರ್ತಿಸುವದಿಲ್ಲವು. **"ಸಏಕಾಕೀನರಮೇತ"** ಎಂದರೆ ಆತನೊಬ್ಬನೇ ರಮಿಸಲಾರನು, ಎಂಬ ಉಕ್ತಿಗನುಸಾರವಾಗಿ ಯಾವಾಗಲೂ ಪತ್ನಿಯೊಂದಿಗೇನೆ ಇರುವವನಾಗಿ ಸರ್ವವಿಧವಾದ ಈ ಲೀಲಾಪ್ರವರ್ತನೆಗಳಲ್ಲಿ, ಅವಳನ್ನು ಸಹಧರ್ಮಚಾರಿಣಿಯಾಗಿಯೇ ಅಂಗೀಕರಿಸಿ, ಆಕೆಯ ಮುಖೋಲ್ಲಸಕ್ಕಾಗಿಯೂ, ಅವಳ

ಇಷ್ಟವೇ ತನ್ನ ಇಷ್ಟವಾದುದರಿಂದ ಇಬ್ಬರೂ ಏಕಭಾವದಿಂದ ಸರ್ವ ಸೃಷ್ಟಿಸ್ಥಿತಿ ನಿಯಮನ ಲಯ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಈ ಅಭಿಪ್ರಾಯವನ್ನು ಪ್ರಕಟಿಸುವದಕ್ಕಾಗಿ **"ಶ್ರೀಮಾನ್"** ಎಂಬ ಪ್ರಯೋಗವನ್ನು ಮಹಾನುಭಾವರು ಮಾಡಿರುತ್ತಾರೆ.

ಯಾವಾಗ ಈ ಪ್ರಪಂಚಗಳ ಪ್ರವರ್ತನೆಯೆಲ್ಲಾ ಲೋಕದಂಪತಿಗಳಾದ ನಿಮ್ಮಿಬ್ಬರ ಪ್ರಯೋಜನಕ್ಕೆಂದು ಆಯಿತೋ, ಆಗ ಸರ್ವ ಜೀವಾತ್ಮರುಗಳ ಐಹಿಕ ಭೋಗಗಳಿಗೂ, ಆಮುಷ್ಮಿಕ ಫಲಪ್ರಾಪ್ತಿಗೂ ನೀವುಗಳು ಉಪಾಯಭೂತರೂ ಆಗಿರುವುದಲ್ಲದೆ, ನೀವು ಉಪೇಯಭೂತರೂ ಆಗಿರುತ್ತೀರಿ. ಆದುದರಿಂದ ನಿಮ್ಮಗಳಿಗೆ ಉಪಾಯೋಪೇಯತ್ವಗಳೆರಡೂ ಏರ್ಪಟ್ಟವು. ಹೀಗೆ ಏರ್ಪಟ್ಟಿರುವುದು ಸ್ವರೂಪತಃ ಸ್ವಾಭಾವಿಕವಾಗಿ ಉಂಟಾದುದೇ ವಿನಾ, ನಿಮಗೆ ಔಪಾಧಿಕವಾಗಿಯಾಗಲಿ, ಅತಿಶಯವನ್ನುಂಟುಮಾಡುವದಕ್ಕಾಗಲಿ ಉಂಟಾದ ಗುಣಗಳಲ್ಲವು. ಆದರೆ ಈ ಜೀವನು ಕರ್ಮವಾಸನಾದಿಗಳಿಂದ ಪಾಪಗಳನ್ನೇ ಮಾಡುತ್ತಾ ಇರುವಾಗ, ಅಂಥವನಿಗೂ ಕೂಡ ಹೇಗೆ ಉಪಾಯೋಪೇಯರು ಎಂದರೆ **"ಉಪಕಾರಿಷುಯಸ್ಸಾಧು ಸ್ಸಾಧುತ್ವೇ ತಸ್ಯ ಕೋ ಗುಣಃ । ಅಪಕಾರಿಷು ಯಸ್ಸಾಧು ಸಸ್ಸಾಧು ರಿತಿ ಕಥ್ಯತೇ"** ಅಂದರೆ ಉಪಕಾರಿಗಳಿಗೆ ಯಾವನು ಸಾಧುವಾಗಿರುತ್ತಾನೋ ಅಂಥಾವನ ಸಾಧುತ್ವದಲ್ಲಿ ಏನು ಗುಣವಿದೆ? ಅಪಕಾರಿಗಳಲ್ಲೂ ಕೂಡ ಯಾವನು ಸಾಧುವಾಗಿರುತ್ತಾನೋ ಅವನೇ ಸರಿಯಾದ ಸಾಧುವು ಎಂದು ಹೇಳಿಸಿಕೊಳ್ಳುವನೆಂದು ಹೇಳಿರುವ ಹಾಗೆ, ಪಾಪಿಯಾಗಿ ಅಪಕಾರಿಯಾದ ಜೀವನನ್ನೂ ಏನೋ ಒಂದು ವ್ಯಾಜಮಾಡಿ ಅನನಿಗೂ ಕೂಡ ನೀವು ಉಪಾಯೋಪೇಯರಾಗುತ್ತೀರೆಂಬ ಭಾವವು. ಇದು ಸ್ವಭಾವಸಿದ್ಧವಾದುದು. ಈ ಕಾರಣದಿಂದ ನೀವುಗಳು ನಮ್ಮಿಂದೇನೂ ಪ್ರತಿಫಲವನ್ನಪೇಕ್ಷಿಸದೆ ಇರುವ ನಿರ್ಹೇತುಕ ಕೃಪಾಶಾಲಿಗಳಾದ ಶರಣ್ಯರೆಂದು ತಿಳಿದು **"ಶ್ರೀಮಾನ್ನಾರಾಯಣೋ ನಃ ಪತಿರಖಿಲ ತನುರ್ಮುಕ್ತಿದೋ ಭೋಗ್ಯಃ"** "ಸರ್ವವನ್ನೂ ಶರೀರವಾಗಿ ಧರಿಸಿ, ನಮ್ಮಗಳಿಗೆಲ್ಲಾ ಆತ್ಮವಾಗಿ, ಮುಕ್ತರಿಂದ ಪರಿಚರ್ಯೆಯನ್ನು

ಎನ್ನಿರಪಡಿಯೇ ತನ್ ಪ್ರಯೋಜನತ್ತುಕ್ಕಾಕವೇ (1) ಪಾರಾರ್ಥ್ಯೈಕ ಸ್ವಭಾವಙ್ಗಳಾನ ಇವ *ற்றை* **(2) ಯುಪಾದಾನಂ ಪಣ್ಣಿಯಿವ** *ற்றா* **ಲೇಯತಿಶಯವಾನಾಕ್ಕೈ.**

ಕೈಕೊಂಡವರಾಗಿ, ನಮ್ಮಗಳಿಗೆಲ್ಲಾ ಮುಕ್ತಿಯನ್ನು ಕೊಡುವಂಥಾವರುಗಳಾಗಿರುವ ಲಕ್ಷ್ಮೀನಾರಾಯಣರಾದ ದಿವ್ಯ ದಂಪತಿಗಳೇ ನಮಗೆ ಪರತತ್ವವು ಎಂದು ಆಚಾರ್ಯರವರು ಅಪ್ಪಣೆಕೊಡಿಸಿರುವ ಮೇರಿಗೆ, ನಿಮ್ಮನ್ನು ಆಶ್ರಯಿಸಿರುತ್ತೇವೆಂಬ ತಾತ್ಪರ್ಯವು.)

ಈ ಮೇಲಿನ ಶ್ಲೋಕದಲ್ಲಿ ಹೇಳಿರುವಹಾಗೆ ತನ್ನ ಸ್ವಂತ ಪ್ರಯೋಜನಕ್ಕಾಗಿಯೇ ಈಶ್ವರನು ಪರ ಪ್ರಯೋಜನವೇ ಮುಖ್ಯವಾಗಿರುವ ಹಾಗೆ ತನ್ನಿಂದ ಏರ್ಪಡಿಸಲ್ಪಟ್ಟ ಈ ಚಿದಚಿತ್ತುಗಳನ್ನು ಸ್ವೀಕರಿಸಿ, ಅದರಿಂದ ತಾನು ಅತಿಶಯವನ್ನು ಹೊಂದುವದೇ ಶೇಷಿ ಎಂಬುವದರ ಅಭಿಪ್ರಾಯವು. ("ಪಾರಾರ್ಥ್ಯ" ಶಬ್ದದ ಮುಖ್ಯಾಭಿಪ್ರಾಯವೇನೆಂದರೆ, ಇತರನಿಗೆ ಪ್ರಯೋಜನವಾಗಿರುವುದೇ ತನಗೂ ಪ್ರಯೋಜನವು. ಚಿದಚಿತ್ತುಗಳೆಲ್ಲಾ ಸರ್ವೇಶ್ವರನ ಪ್ರಯೋಜನಕ್ಕಾಗಿಯೇ, ಎಂದು ಉಪನಿಷತ್ತುಗಳು ಉದ್ಘೋಷಿಸುತ್ತವೆ. ಅಚಿತ್ತುಗಳಿಗೆ ಸಾರ್ಥಕ್ಯವು, ಪರಮ ಪುರುಷನಿಗೆ ಭೋಗ್ಯವಾಗಿರುವದೇ. ಚೇತನರುಗಳೂ ಕೂಡ ಐಹಿಕಭೋಗಗಳನ್ನೂ, ಮೋಕ್ಷವನ್ನೂ ಹೊಂದುವದು, ಪರಮಪುರುಷನಿಗೆ ಲೀಲಾರ್ಥವಾಗಿಯೂ ಭೋಗಾರ್ಥವಾಗಿಯೂ ಆಗುವದರಿಂದ ಸ್ವಾಮಿಗೇನೇ ಪ್ರಯೋಜನವೆಂದೂ, ಹಾಗೆ ಸರ್ವೇಶ್ವರನಿಗೆ ಭೋಗ್ಯವಸ್ತುವಾಗಿರುವುದೇ ತನಗೂ ಪ್ರಯೋಜನವೆಂದು ಭಾವವು. ಆದರೆ ಈ ಲೋಕದಲ್ಲಿ ಚೇತನನು, ಅಚೇತನವನ್ನೂ ಹಾಗೆಯೇ ಇತರ ಚೇತನರನ್ನೂ, ಭೋಗ್ಯವಸ್ತುಗಳನ್ನಾಗಿ ಭಾವಿಸಿ ತಾನು ಪ್ರಯೋಜನ

---

(1) ಪಾರಾರ್ಥ್ಯೈಕಸ್ವಭಾವಗಳಾನ - ಅಂದರೆ ಈ ಚಿದಚಿತ್ತುಗಳು ಇತರ ಪ್ರಯೋಜನಕ್ಕಾಗಿಯೇ ಏರ್ಪಟ್ಟವು; ಸ್ವಂತಕ್ಕಲ್ಲವು. ಸ್ವಾಮಿಯು ತನ್ನ ಪ್ರಯೋಜನಕ್ಕಾಗಿಯೇ ಏರ್ಪಡಿಸಿಟ್ಟುಕೊಂಡ ವಸ್ತುಗಳೆಂಬ ಭಾವವು. ಆದುದರಿಂದ ಅವುಗಳು ಸ್ವಭಾವತಃ ಹಾಗೆಯೇ ಎಂಬಭಾವವು. (2) ಉಪಾದಾನಂ ಪಣ್ಣಿ - ಸ್ವೀಕರಿಸಿ.

ಆಧಾರಾಧೇಯಾದಿ ಭಾವಪ್ರಯೋಜನ.

೧೦ ಇನ್ದ ವಾಧಾರಾಧೇಯ ಭಾವಾದಿಗಳಾಲಿಚ್ಚೇತನ ನುಕ್ಕು ಫಲಿಪ್ಪದೆನ್ನೆನ್ನಿಲ್? ಆಧಾರಾಧೇಯ ಭಾವತ್ತಾಲೇ ಅವನುಡೈಯ ಜ್ಞಾನಶಕ್ತ್ಯಾದಿಗಳುಕ್ಕು ಪ್ಪೋಲೆ ಅಪೃಥ ಕ್ಸಿದ್ಧ (1) ಸ್ವರೂಪಲಾಭಮುಂ, ಶೇಷಶೇಷಿಭಾವತ್ತಾಲೆ ಆ ತ್ಮಾಭಿಮಾನಾನುಗುಣ ಪುರುಷಾರ್ಥ ವ್ಯವಸ್ಥೈಯುಂ ಪಡಿ ಯೇ ಸ್ವರೂಪಾನುರೂಪಮಾನ ಪುರುಷಾರ್ಥ ರುಚಿಯುಂ

ವನ್ನು ಹೊಂದಿದ ಹಾಗೆ ಭಾವಿಸುವನಲ್ಲಾ ಎಂದರೆ ಅವೆಲ್ಲಾ ಭ್ರಮ ವೆಂದು ಭಾವವು.)

(ಆದರೆ ಸ್ವಾಮಿಗಿರುವ ಧಾರ್ಯತ್ವ ನಿಯಾಮ್ಯತ್ವ ಶೇಷಿತ್ವಗಳಿಂ ದುಂಟಾಗುವ ಪ್ರಯೋಜನವೇನಾದರೂ ನಮಗೆ ಉಂಟೋ ಎಂದರೆ ಉಂಟು ಎಂಬದಾಗಿ ಹೇಳುತ್ತಾರೆ.)

ಆಧಾರಾಧೇಯ ಮೊದಲಾದ ಭಾವಗಳ ಪ್ರಯೋಜನವು.

೧೦ ಸ್ವಾಮಿಗೂ ಈ ಚಿದಚಿತ್ತುಗಳಿಗೂ ಇರುವ ಆಧಾರಾಧೇ ಯವೇ ಮೊದಲಾದ ಭಾವಗಳಿಂದ ಈ ಜೀವನಿಗೆ ಉಂಟಾಗುವ ಫಲವೇನೆಂದರೆ :- ಜ್ಞಾನಶಕ್ತಿ ಮೊದಲಾದ ಗುಣಗಳು ಹೇಗೆ ಸ್ವಾಮಿ ಯನ್ನು ಎಂದಿಗೂ ಬಿಡದೇ ಇರುವದರಿಂದ ಅಪೃಥಕ್ಸಿದ್ಧವಿಶೇಷಣಗ ಳೆಂದು ಹೇಳಿಸಿಕೊಂಡವೋ, ಹಾಗೆಯೇ ಸರ್ವೇಶ್ವರನಿಂದ ಎಂದಿಗೂ ಅಗಲಿರದೇ ಇರತಕ್ಕವನೆಂಬ ಸ್ವರೂಪಜ್ಞಾನದ ಲಾಭಉಂಟಾಗು ತ್ತದೆ. (ಇದೊಂದು ಪ್ರಯೋಜನವು. ಮತ್ತೇನುಪ್ರಯೋಜನವೆಂ ದರೆ ತಿಳಿಸುತ್ತಾರೆ. ಅದು ಶೇಷಶೇಷಿಭಾವದಿಂದುಂಟಾಗುತ್ತದೆಂದು ಹೇಳುತ್ತಾರೆ.) ಸರ್ವೇಶ್ವರನು ಶೇಷಿಯು, ತಾನು ಶೇಷನು ಎಂಬ ಭಾವದಿಂದ, ಈ ಚೇತನನು ತನ್ನ ವಿಷಯದಲ್ಲಿಟ್ಟಿರುವ ಅಭಿಪ್ರಾಯಾ ನುಗುಣವಾಗಿ, ತಾನು ಕೋರುವ ಪುರುಷಾರ್ಥಗಳ ವ್ಯವಸ್ಥೆಯಲ್ಲಿ, ತನ್ನ ಸ್ವರೂಪಕ್ಕನುರೂಪವಾದ ಫಲಪ್ರಾಪ್ತಿಯಲ್ಲಿ ಅಭಿರುಚಿಯ

---

(1) ಸ್ವರೂಪಲಾಭಮುಂ ಅಂದರೆ ಸ್ವರೂಪ ಜ್ಞಾನದ ಲಾಭವು

ಶೇಷ ಶೇಷಿ ಭಾವತ್ತಾಲುಮ್, ನಿಯನ್ತೃನಿಯಾಮ್ಯ ಭಾವ ತ್ತಾಲುಮ್, (1) ಸ್ವರೂಪಾನುರೂಪಮಾನ ಪುರುಷಾರ್ಥತು

ನ್ನುಂಟುಮಾಡುತ್ತದೆ. (ಅಂದರೆ ಜೀವನು ದೇಹಾತ್ಮಾಭಿಮಾನಿಯಾದರೆ ಅನ್ನಪಾನಗೃಹಾರಾಮಾದಿಗಳಲ್ಲಿ ಅಭಿರುಚಿಯೂ, ದೇಹಾಭಿಮಾನವಿಲ್ಲದಿದ್ದರೆ ಸ್ವರ್ಗಭೋಗದಲ್ಲಿ ಅಭಿರುಚಿಯೂ, ತಾನು ಜ್ಞಾನಾನಂದ ಸ್ವರೂಪನೆಂಬ ಅಭಿಮಾನವಿದ್ದರೆ ಕೈವಲ್ಯದಲ್ಲಿ ಅಭಿರುಚಿಯೂ, ತಾನು ದಾಸಭೂತನು ಎಂಬಭಿಮಾನವಿದ್ದರೆ ಸ್ವಾಮಿಕೈಂಕರ್ಯಪ್ರಾಪ್ತಿಗೆ ಬೇಕಾದ ಮೋಕ್ಷದಲ್ಲಿ ಅಭಿರುಚಿಯೂ ಉಂಟಾಗುತ್ತದೆಂಬ ಭಾವವು. ಈ ನಾಲ್ಕುವಿಧ ಅಭಿರುಚಿಗಳಲ್ಲಿ ಕೊನೆಯಲ್ಲಿ ಹೇಳಿದುದೇ ಈ ಚೇತನನ ಸ್ವರೂಪಕ್ಕೆ ಅನುರೂಪವಾದ ಪುರುಷಾರ್ಥವಾದುದರಿಂದ, ಅದನ್ನೇ ಉದ್ದೇಶಿಸಿ ಹೇಳಲ್ಪಟ್ಟಿತೆಂದು ಭಾವಿಸಬಹುದು. ಶೇಷಶೇಷಿಜ್ಞಾನ ಯಾವಾಗ ಸರಿಯಾಗಿ ಉತ್ಪನ್ನವಾಯಿತೋ, ಆಗ ಸರ್ವೇಶ್ವರನ ಕೈಙ್ಕರ್ಯದಲ್ಲಿ ಸ್ವತಃ ಅಭಿರುಚಿಯುಂಟಾದೀತು.

ಅನ್ನಂ ಭೋಜ್ಯಂ ಮನುಷ್ಯಾಣಾಮಮೃತಂತು ದಿವೌಕಸಾಂ
ಶ್ವಪಶೂ ವಿಟ್ತೃಣಾಹಾರೌ ಸಂತೋದಾಸ್ಯೇಕ ಜೀವನಾ ।

ಎಂದು ಹೇಳಿರುವಮೇರೆಗೆ, ಮನುಷ್ಯನಿಗೆ ಅನ್ನವೂ, ದೇವತೆಗಳಿಗೆ ಅಮೃತವೂ, ನಾಯಿಗೆ ಅಮೇಧ್ಯವೂ, ಪಶುವಿಗೆ ತೃಣವೂ, ಜೀವನವು. ಶೇಷಭಾವವನ್ನರಿತ ಭಾಗವತೋತ್ತಮರಿಗಾದರೋ, ಸ್ವಾಮಿಕೈಂಕರ್ಯವೇ ಜೀವನವು. ಮುಂದಕ್ಕೆ ಮೂರನೇ ಪ್ರಯೋಜನವನ್ನು ನಿರೂಪಿಸುತ್ತಾರೆ.)

ಸ್ವಾಮಿಯು ಶೇಷಿಯು, ತಾನು ಶೇಷನು ಎಂಬ ಭಾವದಿಂದಲೂ, ಸ್ವಾಮಿ ನಿಯಾಮಕನು, ತಾನು ನಿಯಾಮ್ಯನೂ, ನಿಯಮಿಸಲ್ಪಡುವವನು, ಎಂಬ ಭಾವದಿಂದಲೂ, ಈ ಚೇತನನು ತನ್ನ ಸ್ವರೂಪಕ್ಕೆ ಯೋಗ್ಯವಾದ ಪುರುಷಾರ್ಥವನ್ನು ಹೊಂದುವದರಲ್ಲಿ, ಸ್ವಾಮಿಯೇ

(1) ಸ್ವರೂಪಕ್ಕನು ರೂಪವಾದ ಉಪಾಯ ವಿಶೇಷ ಹೇಗೆಂದರೆ:—ಶಕ್ತನಿಗೆ ಭಕ್ತಿ ಮಾರ್ಗವೂ ಎಂದರೆ ಉಪಾಸನೆಯೂ, ಅಶಕ್ತನಿಗೆ ಪ್ರಪತ್ತಿಮಾರ್ಗವೂ ಉಪಾಯಗಳು.

ಕ್ಕನುರೂಪಮುಮಾಯ್, (1) ನಿರಪೇಕ್ಷಮುಮಾಯ್, ಇರನ್ದುಳ್ಳ ಉಪಾಯವಿಶೇಷತ್ತೈ (2) ಯರಿಗೈಯುಮ್ ಫಲಿಕ್ಕುಂ. ಆಕನಿವತ್ತಿಲಿಚ್ಚೇತರ್ನ, ಅನನ್ಯಾಧಾರನ್, ಅನನ್ಯಪ್ರಯೋಜನನ್, ಅನನ್ಯಶರಣನ್, ಎನ್ರುದಾಯಿಱ್ಱು.

ನಿರ್ಹೇತುಕವಾದ ಸಿದ್ಧೋಪಾಯನು ಎಂಬ ವಿಶೇಷತತ್ವದ ಜ್ಞಾನವೂ ಫಲಿಸುತ್ತದೆ. (ಸಾತ್ವಿಕಸಂಭಾಷಣೆ, ಸದ್ಗುರುಪ್ರಾಪ್ತಿ, ತನ್ಮೂಲಕ ಸಾಧ್ಯೋಪಾಯಗಳಾದ ಭಕ್ತಿ ಪ್ರಪತ್ತಿಗಳನುಷ್ಠಾನವೂ ಇವೆಲ್ಲಾ ಮೋಕ್ಷಪ್ರಾಪ್ತಿಗೆ ಬೇಕಾಗಿರುತ್ತವೆ. ಇವಕ್ಕೆಲ್ಲಾ ನಿರ್ಹೇತುಕನಾದ ಕೃಪಾಪಿಯ್ಯೂಷಜಲಧಿಯಾದ ಸರ್ವೇಶ್ವರನೇ ಸಿದ್ಧೋಪಾಯನೆಂಬ ಜ್ಞಾನವೂ ಉಂಟಾಗುತ್ತದೆಂಬ ಭಾವವು.)

(ಈಶ್ವರನಿಗೂ ತನಗೂ ಇರುವ ಆಧಾರಾಧೇಯಭಾವ, ನಿಯನ್ತೃ ನಿಯಾಮ್ಯಭಾವ, ಶೇಷಿ ಶೇಷಭಾವ, ಇವುಗಳನ್ನು ಚನ್ನಾಗಿ ತಿಳಿಯುವದರಿಂದ, ಈಚೇತನನಿಗೆ **ಮೂರುಪ್ರಯೋಜನಗಳುಂಟೆಂದು** ಈ ಮೇಲಿನ ವಾಕ್ಯದಿಂದ ತಿಳಿಸಿರುತ್ತಾರೆ:—

೧. ತನಗೆ ಶ್ರಿಯಃಪತಿಯು ಆಧಾರನೆಂಬುವ ಜ್ಞಾನದಿಂದ, ತಾನು ಆ ಸರ್ವೇಶ್ವರನಿಂದ ಎಂದೆಂದಿಗೂ ಅಗಲದೇ ಇರುವ ಸ್ವರೂಪಉಳ್ಳವನೆಂಬ ಜ್ಞಾನವುಂಟಾಗುತ್ತದೆ.

೨. ತಾನಿರುವದು ಸರ್ವೇಶ್ವರನ ಪ್ರಯೋಜನಕ್ಕಾಗಿಯೇ ಎಂಬ ಶೇಷಭಾವ ಯಾವಾಗವುಂಟಾಯಿತೋ ಆಗ ಮೋಕ್ಷದೆಶೆಯಲ್ಲಿ ಆತನಿಗೆ ನಿರಂತರ ಕೈಂಕರ್ಯವನ್ನೆಸಗುವದೇ ತನಗೆ ಸ್ವರೂಪವೆಂಬ ಜ್ಞಾನವುಂಟಾಗಿ ಅದನ್ನು ಪಡೆಯಬೇಕೆಂಬ ಆಶೆಯುಂಟಾಗುತ್ತದೆ.

---

(1) ನಿರಪೇಕ್ಷಮುಮಾಯ್:—ನಿರ್ಹೇತುಕವಾದ, ಎಂದರೆ ಸರ್ವೇಶ್ವರನೇ ತಾನೇ ಸ್ವತಂತ್ರಿಸಿ, ಯಾವ ಸಹಕಾರಿಗಳಪೇಕ್ಷೆಯೂ ಇಲ್ಲದೆ ಸಿದ್ಧೋಪಾಯನಾಗುವನೆಂಬ ಭಾವವು.

(2) ಅರಿಗೆಯುಂ:—ತಿಳಿಯುವದು.

೩. ಸ್ವಾಮಿಯು ಶೇಷಿಯೂ ಆಗಿ ನಿಯಾಮಕನೂ ಆಗಿರುವದರಿಂದ ಮೇಲೆ ಹೇಳಿದ ಮೋಕ್ಷಕೈಂಕರ್ಯಪ್ರಾಪ್ತಿಗಳಿಗೆ ತಾನೇ ಸಿದ್ಧೋಪಾಯನಾಗಿರುವನೆಂಬ ಜ್ಞಾನವೂ ದೊರೆಯುತ್ತದೆ.

ಯಾವಾಗ ಇಂತಹ ಜ್ಞಾನವುಂಟಾಯಿತೋ ಆಗ ಜೀವನು ಅನನ್ಯಾಧಾರನೆಂದೂ, ಅನನ್ಯ ಪ್ರಯೋಜನನೆಂದೂ, ಅನನ್ಯಶರಣನೆಂದೂ ಹೇಳಿದಂತಾಯಿತು. **ಅನನ್ಯಾಧಾರ**ನೆಂದರೆ, ಸರ್ವೇಶ್ವರನ ವಿನಾ ತನಗಿನ್ನಾ್ಯರೂ ಆಧಾರವಿಲ್ಲದವನು. **ಅನನ್ಯ ಪ್ರಯೋಜನ**ನೆಂದರೆ, ಸರ್ವೇಶ್ವರನಿಗೇನೇ ತಾನು ಪ್ರಯೋಜನವಾಗಿರುವುದಲ್ಲದೆ, ಇನ್ನಾ್ಯರಿಗೆ ತಾನು ಪ್ರಯೋಜನವಾಗಿಲ್ಲದವನು. **ಅನನ್ಯಶರಣನು** ಎಂದರೆ ಸರ್ವೇಶ್ವರನಲ್ಲದೆ ಇನ್ನಾ್ಯರನ್ನು ಉಪಾಯವಾಗಿ ವರಿಸದವನು. ಈ ಧರ್ಮಗಳು ಜೀವನ ಸ್ವರೂಪ ನಿರೂಪಕ ಧರ್ಮಗಳೆಂಬಭಿಪ್ರಾಯದಿಂದ ಹೇಳಿದವುಗಳಾಗಿವೆ. ಶ್ರೀಮನ್ನಾರಾಯಣನೇ ತನಗೆ ಆಧಾರವು ಆತನಿಗೇನೇ ತಾನು ಪ್ರಯೋಜನವು, ಆತನೇ ತನಗೆಗತಿಯು, ಅಲ್ಲದೆ ಬೇರೆಯಾರೂ ಇಲ್ಲವು ಎಂಬಭಿಪ್ರಾಯವು. ಅಚೇತನವಾದರೋ ಅನನ್ಯಾಧಾರವೂ ಅಲ್ಲ, ಅನನ್ಯಪ್ರಯೋಜನವೂ ಅಲ್ಲವು. ಏಕೆಂದರೆ ಚೇತನನೂ ಕೂಡ ಅದಕ್ಕೆ ಆಧಾರವೂ, ಚೇತನನಿಗೂ ಅದು ಪ್ರಯೋಜನವಾದುದು.

ಆದರೆ ಶ್ರೀ ಮಹಾಲಕ್ಷ್ಮಿಗೂ ಕೂಡ ಈ ಜೀವನು ಆಧೇಯನೂ, ಪ್ರಯೋಜನವಾಗಿರುವನು, ಮತ್ತು ಆಕೆಯನ್ನು ಉಪಾಯವಾಗಿವರಿಸುವವನೂ ಅಲ್ಲವೋ? ಹಾಗಾದರೆ, ಸ್ವಾಮಿಗೇನೇ ಈತನು ಅನನ್ಯಾಧಾರನೂ, ಅನನ್ಯಪ್ರಯೋಜನನೂ, ಅನನ್ಯಶರಣನೂ ಎಂಬುವದು ಹೇಗೆ? ಎಂದರೆ, ಯಾವಾಗಲೂ ನಾರಾಯಣನು ಶ್ರೀಮಹಾಲಕ್ಷ್ಮೀವಿಶಿಷ್ಟನಾಗಿಯೇ ಇರುವದರಿಂದ ಈ ಅನನ್ಯಾಧಾರತ್ವ, ಅನನ್ಯಪ್ರಯೋಜನತ್ವ, ಅನನ್ಯಶರಣ್ಯತ್ವವೆಲ್ಲಾ ಲಕ್ಷ್ಮೀವಿಶಿಷ್ಟನಾದ ನಾರಾಯಣನನ್ನೇ ಕುರಿತೇ ಹೇಳಿದುದಾಗಿ ಭಾವಿಸತಕ್ಕದ್ದು.)

ಉಕ್ತಾರ್ಥಾನಾಂ ರಹಸ್ಯತ್ರಯ ಪ್ರತಿಪಾದ್ಯತ್ವಂ.

ಇವ್ವರ್ಥಂ ಪ್ರಥಮ ರಹಸ್ಯತ್ತಿಲ್ ಕಿಡಕ್ಕಿರಪಡಿಯೆಙ್ಙ ನೇಯೆನ್ನಿಲ್? ನಾರಾಯಣ ಶಬ್ದತ್ತಿಲ್ ತತ್ಪುರುಷ ಬಹುವ್ರೀಹಿ ಸಮಾಸದ್ವಯತ್ತಾಲು ಮುಣ್ಡಾನಧಾರಕತ್ವ ವ್ಯಾಪಕತ್ವಾದಿಗಳಾಲೇ ಅನನ್ಯಾಧಾರತ್ವಾದಿ ವಿಶಿಷ್ಟ ಸ್ವರೂಪ ಲಾಭಮುಂ,

---

ಈ ಅರ್ಥಗಳೆಲ್ಲಾ ರಹಸ್ಯತ್ರಯಗಳಲ್ಲಿವೆ.

(ಇನ್ನುಮುಂದೆ ಈ ಮೇಲೆ ಉಪಪಾದಿಸಿದ ಅರ್ಥಗಳೆಲ್ಲಾ ರಹಸ್ಯತ್ರಯಗಳಲ್ಲಿ ಅಡಗಿವೆ ಎಂಬುದನ್ನು ತೋರ್ಪಡಿಸುತ್ತಾರೆ.) ಈ ಅರ್ಥವು ಅಂದರೆ ಸ್ವಾಮಿಯ ಧಾರಕತ್ವ, ನಿಯಾಮ್ಯತ್ವ, ಶೇಷತ್ವ, ಶರೀರತ್ವ, ಅನನ್ಯಾಧಾರತ್ವ, ಅನನ್ಯಪ್ರಯೋಜನತ್ವ, ಅನನ್ಯಶರಣತ್ವ ಇವೆಲ್ಲವೂ. ಮೊದಲನೇ ರಹಸ್ಯವಾದ ಮೂಲ ಮಂತ್ರದಲ್ಲಿ ಎಲ್ಲಿ ದೊರೆಯುತ್ತದೆ ಎಂದರೆ? ಮೂಲಮಂತ್ರದ ನಾರಾಯಣಶಬ್ದದಲ್ಲಿ ತೋರುವ ತತ್ಪುರುಷ ಬಹು ವ್ರೀಹಿ ಎರಡುಸಮಾಸಗಳಿಂದಲೂ ತೋರಿಬರುವ ಧಾರಕತ್ವ ವ್ಯಾಪಕತ್ವ ಮೊದಲಾದವುಗಳಿಂದ ಅನನ್ಯಾಧಾರತ್ವವೇ ಮೊದಲಾದವುಗಳಿಂದ ಸೇರಿದ ಸ್ವರೂಪ ಪ್ರಾಪ್ತಿಯು, ತೋರಿಬರುತ್ತದೆ. (ಹೇಗೆಂದರೆ? **ನಾರಾಣಾಂ ಅಯನಂ ನಾರಾಯಣಃ** ಎಂಬುದು ಷಷ್ಟೀತತ್ಪುರುಷವು; ನಾರ ಅಂದರೆ ನಿತ್ಯವಾದ ಚೇತನಾ ಚೇತನಗಳಿಗೆಲ್ಲಾ ಪ್ರಾಪ್ಯನು ಪ್ರಾಪಕನು, ಮತ್ತು ಆಧಾರನು. ಇಣ್ ಗತೌ ಎಂಬ ಧಾತುವಿನಿಂದ, ಅಯನಶಬ್ದ ಉಂಟಾಗಿರುವದರಿಂದ ಹೊಂದಿಸಲ್ಪಡುವನೆಂಬ ಅರ್ಥದಿಂದ ಪ್ರಾಪ್ಯನೆಂದೂ, ತಾನೇ ಹೊಂದಿಸುವನಾದುದರಿಂದ ಪ್ರಾಪಕನೆಂದೂ, ಇವನಲ್ಲೇ ಎಲ್ಲವೂ ಹೊಂದಿಸಿವೆ ಎಂಬುದರಿಂದ ಆಧಾರನೆಂದೂ ಅರ್ಥಬರುತ್ತದೆ. ಇದರಿಂದ ಶ್ರೀಮನ್ನಾರಾಯಣನ ಆಧಾರತ್ವವೂ, ಚೇತನನ ಅಧೇಯತ್ವವೂ, ಅನನ್ಯಾಧಾರತ್ವವೂ ವ್ಯಕ್ತಪಡುತ್ತದೆ. **“ನಾರಾಃ ಅಯನಂ ಯಸ್ಯ ಸಃ”** ಎಂಬ ಬಹು ವ್ರೀಹಿ ಸಮಾಸದಿಂದ, ಈ ನಾರ ಶಬ್ದದಿಂದ ಹೇಳಲ್ಪಟ್ಟ ಎಲ್ಲಾ ನಿತ್ಯವಸ್ತುಗಳನ್ನೇ ಆಧಾರವಾಗಿ

ಪಾರಾರ್ಥ್ಯ ಪಾರತಂತ್ರ್ಯ ಗರ್ಭಮಾನ (1) ಕೀಳಿಲ್ ಪದ ದ್ವಯತ್ತಾಲೇ ಅನನ್ಯ ಪ್ರಯೋಜನತ್ವಮುಂ, ಅನನ ಶರ ಣತ್ವಮುಂ (2) ಫಲಿಕ್ಕುಂ.

ಉಳ್ಳವನು ಎಂಬರ್ಥವು ತೋರಿಬರುತ್ತದೆ. ಇದರಿಂದ ಸ್ವಾಮಿಯ ಸರ್ವಾನ್ತರ್ಯಾಮಿತ್ವ ಪೂರ್ವಕವಾದ ವ್ಯಾಪಕತ್ವವೂ,ಅದರಿಂದಸರ್ವಕ್ಕೂ ಆತ್ಮವಾಗಿ ಸ್ವಾಮಿಯ ಸರ್ವನಿಯಂತೃತ್ವವೂ, ಜೀವನ ನಿಯಾಮ್ಯ ತ್ವವೂ ಸೂಚಿತವಾದವು. ಮೂಲದಲ್ಲಿ "ಅನನ್ಯಾಧಾರತ್ವಾದಿ" ಎಂ ಬಲ್ಲಿ "ಆದಿ"ಶಬ್ದದಿಂದ ಜೀವನ ನಿಯಾಮ್ಯತ್ವವು ಹೇಳಲ್ಪಟ್ಟಿ ತೆಂದು ಭಾವಿಸತಕ್ಕದ್ದು. ನಾರಾಯಣಾಯ ಎಂಬ ಚತುರ್ಥಿಯಿಂದ ಕೈಙ್ಕರ್ಯವು ಹೇಳಲ್ಪಡುತ್ತದಾದುದರಿಂದ, ಅನನ್ಯ ಪ್ರಯೋಜನ ತ್ವವನ್ನೂ ಈ "ಆದಿ" ಪದದಿಂದ ಊಹಿಸಬಹುದು.) ವ್ಯಾಪಕ ತ್ವಾದಿ" ಎಂಬಲ್ಲಿ ಆದಿ ಪದದಿಂದ, ಕೈಂಕರ್ಯವೇ ಸ್ವಾಮಿಗೆ ಪ್ರಯೋ ಜನವಾದುದರಿಂದ, ಸ್ವಾಮಿಯ ಶೇಷತ್ವವು ಹೇಳಲ್ಪಟ್ಟಿತೆಂದರಿಯ ಬೇಕು.)

ಜೀವನು ಸ್ವಾಮಿಗೇನೇ ಶೇಷನು ಎಂದು ಪರಪ್ರಯೋಜ ನತೆಯನ್ನು ಬೋಧಿಸುವ ಪ್ರಣವವೂ ಮತ್ತೂ ಸ್ವರಕ್ಷಣದಲ್ಲಿ ತಾನು ತುಂಬಾ ಅಸ್ವತಂತ್ರನೂ ಎಂದು ಬೋಧಿಸುವ ನಮಸ್ಸೂ, ಈ ಎರಡೂ ಮೂಲಮಂತ್ರದ ಮೊದಲನೇ ಪದಗಳಿಂದ ಜೀವನ ಅನನ್ಯ ಪ್ರಯೋಜನತ್ವವೂ, ಅನನ್ಯಶರಣತ್ವವೂ ಕೂಡ ತೋರಿಬರುತ್ತವೆ. (ಹೇಗೆಂದರೆ :—ಪ್ರಣವವಾದ "ಓಂ" ಎಂಬುವದರಲ್ಲಿ "ಅಕಾರ ಉಕಾರ ಮಕಾರ ಇತಿ" ಎಂಬ ವಾಕ್ಯರೀತ್ಯಾ, ಅ, ಉ, ಮ ಎಂಬ ಮೂರು ಅಕ್ಷರಗಳಲ್ಲಿ, ಅ ಎಂಬ ಅಕ್ಷರವು ವಿಷ್ಣುವಾಚಕವು. ಆ ಅಕ್ಷರದಲ್ಲಿ ಚತುರ್ಥೀ ವಿಭಕ್ತಿಯು ಲೋಪಿಸಿರುತ್ತದೆ. ಆದುದ

---

(1) ಕೀಳಿಲ್ ಪದದ್ವಯ - ಹಿಂದಿನ ಮೊದಲು ಎರಡು ಪದಗಳು, "ಓಂನಮೊ" ಎಂಬ ಪದಗಳು. (2) "ಫಲಿಕ್ಕುಂ" ಎಂಬುವದರಭಿಪ್ರಾಯವೇನೆಂದರೆ :—ಶಬ್ದರೂಪ ವಾಗಿ ಯಥಾವತ್ತಾಗಿ ತೋರದಿದ್ದರೂ ಅರ್ಥವ್ಯುತ್ಪತ್ತಿ ಮೊದಲಾದವುಗಳಿಂದ ಆ ಭಾವ ಗಳು ದ್ಯೋತಕವಾಗುವುವು ಎಂಬಭಿಪ್ರಾಯವು.

ಪ್ರಪತ್ತ್ಯನುಷ್ಠಾನ ಪ್ರಕಾಶಕಮಾನ ಮಂತ್ರರತ್ನತ್ತಿಲ್ ಪೂರ್ವಖಂಡತ್ತಾಲೇ ಅನನ್ಯಶರಣತ್ವಮುಂ, ಉತ್ತರಖಂಡ ತ್ತಾಲೇ ಅನನ್ಯ ಪ್ರಯೋಜನತ್ವಮುಂ, ಉಭಯ ಭಾಗ

ರಿಂದ "ಆಯ" ಎಂದು ಇಟ್ಟುಕೊಳ್ಳಬೇಕು. ಉ ಎಂಬುವದು ಅವಧಾರಣವು, ಆದುದರಿಂದ "ಏವ" ಎಂಬರ್ಥವು. ಮಕಾರವು ಜೀವವಾಚಕವು. ಆದುದರಿಂದ, ಮಕಾರವಾಚ್ಯನಾದ ಜೀವನು "ಆಯ ಏವ" ಶ್ರೀ ವಿಷ್ಣುವಿಗೇನೇ ಶೇಷಭೂತನು, ಮತ್ತ್ಯಾರಿಗೂ ಇಲ್ಲವು ಎಂಬ ಯೋಜನೆಯಿಂದ **ಅನನ್ಯಪ್ರಯೋಜನತ್ವವು** ಹೇಳಿದಂತಾಯಿತು. ಎರಡನೇ ಪದವು ನಮಃ ಅಂದರೆ ರಕ್ಷಣೋಪಾಯವು. ನಮಃ ಎಂಬುವದನ್ನು ಸಖಂಡ ನಮಸ್ಸಾಗಿ ಎರಡು ಪದಗಳನ್ನಾಗಿ ವಿಂಗಡಿಸಿದರೆ, ಮಃ ನ ಎಂದಾಗುತ್ತದೆ. ಇದರಿಂದ ರಕ್ಷಣೋಪಾಯವು, ಮಃ - ನನಗೆ, ನ - ಇಲ್ಲವು. ರಕ್ಷಣೋಪಾಯದಲ್ಲಿ ತನಗೆ ಸಂಬಂಧವಿಲ್ಲದೆ ಪಾರತಂತ್ರ್ಯವು ಏರ್ಪಟ್ಟದುದರಿಂದ ಅನನ್ಯಶರಣತ್ವವೂ ಸೂಚಿಸಲ್ಪಟ್ಟಿತೆಂದು ಭಾವವು.

(ಮುಂದಕ್ಕೆ ದ್ವಯಮಂತ್ರಾರ್ಥದಲ್ಲಿ ಈ ಮೂರು ಅರ್ಥಗಳೂ ಹೇಗೆ ಬೋಧಿತವಾಗುತ್ತವೆಂಬುವದನ್ನು ತೋರ್ಪಡಿಸುತ್ತಾರೆ.)

ಶರಣಾಗತಿಮಾರ್ಗದ ಅನುಷ್ಠಾನವನ್ನು ಪ್ರಕಾಶವಾಗಿ ತೋರಿಸುವ ದ್ವಯಮಂತ್ರದಲ್ಲಿ **ಪೂರ್ವಖಂಡದಿಂದ ಜೀವನು ಅನನ್ಯಶರಣನೆಂಬ** ಭಾವವೂ, **ಉತ್ತರಖಂಡದಿಂದ ಜೀವನು ಅನನ್ಯಪ್ರಯೋಜನ** ಉಳ್ಳವನೆಂಬ ಭಾವವೂ, ಎರಡು ಖಂಡದಲ್ಲೂ ಇರುವ ನಾರಾಯಣ ಶಬ್ದದಿಂದ ಅನನ್ಯಾಧಾರ ಭಾವವೂ ಪ್ರಕಾಶವಾಗಿ ತೋರುತ್ತದೆ. (ದ್ವಯದಲ್ಲಿರುವ ಎರಡು ವಾಕ್ಯಗಳಿಗೂ ಎರಡು ಖಂಡಗಳೆಂದು ಹೆಸರು. ಮೊದಲನೇ ವಾಕ್ಯವಾದ ಪೂರ್ವಖಂಡದಲ್ಲಿರುವ "ಶರಣ ಮಹಂ ಪ್ರಪದ್ಯೇ" ಎಂಬುವ ಶಬ್ದಗಳಿಂದಲೇ ಅನನ್ಯಶರಣ ಭಾವವು ತೋರಿಬರುತ್ತದೆ. ಎರಡನೇ ವಾಕ್ಯವಾದ ಉತ್ತರಖಂಡದ "ನಾರಾಯಣಾಯನಮಃ" ಎಂಬಲ್ಲಿರುವ ಚತುರ್ಥೀವಿಭಕ್ತಿ

ತ್ತಾಲುಮ್, ಅನನ್ಯಾಧಾರತ್ವಮುಂ, ಪ್ರಕಾಶಿಕ್ಕಿರದು. ಇಪ್ಪಡಿ ಶಾಬ್ದಮಾಕವುಮ್ ಆರ್ಥಮಾಕವುಮ್, ಚರಮ ಶ್ಲೋಕತ್ತಿಲು ಮಿ (1) ವ್ವಕಪ್ಪುಕ್ಕಣ್ದುಕೊಳ್ವದು.

ಯಿಂದ ಕೈಙ್ಕರ್ಯವು ನಾರಾಯಣನಿಗೇನೇ ತನಗಲ್ಲವು ಎಂಬರ್ಥವು ತೋರಿಬರುವದರಿಂದ ಆರ್ಥವಾಗಿ **ಅನನ್ಯಪ್ರಯೋಜನ ಭಾವವು** ತೋರಿಬರುತ್ತದೆ. ಉಭಯ ಖಂಡದಲ್ಲೂ ಇರುವ "ನಾರಾಯಣ" ಶಬ್ದಗಳಿಂದ ತತ್ಪುರುಷಸಮಾಸ ಪ್ರಕಾರ ಅನನ್ಯಾಧಾರವು ತೋರಿಬ ರುತ್ತದೆ. ಇದು ಹಿಂದೆಯೇ ತಿಳಿಸಲ್ಪಟ್ಟಿರುತ್ತದೆ.) (ದ್ವಯದಲ್ಲಿ ಈ ಮೂರುಭಾವಗಳೂ ತೋರ್ಪಡಿಸಿ, ಚರಮಶ್ಲೋಕದಲ್ಲೂ ಕೂಡ ಅವು ತೋರಿಬರುತ್ತವೆಂದು ಮುಂದಿನ ವಾಕ್ಯದಿಂದ ತೋರ್ಪಡಿಸು ತ್ತಾರೆ.) ಈ ವಿಧವಾದ ಪ್ರಕಾರಗಳನ್ನೂ ಅಂದರೆ ಅನನ್ಯಾಧಾ ರತ್ವ, ಅನನ್ಯಪ್ರಯೋಜನತ್ವ, ಅನನ್ಯಶರಣತ್ವಗಳ ಭಾವಗಳನ್ನೂ ಸಾಕ್ಷಾತ್ತಾಗಿ ಶಬ್ದಗಳ ಮೂಲಕವಾಗಿಯೂ, ಅರ್ಥತಾತ್ಪರ್ಯಗಳ ಮೂಲಕವಾಗಿಯೂ ತಿಳಿದುಕೊಳ್ಳುವದು. (ಚರಮ ಶ್ಲೋಕದಲ್ಲಿ "ಶರಣಂವ್ರಜ" ಎಂಬುವದರಿಂದ ಶಾಬ್ದವಾಗಿ ಅನನ್ಯ ಶರಣತ್ವವು ತೋರಿಬರುತ್ತದೆ. "ಮಾಮೇಕಂ" ಎಂಬಲ್ಲಿರುವ ಏಕಶಬ್ದದಿಂದ ಪ್ರಾಪಕಪ್ರಾಪ್ಯನು ತಾನೇ ಎಂಬುವದರಿಂದ ಅರ್ಥಾತ್ ಅನನ್ಯಪ್ರ ಯೋಜನತ್ವವು ತೋರಿಬರುತ್ತದೆ. "ಮೋಕ್ಷಯಿಷ್ಯಾಮಿ ಪಾಪೇ ಭ್ಯಃ ಮಾಶುಚಃ" ಎಂಬುವದರಿಂದ ತನ್ನ ಶರೀರದ ಮಲವನ್ನು ತಾನೇ ಹೋಗಲಾಡಿಸಿಕೊಳ್ಳನು ಎಂಬಭಿಪ್ರಾಯದಿಂದ ಅನನ್ಯಾ ಧಾರತ್ವವು ಅರ್ಥಾತ್ ಸಿದ್ಧಿಸುತ್ತದೆ.)

ಹೀಗೆ ಮೂಲಮಂತ್ರ, ಮಂತ್ರರತ್ನವಾದ ದ್ವಯ, ಚರಮ ಶ್ಲೋಕ ಈ ಮೂರರಲ್ಲೂ ಈ ಮೂರುಭಾವಗಳೂ ತೋರಿಬಂದಲ್ಲಿ ಈ ಮೂರೂ ಅವಶ್ಯಕವೇ ? ಮೂರರಲ್ಲಿ ಬಂದೇಸಾಲದೇ ? ಎಂಬ ಶಂಕಾನಿವಾರಣಾರ್ಥವಾಗಿ ಮೂರೂ ಅವಶ್ಯಕವೆಂದು ಮುಂದಿನವಾಕ್ಯ ದಿಂದ ಉಪಪಾದಿಸುತ್ತಾರೆ. ಹಿಂದಿನ ಅಧಿಕಾರದಲ್ಲೇ ಇವು ಮೂರು

---

(1) ಇವ್ವಕುಪ್ಪು – ಈ ಪ್ರಕಾರದಭಿಪ್ರಾಯವನ್ನು.

ಇಪ್ಪಡಿ ಚರಮಶ್ಲೋಕತ್ತಿಲೆ ಸಿದ್ಧೋಪಾಯ ವಶೀಕರಣಾರ್ಥಮಾಕ ಸಾದ್ಧ್ಯೋಪಾಯ ವಿಶೇಷತ್ತೈ ದ್ವಯಾತ್ತಾಲೇಯನುಷ್ಠಿಕ್ಕುಮ್ (1) ಪೋದೈಕ್ಕು ಅನುಸನ್ಧೇಯಙ್ಗಳಾಯ್‌ಕ್ಕೊಂಡು ಅವಶ್ಯಾಪೇಕ್ಷಿತಙ್ಗಳಾನ ವರ್ಥಂಗಳೈಯೆಲ್ಲಾಂ ಶಿರಿಯ ಕಣ್ಣಾಡಿ (2) ಪೆರಿಯ ವುರುಕ್ಕಳೈಕಾಟ್ಟು

ಮಂತ್ರಗಳ ಮಹಿಮೆಗಳಲ್ಲಿ ವೈಲಕ್ಷಣ್ಯ ಉಂಟೆಂದು ತೋರಲ್ಪಟ್ಟಿದ್ದರೂ, ಈ ಸಂದರ್ಭದಲ್ಲೂ ಅಂತಹ ಶಂಕೆಯೇ ಉತ್ಪನ್ನವಾಗುವದರಿಂದ, ತತ್ಪರಿಹಾರಾರ್ಥವಾಗಿ ಮೂರೂ ಅವಶ್ಯಕವೆಂದು ಹೇಳುತ್ತಾರೆ. ದ್ವಯವು **"ಪ್ರಪತ್ತ್ಯನುಷ್ಠಾನ ಪ್ರಕಾಶಕ"**ವೆಂದು ಹಿಂದಿನ ವಾಕ್ಯದಲ್ಲಿ ಹೇಳಿ ಅದರ ಅವಶ್ಯಕತೆಯನ್ನು ತೋರ್ಪಡಿಸಿದರು. ಅದನ್ನೇ ಪುನಃ ಹೇಳಿ ಚರಮಶ್ಲೋಕ ಮೂಲಮಂತ್ರಗಳ ಅವಶ್ಯಕತೆಯನ್ನು ಸ್ಥಾಪಿಸಿರುತ್ತಾರೆ.)

ಹೀಗೆ ಚರಮಶ್ಲೋಕದಲ್ಲಿ ಸಿದ್ಧೋಪಾಯನಾದ ಲಕ್ಷ್ಮೀನಾರಾಯಣನನ್ನು ವಶಮಾಡಿಕೊಳ್ಳಲು ಬೇಕಾದ ಸಾದ್ಧ್ಯೋಪಾಯವಿಶೇಷವಾದ ಪ್ರಪತ್ತಿಯನ್ನು ವಿಧಿಸಿರುವದನ್ನು ದ್ವಯವಾದ ಕರಣಮಂತ್ರದ ಮೂಲಕ ಅನುಷ್ಠಾನ ಮಾಡುವ ಸಮಯದಲ್ಲಿ, ನಮಗೆ ಅನುಸಂಧಾನಗಳಾಗಿ ಮುಖ್ಯವಾಗಿ ತಿಳಿಯಬೇಕಾದ ಅರ್ಥಗಳನ್ನೆಲ್ಲಾ ಚಿಕ್ಕ ಕನ್ನಡಿಯು ದೊಡ್ಡವಸ್ತುಗಳನ್ನು ತೋರಿಸುವಹಾಗೆ, ಸಂಗ್ರಹವಾಗಿ ತಿಳಿಸುವಂಥಾದ್ದು, ಮೂಲಮಂತ್ರವು. (ಇದರಿಂದ ಏನು ಹೇಳಲ್ಪಟ್ಟಿತೆಂದರೆ :—ಸಿದ್ಧೋಪಾಯನಾದ ಸ್ವಾಮಿಯನ್ನು ವಶಮಾಡಿಕೊಳ್ಳಬೇಕಾದರೆ, ಸಾದ್ಧ್ಯೋಪಾಯವಾದ ಶರಣಾಗತಿಯೆಂಬದಾಗಿ ಚರಮಶ್ಲೋಕವು ವಿಧಿಸುತ್ತದೆ. ದ್ವಯವಾದರೋ ಈ ವಿಧಿಸಿದ ಸಾದ್ಧ್ಯೋಪಾಯವಾದ ಶರಣಾಗತಿಯ **ಅನುಷ್ಠಾನ**ವಾಗಿರುತ್ತದೆ. ಮೂಲಮಂತ್ರವಾದರೋ ಆ ಅನುಷ್ಠಾನ ಕಾಲದಲ್ಲಿ ತನಗೂ ಸ್ವಾಮಿಗೂ ಸಂಬಂಧವೇನು? ತನ್ನ ಆತನ ಸ್ವರೂಪಗಳೇನು? ತನ್ನ

---

(1) ಪೋದೈಕ್ಕುಂ - ಸಮಯದಲ್ಲಿ. (2) ಪೆರಿಯವುರುಕ್ಕಳೈ - ದೊಡ್ಡ ವಸ್ತುಗಳನ್ನು.

ಮೂಪ್ಪೋಲೆ (1) **ಶುರುಙ್ಗ ತ್ತೆಳಿವಿಕ್ಕುಂ ತಿರುಮನ್ತ್ರಂ. ಇದಿಲ್ ಪ್ರಥಮ ಪದತ್ತಿಲರ್ಥಙ್ಗಳೈ ಅರ್ಜುನ ರಥತ್ತಿಲುಂ,** (2) **"ಅಗ್ರತಃ ಪ್ರಯಯೌ ರಾಮಃ" ಎನ್ಗಿರ ಶ್ಲೋಕತ್ತಿಲುಂ ಕಂಡು ಕೊಳ್ವದು.**

ಮುಖ್ಯಪ್ರಾಪ್ತಿ ಎಂತಾದ್ದು? ಇವೇ ಮೊದಲಾದ ಜ್ಞಾತವ್ಯಾಂಶಗಳನ್ನೆಲ್ಲಾ ತಿಳಿಸುತ್ತದೆ. ಆದುದರಿಂದ ಒಂದು, ಸಾಧ್ಯೋಪಾಯದ ಮಾಹಾತ್ಮ್ಯೆಯನ್ನೂ ತಿಳಿಸಿ ಅದನ್ನು ವಿಧಿಸುತ್ತದೆ. ಇನ್ನೊಂದು, ಅದರ ಅನುಷ್ಠಾನವಾಗಿರುತ್ತದೆ. ಮತ್ತೊಂದು, ಆ ಸಂದರ್ಭದಲ್ಲಿ ತಿಳಿಯಬೇಕಾದ ಅಂಶಗಳನ್ನೆಲ್ಲಾ ಬೋಧಿಸುತ್ತದೆ. ಆದುದರಿಂದ ಮೂರೂ ಅವಶ್ಯಕಗಳೆಂಬ ಭಾವವು. ಅದರಲ್ಲಿ ಮೂಲಮಂತ್ರವು **ಸರ್ವಜ್ಞಾತವ್ಯಾರ್ಥ ಸಂಗ್ರಹವು.**)

ಮೂಲಮಂತ್ರವು ಹೇಗೆ ಸರ್ವಜ್ಞಾತವ್ಯಾರ್ಥ ಸಂಗ್ರಹವು.

(ಇನ್ನುಮುಂದೆ ಮೂಲಮಂತ್ರದಲ್ಲಿ ಈ ಅರ್ಥಗಳೆಲ್ಲಾ ದ್ಯೋತವಾಗುತ್ತದೆಂದು ಹೇಳುವ ಸಂದರ್ಭದಲ್ಲಿ ಶ್ರೀವರ್ಮ ಅಪ್ಪುಳ್ಳಾರವರು ತಮಗೆ ಅನುಗ್ರಹಿಸಿದ ವಿಶೇಷಾರ್ಥವನ್ನು ಕೃಪಯಾ ನಮಗೂ ಅನುಗ್ರಹಿಸುತ್ತಾರೆ.) ಈ ತಿರುಮಂತ್ರದಲ್ಲಿ ಪ್ರಥಮ ಪದವಾದ "ಓಂ" ಎಂಬುವದರಲ್ಲಿ ತೋರಿಬರುವ ಅಭಿಪ್ರಾಯಗಳನ್ನು ಅರ್ಜುನನ ರಥದಲ್ಲೂ ಮತ್ತು **"ಅಗ್ರತಃಪ್ರಯಯೌ ರಾಮಃ"** ರಾಮನು ಮೊದಲು ಪ್ರಯಾಣಮಾಡಿದನು ಎಂಬುವ ಶ್ಲೋಕದಲ್ಲೂ ತಿಳಿದು ಕೊಳ್ಳುವದು. (**"ಓಂ"** ಶಬ್ದದ ಅರ್ಥವು ಮುಂದಿನ ಎರಡು ಶ್ಲೋಕಗಳಿಂದ ಉಪಪಾದಿತವಾಗಿರುತ್ತದೆ:— **ಓಂ** ಎಂಬ ಪದದಲ್ಲಿ **"ಅಕಾರ, ಉಕಾರ, ಮಕಾರ ಇತಿ"** ಎಂಬ ಉಪನಿಷದ್ಪ್ರಕಾರ ಮೂರು ಅಕ್ಷರಗಳು. ಅದರಲ್ಲಿ ಅಕಾರವು ವಿಷ್ಣುವಾಚಕವು, ಮಕಾರವು ಜೀವವಾಚಕವು. ಉಕಾರಕ್ಕೆ ಎರಡು ಅರ್ಥಗಳನ್ನು ಹೇಳಬಹುದು :—**ಒಂದನೇದು** ಉ ಎಂದರೆ "ಏವ" ಎಂಬ ಅವಧಾರಣವು. ಹೀಗೆ ಅರ್ಥಮಾಡಿದರೆ ಮಕಾರವಾಚ್ಯನಾದ ಜೀವನು

---

(1) ಶುರಙ್ಗ - ಪ್ರಯಾಸವಿಲ್ಲದೆ ಸಂಗ್ರಹವಾಗಿ. (2) ರಾ. ಅರಣ್ಯ. ೧೧. ೧.

ವಿಷ್ಣುವಿಗೇ ವಿನಾ ಬೇರೆಯಲ್ಲವು, ಎಂಬುವದರಿಂದ ವಿಷ್ಣುವಿಗೇನೇ ಶೇಷಭೂತನೆಂದು ಅಭಿಪ್ರಾಯವು. ಈ ಅಭಿಪ್ರಾಯವು,

"ಅಕಾರೋ ವಿಷ್ಣುರಿತ್ಯುಕ್ತೋ ಮಕಾರೋ ಜೀವವಾಚಕಃ।
ತಯೋಸ್ತು ನಿತ್ಯಸಂಬಂಧಃ ಉಕಾರೇಣ ಪ್ರಕೀರ್ತಿತಃ"

ಎಂಬುವದರಲ್ಲೂ,

" ಅಕಾರಾರ್ಥೋ ವಿಷ್ಣುರ್ಜಗದುದಯ ರಕ್ಷಾಪ್ರಳಯಕೃತ್ ।
ಮಕಾರಾರ್ಥೋ ಜೀವಃ ತದುಪಕರಣಂ ವೈಷ್ಣವಮಿದಂ ।
ಉಕಾರೋಽನನ್ಯಾರ್ಹಂ ನಿಯಮಯತಿ ಸಂಬಂಧಮನಯೋಃ ।
ತ್ರಯೀಸಾರಸ್ತ್ರ್ಯಾತ್ಮಾ ಪ್ರಣವ ಇಮಮರ್ಥಂ ಸಮದಿಶತ್ ॥

ಎಂಬ ಪರಾಶರಭಟ್ಟರ ಅಷ್ಟಶ್ಲೋಕಿಯ ಪ್ರಥಮ ಶ್ಲೋಕದಲ್ಲೂ ಉಪಪಾದಿತವಾಗಿದೆ. ಇದರಿಂದ ಸ್ವಾಮಿಗೂ ಜೀವನಿಗೂ ಶೇಷಿಶೇಷ ಸಂಬಂಧವು ಏರ್ಪಟ್ಟಿತು. ಈ ಅಭಿಪ್ರಾಯವನ್ನು ಅರ್ಜುನ ರಥದಲ್ಲಿ ಕಾಣಬಹುದು. ಶೇಷಿಯಾದ ಶ್ರೀಕೃಷ್ಣನು ಮುಂದೆ ಸಾರಥಿಯಾಗಿ ಇದ್ದು ಈತನಿಗೆ ಪ್ರೇರಿಸುತ್ತಾ, ಜೀವನಾದ ಅರ್ಜುನನು ಮಾಡುವ ಸರ್ವ ವಿಧವಾದ ಯುದ್ಧರೂಪದ ಕೈಂಕರ್ಯವೆಲ್ಲಾ ಸ್ವಾಮಿಯಾದ ತನಗೇನೇ ಎಂಬ **"ಯತ್ಕರೋಷಿ............ತತ್ಕುರುಷ್ವ ಮದರ್ಪಣಂ"** ಎಂದು ಹೇಳುವ ಭಾವವು ತೋರಿಬರುತ್ತದೆ. ಈ ಅಭಿಪ್ರಾಯವನ್ನು ಶ್ರೀ ನಿಗಮಾಂತ ಮಹಾ ದೇಶಿಕರವರು ತಾವು ರಚಿಸಿರುವ ಯಾದವಾಭ್ಯುದಯವೆಂಬ ಗ್ರಂಥದ ೨೩ನೆಯ ಸರ್ಗಿಯಲ್ಲಿ ವ್ಯಕ್ತಪಡಿಸಿರುತ್ತಾರೆ :—

"ರಥಾಧಿರೂಢಂಚ ರಥಂಚ ರಕ್ಷ್ಯೈ ಯಥಾರ್ಥತೋ ದರ್ಶಯತಿ ಸ್ಮಯನ್ತಾ । ತ್ರಯ್ಯನ್ತ ಚಿಂತಾ ನಿರಪೇಕ್ಷ ವಿಶಾಶಃ ತತ್ತಾದೃಶಂ ತತ್ತ್ವ ವಿಭಾಗ ಮಾದ್ಯಂ ॥ ೧ ॥

ಪುರಸ್ಥಿತೇ ಗೋಪ್ತರಿ ವಿಶ್ವಹೇತೌ ಪಶ್ಚಾದವಸ್ಥಾಯಿನಿ ತತ್ಪ್ರವರ್ತ್ಯೇ । ಅನನ್ಯಯೋಗಾ ತ್ರಣವಪ್ರವೃತ್ತಿಂ ಬಭಾರ ವೇದ್ಯಾಂ ಸರಥಃಪ್ರತೀತಃ" ॥ ೨ ॥

ಈ ಶ್ಲೋಕಗಳ ಅರ್ಥವೇನೆಂದರೆ:—

ವೇದಗಳಿಂದಲೇ ತಿಳಿಯಬೇಕೆಂಬ ಅವಶ್ಯಕತೆ ಇಲ್ಲದೇನೇ ಅನಾದಿಯಾಗಿ ಚಿತ್, ಅಚಿತ್, ಈಶ್ವರರೆಂಬ ಮೂರು ತತ್ವಗಳೂ ಯಾವಾಗಲೂ ಒಟ್ಟಿಗೆ ಇರುವುವು ಎಂಬ ತತ್ವತ್ರಯ ವಿಭಾಗವನ್ನೂ, ಸರ್ವೇಶ್ವರನಾದ ಶ್ರೀ ಕೃಷ್ಣನು ಅರ್ಜುನ ರಥದಲ್ಲಿ ಸಾರಥಿಯಾಗಿ ರಥವನ್ನು ನಡಸುವವನಾಗಿ, ರಥದಲ್ಲಿ ಕುಳಿತಿರುವ ಅರ್ಜುನನನ್ನೂ, ಆತನ ರಥವನ್ನೂ ರಕ್ಷಿಸುವನಾಗಿ, ತಾನು ಚಿದಚಿತ್ತುಗಳಿಗೂ ನಿಯಾಮಕನೆಂದೂ, ಅವುಗಳಿಗೆ ಸ್ವಾಮಿಯೆಂದೂ, ಯಥಾರ್ಥವಾಗಿ ತೋರಿಸಿಕೊಳ್ಳುವನಲ್ಲವೇ. ಶ್ರೀ ಕೃಷ್ಣನು ಮುಂದೆಯೂ, ಅರ್ಜುನನು ಹಿಂದೆಯೂ ಇರುವುದರಿಂದ ಆ ರಥವು ಏನನ್ನು ಸೂಚಿಸುತ್ತದೆಂದರೆ, ಸರ್ವ ರಕ್ಷಕನಾದ ಶ್ರೀಕೃಷ್ಣನು ಮುಂದೆಯೂ, ಅವನಿಂದ ಪ್ರವರ್ತಿಸುವ ಹಾಗೆ ನಿಯಮಿಸಲ್ಪಡುವವನು ಹಿಂದೆಯೂ, ಇದ್ದುದರಿಂದ ಪ್ರಣವಾರ್ಥವನ್ನು ರಥವು ವ್ಯಕ್ತಪಡಿಸಿತು. ಅಕಾರವಾಚ್ಯನಾದ ಶ್ರೀ ವಿಷ್ಣುವಿಗೇನೇ ಮಕಾರ ವಾಚ್ಯನಾದ ಜೀವನು ಶೇಷಭೂತನು, ಅಧೀನನು, ನಿಯಾಮ್ಯನು ಎಂಬ ಭಾವವು.

ಎರಡನೇದು:—"**ಉ**" ಎಂದರೆ ಲಕ್ಷ್ಮಿಯು. ಈ ಅಭಿಪ್ರಾಯವು ಕಠಶ್ರುತಿಯಲ್ಲಿ ಉಪಪಾದಿತವಾಗಿರುತ್ತದೆ:—

"ಅಕಾರೇಣೋಚ್ಯತೇ ವಿಷ್ಣು ಸ್ಸರ್ವಲೋಕೇಶ್ವರೋ ಹರಿಃ ।
ಉದ್ಧೃತಾ ವಿಷ್ಣುನಾ ಲಕ್ಷ್ಮೀರುಕಾರೇಣೋಚ್ಯತೇ ತಥಾ ।
ಮಕಾರಸ್ತು ತಯೋರ್ದಾಸ ಇತಿ ಪ್ರಣವ ಲಕ್ಷಣಂ"॥

ದಾಸನಾದ ಜೀವನು ಸರ್ವಲೋಕಕ್ಕೂ ಈಶ್ವರೇಶ್ವರಿಗಳಾದ ವಿಷ್ಣು ಮತ್ತು ಲಕ್ಷ್ಮಿಗಳಾದ ಲೋಕದಂಪತಿಗಳಿಗೆ ಶೇಷನು; ಅಂದರೆ ಶೇಷಭೂತನಾದ ಈ ಜೀವನ ಸರ್ವವಿಧ ಕೈಂಕರ್ಯವೂ ಇವರಿಬ್ಬರಿಗೇನೇ ವಿನಾ ಬೇರೆ ಯಾರಿಗೂ ಅಲ್ಲವೆಂಬರ್ಥವು. ಈ ಎರಡನೇ ಅರ್ಥವನ್ನು

'ಅಗ್ರತಃಪ್ರಯಯೌ ರಾಮಃ ಸೀತಾಮಧ್ಯೇ ಸುಮಧ್ಯಮಾ ।
ಪೃಷ್ಠತಸ್ತು ಧನುಷ್ಪಾಣಿಃ ಲಕ್ಷ್ಮಣೋನು ಜಗಾಮಹ"

ಎಂಬ ಮಹರ್ಷಿಯ ವಾಕ್ಕಿನಿಂದ ಗ್ರಹಿಸಬಹುದು. ಶ್ರೀರಾಮನು

ದ್ವಿತೀಯ ಪದತ್ತಿಲ್ ಶಬ್ದತ್ತಾಲು ಮರ್ಥ ಸ್ವಭಾವತ್ತಾಲುಮ್ ವರುಮರ್ಥಙ್ಗಳೈ ಶ್ರೀ ಭರತಾಳ್ವಾನುಡೈಯವುಮ್ ಶ್ರೀ ಶತ್ರುಘ್ನಾಳ್ವಾನುಡೈಯವುಮ್ ವೃತ್ತಾಂತಙ್ಗಳಿಲೇಯರಿವದು.

ಮುಂದೆಯೂ, ಸೀತೆಯು ಮಧ್ಯದಲ್ಲೂ, ಅವರಿಬ್ಬರಿಗೂ ಅನುಚರನಾಗಿ ಧನುಷ್ಪಾಣಿಯಾಗಿ ಲಕ್ಷ್ಮಣನು ಹಿಂದೆಯೂ, ಹೊರಟರು ಎಂಬೀ ಮಹರ್ಷಿಯು ಪ್ರಣವಾರ್ಥವನ್ನು ವ್ಯಕ್ತಪಡಿಸಿರುತ್ತಾರೆ. ಎಲ್ಲರಿಗೂ ಶ್ಲೋಕದಲ್ಲಿಶೇಷಿಯಾಗಿರುವುದರಿಂದ ಸ್ವಾಮಿಯು ಎಲ್ಲರಿಗಿಂತ ಮುಂದೆಯೂ, ಅನಂತರ ಲಕ್ಷ್ಮಿಯು ಅನುಸರಿಸಿ ಹೋಗುವುದರಿಂದ, ಸ್ವಾಮಿಗೆ ಈಕೆಯು ಶೇಷಭೂತಳೆಂಬುವದೂ, ಆದರೆ ಜೀವನಿಗೆ ತಾನೂ ಸ್ವಾಮಿಯು ಹಾಗೆ ಶೇಷಿ ಎಂಬುವದೂ, "**ಧನುಷ್ಪಾಣಿಃ**" ಎಂಬುವದರಿಂದ ಅವರಿಬ್ಬರಿಗೂ ಕೆಂಕರ್ಯ ಮಾಡುವದೇ ಜೀವನಾದ ಲಕ್ಷ್ಮಣನಿಗೆ ಸ್ವರೂಪವೆಂಬ ಭಾವವೂ, ಧನುರ್ಧಾರಿಯಾಗಿರುವುದರಿಂದ ತಾನು ದಾಸಭೂತನೆಂಬುವದೂ, ಶ್ರೀರಾಮನ ಧನಸ್ಸನ್ನೂ ಕೂಡ ಲಕ್ಷ್ಮಣನು ತೆಗೆದುಕೊಂಡು ಹೋಗುತ್ತಲೂ ಇರಬಹುದೆಂದೂ, ಇವರಿಂದ ತೋರಿಬರುತ್ತದೆ. "**ಅಹಂ ಸರ್ವಂ ಕರಿಷ್ಯಾಮಿ**" ನಾನು ಸರ್ವವಿಧ ಕೈಂಕರ್ಯವನ್ನೂ ನಿನಗೆ ಮಾಡುವೆನೆಂಬುವದೇ ಜೀವನ ನೈಜವಾದ ಸ್ವರೂಪ ಧರ್ಮವೆಂಬ ತಾತ್ಪರ್ಯವು. ಇದರಿಂದ ಪ್ರಣವದಲ್ಲಿ ತೋರುವ ಜೀವನ ಅನನ್ಯಾರ್ಹ ಶೇಷತ್ವವೂ ಪಾರತಂತ್ರ್ಯವೂ ಈ ಶ್ಲೋಕದಲ್ಲಿ ಉಪಪಾದಿತಗಳಾಗಿವೆ.)

ಮೂಲ ಮಂತ್ರದ ಎರಡನೇ ಪದವಾದ "**ನಮಃ**" ಎಂಬ ಪದದಲ್ಲಿ ಶಬ್ದದ ಮೂಲಕ ಸಾಕ್ಷಾತ್ತಾಗಿಯೂ ಅರ್ಥಾನುವಾದ ಮರ‍್ಯಾದೆಯಿಂದಲೂ ಉಂಟಾಗುವ ಅರ್ಥಗಳನ್ನು ಶ್ರೀ ಭರತರ ಮತ್ತು ಶ್ರೀ ಶತ್ರುಘ್ನರ ವೃತ್ತಾಂತಗಳಿಂದ ತಿಳಿದುಕೊಳ್ಳುವುದು. (ಶ್ರೀ ಸೀತಾ ರಾಮ ಲಕ್ಷ್ಮಣ ಭರತ ಶತ್ರುಘ್ನರ ವೃತ್ತಾಂತಗಳಿಂದ ಮೂಲಮಂತ್ರದ ಮುಖ್ಯಾಭಿಪ್ರಾಯಗಳೆಲ್ಲಾ ನಿದರ್ಶಿಸಲ್ಪಟ್ಟವು ಎಂಬದಾಗಿ ಶ್ರೀ ಮದಾಚಾರ್ಯರವರು ಅಭಿಪ್ರಾಯಪಡುತ್ತಾರೆ. ಪ್ರಣವದ ಅಕಾರದಲ್ಲಿ

ತೋರುವ ಶ್ರೀ ಸೀತಾರಾಮರೇ ಪರತತ್ವವೆಂದೂ, **ಅಂತಹ ಶೇಷಿ** ಗಳಿಗೆ, ಜೀವನಾಗಿ ದಾಸಭೂತನಾದ ಲಕ್ಷ್ಮಣನು ಕೈಂಕರ್ಯಮಾಡು ವದೇ ಸ್ವರೂಪವೆಂದು ಹಿಂದೆ ಹೇಳಲ್ಪಟ್ಟಿತು. "**ಸೀತಾಮಧ್ಯೆಸು ಮಧ್ಯಮಾ**" ಎಂಬುವದರಿಂದ ಜೀವನು ಲಕ್ಷ್ಮಿಗೂ ಶೇಷನಾದರೂ, ಸರ್ವೇಶ್ವರನಿಗೆ ಲಕ್ಷ್ಮಿಯೂ ಶೇಷಳೂ ಎಂಬುವದೂ ತೋರಿಬರು ತ್ತದೆಂದೂ ಹೇಳಲ್ಪಟ್ಟಿತು. ಭರತನು ಸ್ವತಂತ್ರಿಸಿ ಮಾತೃವಿನ ಮೂಲಕ ಬಂದ ರಾಜ್ಯವನ್ನಾಳದೆ, ತಾನು ಸದಾ ಶ್ರೀರಾಮನಿಗೆ ಅಧೀನನೆಂದೆಣಿಸಿ ಪಾರತಂತ್ರ್ಯವನ್ನು ತೋರಿ, ಸ್ವಾಮಿ ಪಾದುಕಾಸೇ ವಾವೃತ್ತಿಯನ್ನವಲಂಬಿಸಿದನಾದ ಪ್ರಯುಕ್ತ, ಮೂಲಮನ್ತ್ರದಲ್ಲಿ ತೋ ರುವ "**ಅಯು ಏವ ಮಕಾರವಾಚ್ಯೋ ಜೀವಃ ಅಹಂನಮಮ**" ಎಂದರೆ **ಅಕಾರವಾಚ್ಯನಾದ ಲಕ್ಷ್ಮೀಪತಿಗೇನೆ ನಾನು ಶೇಷನೇ ವಿನಾ, ನಾನು ನನಗಲ್ಲವು.**" ಈ ಅನನ್ಯಾರ್ಹ ಶೇಷತ್ವ ಭಾವವೂ ಪಾರತಂತ್ರ್ಯವೂ ಸಹ ದ್ವಿತೀಯ ಪದವಾದ "**ನಮಮ**" ಎಂಬ ಯೋಜನೆಯಿಂದ ಶಾಬ್ದಮೂಲಕ ತೋರಿಬರುತ್ತವೆಂಬ ಭಾವವು. ಯಾವಾಗ ಭಗವಚ್ಛೇಷತ್ವವು ಏರ್ಪಟ್ಟಿತೋ ಅದರೊಂದಿಗೆ ಈತ ನಿಗೆ ಲಕ್ಷ್ಮೀ ಶೇಷತ್ವವೂ, ಭಾಗವತ ಶೇಷತ್ವವೂ ಉಂಟಾಯಿತು. ಲಕ್ಷ್ಮೀ ಶೇಷತ್ವವು "**ಉಧೃತಾ ವಿಷ್ಣುನಾ ಲಕ್ಷ್ಮೀರುಕಾರೇಣೋ ಚ್ಯತೇ ತಥಾ**" ಎಂಬ ಮೇಲೆ ವಿವರಿಸಿರುವ ಪ್ರಮಾಣದಿಂದಲೂ, "**ಅಸ್ಯಾ ಮಮಚ ಶೇಷಂಹಿ ವಿಭೂತಿರುಭಯಾತ್ಮಿಕಾ**" "ಎರಡು ವಿಭೂತಿಗಳೂ ನನಗೂ ನನ್ನ ಪತ್ನಿಯಾದ ಲಕ್ಷ್ಮಿಗೂ ಶೇಷಭೂ ತವು" ಇವೇ ಮೊದಲಾದ ಇನ್ನೂ ಇತರ ಪ್ರಮಾಣಗಳಿಂದಲೂ ಸಿದ್ಧವು.

ಭಾಗವತ ಶೇಷತ್ವವು ಎರಡನೇ ಪದವಾದ ನಮಸ್ಸಿನ ಅರ್ಥ ಭಾವದಿಂದ ತೋರಿಬರುತ್ತದೆಂದು ಇಲ್ಲಿ ಸಂಗ್ರಹಿಸಿ ಹೇಳಿರುತ್ತಾರೆ. ಈ ಅಭಿಪ್ರಾಯವನ್ನು ಪುರುಷಾರ್ಥ ಕಾಷ್ಠಾಧಿಕಾರದಲ್ಲಿ ವಿಸ್ತರಿಸಿ ರುತ್ತಾರೆ. ನಮಶ್ಶಬ್ದವು ಭಗವತ್ ಪಾರತಂತ್ರ್ಯ **ಸೂಚಕವು.** ಸ್ವಾಮಿಯು ಸ್ವತಂತ್ರನಾಗಿಯೂ ಸಮರ್ಥನಾಗಿಯೂ **ಇರುವಾಗ,**

ಜ್ಞಾನಿಗಳು, ಅವನಿಗೆ "**ಸಚಸಮಪ್ರಿಯಃ**" ಎಂಬುವ ಹಾಗೆ ತುಂಬಾ ಪ್ರಿಯರಾಗಿ "**ಜ್ಞಾನೀತ್ವಾತ್ಮೈವ ಮೇಮತಂ**" ಎಂಬುವ ಹಾಗೆ ಜ್ಞಾನಿಯು ತನ್ನವನಾದ ಪ್ರಯುಕ್ತ, ಹಾಗೆ ಭಾಗವತ ಶೇಷತ್ವ ವನ್ನು ಸ್ವಾಮಿಯು ವಿಧಿಸುವುದು ಯುಕ್ತವು. ಇದರಿಂದ ಈ ಜೀ ವನಿಗೆ ಅನ್ಯಶೇಷತ್ವ ದೋಷ ಉಂಟಾಗುವದಿಲ್ಲವೆಂಬ ಭಾವವು. ಈ ವಿಷಯದಲ್ಲಿ ಭಾಗವತ ಶೇಷತ್ವವು ಇನ್ನೂ ಮಹಿಮೆಯುಳ್ಳ ದ್ದೆಂಬುವದು ಪಾದ್ಮೋತ್ತರ ಪುರಾಣ, ಭಾಗವತ, ಭಾರತ ವೊದ ಲಾದ ಪ್ರಮಾಣಗಳಿಂದ ಪುರುಷಾರ್ಥಕಾಷ್ಠಾಧಿಕಾರದಲ್ಲಿ ಸಮರ್ಥಿಸಲ್ಪ ಟ್ಟಿರುತ್ತದೆ. ಈ ಅಭಿಪ್ರಾಯವು ರಾಮಾಯಣದಲ್ಲೂ ಬಹು ನಿಪು ಣತರವಾಗಿ ಉಪಪಾದಿಸಲ್ಪಟ್ಟಿರುತ್ತದೆ. ಶತ್ರುಘ್ನನು ಯಾವಾಗಲೂ ಪರಮಭಾಗವತೋತ್ತಮನಾದ ಭರತನ ಕೆಂಕರ್ಯದಲ್ಲೇ ಸದಾ ನಿರತ ನಾದುದರಿಂದ ಬಹು ಸುಲಭವಾಗಿ ಕೃತಕೃತ್ಯತೆಯನ್ನು ಹೊಂದಿದನು. ಮಹರ್ಷಿಯು ಈ ಭಾಗವತ ಶೇಷತ್ವವನ್ನು "**ಗಚ್ಛತಾ ಮಾತುಲಕು ಲಂ ಭರತೇನ ತದಾನಘಃ । ಶತ್ರುಘ್ನೋ ನಿತ್ಯ ಶತ್ರುಘ್ನೋ ನೀತಃ ಪ್ರೀತಿಪುರಸ್ಸರಃ**" ಅಂದರೆ ಮಾವನ ಮನೆಯನ್ನು ಕುರಿತು ಹೋಗು ತ್ತಿರುವ ನಿರ್ದುಷ್ಟನಾದ ಭರತನಿಂದ ಅರಿಷಡ್ವರ್ಗಗಳನ್ನು ಜಯಿಸಿದ ಶತ್ರುಘ್ನನು **ಒಯ್ಯಲ್ಪಟ್ಟನು**" ಎಂಬ ಶ್ಲೋಕದಲ್ಲಿ, **ನೀತಃ** ಎಂ ಬುವ ಪದದಿಂದ ಈ ಭಾಗವತ ಪಾರತಂತ್ರ್ಯವು ಬಹು ಸ್ವಾರಸ್ಯ ವಾಗಿ ನಿದರ್ಶಿಸಲ್ಪಟ್ಟಿತು. ಇದೂ ಅಲ್ಲದೆ ಪರಮಭಾಗವತೋತ್ತಮ ನಾದ ವಿಭೀಷಣನನ್ನು ಆಶ್ರಯಿಸಿ ಬಂದ ನಾಲ್ಕು ಜನ ರಾಕ್ಷಸರೂ ಏನೊಂದೂ ತಡೆಯಿಲ್ಲದೆ ಪರಮಪುರುಷನಾದ ಶ್ರೀರಾಮನ ಸಾನ್ನಿ ಧ್ಯವನ್ನು ಹೊಂದಿದರು. ವಿಭೀಷಣನಿಗಾದರೂ ಸ್ವಲ್ಪ ತಡೆಯಿತ್ತು. ಇವರಿಗೆ ಏನೊಂದೂ ತಡೆ ಇರಲಿಲ್ಲವು. ಆದುದರಿಂದ ಭಾಗವತ ಶೇಷತ್ವದ ಮಹಿಮೆಯು ಭಗವಚ್ಛೇಷತ್ವಕ್ಕೇನೂ ಕಮ್ಮಿಯಾದುದ ಲ್ಲವು. ಈ ಕಾರಣದಿಂದ ನಾನಾವಿಧವಾಗಿ ಕೊಂಡಾಡಿರುತ್ತಾರೆ:—

"ಶ್ರೀಮದ್ಭಾಗವತಾರ್ಚನಂ ಭಗವತಃ ಪೂಜಾವಿಧೇರುತ್ತ ಮಂ । ಶ್ರೀವಿಷ್ಣೋ ರವಮಾನನಾತ್ಗುರುತರಂ ಶ್ರೀವೈಷ್ಣ

(1) ನಾನುನ್ನೈ ಯನ್ರಿಯಿಲೇನ್ ಕಣ್ಡಾಯ್ ನಾರಣನೇ
ನೀಯೆನ್ನೈ ಯನ್ರಿಯಿಲೈ"

ವೋಲ್ಲಂಘನಂ । ತೀರ್ಥಾದಚ್ಯುತ ಪಾದಾಜಾ ತ್ಗುರುತರಂ ತೀರ್ಥಂ ತದೀಯಾಂಘ್ರಿಜಂ । ತಸ್ಮಾನ್ನಿತ್ಯ ಮತಂದ್ರಿತೋ ಭವ ಸದಾ ತೇಷಾಂ ಸಮಾರಾಧನೇ ॥"

ಭಗವಂತನ ಆರಾಧನೆಗಿಂತಲೂ, ಭಾಗವತಾರಾಧನೆಯು ಉತ್ತಮವು. ಶ್ರೀವಿಷ್ಣುವಿನಲ್ಲಿ ಮಾಡಿದ ಅಪರಾಧಕ್ಕಿಂತಲೂ, ಭಾಗವತಾಪರಾಧವು ಗುರುತರವಾದುದು. ಶ್ರೀವಿಷ್ಣು ಪಾದೋದಕವಾದ ಗಂಗೆಗಿಂತಲೂ ಭಾಗವತೋತ್ತಮರ ಶ್ರೀಪಾದ ತೀರ್ಥವು ಹೆಚ್ಚು ಮಹಿಮೆಯುಳ್ಳದೆಂದು ಕೊಂಡಾಡಲ್ಪಟ್ಟಿರುತ್ತದೆ.

ಆದುದರಿಂದ ಲಕ್ಷ್ಮೀ ವಿಶಿಷ್ಟನಾದ ನಾರಾಯಣನೇ ಶೇಷಿಯು; ಜೀವನು ಇವರಿಬ್ಬರಿಗೂ ಭಾಗವತೋತ್ತಮರಿಗೂ ಶೇಷಭೂತನು ಎಂಬರ್ಥಗಳು, ಶ್ರೀ ಸೀತಾರಾಮ ಲಕ್ಷ್ಮಣ ಭರತ ಶತ್ರುಘ್ನರುಗಳ ವೃತ್ತಾಂತದಿಂದ ವ್ಯಕ್ತಪಡುತ್ತವೆಂಬ ಭಾವವು.)

(ಮೇಲೆ ಪ್ರಣವ ನಮಶ್ಶಬ್ದಗಳ ಅರ್ಥವನ್ನು ಸೂಕ್ಷ್ಮವಾಗಿ ತೋರ್ಪಡಿಸಿ ಮುಂದಕ್ಕೆ **ನಾರಾಯಣ** ಶಬ್ದಾರ್ಥವನ್ನೂ ವ್ಯಕ್ತಪಡಿಸುತ್ತಾರೆ) **ನಾನ್** - ನಾನು, **ಉನ್ನೈಯನ್ರಿ** - ಸರ್ವಕ್ಕೂ ಆಧಾರಭೂತನಾದ ನಿನ್ನನ್ನು ಬಿಟ್ಟು, **ಇಲೇನ್** - ಇಲ್ಲವು. **ನಾರಣನೇ** - ಓ ಶ್ರೀಮನ್ನಾರಾಯಣನೇ **ಕಣ್ಡಾಯ್** - ವಿಚಾರಿಸಿದುದೇಯಾದರೆ, **ನೀ** - ನೀನು, **ಎನ್ನೈಯನ್ರಿ** - ನನ್ನನ್ನು ಬಿಟ್ಟುಬಿಟ್ಟು, **ಇಲೈ** - ಇರಲಾರೆ; ಎಂದರೆ ನೀನಿಲ್ಲದೆ ನನಗೆ ಸತ್ತೆಯಿಲ್ಲವು. ನಾನಿಲ್ಲದೆ ನಿನಗೆ ಸ್ವರೂಪವಿಲ್ಲವು ಎಂಬಭಿಪ್ರಾಯವು. (ಅಂದರೆ ಆಧಾರಾಧೇಯ, ನಿಯಾಮಕನಿಯಾಮ್ಯಭಾವಗಳು ಪರಮಾತ್ಮ ಜೀವಾತ್ಮರಲ್ಲಿ ಯಾರೊಬ್ಬರಿಲ್ಲದಿದ್ದರೂ ಕೂಡುವದಿಲ್ಲವೆಂಬ ಭಾವವು) ಅದೂ ಅಲ್ಲದೆ ನಾರಾಯಣ ಶಬ್ದವ್ಯುತ್ಪತ್ತಿಯಿಂದ ಆ ಶಬ್ದವೇ

---

(1) ನಾನ್ಮುಗನ್ ತಿರುವನ್ದಾದಿ, 7.

ಯೆನ್ನುಮ್ಪಡಿ ನಿರ್ಕಿರ ನಾರಾಯಣ ಶಬ್ದಾರ್ಥತ್ತೈ ಕೋಸಲ ಜನಪದತ್ತಿಲ್ ಜನ್ತುಕ್ಕಳೈಯುಂ ಚಕ್ರವರ್ತಿ ತಿರುಮಗನೈಯುಂ ಉದಾಹರಣಮಾಕ್ಕಿ ಕಣ್ಡುಕೊಳ್ವದು.

ನಿನ್ನಲ್ಲಿ ಅನ್ವಯಿಸುವದಿಲ್ಲವೆಂಬ ಭಾವವೂ ತೋರಿಬರುತ್ತದೆ. ಸ್ವಾಮಿಗೆ ಇವನಿಲ್ಲದೆ ಸ್ವರೂಪವೂ ಇರುವದಿಲ್ಲವೆಂಬುವದು ಹೇಗೆಂದರೆ, ಸ್ವಾಮಿಯನ್ನು ಪುರುಷೋತ್ತಮನೆಂದೂ, ಪರಾತ್ಪರವಸ್ತು ಎಂದೂ, ಪರಬ್ರಹ್ಮನೆಂದೂ, ಸರ್ವೋತ್ಕೃಷ್ಟನೆಂದೂ, ಸರ್ವಾಂತರ್ಯಾಮಿ ಎಂದೂ ಹೇಳಬೇಕಾದರೆ, ಅವನಿಗಿಂತಲೂ ಅವರವಾದನಿಕೃಷ್ಟವಾದ ಚೇತನಾಚೇತನಗಳಿದ್ದರಲ್ಲವೇ ಹಾಗೆ ಹೇಳಬಹುದು. ಚೇತನಾಚೇತನಙ್ಗಳೇ ಇಲ್ಲವೆಂದು ಹೇಳಿಬಿಟ್ಟರೆ ಇವೆಲ್ಲಾ ಸ್ವಾಮಿಗೆ ಹೇಗೆ ಕೂಡುತ್ತದೆಂಬ ಭಾವವು. ನಾರಾಯಣ ಶಬ್ದಕ್ಕೆ ಎರಡು ವಿಧವಾಗಿ ಸಮಾಸಮಾಡಿ ಅರ್ಥ ಹೇಳಬಹುದು :—

(1) **ನಾರಾಣಾಂ ಅಯನಂ** ಎಂದು ಷಷ್ಟೀ ತತ್ಪುರಷವು, **ನಾರಾಣಾಂ** - ನಿತ್ಯವಾದ ವಸ್ತುಗಳ ಸಮೂಹಕ್ಕೆಲ್ಲಾ **ಅಯನಂ** - ಪ್ರಾಪ್ಯ, ಪ್ರಾಪಕ, ಆಧಾರಸು ಎಂಬರ್ಥವು.

(2) **ನಾರಾಃ ಅಯನಂ, ಆಧಾರಃ ಯಸ್ಯಸಃ** ಎಂದು ಬಹುವ್ರೀಹಿಯು, ನಿತ್ಯವಾದ ಪದಾರ್ಥಗಳನ್ನೇ ಆಧಾರವಾಗಿರುವವನು ; ಅಂದರೆ ಅವುಗಳಲ್ಲಿ ಅಂತರ್ಯಾಮಿಯಾಗಿರುವವನಾಗಿ ಅವುಗಳಿಗೆ ಆತ್ಮವಾಗಿರುವವನು.

ಈ ಎರಡರ್ಥಗಳೂ ಈ ಪಾಶುರದಲ್ಲಿವೆ. ಮೊದಲನೇ ವಾಕ್ಯದಿಂದ ತತ್ಪುರುಷಾರ್ಥವೂ ಎರಡನೇ ವಾಕ್ಯದಿಂದ ಬಹುವ್ರೀಹಿಯ ಅರ್ಥವೂ ಹೇಳಲ್ಪಟ್ಟಿತು.)

ಈ ಮೇಲಿನ ಪಾಶುರದಲ್ಲಿ ಸ್ಥಾಪಿತವಾಗಿರುವ ನಾರಾಯಣ ಶಬ್ದದ ಅರ್ಥಗಳನ್ನು ಕೋಸಲದೇಶದಲ್ಲಿದ್ದ ಜೀವಜನ್ತುಗಳನ್ನೂ ಮತ್ತೂ ಪ್ರಜೆಗಳನ್ನೂ ದಶರಥ ಚಕ್ರವರ್ತಿಯ ಸರ್ವಸಂಪದ್ಯುಕ್ತನಾದ ಕುಮಾರನಾದ ಶ್ರೀರಾಮನನ್ನೂ ದೃಷ್ಟಾಂತವಾಗಿ ಮಾಡಿ

ಕೊಂಡು, ಗ್ರಹಿಸಿಕೊಳ್ಳುವುದು. (ಹಿಂದೆ ಹೇಳಿದ ಹಾಗೆ ಷಷ್ಟಿತತ್ಪುರುಷಾರ್ಥದಿಂದ, ಶ್ರೀರಾಮಸಾನ್ನಿಧ್ಯವಿಲ್ಲದೆ ಸಮಸ್ತ ಚರಾಚರಗಳಿಗೂ ಸತ್ತೆಯಿಲ್ಲವೆಂಬುದು ಪಿತೃವನ್ನು ಸತ್ಯಸಂಧನನ್ನಾಗಿ ಮಾಡಲು ವನವಾಸವನ್ನು ಕೈಕೊಂಡು ತೆರಳಿದ ಒಡನೆಯೇ ಉಂಟಾದ ನಿಶ್ರೀಕಸ್ಥಿತಿಯೂ, ಸುಮಂತ್ರ ವಾಕ್ಯದಿಂದ ತೋರುವ ವೃಕ್ಷಗಳೆಲ್ಲಾ ಬಾಡಿಹೋಗಿರುವ ಮತ್ತೂ ನದಿಗಳೆಲ್ಲಾ ಬತ್ತಿರುವ ದುಸ್ಥಿತಿಯೂ ಇದಕ್ಕೆ ಉದಾಹರಣವಾಗಿರುತ್ತದೆ.

"ವಿಷಯೇತೇ ಮಹಾರಾಜ ರಾಮವ್ಯಸನ ಕರ್ಶಿತಾಃ ।
ಅಪಿವೃಕ್ಷಾಃ ಪರಿಮ್ಲಾನಾ ಸ್ಸಪುಷ್ಪಾಂಕುರುಕೋರಕಾಃ ।
ಉಪತಪ್ತೋದಕಾನದ್ಯಃ ಪಲ್ವಲಾನಿ ಸರಾಂಸಿಚ ।
ಪರಿಶುಷ್ಕಪಲಾಶಾನಿ ವನಾನ್ಯುಪವನಾಚ" ॥

(ರಾ. ಅಯೋಧ್ಯ 59. 8, 9.)

"ದಶರಥನನ್ನು ಕುರಿತು ಸುಮಂತ್ರನು ಹೇಳುತ್ತಾನೆ. ಶ್ರೀರಾಮನನ್ನಗಲಿದ ವ್ಯಸನದಿಂದ, ಓ ಮಹಾರಾಜನೇ ನಿನ್ನ ರಾಜ್ಯದಲ್ಲಿ ಪುಷ್ಪ, ಮೊಗ್ಗು, ಕಾಯಿ ಪಲಗಳಿಂದ ಕೂಡಿದ್ದ ವೃಕ್ಷಗಳೂ ಕೂಡ ಬಾಡಿಹೋದವು. ನೀರಿನಿಂದ ತುಂಬಿದ ನದೀ, ತಟಾಕ ಸರಸ್ಸುಗಳೂ ಕೂಡ ಬತ್ತಿಹೋದವು." ಹಾಗೆಯೇ ಕೋಸಲ ಜನಗಳೂ ಕೂಡ ದುಸ್ಥಿತಿಯನ್ನು ಹೊಂದಿದರೆಂದು ಭಾವವು. ಅದೂ ಅಲ್ಲದೆ, ಶ್ರೀರಾಮನು ಹಿಂತಿರುಗಿ ಬಂದು ಪಟ್ಟಾಭಿಷಿಕ್ತನಾಗಲು, ವೃಕ್ಷಗಳು ನಿತ್ಯದಲ್ಲೂ ಫಲಪುಷ್ಪ ಸಮೃದ್ಧಿಯನ್ನು ಹೊಂದಿದವು ಎಂದು "**ನಿತ್ಯಪುಷ್ಪಾ ನಿತ್ಯ ಫಲಾಸ್ತರವಃ**" ಎಂಬ ವಾಕ್ಯದಿಂದ ಮಹರ್ಷಿಯು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಬಹುವ್ರೀಹಿಯ ಅರ್ಥವಾದ ಸರ್ವಕ್ಕೂ ಸ್ವಾಮಿ ಅಂತರ್ಯಾಮಿಯು ನಿಯಾಮಕನೆಂಬುವದು, ಶ್ರೀರಾಮನು ಪರಮ ಪದವನ್ನು ಹೋಗಿ ಸೇರುವದಕ್ಕಾಗಿ ಸರಯೂನದಿಯನ್ನು ಪ್ರವೇಶಿಸಿದಾಗ ಸರ್ವಚರಾಚರಗಳನ್ನೂ ಜೊತೆಯಲ್ಲಿ ಕರೆದುಕೊಂಡು ಹೋದರೆಂದು ಹೇಳಲ್ಪಟ್ಟಿರುತ್ತದೆ.

ಪೂರ್ವಪದ ದ್ವಯತ್ತಿಲ್ ತೋಱ್ಱಿನ (3) ಕಾಷ್ಠಾಪ್ರಾಪ್ತ (4) ಪಾರಾರ್ಥ್ಯ ಪಾರ ತನ್ತ್ರ್ಯಗಳ್ (5) ಪ್ರೇರಣಿಯಾಕ ತೃತೀಯ ಪದತ್ತಿಲ್ ಚತುರ್ಥಿಯಿಲ್ (6) ಕರುತ್ತಿಲೆ

---

(1) **ಅವಗಾಹ್ಯಜಲಂಯೋಯಃ ಪ್ರಾಣೀ ಹ್ಯಾಸೀತ್ಪ್ರಹೃಷ್ಟವತ್ ।
ಮಾನುಷಂ ದೇಹಮುತ್ಸೃಜ್ಯ ವಿಮಾನಂ ಸೋಧ್ಯ ರೋಹತಃ ।
ತಿರ್ಯಗ್ಯೋನಿಗತಾಶ್ಚಾಪಿ ಸಂಪ್ರಾಪ್ತಾ ಸರಯೂ ಜಲಂ ।
ದೀಪ್ತ್ಯಾ ದಿವ್ಯೇನ ವಪುಷಾ ದಿವ್ಯಾ ದೇವಾ ಇವಾ ಭವರ್ ॥
ಗತ್ವಾತು ಸರಯೂ ತೀರಂ ಸ್ಥಾವರಾಣಿ ಚರಾಣಿಚ ।
ಪ್ರಾಪ್ಯತತ್ತೋಯ ವಿಕ್ಲೇದಂ ದೇವಲೋಕ ಮುಪಾಗಮರ್ ॥"**

ಯಾವ ಮನುಷ್ಯರು ಸಂತೋಷದಿಂದ ಸರಯೂ ನದಿಯಲ್ಲಿ ಸ್ನಾನ ಮಾಡಿದರೋ ಅವರು ದೇಹವನ್ನು ಬಿಟ್ಟು ವಿಮಾನವನ್ನೇರಿದರು. ತಿರ್ಯಗ್ಜಂತುಗಳೂ ಕೂಡ ಸರಯೂನದಿಯ ಉದಕವನ್ನು ಹೊಂದಿದವರಾಗಿ ಬಹಳ ಕಾಂತಿಯುಕ್ತರಾಗಿ ದಿವ್ಯ ಶರೀರವನ್ನು ಹೊಂದಿ ದೇವತೆಗಳ ಹಾಗೆ ಶೋಭಿಸುತ್ತಿದ್ದರು. ಹೀಗೆ ಸರಯೂತೀರದಲ್ಲಿದ್ದ ಚರಾಚರಗಳೆಲ್ಲಾ ಆ ಸರಯೂನದಿಯಲ್ಲಿ ಮಜ್ಜನವನ್ನು ಹೊಂದಿ ದಿವ್ಯಗತಿಯನ್ನು ಹೊಂದಿದರೆಂದು ಹೇಳಲ್ಪಟ್ಟಿರುತ್ತದೆ.

(2) **ದುಃಖಜಂ ವಿಸೃಜಂತ್ಯಾಶ್ರುಂ ನಿಷ್ಕ್ರಾಮನ್ತಮುದೀಕ್ಷ್ಯಯಂ ।
ಅಯೋಧ್ಯಾಯಾ ಜನಾ ಸ್ಸರ್ವೇ ಶೋಕವೇಗ ಸಮಾಹಿತಾಃ ॥**

ಅಯೋಧ್ಯಾ ಜನರನ್ನಗಲಿ ಹೋಗಬೇಕಲ್ಲಾ ಎಂಬ ಪರಿತಾಪದಿಂದ ಕಣ್ಣಿನಲ್ಲಿ ನೀರುಸುರಿಸುತ್ತಾ ಕಾಡಿಗೆ ಹೋಗುತ್ತಿರುವ ಶ್ರೀರಾಮ

---

(1) ಉತ್ತರಕಾಂಡ 110, 19, 20, 21. (2) ರಾಮಾ. ಅಯೋ. (3) ಕಾಷ್ಠಾಪ್ರಾಪ್ತ - ಎಲ್ಲೆಯಿಂದುಂಟಾದ, ಉತ್ಕೃಷ್ಟತೆಯನ್ನು ಹೊಂದಿದ. (ಇಲ್ಲಿ ಭಾಗವತ ಶೇಷತ್ವ ಪಾರತನ್ತ್ರ್ಯಗಳೂ ಹೇಳಲ್ಪಟ್ಟವು. (4) ಪಾರಾರ್ಥ್ಯ - ಶೇಷತ್ವ. (5) ಪ್ರೇರಣಿಯಾಕ - ಮೂಲಬಲವಾಗಿ ಅಂದರೆ ಮುಖ್ಯ ಕಾರಣವಾಗಿ. (6) ಕರುತ್ತಿಲೆ - ಅಭಿಪ್ರಾಯದಲ್ಲಿ.

ಪ್ರಾರ್ಥನೀಯಮಾನ ಶೇಷಿ (1) ಯುಕನ್ತ ಕೈಂಕರ್ಯತ್ತಿಲ ಇಳೈಯ ಪೆರುಮಾಳುಡೈಯವುಂ, ಇವರುಡೈಯವತಾರ ವಿಶೇಷಮಾನ ತಿರುವಡಿ ನಿಲೈ ಯಾಳ್‌ವಾರುಡೈಯವುಂ ಪ್ರವೃತ್ತಿ ನಿವೃತ್ತಿಗಳಿಲೇ ತೆಳಿವದು.

ನನ್ನು ನೋಡಿ ಅಯೋಧ್ಯಾ ಜನರೆಲ್ಲಾ ವ್ಯಸನಾಕ್ರಾಂತರಾದರು" ಎಂಬ ಸುಮಿತ್ರಾವಾಕ್ಯದಿಂದ, ಜೀವರನ್ನಗಲಿ ಈಶ್ವರನೂ, ಈಶ್ವರನ್ನಗಲಿ ಜೀವರೂ ಇರಲಾರರೆಂಬ ಭಾವವೂ, ಅದರಿಂದುಂಟಾಗುವ ಆಧಾರಾಧೇಯಭಾವವೂ, ನಿಯಾಮಕ ನಿಯಾಮ್ಯಭಾವವೂ ಎಲ್ಲವೂ ತೋರಿಬರುತ್ತದೆಂಬ ತಾತ್ಪರ್ಯವು.)

ಮೂಲಮಂತ್ರದ ಮೊದಲಿನ ಎರಡು ಪದಗಳಾದ ಪ್ರಣವ ನಮಶ್ಶಬ್ದಗಳಲ್ಲಿರುವ ಸರ್ವೋತ್ಕೃಷ್ಟವಾದ ಭಗವದ್ಭಾಗವತ ಶೇಷತ್ವಪಾರತಂತ್ರ್ಯಗಳು ಮುಖ್ಯ ಕಾರಣಭೂತವಾದ ನಾರಾಯಣನೆಂಬ ಮೂರನೇ ಪದದ ಚತುರ್ಥೀವಿಭಕ್ತಿಯಲ್ಲಿ ತೋರುವ, ಈ ಜೀವನಿಗೆ ತುಂಬ ಬೇಕಾಗಿರುವ ಮತ್ತೂ ಭಾಗವತೋತ್ತಮರ ಪ್ರೀತಿಗೋಸ್ಕರ ಉದ್ದೇಶಿಸಲ್ಪಟ್ಟ, ಕೈಂಕರ್ಯವನ್ನು, ಶ್ರೀ ಲಕ್ಷ್ಮಣನು **"ಅಹಂ ಸರ್ವಂ ಕರಿಷ್ಯಾಮಿ"** ಎಂಬುಕ್ತಿಗನುಸಾರವಾಗಿ, ಮಾಡುವ ಪ್ರವೃತ್ತಿ ರೂಪ ಸರ್ವವಿಧೋಪಚಾರಗಳಿಂದಲೂ, ಮತ್ತು ಈ ಲಕ್ಷ್ಮಣಸ್ವಾಮಿಯ ದಿವ್ಯಾವತಾರ ವಿಶೇಷವಾದ ಪಾದುಕೆಯು ಶ್ರೀರಾಮಾಜ್ಞೆಯನ್ನು ಕೈಕೊಂಡು ಶ್ರೀರಾಮನನ್ನಗಲಿ ನಿವೃತ್ತಿಸಿಹೋಗಿ ನಂದಿಗ್ರಾಮದಲ್ಲಿ ಮಾಡಿದ ರಾಜ್ಯಭಾರಕ್ರಮದಲ್ಲಿ ತೋರಿಬರುವ ನಿವೃತ್ತಿ ಧರ್ಮದಿಂದಲೂ ತಿಳಿದುಕೊಳ್ಳುವುದು.

(ನಾರಾಯಣಾಯ ಎಂಬ ಶಬ್ದದ ವ್ಯಕ್ತ ಚತುರ್ಥಿಯಾದ **"ಆಯ"** ಎಂಬುವದರಿಂದ ಈ ಜೀವನು ಮಾಡುವ ಕೈಂಕರ್ಯವೆಲ್ಲಾ ಶ್ರೀಮನ್ನಾರಾಯಣನಿಗೂ ಅವನಿಗೆ ತುಂಬಾ ಪ್ರಿಯರಾಗಿ ತದೀಯರೆಂಬುವ ಭಾಗವತೋತ್ತಮರಿಗೂ ಎಂಬಭಿಪ್ರಾಯವು. ನಮಶ್ಶ

---

(1) ಉಕನ್ದ - ಪ್ರೀತಿಗೆಂದು ಉದ್ದೇಶಿಸಲ್ಪಟ್ಟ (2) ಇಳೈಯ ಪೆರುಮಾಳ್ - ಲಕ್ಷ್ಮಣನು.

ಬ್ದವು ಕಾಕಾಕ್ಷಿನ್ಯಾಯದಿಂದ **"ನಮುಮನಾರಾಯಣಾಯ"** ಎಂಬ ಯೋಜನೆಯಿಂದ ಕೈಂಕರ್ಯವು ಸ್ವಾಮಿ ಶ್ರೀ ನಾರಾಯಣನಿಗೇನೆ ವಿನಾ ತನಗಲ್ಲವು ಎಂದು ತೋರುತ್ತದೆ. ಆದುದರಿಂದ ಮೊದಲಿನ ಎರಡು ಪದಗಳಲ್ಲಿ ತೋರಿಬರುವ ಪಾರಾರ್ಥ್ಯವೆಂದರೆ ಶೇಷತ್ವ ಮತ್ತು ಪಾರತಂತ್ರ್ಯಗಳೇ ತೃತೀಯ ಪದದ ಕೊನೆಯಲ್ಲಿರುವ ಚತುರ್ಥೀವಿಭಕ್ತಿಯಿಂದ ವ್ಯಕ್ತಪಡುತ್ತದೆ. ಶ್ರೀಮಲ್ಲಕ್ಷ್ಮಣನು ಇದನ್ನು ಚನ್ನಾಗಿ ಅರಿತವನಾದಪ್ರಯುಕ್ತ, ಅಂತಹ ಪಾರಾರ್ಥ್ಯ ಪಾರತಂತ್ರ್ಯಗಳನ್ನು,

(1) **"ಸೀತಾಸಮಕ್ಷಂ ಕಾಕುತ್ಸ್ಥಮಿದಂ ವಚನ ಮಬ್ರವೀತ್**
ಪರವಾನಸ್ಮಿ ಕಾಕುತ್ಸ್ಥ ತ್ವಯಿವರ್ಷ ಶತಂ ಸ್ಥಿತೇ ।
ಸ್ವಯಂತು ರುಚಿರೇ ದೇಶೇ ಕ್ರಿಯತಾಂ ಇತಿ ಮಾಂವದ" ॥

ಎಂದರೆ "ಲಕ್ಷ್ಮಣನು ಸೀತಾಯುಕ್ತನಾದ ರಾಮನನ್ನು ಕುರಿತು ಹೇಳುತ್ತಾನೆ. ನಾನು ಪಾರಾರ್ಥ್ಯೈಕಪರನು, ಅಸ್ವತಂತ್ರನು, ಆದುದರಿಂದ ನನ್ನನ್ನು ನೀನೇ ಬಂದು ಪರ್ಣಶಾಲೆಯಂ ರಚಿಸು ಎಂದು ಆಜ್ಞಾಪಿಸತಕ್ಕದ್ದು. ನೀನೇ ಬಂದು ಮನೋಹರವಾದ ಪ್ರದೇಶವನ್ನು ನಿರ್ದೇಶಿಸಿ ಇಲ್ಲಿ ಆಶ್ರಮವಂ ರಚಿಸು ಎಂದು ನೀನೇ ಹೇಳತಕ್ಕದ್ದು" ಎಂಬುವದರಿಂದ ವ್ಯಕ್ತಪಡಿಸಿರುತ್ತಾನೆ. ಹಾಗೆ ಪರಮಾತ್ಮನ ಕೈಂಕರ್ಯಕ್ಕಾಗಿಯೇ, ತಾನು ವಿನಿಯೋಗಿಸಲ್ಪಟ್ಟರೆ (2) **"ಕೃತಾರ್ಥೋಹಂ ಭವಿಷ್ಯಾಮಿ ತವಚಾರ್ಥ ಪ್ರಕಲ್ಪ್ಯತೇ"** ಅಂದರೆ "ನಾನೂ ಈ ಕೈಂಕರ್ಯದಿಂದ ಕೃತಾರ್ಥನಾಗುವೆನು, ನೀನೂ ಸಹ ಪ್ರಯೋಜನಹೊಂದುವಿ," ಎಂಬುವದರಿಂದ, ಅಂತಹ ಕೈಕರ್ಯದಿಂದಲೇ ನಾವು ಕೃತಾರ್ಥರಾಗುತ್ತೇವೆ ಎಂಬ ನಮ್ಮ ಸಿದ್ಧಾಂತವು ಚನ್ನಾಗಿ ಸಮರ್ಥಿಸಲ್ಪಟ್ಟಿರುತ್ತದೆ. ಇದಲ್ಲದೆ (3) **"ನಿವಾಸಶಯ್ಯಾಸನ ಪಾದುಕಾಂಶುಕೋ"** ಎಂಬ ಶ್ಲೋಕದಲ್ಲಿ ಹೇಳಿರುವರೀತ್ಯಾ ಶೇಷನೇ ಪಾದುಕೆಯಾಗಿರುವುದರಿಂದಲೂ ಮತ್ತು ಶ್ರೀಮಲ್ಲಕ್ಷ್ಮಣನು ಶೇಷಾವತಾರವಾದುದರಿಂದಲೂ, ಪಾದುಕೆಯು **"ಇವರೊಡ್ಡೆಯ**

(1) ರಾ. ಅರ. ೧೫-೭-೯ (2) ರಾ. ಅರ. (3) ಆಳವಂದಾರ್ ಸ್ತೋತ್ರ.

ವತಾರಂ" ಎಂದು ಹೇಳಲ್ಪಟ್ಟಿರುತ್ತದೆ. ಪರಮಭಕ್ತನಾದ ಭರತನು ರಾಜ್ಯಾಪವಾದಕ್ಕಂಜಿ ರಾಜ್ಯಭಾರವನ್ನು ವಹಿಸದೆ ಶ್ರೀರಾಮನನ್ನು ಹಿಂತಿರಿಗಿಸಲು ಮಹತ್ಪ್ರಯತ್ನವನ್ನು ಮಾಡಿದರೂ ಶ್ರೀರಾಮನೊಪ್ಪದೆ ಇದ್ದುದರಿಂದ ಪ್ರಾಣತ್ಯಾಗಮಾಡಲೂ ಕೂಡ ಸಿದ್ಧನಾಗಿರುವಲ್ಲಿ, ಶ್ರೀರಾಮನಿಗೆ ದಿಕ್ಕುತೋಚದೆ, ತನ್ನ ಪಾದುಕೆಯನ್ನು ರಾಜ್ಯಾಡಳಿತದಲ್ಲಿ ಆಜ್ಞಾಪಿಸಲಾಗಿ, ಪಾದುಕೆಯು ಒಡನೇ ಆಜ್ಞೆಯನ್ನು ಶಿರಸಾವಹಿಸಿ ಶ್ರೀರಾಮನನ್ನು ಬೀಳ್ಕೊಂಡು ನಿವೃತ್ತಿಸಿ ನಂದಿಗ್ರಾಮಕ್ಕೆ ಹೊರಟುಹೋದ ವೃತ್ತಾಂತದಿಂದಲೂ ಸಾರಾಯ ಸ್ವಾಯ ಎಂಬ ಶಬ್ದದ ಚತುರ್ಥೀ ವಿಭಕ್ತಿಯ ಅರ್ಥವು ವ್ಯಕ್ತಪಡುತ್ತದೆಂಬ ತಾತ್ಪರ್ಯವು.

ಶ್ರೀವರ್ಾ ಶೆಟ್ಟಿಲೂರು ನರಸಿಂಹಾಚಾರ್ಯರವರು, ಈ ಸಂದರ್ಭದಲ್ಲಿ ಅನುಸಂಧೇಯಂಗಳಾದ ಕೆಲವು ಶ್ರೀಪಾದುಕಾಸಹಸ್ರಶ್ಲೋಕಗಳನ್ನು ಉದಾಹರಿಸಿರುತ್ತಾರೆ:—

"ಭರತಶಿರಸಿಲಗ್ನಾಂ ಪಾದುಕೇ ದೂರತಸ್ತ್ವಾಂ ।
ಸ್ವತನುಮಪಿವವನ್ದೇ ಲಕ್ಷ್ಮಣಶ್ಶೇಷಭೂತಃ ।
ಕಿಮಿದಮಿಹವಿಚಿತ್ರಂ ನಿತ್ಯಯುಕ್ತಶ್ಶೇವೇ ।
ದಶರಥತನಯಸ್ಸನ್ ರಂಗನಾಥಸ್ಸ್ವಮೇವ ॥"

ಅಂದರೆ, ಓ ಪಾದುಕೆಯೇ, ನೀನು ಶ್ರೀರಾಮಾಜ್ಞೆಯನ್ನಂಗೀಕರಿಸಿ ಯಾವಾಗ ಪರಮಭಕ್ತನಾದ ಭರತನ ಶಿರಸ್ಸನ್ನೂ ಹೊಂದಿದೆಯೋ, ಸ್ವಾಮಿಗೆ ಶೇಷಭೂತನಾದ ಲಕ್ಷ್ಮಣನು ತನ್ನ ಶರೀರವಾದ (ಅವತಾರವಾದ) ನಿನ್ನನ್ನು, ರಾಮಪಾದವನ್ನು ಹೊಂದಿದಂಥಾ ನೀನು ಹೊರಟುಹೋಗುತ್ತೀಯಲ್ಲಾ ಎಂಬ ಗೌರವದಿಂದ ದೂರದಿಂದಲೇ ನಮಸ್ಕರಿಸಿದನು. ತನ್ನ ಕಾಲಿಗೆ ತಾನೇ ಶರಣಾರ್ತಿ ಎಂಬಂತಾಯಿತೆಂಬಭಿಪ್ರಾಯವು. ಇದೇನೂ ಆಶ್ಚರ್ಯವಾದುದಲ್ಲವು ಏಕಂದರೆ ಸ್ವಾಮಿಯೇ ಈ ವಿಷಯದಲ್ಲಿ ಮೇಲುಪಜ್ಞ ಹಾಕಿಕೊಟ್ಟಿದ್ದಾರೆ. ಹೇಗಂದರೆ, ಸ್ವಾಮಿ ಶ್ರೀರಂಗನಾಥನೇ ದಶರಥಕುಮಾರನಾಗಿ ಅವತರಿಸಿ ಶ್ರೀರಂಗನಾಥನಾದ ತನ್ನನ್ನೇ ಆರಾಧಿಸಿರುತ್ತಾನಷ್ಟೆ.

ಇದರಿಂದ ಪಾದುಕೆಯು ಲಕ್ಷ್ಮಣಾವತಾರವೆಂಬುವದು ವ್ಯಕ್ತ ಪಡುತ್ತದೆ. ಪಾದುಕೆಯು ನಿವೃತ್ತಿರೂಪಕೈಂಕರ್ಯವನ್ನು ಕೈಕೊಂಡ ವಿಷಯದಲ್ಲಿ ವ್ಯಕ್ತಪಡಿಸಿದ ಪಾರತಂತ್ರ್ಯವನ್ನು ಶ್ಲಾಘಿಸುತ್ತಾರೆ.

**"ಅಭ್ಯುಪೇತವಿನಿವೃತ್ತಿ ಸಾಹಸಾ ದೇವಿ ರಂಗಪತಿ ರತ್ನಪಾದುಕೇ।
ಅತ್ಯಶೇತ ಭವತೀ ಮಹೀಯಸಾ ಪಾರತಂತ್ರ್ಯವಿಭವೇನಮೈಥಿ ಲೀಂ" ॥**

ಓ ದೇವಿಯೇ ಓ ರಂಗನಾಥನ ರತ್ನಖಚಿತವಾದ ಪಾದುಕೆಯೇ, ನೀನು ಶ್ರೀರಾಮನ ಚರಣಾರವಿಂದವನ್ನಗಲಿರುವ ಖೇದವನ್ನು ಸಹಿಸಿಕೊಂಡಿರುವ ಸಾಹಸವನ್ನಂಗೀಕರಿಸಿದುದರಿಂದ ನೀನು ಸ್ವಾಮಿಗೆ ಪಾರತಂತ್ರ್ಯ ಉಳ್ಳವಳು ಎಂಬ ಮಹಿಮೆಯನ್ನು ವ್ಯಕ್ತಪಡಿಸಿರುತ್ತಿಯೇ. ಈ ಪಾರತಂತ್ರ್ಯಮಹಿಮೆಯಿಂದ, ಪತಿಯು ಎಷ್ಟು ಬಡಂಬಡಿಸಿ ಅಯೋಧ್ಯೆಯಲ್ಲೇ ಇರು ಎಂದು ಹೇಳಿದರೂ ಕೇಳದೆ ಪತಿಗೆ ನಿಷ್ಠುರೋಕ್ತಿಯನ್ನು ಹೇಳಿ ಆತನಾಜ್ಞೆಯನ್ನುಲ್ಲಂಘಿಸಿದ ಸೀತೆಗಿಂತಲೂ ನೀನು ಶ್ರೇಷ್ಟಳೆಂದು ತೋರಿಸಿಕೊಂಡಿರುತ್ತೀಯೆ ಎಂಬ ತಾತ್ಪರ್ಯವು.

ಶ್ರೀಮಾನ್ ಶೆಟ್ಟಲೂರು ನರಸಿಂಹಾಚಾರ್ಯರವರು ಕೈಂಕರ್ಯವನ್ನು ನಾಲ್ಕು ವಿಧವಾಗಿ ವಿಭಾಗಿಸಿ ಉಪಪಾದನೆ ಮಾಡಿರುತ್ತಾರೆ:—

(1) ಪಾರಾರ್ಥ್ಯ ಕೈಂಕರ್ಯಂ (2) ಪಾರತಂತ್ರ್ಯ ಕೈಂಕರ್ಯಂ:— ಇವೆರಡೂ ಲಕ್ಷ್ಮಣನ ಪ್ರವೃತ್ತಿರೂಪವಾದ ಕೈಂಕರ್ಯಗಳಿಂದ ವ್ಯಕ್ತಪಟ್ಟಿರುತ್ತದೆ. **"ಅಹಂಸರ್ವಂಕರಿಷ್ಯಾಮಿ"** ಎಂಬುವದರಿಂದ ಪಾರಾರ್ಥ್ಯ ಕೈಂಕರ್ಯವೂ, **"ಪರವಾನಸ್ಮಿ" "ಕ್ರಿಯತಾಂ ಇತಿ ಮಾಂವದ"** ಎಂಬುವದರಿಂದ ಪಾರತಂತ್ರ್ಯರೂಪ ಕೈಂಕರ್ಯವೂ ನಿದರ್ಶಿಸಲ್ಪಟ್ಟವು. (3) ಕಾಷ್ಠಾಪ್ರಾಪ್ತ ಭಾಗವತ ಪಾರಾರ್ಥ್ಯ ಕೈಂಕರ್ಯವೂ (4) ಕಾಷ್ಠಾಪ್ರಾಪ್ತ ಭಾಗವತ ಪಾರತಂತ್ರ್ಯ ರೂಪ ಕೈಂಕರ್ಯವೂ ತಿರುವಡಿ ನಿವೃತ್ತಿರೂಪ ಕೈಂಕರ್ಯದಿಂದ ವ್ಯಕ್ತಪಡುತ್ತದೆಂದು ತಿಳಿಸುತ್ತಾರೆ. ಭರತನು ಪರಮ ಭಾಗವತೋತ್ತಮನಾದುದರಿಂದ ಆತನಿಗೆ ಲೋಕಾಪವಾದವನ್ನು ತಪ್ಪಿಸಿ ಪರಿಶುದ್ಧತೆ

ಇದು ತಿರುಮಂತ್ರಾರ್ಥಾನುಸಂಧಾನತ್ತುಕ್ಕು (1) ಕುರಿಪ್ಪಾಕವಪ್ಪುಳ್ಳಾರ್‌ರುಳಿಚ್ಚೆಯ್ದ (2) ವಿರುಗು

ಯನ್ನುಂಟುಮಾಡುವ ಕೈಂಕರ್ಯವನ್ನು ಪಾದುಕೆಯು ನಡಸಿದ್ದರಿಂದ ಭಾಗವತಪಾರಾರ್ಥ್ಯ ಪಾರತಂತ್ರ್ಯರೂಪ ಕೈಂಕರ್ಯವನ್ನೆಸಗಿದಹಾಗೆ ಭಾವಿಸಬಹುದು. ಆದರೆ ಭರತನಿಗೆ ಪಾದುಕೆಯು ಆರಾಧ್ಯದೇವತೆಯಾಗಿ, ಪಾದುಕೆಯನ್ನು ಸಿಂಹಾಸನದಲ್ಲಿ ಪ್ರತಿಷ್ಠಿಸಿ ಆ ಪಾದುಕೆಗೆ ಸರ್ವವಿಧಕೈಂಕರ್ಯವನ್ನು ಎಸಗಿದರೆಂಬುವದು, ಮೇಲೆ ಹೇಳಿದ ಪಾದುಕೆಯೇ ಭರತನಿಗೆ ಕೈಂಕರ್ಯವನ್ನು ಮಾಡಿತೆಂಬ ಭಾವಕ್ಕೆ ವಿರೋಧವಲ್ಲವೇ ಎಂದರೆ; ಭಾಗವತರುಗಳಾದ ಭರತರು ಮತ್ತು ಪಾದುಕಾಳ್ವಾರುಗಳಿಗೆ ಪರಸ್ಪರ ಶೇಷಶೇಷಿಭಾವವೆಂಬುವದೇನೂ ವಿರೋಧವಾದುದಲ್ಲವೆಂಬುವದು ಮುಂದೆ ಪರಮಾರ್ಥಕಾಷ್ಠಾಧಿಕಾರದಲ್ಲಿ ಉಪಪಾದಿತವಾಗಿರುತ್ತದೆ. ಈ ಪರಸ್ಪರ ಶೇಷತ್ವವು ಪರಸ್ಪರಾತಿಶಯವನ್ನುಂಟುಮಾಡುತ್ತದೆ:—ಹೇಗೆಂದರೆ ಪಾದುಕೆಯಿಂದ ಭರತನಿಗೆ ಲೋಕಾಪವಾದ ಕಳದು ಪರಮಭ್ರಾತೃಭಕ್ತನೆಂಬ ಅತಿಶಯವೂ, ಭರತನು ಪಾದುಕೆಗೆ ಮಾಡಿದ ರಾಜಸೇವಾ ಕೈಂಕರ್ಯದಿಂದ ಪಾದುಕೆಗೆ ಅತಿಶಯವೂ ಪ್ರಾಪ್ತವಾದವು. ಈ ಪರಸ್ಪರ ಭಾಗವತ ಕೈಂಕರ್ಯದಿಂದ ಅಂತರ್ಯಾಮಿಯಾಗಿರುವ ಪರಮಾತ್ಮನು ಸುಪ್ರೀತನಾಗುವನೆಂಬುವದು ಸ್ವತಸಿದ್ಧವಾದ ವಿಷಯವು.)

ಈ ಮೇಲಿನ ಸೀತಾರಾಮ ಲಕ್ಷ್ಮಣ ಭರತ ಶತ್ರುಘ್ನರುಗಳ ವೃತ್ತಾಂತಗಳೆಲ್ಲಾ ಈ ಮೂಲಮಂತ್ರದ ಅಮೋಘಾರ್ಥಗಳ ಅನುಸಂಧಾನಕ್ಕಾಗಿ ಗುರ್ತಿಸಿ ಹೇಳಿದ ಮಹಾನುಭಾವರಾದ ತಮ್ಮ ಗುರುವರ್ಯರಾದ ಕಿಡಾಂಬಿ ಅಪ್ಪುಳ್ಳಾರವರು ಅನುಗ್ರಹಿಸಿದ ಉಪಾಯವಾಗಿರುತ್ತದೆ. (ಕಿಡಾಂಬಿ ಅಪ್ಪುಳ್ಳಾರವರು ಶ್ರೀನಿಗಮಾಂತ ದೇಶಿಕರವರ ತಾಯಿಯಾದ ತೋತಾರಂಬಾಯವರ ಸಹೋದರರು. ಆದುದರಿಂದ ಸ್ವಾಮಿಯವರಿಗೆ ಮಾತುಲರು. ಶ್ರೀ ರಾಮಾನುಜಾ

(1) ಕುರಿಪ್ಪಾಕ – ಗುರ್ತಾಗಾಗಿ ದೃಷ್ಟಾಂತವಾಗಿ ಅಥವಾ ಉದಾಹರಣೆವಾಗಿ.

(2) ವಿರುಗು – ಉಪಾಯ.

ಇದಿನ್ ಪಡಿಯುಲೇ ದ್ವಯತ್ತಿಲುಮ್ ಚರಮಶ್ಲೋಕತ್ತಿಲು ಮುಳ್ಳ ವರ್ಥಂಗಳ್ ತೆಳಿನ್ದು ಕೊಳ್ವದು.

ಶೇಷಶೇಷಿತ್ವ, ಸ್ವಾಮಿ ದಾಸತ್ವ ರಕ್ಷಕ ರಕ್ಷ್ಯಭಾವಙ್ಗಳ್ ಇವತ್ತಿಲ್ ಈಶ್ವರನುಕ್ಕು ಪ್ರಕಾಶಿತ್ತ ಶೇಷಿತ್ವಂ, ಚೇತನಾಚೇತನ

ರ್ಯರೆಂದೂ ಇವರಿಗೆ ನಾಮಧೇಯ ಉಂಟು. ಇವರಿಂದಲೇ ಸ್ವಾಮಿ ದೇಶಿಕರವರಿಗೆ ಸರ್ವವಿಧವಾದ ಶಾಸ್ತ್ರಾಭ್ಯಾಸವು. '**ರಾಮಾನುಜಾರ್ಯಾದಾತ್ರೇಯ ನ್ಮಾತುಲಾ ತ್ಸಕಲಾಃ ಕಲಾಃ । ಅವಾಪವಿಂಶತ್ಯ ಚೇಯಃ ತಸ್ಮೈ ಪ್ರಾಜ್ಞಾಯ ಮಂಗಳಂ**'' ಎಂಬ ಶ್ಲೋಕದಲ್ಲಿ ಈ ವಿಷಯವು ಹೇಳಲ್ಪಟ್ಟಿರುತ್ತದೆ.)

ಈ ವಿಧವಾಗಿಯೇ ಅಂದರೆ ಮೂಲಮಂತ್ರದಲ್ಲಿ ವ್ಯಕ್ತಪಡಿಸಿದ ರೀತಿಯಲ್ಲೇ ದ್ವಯಮಂತ್ರದಲ್ಲೂ ಚರಮಶ್ಲೋಕದಲ್ಲೂ ತೋರಿಬರುವ ಈ ಅರ್ಥಗಳನ್ನೇ ತಿಳಿದುಕೊಳ್ಳುವದು. ಹೇಗೆಂದರೆ:— ದ್ವಯಮಂತ್ರದ ಮೊದಲನೇ ಪದವಾದ ಲಕ್ಷ್ಮಿಯುಕ್ತನಾದ ನಾರಾಯಣನ ಚರಣವೆಂಬರ್ಥದಿಂದ ನಮಗೆ ರಕ್ಷಕನೆಂಬ ಪ್ರತೀತಿಯು ಉಂಟಾಗುತ್ತದೆ. "**ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾಕಾರುಣ್ಯರೂಪಯಾ ರಕ್ಷಕ ಸರ್ವಸಿದ್ಧಾಂತೇ ವೇದಾಂತೇಷುಚ ಗೀಯತೆ**" ಅಂದರೆ ಕರುಣಾಶಾಲಿಯಾದ ಲಕ್ಷ್ಮಿಯಿಂದ ಕೂಡಿಪ ಹೃಷೀಕೇಶನೇ ರಕ್ಷಕನೆಂದು ಸಮಸ್ತ ಸಿದ್ಧಾಂತದಲ್ಲೂ ವೇದಾಂತಗಳಲ್ಲೂ ಹೇಳಿದೆ ಎಂಬುವದು ಲಕ್ಷ್ಮೀತಂತ್ರ ಪ್ರೋಕ್ತ ವಿಷಯವಾಗಿರುತ್ತದೆ. ಪ್ರಪದ್ಯೇ ಎಂಬ ಮೂರನೇ ಪದದಲ್ಲಿ ತೋರುವ ಉತ್ತಮಪುರುಷ ಪ್ರಯೋಗದಿಂದ ಜೀವನು ರಕ್ಷ್ಯನು ಶೇಷನು ಎಂಬ ಭಾವ ಉಂಟಾಗುತ್ತದೆ. ಐದನೇ ಪದವಾದ ನಾರಾಯಣಾಯ ಎಂಬುವುರದಲ್ಲಿರುವ ವ್ಯಕ್ತಚತುರ್ಥಿಯಿಂದ ಸ್ವಾಮಿಗೆ ಕೆಂಕರ್ಯವನ್ನೆಸಗುವದೇ ಜೀವನಿಗೆ ಸ್ವರೂಪವೆಂಬುದು ತೋರಿಬರುತ್ತದೆ. ಹಾಗೆಯೇ ಚರಮಶ್ಲೋಕದಲ್ಲೂ ಮೊದಲನೇ "**ಮಾಂ**" ಎಂಬುವವರಿಂದ ಈಶ್ವರನು ರಕ್ಷಕನೆಂಬ ಭಾವವೂ, "**ತ್ವಾಂ**" ಎಂಬ ಪದದಿಂದ ಜೀವನು

ಸಾಧಾರಣ ಧರ್ಮಮಾಕ್ಕೈಯಾಲೆ(1) ಚೇತನೈಕಾಂತಮಾನಸ್ವಾಮಿತ್ವಮಾಕಿರ ವಿಶೇಷತ್ತಿಲೆ ಪರ್ಯವಸಿಪ್ಪಿತನುಸಂಧಿಕ್ಕಪ್ರಾಪ್ತಂ.

ದಾಸತ್ವ ಸ್ವಾಮಿತ್ವ ಭಾವಗಳು.

ರಕ್ಷ್ಯನಾದ ಶೇಷನೆಂಬ ಭಾವವೂ, ಯಾವಾಗ ಸರ್ವಪಾಪಗಳು ತೊಲಗುತ್ತವೊ, ಆಗ ಮೋಕ್ಷಪ್ರಾಪ್ತಿಯೂ, ಅದರೊಂದಿಗೆ ಕೈಂಕರ್ಯಪ್ರಾಪ್ತಿಯೂ ಉಂಟಾಗುವವೆಂಬ ಭಾವವು.

ಸ್ವಾಮಿ ದಾಸತ್ವ ಮುಂತಾದ ಭಾವಗಳು.

ಇವತ್ತಿಲ್ ಅಂದರೆ ಈ ಮೂರು ರಹಸ್ಯಗಳಲ್ಲೂ ಈಶ್ವರನಲ್ಲಿ ಪ್ರಕಾಶವಾಗಿತೋರುವ ಶೇಷಿಭಾವವು ಚೇತನಾ ಚೇತನಗಳೆರಡರ ವಿಷಯದಲ್ಲೂ ಸಾಧಾರಣವಾದ ಧರ್ಮವಾದುದರಿಂದ ಈ ಭಾವವು, ಚೇತನನಾದ ಅಂದರೆ ಹಾಗೆ ಸ್ವಾಮಿಯು ಶೇಷಿಯು ಎಂಬ ಭವವನ್ನು ತಿಳಿಯುವ ಶಕ್ತಿಯುಳ್ಳ ಜೀವಾತ್ಮನಲ್ಲೇ ಅನ್ವಯಿಸಿದರೆ ಸ್ವಾಮಿತ್ವವೆಂಬ ವಿಶೇಷಧರ್ಮದಲ್ಲಿ ಪರ್ಯವಸಾನವನ್ನು ಹೊಂದಿಸಿ ಅನುಸಂಧಾನಮಾಡುವದು ಉಚಿತವಾದುದು. (ಅಂದರೆ ಚೇತನನಿಗೆ ಜ್ಞಾನವಿರುವದರಿಂದ ಸರ್ವೇಶ್ವರನು ತನಗೆ ಶೇಷಿ ಎಂದೂ, ತಾನು ಶೇಷನೆಂದೂ ತಿಳಿಯುವದರಿಂದಲೇ, ಸರ್ವೇಶ್ವರನು ಸ್ವಾಮಿಯೂ, ತಾನು ಆತನಿಗೆ ದಾಸನೂ ಎಂಬುವ ಭಾವಗಳು ಉಂಟಾಗುತ್ತವೆ. ಹಾಗೆ ಅನುಸಂಧಾನ ಮಾಡುವುದೇ ಈ ಜೀವನಿಗೆ ಸರಿಯಾದ ಸ್ವರೂಪವೆಂಬಭಿಪ್ರಾಯವು. ಹಾಗೆ ಭಾವನೆ ಇಲ್ಲದಿದ್ದರೆ ಸ್ವರೂಪಹಾನಿ ಎಂಬುವದು ಕೈಕೇಯೀ ದೃಷ್ಟಾಂತದಿಂದ ತೋರಿಬರುತ್ತದೆ. "**ಪುತ್ರಶ್ಚತವ ರಾಮಸ್ಯ ಪ್ರೇಷ್ಯ ಭಾವಂಗಮಿಷ್ಯತಿ**" "ನಿನ್ನ ಮಗನಾದ ಭರತನು ರಾಮನಿಗೆ ದಾಸಭಾವವನ್ನು ಹೊಂದುವನು" ಎಂಬ ಮಂಥರಾ ವಾಕ್ಯವನ್ನು ಸ್ವೀಕರಿಸಿದಪ್ರಯುಕ್ತ ಕೈಕೇಯಿಯು

---

(1) ಚೇತನೈಕಾಂತಮಾನ–ಚೇತನನಾದ ಜೀವನಿಗೆ ಮಾತ್ರವೇ ಅಸಾಧಾರಣವಾದ

(2) ಅಯೋಧ್ಯಾ. 105. 10.

ತುಂಬಾ ನಿಂದಿತಳಾದಳು. ಆದರೆ ಭರತನು ಸ್ವಾಮಿಗೆ ತಾನು ಪ್ರೇಷ್ಯನು, ದಾಸನು ಎಂಬ ಭಾವವನ್ನು ಚನ್ನಾಗಿ ಅರಿತವನಾದುದರಿಂದ, ತಾಯಿಯನ್ನು ನಿಂದಿಸಿ, ಅರಣ್ಯಕ್ಕೆ ಹೋಗಿ ಶ್ರೀರಾಮನನ್ನು ಹಿಂತಿರಿಗಿಸಲು ಯತ್ನಿಸಿ ಹೇಳುತ್ತಾನೇನೆಂದರೆ:—

(2) **ಯೋಽಷೋಽಪನಾ ಮಹಾಬಾಹೋ ತಮುರ್ತ್ಥಂವೇತ್ತುಮರ್ಹಸಿ ।**
ಯದಿತ್ವಮಸ್ಮಾ ನೃಷಭೋ ಭರ್ತಾ ಭೃತ್ಯಾನ್ನಶಾಧಿಹಿ ॥

ನೀನು ಶ್ರೇಷ್ಠನಾದ ಭರ್ತಾ ಸ್ವಾಮಿಯು, ನಾವುಗಳಾದರೋ ಭೃತ್ಯರು, ನೀನು ನಮ್ಮನ್ನು ಕಾಪಾಡದೆ ಹೋದರೆ ನಾಟಿದ ಸಸಿಯು ಫಲಕೊಡದೆ ಹೋದ ವೃಕ್ಷದ ಸಾಮಾನ್ಯವನ್ನು ಹೊಂದುತ್ತೀಯೆ ಎಂದು ಹೇಳುತ್ತಾನಾದುದರಿಂದ ಭರತನು ತನ್ನ ಸ್ವರೂಪವನ್ನು ಕಾಪಾಡಿಕೊಂಡನು. ಹಾಗೆ ಸ್ವಾಮಿಗೆ ನಾವು ಭೃತ್ಯನೆಂದರಿಯುವದು ನಮ್ಮ ಸ್ವರೂಪಕ್ಕೆ ಯೋಗ್ಯವಾದುದೆಂದು ಹೇಳುವದಕ್ಕಾಗಿ **"ಅನುಸಂಧಿಕ್ಕಪ್ರಾಪ್ತಂ"** ಎಂದು ಪ್ರಯೋಗಿಸಿರುತ್ತಾರೆ. ಅದೂ ಅಲ್ಲದೆ ತಾನು ದಾಸನೆಂದು ತೋರಿಸಲು ಸ್ವಾಮಿಯ ರತ್ನಪಾದುಕೆಯನ್ನು ಭರತನು (1) **"ತತಶ್ಶಿರಸಿ ಕೃತ್ವಾತು ಪಾದುಕೇ ಭರತಸ್ತದಾ"** ಎಂದು ಹೇಳಿರುವ ಹಾಗೆ ಶಿರಸ್ಸಿನಲ್ಲಿ ಧರಿಸಿ, (2) **"ತದಧೀನಸ್ತದಾರಾಜ್ಯಂ ಕಾರಯಾಮಾಸ"** ಅಂದರೆ ಪಾದುಕೆಗೆ ಅಧೀನನಾಗಿ ರಾಜ್ಯಭಾರಮಾಡಿ, (3) "**ಪಾದುಕಾಭ್ಯಾಂ ನ್ಯವೇದಯತ್**" ಅಂದರೆ ಪಾದುಕೆಗೆಲ್ಲವನ್ನೂ ಸಮರ್ಪಿಸಿದನು, ಎಂದು ಹೇಳಿರುವದರಿಂದ ಶ್ರೀರಾಮನು ಸ್ವಾಮಿಯೂ, ಭರತನಾದ ತಾನು ದಾಸನೂ ಎಂಬ ಭಾವವು ಬಹು ಸ್ವಾರಸ್ಯವಾಗಿ ವ್ಯಕ್ತಪಟ್ಟಿರುತ್ತದೆ. ಆದುದರಿಂದ ಜ್ಞಾಯಮಾನ ಶೇಷಿತ್ವವೇ ಸ್ವಾಮಿತ್ವವೂ, ಜ್ಞಾಯಮಾನ ಶೇಷತ್ವವೇ ದಾಸತ್ವವೆಂದರಿಯತಕ್ಕದ್ದು.)

(ಈಗ ಪ್ರತಿಪಾದಿಸಿದ ಸ್ವಾಮಿತ್ವ ದಾಸತ್ವ ಭಾವಗಳು ಕಂಠೋಕ್ತವಾಗಿ ಮೂಲಮಂತ್ರದಲ್ಲಿ ಹೇಳಿಲ್ಲವಲ್ಲಾ, ಹಾಗಾದರೆ ಈ

---

(1) ಅಯೋಧ್ಯಾ. 113. 1. (2) ಅಯೋಧ್ಯಾ. 115. 26. (3) ಅಯೋಧ್ಯಾ. 115. 25.

ಇಪ್ಪಡಿತ್ತನ್ನುಡೈಯ ಶೇಷತ್ವಮುಂ ಸಾಮಾನ್ಯ ಮಾಕೈ ಯಾಲೇ ದಾಸತ್ವಮಾಕಿರ ವಿಶೇಷತ್ತಿಲೇ (1) ವಿಶ್ರಮಿಪಿ ತ್ತನುಸಂಧಿಕ್ಕವೇಣುಂ.

ಭಾವಗಳು ಮೂಲಮಂತ್ರದಲ್ಲಿ ಮುಖ್ಯವಾಗಿ ತೋರಬೇಡವೆ ಎಂದರೆ ಅದಕ್ಕೆ ಸಮಾಧಾನವನ್ನು ಮುಂದಿನವಾಕ್ಯದಿಂದ ಹೇಳುತ್ತಾರೆ.)

ಹೀಗೆ ತನ್ನ ಶೇಷತ್ವವೆಂಬುವದು ಚೇತನಾಚೇತನಗಳೆರ ಡಕ್ಕೂ ಸಾಮಾನ್ಯವಾದ ಧರ್ಮವಾಗಿರುವದರಿಂದ, ದಾಸತ್ವವೆನ್ನುವ ಚೇತನನಾದ ತನ್ನ ವಿಶೇಷ ಧರ್ಮದಲ್ಲಿ, ತಾತ್ಪರ್ಯವನ್ನು ಕಲ್ಪಿಸಿ ಅನು ಸಂಧಾನಮಾಡತಕ್ಕದ್ದು. (ತಾನು ಶೇಷನು ಎಂಬುವದು ಚೇತನಾ ಚೇತನೆರಡಕ್ಕೂ ಸಾಮಾನ್ಯವಾದ ಧರ್ಮವು. ಹಾಗೆ ತಾನು ಶೇಷ ನೆಂಬುವದು ಯಾವಾಗ ಚೇತನನಾದ ಪ್ರಯುಕ್ತ ತಿಳಿಯಲ್ಪಟ್ಟಿತೋ, ಆಗ ಆ ಧರ್ಮವೇ ದಾಸತ್ವವೆಂಬುವ ವಿಶೇಷ ಧರ್ಮವಾಗುತ್ತದೆಂಬ ಭಾವವು.) ಚೇತನಾಚೇತನಗಳಿಗೂ ಪರಮೇಶ್ವರನಿಗೂ ಸಾಧಾ ರಣ ಧರ್ಮಗಳಾದ ಶೇಷಶೇಷಿ ಭಾವವು ಮೂಲಮಂತ್ರದಲ್ಲಿರುವ ಪ್ರಣವದ ಮೊದಲನೇ ಅಕ್ಷರವಾದ "ಅ"ಕಾರದಲ್ಲಿ ಲೋಪಿಸಿರುವ ಚತುರ್ಥೀವಿಭಕ್ತಿಯಿಂದ ಪ್ರಕಾಶವಾಗಿ ತೋರಿಬರುತ್ತದೆ. (ಹೇಗೆಂ ದರೆ :—ಪ್ರಣವದ ಅ ಕಾ ರ ವು ಲುಪ್ತಚತುರ್ಥಿಯಾಗಿರುವದರಿಂದ **ಆಯ** ಎಂದು ಭಾವಿಸಲ್ಪಡತಕ್ಕದ್ದು. ಪ್ರಣವದ "ಉ"ಕಾರವು ಅವಧಾರಣವಾದುದರಿಂದ "**ಆಯ ಏವ**" ಎಂತಾಯಿತು. "ಮ" ಕಾರವೆಂದರೆ ಜೀವನು. "**ಮಕಾರೋ ಜೀವಃ ಆಯೈವ**" ಮಕಾ ವಾಚ್ಯನಾದ ಜೀವನು ಶ್ರೀಮನ್ನಾರಾಯಣನಿಗೇನೇ ಶೇಷನು" ಎಂ ಬುವದರಿಂದ, ಜೀವನು ಶೇಷನು, ಪರಮಾತ್ಮನು ಶೇಷಿಯು, ಎಂಬು ವದು ಪ್ರಕಾಶ್ಯವಾಯಿತೆಂದು ಭಾವವು.) ಈ ಸಾಮಾನ್ಯ ಶೇಷಶೇಷಿ ಭಾವದ ವಿಶೇಷ ಭಾವಗಳಾದ ದಾಸತ್ವ ಸ್ವಾಮಿತ್ವ ಭಾವಗಳು, ಜೀವಾತ್ಮ ಪರಮಾತ್ಮರೂ ಚೇತನರಾಗಿ ಈ ಶೇಷ ಶೇಷಿ ಭಾವವು ಅವರಿಬ್ಬರಿಗೂ ತೋರಿಬರುವದರಿಂದ ಅರ್ಥಾತ್ ಪ್ರಣವದಲ್ಲಿ ಕಾಣಬರುತ್ತವೆ. ಹೀಗೆಯೇ ನಾರಾಯಣ ಶಬ್ದದಲ್ಲೂ

(1) ವಿಶ್ರಮಿಪಿತ್ತು - ತಾತ್ಪರ್ಯವನ್ನು ಕಲ್ಪನಮಾಡಿ.

ಇವಱ್ಱಿಲ್ ಸಾಮಾನ್ಯಮಾನ ಶೇಷಶೇಷಿಭಾವಂ ಪ್ರಥಮಾಕ್ಷರತ್ತಿಲ್ ಚತುರ್ಥಿಯಾಲೇ ಪ್ರಕಾಶ್ಯಂ. ಇತಿನ್ ವಿಶೇಷಮಾನದಾಸತ್ವ ಸ್ವಾಮಿತ್ವಙ್ಗಳ್, ಇರುವರುಂ ಚೇತನರಾಯ್ ಕ್ಕೊತ್ತುಕ್ಕೈಯಾಲೇ ಅರ್ಥಸಿದ್ಧಂ. ಇಪ್ಪಡಿ ನಾರಾಯಣ ಶಬ್ದತ್ತಿಲುಂ ಸಾಮಾನ್ಯಮುಂ, ವಿಶೇಷಮುಂ ಕಣ್ಡುಕೊಳ್ವದು.

ಸಾಮಾನ್ಯ ಭಾವವಾದ ಶೇಷ ಶೇಷಿ ಭಾವವನ್ನೂ, ವಿಶೇಷ ಭಾವವಾದ ದಾಸತ್ವ ಸ್ವಾಮಿತ್ವ ಭಾವಗಳನ್ನು ತಿಳದುಕೊಳ್ಳತಕ್ಕದ್ದು. (ಹೇಗೆಂದರೆ, ನಾರಾಯಣಾಯಎಂಬ ವ್ಯಕ್ತಚತುರ್ಥಿಯಿಂದ, ಈ ಮಕಾರವಾಚ್ಯನಾದ ಜೀವನುಮಾಡುವ ಕೈಂಕರ್ಯವೆಲ್ಲಾ ಶ್ರೀಮನ್ನಾರಾಯಣನಿಗೇನೆ ಎಂಬುವದರಿಂದ ಸಾಮಾನ್ಯಭಾವವಾದ ಶೇಷಶೇಷಿತ್ವವು ಶಬ್ದದಿಂದಲೇ ತೋರಿಬರುತ್ತದೆ. ಇಬ್ಬರೂ ಚೇತನರಾಗಿರುವದರಿಂದ, ದಾಸನು ಮಾಡುವ ಕೈಙ್ಕರ್ಯವು ಸ್ವಾಮಿಗೇನೇ ಎಂಬ ಭಾವವು ಅರ್ಥಾತ್ ತೋರಿಬರುತ್ತದೆ. ಇನ್ನೊಂದು ವಿಧವಾಗಿಯೂ ಈ ಭಾವಗಳನ್ನುಪಪಾದಿಸಬಹುದು.

"**ನರಾಜ್ಜಾತಾನಿ ತತ್ವಾನಿ ನಾರಾಣೀತಿ ತತೋವಿದುಃ ।**
ತಾನ್ಯೇವಚಾಯನಂತಸ್ಯ ತೇನನಾರಾಯಣಸ್ಸ್ಮೃತಃ" ಎಂದೂ,
"**ಆಪೋನಾರಾ ಇತಿ ಪ್ರೋಕ್ತಾ ಆಪೋವೈ ನರಸೂನವಃ ।**
ಆಯನಂ ತಸ್ಯತಾಃಪೂರ್ವಂ ತೇನ ನಾರಾಯಣಸ್ಸ್ಮೃತಃ ॥"

ಎಂದೂ ಹೇಳಿರುವದರಿಂದ, ಚೇತನಾಚೇತನಗಳೆಲ್ಲಾ ನರಶಬ್ದವಾಚ್ಯನಾದ, ನಾಶವಿಲ್ಲದ ಭಗವಂತನ ಸಂಬಂಧಿಗಳಾಗಿ, ಅವುಗಳಿಗೆ ಆಧಾರನೂ ಆಗಿ, ಅವುಗಳನ್ನೇ ಅಂತರ್ಯಾಮಿತ್ವೇನ ಆಶ್ರಯಿಸಿ ಸ್ವಾಧೀನ ಮಾಡಿಕೊಂಡಿರುವದರಿಂದ ಶೇಷಶೇಷಿ ಭಾವಗಳು ಶಬ್ದದಿಂದಲೂ, ದಾಸತ್ವ ಸ್ವಾಮಿತ್ವ ಭಾವಗಳು ಅರ್ಥದಿಂದಲೂ ತೋರಿಬರುತ್ತವೆಂಬ ತಾತ್ಪರ್ಯವು. ಅಥವಾ **ರಾಃ** ಅಂದರೆ ನಾಶವಾಗುವವು; **ನರಾಃ** ಅಂದರೆ ನಾಶವಿಲ್ಲದವು ಅಂದರೆ ನಿತ್ಯವಸ್ತುಗಳು. ಅವುಗಳ ಸಮೂಹಕ್ಕೆ **ನಾರ**ವೆಂದು ಹೆಸರು. ಅವುಗಳಿಗೆ **ಅಯನಂ**

ಇದಿಲ್ ಸಾಮಾನ್ಯಮಾನ ಶೇಷತ್ವತ್ತಾಲೇ ಚೇತನನುಕ್ಕು ಪ್ರಾಪ್ತಮಾನ ಕಿಂಚತ್ಕಾರಂ ದಾಸತ್ವಮಾಕಿರ ವಿಶೇಷತ್ತಾಲೆ ಕೈಙ್ಕರ್ಯರೂಪಮಾನ ಪುರುಷಾರ್ಥಮಾಯಿಱ್ಱು. ಇಪ್ಪಡಿ ಶೇಷಿತ್ವತ್ತಾಲೆವಂದ ವೀಶ್ವರನುಡೈಯ ವತಿಶಯ ಯೋಗಮುಂ ಸ್ವಾಮಿತ್ವಮಾಕಿರ ವಿಶೇಷತ್ತಾಲೆ ಅವನುಕ್ಕು ಪುರುಷಾರ್ಥಮಾಯ್ ಫಲಕ್ಕಿರದು.

ಅಂದರೆ ಆಧಾರನು ಎನ್ನುವದರಿಂದ, ಈಶ್ವರನಿಗೆ ಜೇತನನು ಸ್ವಾಧೀನನೆಂಬುವದು ತೋರಿಬರುವದರಿಂದ ಶೇಷತ್ವ, ದಾಸತ್ವಗಳೂ, ಈಶ್ವರನ ಶೇಷಿತ್ವ, ಸ್ವಾಮಿತ್ವಗಳೂ ವ್ಯಕ್ತಪಡುತ್ತವೆ. ಅಥವಾ ಬಹುವ್ರೀಹಿ ಅರ್ಥಪ್ರಕಾರ **ನಾರ** ಅಂದರೆ ನಿತ್ಯವಸ್ತುಗಳ ಸಮೂಹವನ್ನೇ **ಅಯನಂ** - ಆಧಾರವಾಗಿ ಉಳ್ಳವನು, ಎಂಬುವದರಿಂದ ತನ್ನ ಸಂಕಲ್ಪದಿಂದ ಅವುಗಳನ್ನು ಅನುಪ್ರವೇಶಮಾಡಿದವನು ಎಂಬರ್ಥವುಂಟಾಗುವುದವದರಿಂದಲೂ ಈ ಭಾವಗಳು ತೋರಿಬರುತ್ತವೆ ಎಂದೂ ಊಹಿಸಬಹುದು.

(ಮುಂದೆ ಈ ದಾಸತ್ವ ಸ್ವಾಮಿತ್ವ ಭಾವಗಳೇ ಇಬ್ಬರಿಗೂ ಪುರುಷಾರ್ಥರೂಪವಾದ ಪ್ರಯೋಜನಗಳನ್ನು ಉಂಟುಮಾಡುತ್ತವೆಂದು ನಿರೂಪಿಸುತ್ತಾರೆ.)

ಇದರೊಳಗೆ ಸಾಮಾನ್ಯವಾದ ಶೇಷಭಾವದಿಂದ ಚೇತನನು ಮಾಡುವ ಕರ್ತವ್ಯರೂಪವಾದ ಅಲ್ಪಸ್ವಲ್ಪಕಾರ್ಯವು ದಾಸತ್ವವಾಗಿರುವ ವಿಶೇಷ ಭಾವದಿಂದ ಸ್ವಾಮಿಗೆಮಾಡುವ ಕೈಂಕರ್ಯರೂಪವಾದ ಪುರುಷಾರ್ಥವಾಗುತ್ತದೆ. ಹೀಗೆಯೇ ಶೇಷನಾದ ಚೇತನನು ಮಾಡುವ ಕಿಂಚತ್ಕಾರದಿಂದ ಶೇಷಿಯಾದ ಸರ್ವೇಶ್ವರನಾದ ತನಗೆ ಉಂಟಾಗುವ ಅತಿಶಯವು, ತಾನು ಆ ದಾಸನಾದ ಚೇತನನಿಗೆ ಸ್ವಾಮಿಯು ಎಂಬ ಭಾವದಿಂದ ಸರ್ವೇಶ್ವರನಿಗೂ ಕೂಡ ಪುರುಷಾರ್ಥವಾಗಿ ಪರಿಣಮಿಸುತ್ತದೆ. (ಹೀಗೆ ಈ ಶೇಷ ಶೇಷಿ ಎಂಬ ಸಂಬಂಧವು ಇಬ್ಬರೂ ಚೇತನರಾದುದರಿಂದ ಇಬ್ಬರಿಂದಲೂ ಯಾವಾಗ ತಿಳಿಯಲ್ಪಟ್ಟತೋ

ಆಗ ಜ್ಞಾಯಮಾನ ಶೇಷತ್ವವೇ ದಾಸತ್ವವೂ, ಜ್ಞಾಯಮಾನ ಶೇಷಿತ್ವವೇ ಸ್ವಾಮಿತ್ವವೂ ಆಯಿತು. ಚೇತನನು ಶೇಷನಾದುದರಿಂದ ತಾನು ಮಾಡುವ ಕಿಂಚತ್ಕಾರವೇ ತಾನು ಮಾಡುವ ಕೈಂಕರ್ಯವಾಗಿ ಪರಿಣಮಿಸುವದರಿಂದ ಅದೇ ಈ ಚೇತನನಿಗೆ ಪರಮಪುರುಷಾರ್ಥವಾಗುತ್ತದೆ. ಜೀವನಿಗೇನೋ ಅಂತಹ ಕೈಂಕರ್ಯವು ಪರಮಲಾಭಕರವು. ಪರಮಪುರುಷನಿಗೂ ಕೂಡ ಇದು ಹೇಗೆ ಲಾಭಕರವು ಎಂದರೆ, ಈಶ್ವರನು ಶೇಷಿಯಾಗಿ ತನ್ಮೂಲಕ ಈ ಚೇತನನಿಗೆ ಸ್ವಾಮಿಯಾಗಿ ಆ ಕೈಙ್ಕರ್ಯವನ್ನು ಸ್ವೀಕರಿಸುವದರಿಂದುಂಟಾದ ಅತಿಶಯವೇ ಈಶ್ವರನಿಗೆ ಪರಮ ಪ್ರಯೋಜನವೆಂಬ ಭಾವವು. ಈ ಅಭಿಪ್ರಾಯವು,

(1) **"ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿಯತ್ ।**
ಯತ್ತಪಸ್ಯಸಿ ಕೌನ್ತೇಯ ತತ್ಕುರುಷ್ವಮದರ್ಪಣಂ"॥

ಎಂಬ ಗೀತಾ ಶ್ಲೋಕವು, ಕಿಂಚತ್ಕಾರವನ್ನು ಸ್ವಾಮಿ ಕೈಂಕರ್ಯವಾಗಿ ಸಮರ್ಪಿಸುವದೇ ಚೇತನನಿಗೆ ಪರಮ ಪುರುಷಾರ್ಥ ಭಾವವೆಂಬುವದನ್ನು ತಿಳಿಸುತ್ತದೆ. ಅದರ ಹಿಂದಿನ ಶ್ಲೋಕವಾದ

(2) **"ಪತ್ರಂ ಪುಷ್ಪಂ ಫಲಂ ತೋಯಂ ಯೋಮೇ ಭಕ್ತ್ಯಾ ಪ್ರಯಚ್ಛತಿ ।**
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ"॥

ಎಂಬಲ್ಲಿ ಅಶ್ನಾಮಿ ಪ್ರಯತಾತ್ಮನಃ ಎಂಬುವದಕ್ಕೆ ಶ್ರೀ ಭಾಷ್ಯಕಾರರು, "**ಸ್ವಾಭಾವಿಕಾನ ವಧಿಕಾತಿಶಯಾನಂದ ಸ್ವಾನುಭವೇ ವರ್ತಮಾನೋಪಿ ಮನೋರಥ ಪಥ ದೂರವರ್ತಿ ಪ್ರಿಯಂಪ್ರಾಪ್ಯೇನಾಶ್ನಾಮಿ**" ಎಂದು ವ್ಯಾಖ್ಯಾನ ಬರದಿರುತ್ತಾರೆ. "ಸ್ವಾಭಾವಿಕವಾಗಿ ಅವಧಿ ಇಲ್ಲದ ಹೆಚ್ಚಾದ ಆನಂದಾನುಭವದಲ್ಲಿದ್ದರೂ, ಈ ಭಕ್ತನು ಮಾಡುವ ಕಿಂಚತ್ಕಾರರೂಪವಾದ ಪತ್ರ ಪುಷ್ಪ ಫಲಾದಿ ಸಮರ್ಪಣೆಯಿಂದ, ತನ್ನ ಮನೋರಥಕ್ಕೆ ತುಂಬಾ ದೂರವಾದ ವಸ್ತುವು ದೊರೆತ ತೆರದಿ ಭಾವಿಸುವನೆಂಬದಾಗಿ ಇದರ ತಾತ್ಪರ್ಯವು. ಇದರಿಂದ

(1) ಗೀ. 9. 27. (2) ಗೀ. 9. 26.

ರಕ್ಷ್ಯ ರಕ್ಷ್ಯಕ ಸಂಬಂಧ ಸಮರ್ಥನಂ.

ಚೇತನರುಡೈಯ ರಕ್ಷಣತ್ತಿಲ್ ಈಶ್ವರನ್ ಪ್ರಾಪ್ತನುಮಾಯ್, ಶಕ್ತನುಮಾಯ್, ತದಧೀನ ಪ್ರವೃತ್ತಿಯ್ಯೈಯೊಳಿಯ ಚೇತನರ್ ಅಪ್ರಾಪ್ತರುಮಾಯ್ ಅಶಕ್ತರುಮಾಯಿರುಕ್ಕೈಕ್ಕು ನಿಬನ್ಧನಂ ಈಶ್ವರನುಡೈಯ ನಿರುಪಾಧಿಕ

ಈ ಕೈಂಕರ್ಯವನ್ನು ಸ್ವಾಮಿಯು ತನಗೆ ಪರಮಪುರುಷಾರ್ಥ ಪ್ರಾಪ್ತಿಯಾದ ಹಾಗೆ ಭಾವಿಸುವನು ಎಂಬ ಅಭಿಪ್ರಾಯವು.

"ಯಾಃ ಕ್ರಿಯಾಸ್ಸಂಪ್ರಯುಕ್ತಾಸ್ಸ್ಯುರೇಕಾಂತ ಗತಬುದ್ಧಿಭಿಃ ।
ತಾಸ್ಸರ್ವಾಶ್ಶಿರಸಾದೇವಃ ಪ್ರತಿಗೃಹ್ಣಾತಿವೈಸ್ವಯಂ"॥

ಎಂಬ ಮೋಕ್ಷಧರ್ಮದಶ್ಲೋಕವು. ಈ ಅಭಿಪ್ರಾಯವನ್ನೇ ಸಮರ್ಥನಮಾಡುವದೆಂದು ಶ್ರೀಭಾಷ್ಯಕಾರರು ಉದಾಹರಿಸಿರುತ್ತಾರೆ. ಇದೂ ಅಲ್ಲದೆ ಈ ದಾಸತ್ವ ಸ್ವಾಮಿತ್ವ ಭಾವಗಳೂ, ಮತ್ತು ಚೇತನನು ಮಾಡುವ ಅಲ್ಪಕೈಂಕರ್ಯವು ಇಬ್ಬರಿಗೂ ಪರಮ ಪ್ರಯೋಜನವೆಂಬ ಭಾವಗಳೂ ಕೂಡ, ತದೀಯರಾದ ಭಾಗವತೋತ್ತಮರಾದವರ ವಿಷಯದಲ್ಲೂ ಕೂಡುತ್ತದೆಂಬುವದು ನಾರಾಯಣಾಯ ಎಂಬ ಪದದಿಂದಲೇ ಅರ್ಥಾತ್ ವ್ಯಕ್ತಪಡುತ್ತದೆಂದೂ ತಿಳಿಯತಕ್ಕದ್ದು.)

(ಮೇಲೆ ಹೇಳಿದ ಕಿಂಚಿತ್ಕೈಂಕರ್ಯವನ್ನೇ ಮಹತ್ತಾಗಿ ತನಗೆ ಪರಮೋಪಕಾರವಾಗಿ ಎಣಿಸಿ ಚೇತನನನ್ನು ರಕ್ಷಿಸಬೇಕೆಂಬ ನಿಯಮವೇನು, ಚೇತನನು ಹೇಗೆ ರಕ್ಷ್ಯ ವಸ್ತುವು, ತಾನು ಏಕೆ ರಕ್ಷಕನಾಗಬೇಕು ಎಂಬ ಶಂಕಾಗಳಿಗೆ ಸಮಾಧಾನವನ್ನು ಹೇಳಿ ನವವಿಧ ಸಂಬಂಧದಲ್ಲಿ ರಕ್ಷ್ಯ ರಕ್ಷಕ ಸಂಬಂಧವನ್ನು ಸಮರ್ಥನೆಮಾಡಿ ಹೇಳುತ್ತಾರೆ)

ಚೇತನರ ರಕ್ಷಣದಲ್ಲಿ ಈಶ್ವರನು ಸ್ವರೂಪ ಯೋಗ್ಯತೆಯನ್ನು ಹೊಂದಿದವನಾಗಿಯೂ ಶಕ್ತನಾಗಿಯೂ, ಹೀಗೆ ಸ್ವಾಮಿಗೆ ಅಧೀನವಾದ ಪ್ರವೃತ್ತಿಯನ್ನು ಬಿಟ್ಟರೆ ಚೇತನರಿಗೆ ರಕ್ಷಿಸಿಕೊಳ್ಳುವ ಸ್ವರೂಪಯೋಗ್ಯತೆಯೂ ಶಕ್ತಿಯೂ ಇಲ್ಲದೇ ಇರುವದಕ್ಕೂ ಸಹ

ಶೇಷಿತ್ವಮುಂ, ನಿರುಪಾಧಿಕ ನಿಯಂತೃತ್ವಮುಂ, ಇವರ್ಗಳುಡೈಯ ನಿರುಪಾಧಿಕ ಶೇಷತ್ವಮುಂ, ನಿರುಪಾಧಿಕನಿಯಾಮ್ಯತ್ವಮುಂ. ಉಡೈಯವ ನುಡೈಮೈಯೈ ರಕ್ಷಿಕ್ಕೈಯುಂ, ಸಮರ್ಥ್ಥ ಅಸಮರ್ಥ್ಥನೈ ರಕ್ಷಿಕ್ಕೈಯುಂ ಪ್ರಾಪ್ತಮಿರೆ.

ಕಾರಣವೇನೆಂದರೆ:—ಈಶ್ವರನು ನಿರುಪಾಧಿಕವಾದ ಶೇಷಿಯಾಗಿರುವದೂ, ನಿರುಪಾಧಿಕವಾದ ನಿಯನ್ತಾವಾಗಿರುವುದೂ, ಹಾಗೆಯೇ ಈ ಚೇತನನು ನಿರುಪಾಧಿಕಶೇಷನಾಗಿರುವದೂ, ನಿರುಪಾದಿಕ ನಿಯಾಮ್ಯನಾಗಿರುವದೂ ಈ ರಕ್ಷಕ ರಕ್ಷ್ಯ ಸಂಬಂಧಕ್ಕೆ ಮುಖ್ಯ ಕಾರಣವು. (ಅಂದರೆ ಸ್ವಾಮಿಯನ್ನು ಬಿಟ್ಟರೆ ಈ ಚೇತನನನಿಗೆ ಬೇರೆ ಶೇಷಿಯಿಲ್ಲವು. ಬೇರೆ ನಿಯಾಮಕನಿಲ್ಲವು. ಸ್ವಾಮಿಯು ನಿಯಾಮಕನಾಗಿ ಸರ್ವಶಕ್ತನಾಗಿರುವದರಿಂದ ಅವನನ್ನು ಬಿಟ್ಟರೆ ಬೇರೆ ಶೇಷಿಯಿಲ್ಲವು. ಬೇರೇ ನಿಯಾಮಕನಿಲ್ಲವು. ಸ್ವಾಮಿಯು ಸರ್ವನಿಯಾಮಕನಾಗಿ ಸರ್ವಶಕ್ತನಾಗಿರುವದರಿಂದ ಅವನನ್ನು ಬಿಟ್ಟರೆ ಬೇರೇ ರಕ್ಷಕನಿಲ್ಲವು. ಈ ಚೇತನನು ಪೂರಾ ಅಶಕ್ತನಾಗಿರವದರಿಂದ ಆತನನ್ನು ಬಿಟ್ಟರೆ ಸ್ವಾಮಿಗೆ ಬೇರೆ ಶೇಷನಾದವನಿಲ್ಲವು. ಬೇರೇ ನಿಯಾಮ್ಯ ಚೇತನ ನಿಲ್ಲವು. ಆದುದರಿಂದ ಬೇರೇ ರಕ್ಷ್ಯ ವಸ್ತುವಿಲ್ಲವೆಂಬಭಿಪ್ರಾಯವು. "**ತದಹಂ ತ್ವದೃತೇನ ನಾಥವಾನ್ ಮದೃತೇತ್ವಂ ದಯನೀಯವಾನ್ನಚ । ವಿಧಿ ನಿರ್ಮಿತ ಮೇತ ದನ್ವಯಂ ಭಗವನ್ ಪಾಲಯ ಮಾಸ್ಮಜೀಹಪಃ**" "ನನಗೆ ನಿನ್ನನ್ನು ಬಿಟ್ಟರೆ ರಕ್ಷಿಸಿತಕ್ಕ ಸ್ವಾಮಿಯಿಲ್ಲವು. ನಿನಗೆ ನನ್ನನ್ನು ಬಿಟ್ಟರೆ ದಯೆಗೆ ಪಾತ್ರನಾದ ರಕ್ಷ್ಯನು ಇಲ್ಲವು. ಹೀಗೆ ಏರ್ಪಟ್ಟಿರುವ ಸಂಬಂಧವನ್ನು ಓ ಷಾಡ್ಗುಣ್ಯ ಪರಿಪೂರ್ಣನೇ ಕಾಪಾಡು, ತ್ಯಜಿಸಬೇಡ" ವೆಂದು ಯಾಮುನೇಯರು ಈ ಅಭಿಪ್ರಾಯವನ್ನೇ ಹೇಳಿರುತ್ತಾರೆ. ಆದರೆ ಇಲ್ಲಿ "**ನಿರುಪಾಧಿಕ**" ಎಂಬ ಪದಕ್ಕೆ ಉಪಯೋಗಿಸಿದ್ದಾರೆಂದರೆ, ಚೇತನನಿಗೆ ಸೋಪಾಧಿಕರಾದ ಶೇಷಿಗಳು ನಿಯನ್ತಾವು

(1) ಆಳ. 51

ರಕ್ಷಿಕ್ಕುಂ ಪೋದು ಕರ್ಮವಶ್ಯರೈ ಯೊರು ಉಪಾಯತ್ತಿಲೇ ಮೂಟ್ಟಿ ರಕ್ಷಿಕ್ಕೈ ಈಶ್ವರನುಕ್ಕು ಸ್ವಸಙ್ಕಲ್ಪ ನಿಯತಂ.

ಸಹ ಉಂಟು. ಅವರುಗಳು ಯಾರೆಂದರೆ ಮಾತಾ, ಪಿತಾ, ಗುರು ಮುಂತಾದವರು. ಇವರುಗಳು ಇಂತಹ ಪರಮಪುರುಷಾರ್ಥಗಳನ್ನು ಕೊಡಲು ಮುಖ್ಯ ಸಿದ್ಧೋಪಾಯರೂ ಅಲ್ಲವು. ಮುಖ್ಯ ಸಿದ್ಧೋಪಾಯನು ಆ ಮಹಾನುಭಾವನೇ ಆದುದರಿಂದ ನಿರುಪಾಧಿಕ ಶಬ್ದವನ್ನು ಪಯೋಗಿನಿರುತ್ತಾರೆ. ಆದರೆ ಗುರುಗಳೂ ಪ್ರಪತ್ತ್ಯನುಷ್ಠಾನವೂ ಮುಖ್ಯವಲ್ಲವೋ ಎಂದರೆ ಅವು ವ್ಯಾಜ ಮಾತ್ರವೆಂದಭಿಪ್ರಾಯವು. ಇನ್ನೂ ಲೋಕ ದೃಷ್ಟಾಂತದಿಂದ ಸಮರ್ಥನಮಾಡಿ ಹೇಳುತ್ತಾರೆ.) ಪದಾರ್ಥಗಳ ಸ್ವಾಮಿಯಾದವನು ತನ್ನ ಪದಾರ್ಥವನ್ನು ರಕ್ಷಿಸಿಕೊಳ್ಳುವದೂ, ಸಮರ್ಥನಾದವನು ಅಸಮರ್ಥನನ್ನು ರಕ್ಷಿಸುವದೂ, ಸಹ ನ್ಯಾಯವಾದ ವಿಷಯವೇ. (ಸ್ವಾಮಿಯಾದರೋ ಸರ್ವಶಕ್ತನು, ಚೇತನನಾದರೋ ತುಂಬಾ ಅಶಕ್ತನು. ಯಾವಾಗ ಶಕ್ತನು ಅಶಕ್ತನನ್ನು ರಕ್ಷಿಸುವದು ನ್ಯಾಯವಾಯಿತೋ ಆಗ ಸ್ವಾಮಿಯೇ ರಕ್ಷಿಸಿಬಿಡುವನು, ಚೇತನನು ಪ್ರಯತ್ನಮಾಡುವದು ಅನಾವಶ್ಯಕ ತಾನೇ ಎಂಬ ಶಂಕಾ ಉಂಟಾಗಬಹುದು. ಹಾಗಲ್ಲವು. ತಾನೇ ಸಿದ್ಧೋಪಾಯನಾಗಿ ನಿಂತು, ಚೆತನನು ಸಾಧ್ಯೋಪಾಯವನ್ನವಲಂಬಿಸುವ ಹಾಗೆ ಮಾಡಿ ರಕ್ಷಿಸುವನು ಎಂದು ಮುಂದೆ ಹೇಳುತ್ತಾರೆ.)

ಈ ಚೇತನರನ್ನು ರಕ್ಷಿಸುವಾಗ, ಅವರು ಕರ್ಮವಶ್ಯರಾಗಿರುವದರಿಂದ ಅವರು ಒಂದು ಉಪಾಯಾನುಷ್ಠಾ ಮಾಡುವ ಹಾಗೆ ಮಾಡಿ ರಕ್ಷಿಸೋಣವು ಈಶ್ವರನಿಗೆ ತನ್ನ ಸಂಕಲ್ಪದಿಂದಲೇ ಏರ್ಪಟ್ಟದ್ದಾಗಿರುತ್ತದೆ. (ರಕ್ಷ್ಯ ರಕ್ಷಕ ಸಂಬನ್ಧವು ಯಾವಾಗ ನಿಯತವಾಯಿತೋ ಆವಾಗ ಸ್ವಾಮಿಯು ಸಿದ್ಧೋಪಾಯನಾಗಿ ರಕ್ಷಿಸುವದೇನೋ ಸತ್ಯವು. ಆದರೆ ಚೇತನರು ಕರ್ಮವಶ್ಯರಾದುದರಿಂದ ಕರ್ಮಗಳು ಪ್ರತಿಬಂಧಕಗಳಾಗಿರುವಲ್ಲಿ, ಅಂಥಾವನನ್ನೂ, ಕರ್ಮಗಳ

(1) ಸಂಕಲ್ಪ ಸೂರ್ಯೋದಯ. ೧. ೮೫.

ಪ್ರತಿಬಂಧವನ್ನು ಕಳದುಕ್ಕೊಂಡವನನ್ನೂ ಸಹ, ವಿವೇಕರಹಿತನಾಗಿ ಎಕ ಕಾಲದಲ್ಲೇ ರಕ್ಷಿಸಿದರೆ ವೈಷಮ್ಯನೈರ್ಘೃಣ್ಯಾದಿಗಳು ಏರ್ಪಡುತ್ತವೆ. ಆದುದರಿಂದ ಈಶ್ವರನು ತಾನು ರಕ್ಷಿಸುವಾಗ ಒಂದು ಸಾಧ್ಯೋಪಾಯವನ್ನವಲಂಬಿಸುವ ಹಾಗೆ ಮಾಡಿ ರಕ್ಷಿಸಿ ಬಿಡುವನು ಎಂಬ ತಾತ್ಪರ್ಯವು. ಶ್ರೀಮದಾಚಾರ್ಯವರು ಸಂಕಲ್ಪ ಸೂರ್ಯೋದಯದಲ್ಲೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. **"ಅಹಙ್ಕಾರ ಗ್ರಾಹಗ್ರಹ ಕದನ ಸಾಕ್ರನ್ದ ತನುಭೃನ್ಮುಮುಕ್ಷಾ ಸಂರಬ್ಧೋಮುರ ಮಥನ ಸಙ್ಕಲ್ಪಮಹಿಮಾ"** "ಇಂದ್ರಿಯಂಗಳಿಂದ ಕೂಡಿದ ದೇಹವೇ ಆತ್ಮಾ ಎಂಬ ಭ್ರಮೆಯೆಂಬ ಮೊಸಳೆಯಿಂದ ಹಿಡಿಯಲ್ಪಡೋಣದಿಂದುಂಟಾದ ಜಗಳದಿಂದ ಅಳುತ್ತಿರುವ ಚೇತನನನ್ನು ಬಿಡಿಸಬೇಕೆಂಬ ಉದ್ಯೋಗವುಳ್ಳ ಶ್ರೀಮನ್ನಾರಾಯಣನ ಸಙ್ಕಲ್ಪವು ತುಂಬಾ ಮಹತ್ತಾದುದು, ಎಂಬುದು ಈ ಶ್ಲೋಕ ತಾತ್ಪರ್ಯವು. ಹಾಗೆ ಸ್ವಾಮಿಯ ಸಂಕಲ್ಪವೇನೋ ಮಹತ್ತಾದುದು. ಒಂದು ವ್ಯಾಜ್ಯಮೂಲಕವಾಗಿಯೇ ರಕ್ಷಿಸುವನು ಎಂಬರ್ಥವು. ರಕ್ಷಿಸುವದು ಸ್ವಾಮಿಯ ಕೃಪಾಕಾರ್ಯವು. ಈ ಕೃಪಾಕಾರ್ಯವೇನು ಸಹೇತುಕವೇ ನಿರ್ಹೇತುಕವೇ ಎಂದರೆ, ಪ್ರತಿಯೊಬ್ಬ ಚೇತನನನ್ನು ರಕ್ಷಿಸುವಕಾಲದಲ್ಲಿ ಆ ದಯೆಯು ಸಹೇತುಕವೇ; ಹಾಗೆ ಪರಮ ಪುರುಷಾರ್ಥ ಪ್ರಾಪ್ತಿಗೆ ಒಂದು ಉಪಾಯವು ಅವಶ್ಯಕವು. ಅಂತಹ ಒಂದು ಉಪಾಯದಲ್ಲಿ "ಮೂಟ್ಟ" ರಕ್ಷಿಸುವೆನೆಂದು ಹೇಳಿರುತ್ತಾರೆ. ಇದು ಸಹೇತುಕವಾದ ದಯೆಯು. ಆ ದಯೆಯು ನಿರ್ಹೇತುಕವಾಗಿಯೂ ಇರಬಹುದು. ಹೇಗೆಂದರೆ, ಚೇತನರಿಗೆ ಸೃಷ್ಟಿಕಾಲದಲ್ಲಿ ಕರಣ ಕಳೇಬರಯೋಗವನ್ನುಂಟುಮಾಡುವುದೂ, ಶಾಸ್ತ್ರಗಳನ್ನುಂಟುಮಾಡಿರುವುದೂ, ಆ ಶಾಸ್ತ್ರಗಳನ್ನು ಬೋಧಿಸುವ ಸದ್ಗುರುಗಳನ್ನು ಒದಗಿಸಿಕೊಡುವುದೂ, ವಿಭವಾತಾರಗಳನ್ನೆತ್ತಿ ದುಷ್ಟರನ್ನು ಶಿಕ್ಷಿಸುವುದೂ, ಶಿಷ್ಟರನ್ನು ಪಾಲಿಸುವುದೂ, ಧರ್ಮಗಳನ್ನು ಬೋಧಿಸುವುದೂ, ಇವೇ ಮೊದಲಾದವುಗಳೆಲ್ಲಾ ನಿರ್ಹೇತುಕ ದಯೆಯ ಕಾರ್ಯವು.)

ನಿಲ್ಯೆತನ್ದ ಧಾರಕನಾಯ್ ನಿಯಮಿಕ್ಕು ಮಿರೈವನುಮಾ ಯ್। ಇಲದೊನ್ರೆ ನಾವಕ್ಕೆ ಯೆಲ್ಲಾನ್ತನದೇನು ಮನ್ದೆಯು ಮಾಯ್।

(ಮೇಲೆ ಹೇಳಿದ ಅಭಿಪ್ರಾಯಗಳನ್ನೇ ಒಂದು ಪಾಶುರದಿಂದ ಸಂಗ್ರಹಿಸಿ ಹೇಳುತ್ತಾರೆ.) **ನಿಲ್ಯೆ**—ಸ್ಥಿತಿಯನ್ನೂ (ಸ್ವರೂಪವಿಲ್ಲದೆ ಸ್ಥಿತಿಯಿರಲಾರದಾದುದರಿಂದ ಸ್ವರೂಪವೂ ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು.) **ತನ್ದ**—ಕೊಟ್ಟಂಥಾ, **ಧಾರಕನಾಯ್**—ಸರ್ವಕ್ಕೂ ಧಾರಕನಾಗಿ, **ನಿಯಮಿಕ್ಕುಂ**—ನಿಯಮಿಸುವ, **ಇರೈವನುಮಾಯ್**—ಸ್ವಾಮಿಯಾಗಿ, **ಒರುವನುವಾಯ್** ಎಂದು ಪಾಠಾಂತರವಾದರೆ, ನಿಯಮಿಸುವಸಾಮರ್ಥ್ಯಉಳ್ಳವನೊಬ್ಬನೇ ಯಾಗಿ ಎಂದರ್ಥವು. ಮತ್ಯಾರೂ ನಿರುಪಾಧಿಕ ನಿಯನ್ತಾವಾಗಿರಲು ಸಾಮರ್ಥ್ಯ ವಿಲ್ಲವೆಂಬ ಭಾವವು. **ಒನ್ರು**—ಇದೊಂದು ವಸ್ತುವು, **ಇಲದು**—ಸ್ವಾಮಿಗೆ ಶೇಷಭೂತವಾದುದಲ್ಲವು, **ಎನಾವಗ್ಯೆ**–ಎಂದು ಹೇಳದಹಾಗೆ, **ಎಲ್ಲಾಂ ತನದು**—ಎಲ್ಲಾ ಚರಾಚರವಸ್ತುಗಳೂ ತನಗೆ ಶೇಷಭೂತವಾಗಿ ತನ್ನದು, **ಎನುಂ**—ಎಂಬದಾಗಿ ಹೇಳಿಸಿಕೊಳ್ಳುವ, **ಎನ್ದೈಯುಮಾಯ್**—ನಮಗೆ ತಂದೆಯಾಗಿ ಸರ್ವಶೇಷಿಯಾಗಿರುವ, ಮತ್ತು **ತುಲ್ಯೆ**—ಸಾಮ್ಯವು, **ಒನ್ನು**—ಯಾವದೊಂದೂ, **ಇಲ್ಯೆ ಎನ**—ಇಲ್ಲವೆಂಬದಾಗಿ ಹೇಳುವಹಾಗೆ, **ನಿನ್ರ**—ಇರುತ್ತಿರುವ, (ಅಂದರೆ ಆ ಸರ್ವೇಶ್ವರನಿಗೆ ಯಾರೂ ಸಮನಿಲ್ಲವು ಎಂಬ ತಾತ್ಪರ್ಯವು. ಯಾವಾಗ ಸಮನಾದವನೇ ಇಲ್ಲವೋ ಆಗ ಅಧಿಕನಾದವನೂ ಇಲ್ಲವೆಂಬುದು ಕೈಮುತಿಕನ್ಯಾಯದಿಂದ ಸಿದ್ಧವು. ಆದುದರಿಂದ ಸ್ವಾಮಿಯು ನಿಸ್ಸಮಾಭ್ಯಧಿಕನು ಎಂಬ ಭಾವವು,) **ತುಳಾಯ್ ಮುಡಿಯರ್**—ತುಲಸೀ ಮಾಲೆಯನ್ನು ಶಿರಸ್ಸಿನಲ್ಲಿ ಅಂದರೆ ಕಿರೀಟದಲ್ಲಿ ಧರಿಸಿರುವ ಶ್ರೀಮನ್ನಾರಾಯಣನ, **ಉಡಂಬಾಯ್**–ಶರೀರವಾಗಿರುವ, **ನಾಮ್**-ನಾವುಗಳು, **ವಿಲ್ಯೆಯಿನ್ರಿ**—ಏನೊಂದೂ ಕ್ರಯವಿಲ್ಲದೆ ಅಂದರೆ ಸ್ವಾಭಾವಿಕವಾಗಿ ಅಥವಾ ನಿರುಪಾಧಿಕವಾಗಿ, **ಅಡಿಯೋಂ**—ಸ್ವಾಮಿಗೆ ದಾಸಭೂತರು, **ಎನ್ನುಂ**—ಎಂಬವದು, **ವೇದಿಯರ್**—

**ತ್ತು ಲ್ಲೈಯೊನ್ರಿಲ್ಲೈ ಯೆನ ನಿನ್ರ ತುಳಾಯ್ ಮುಡಿಯಾ
ನುಡಮ್ಬಾಯ್। ವಿಲ್ಲೈಯಿನ್ರಿ ನಾಮಡಿ ಯೋಮೆನ್ರ
ವೇದಿಯರ್ ಮೆಯ್ಪ್ಪರುಳೇ॥ ೧೦**

ವೇದಗಳನ್ನು ತಿಳಿದ ಭಾಗವತವರ್ಯರ, **ಮೆಯ್ಪೊರುಳೇ**—ಸತ್ಯೆವಾದ ಪರಮಾರ್ಥವೇ ಸರಿ.

ತಾತ್ಪರ್ಯ.—"**ಏತಸ್ಯವಾ ಅಕ್ಷರಸ್ಯ ಪ್ರಶಾಸನೆಗಾರ್ಗಿ ದ್ಯಾವಾ ಪೃಥಿವ್ಯೌ ಸೂರ್ಯಾ ಚಂದ್ರಮಸೌ ವಿಧೃತೌ ತಿಷ್ಠತಃ**" "ಓ ಗಾರ್ಗಿಯೇ, ಈ ನಾಶರಹಿತನಾದ ಅಚ್ಯುತನ ನಿಯಮನಾನುಸಾರ ಸ್ವರ್ಗ ಪೃಥಿವ್ಯಾದಿ ಲೋಕಗಳೂ ಸೂರ್ಯ ಚಂದ್ರರೂ ಸತ್ತೆ ಮೊದಲಾದವನ್ನು ಹೊಂದಿದವರಾಗಿ ಆ ನಿಯಮನಾನುಸಾರ ವ್ಯಾಪಾರಗಳನ್ನು ಹೊಂದಿದವರಾಗಿರುತ್ತಾರೆ."

**"ದ್ಯೌಸ್ಸಚಂದ್ರಾರ್ಕ ನಕ್ಷತ್ರಂ ಖಂದಿಶೋ, ಭೂರ್ಮಹೋದಧಿಃ।
ವಾಸುದೇವಸ್ಯ ವಿರ್ಯೇಣ ವಿಧೃತಾನಿಮಹಾತ್ಮನಃ॥**

ಸೂರ್ಯ ಚಂದ್ರ ನಕ್ಷತ್ರಗಳಿಂದ ಸೇರಿದ ಸ್ವರ್ಗಲೋಕವೂ, ಆಕಾಶವೂ, ದಿಕ್ಕುಗಳೂ, ಭೂಮಿಯೂ, ಸಮುದ್ರವೂ, ಮಹಾತ್ಮನಾದವಾಸುದೇವನ ವೀರ್ಯದಿಂದ ಸತ್ತೆಯನ್ನು ಹೊಂದಿವೆ, ಎಂಬಿವೇ ಮೊದಲಾದ ಪ್ರಮಾಣಗಳಿಂದ ಸಮಸ್ತ ಚೇತನಾಚೇತನರ ಸತ್ತಾಸ್ಥಿತಿಗಳೆಲ್ಲವೂ ಸ್ವಾಮಿಯ ಸಂಕಲ್ಪಮೂಲಕವಾಗಿರುವದರಿಂದ ಸ್ವಾಮಿಯು ಸರ್ವಕ್ಕೂ ಧಾರಕನು. ಆ ಕಾರಣದಿಂದ "**ನಿಲ್ಲೈತಂದ ಧಾರಕನಾಯ್**" ಎಂದು ಹೇಳಿರುತ್ತಾರೆ. ಹಾಗೆಯೇ ಸಮಸ್ತಕ್ಕೂ ತಾನು ನಿಯಾಮಕನಾಗಿ ಎಲ್ಲವೂ ನಿಯಾಮ್ಯವರ್ಗಕ್ಕೆ ಸೇರಿದುದಾಗಿರುವದರಿಂದ "**ನಿಯಮಿಕ್ಕು ಮಿರೈವನುಮಾಯ್**" ಎಂದು ಪ್ರಯೋಗಿಸಿರುತ್ತಾರೆ. "**ಅಂತಃಪ್ರವಿಷ್ಟಾ ಶಾಸ್ತಾ ಜನಾನಾಗ್ ಸರ್ವಾತ್ಮಾ**" ಅಂದರೆ "ಪರಮಾತ್ಮನು ಎಲ್ಲವನ್ನೂ ಅನುಪ್ರವೇಶಮಾಡಿ ಎಲ್ಲಾದಕ್ಕೂ ನಿಯಾಮಕನಾಗಿ ಸರ್ವಕ್ಕೂ ಆತ್ಮವಾಗಿದ್ದಾನೆ" ಎಂಬ ಮತ್ತೂ "**ಯಸ್ಸರ್ವಾಣಿ ಭೂತಾನ್ಯಂತರೋ ಯಮಯತಿ**" ಅಂದರೆ ಉದ್ದಾಲಕರು ತಮ್ಮ ಗುರುವಾದ ಯಾಜ್ಞವಲ್ಕ್ಯರನ್ನು ಕುರಿತು, ಯಾವನು ಸರ್ವಭೂತಗಳಿಗೂ ಅಂತ

ರ್ಯಾಮಿಯಾಗಿ ನಿಯಾಮಕನು ಎಂದು ಪ್ರಶ್ನಿಸಿದ್ದಕ್ಕೆ ಯಾಜ್ಞವಲ್ಕ್ಯರು ನಿನಗೆ ಆತ್ಮಾವಾಗಿರುವ ಪರಮಾತ್ಮನೇ ಸರ್ವಭೂತಗಳಿಗೂ ಅಂತರ್ಯಾಮಿಯಾಗಿ ನಿಯಾಮಕನೆಂದು ಉಪದೇಶಿಸಿದರು." ಎಂಬಿವೇ ಮೊದಲಾದ ಶ್ರುತಿಪ್ರಮಾಣಗಳಿರುತ್ತವೆ. ಆದುದರಿಂದಲೇ ಸ್ವಾಮಿ ಆಚಾರ್ಯರವರು ಶರಣಾಗತಿ ದೀಪಿಕೆಯಲ್ಲಿ "**ಆವಿಶ್ಯಧಾರಯಸಿ ವಿಶ್ವಮಮುಷ್ಯಯಂತಾ**" ಎಂದರೆ ಪರಮಾತ್ಮನು ಸರ್ವವಿಶ್ವವನ್ನೂ ಅನುಪ್ರವೇಶಮಾಡಿ, ಧಾರಕವಾಗಿಯೂ, ನಿಯನ್ತಾವಾಗಿಯೂ ಇದ್ದಾನೆಂದು ಹೇಳಿರುತ್ತಾರೆ. ನಾವುಗಳೂ ಕೂಡ ಕೆಲವು ಚೇತನಾ ಚೇತನರ ವಿಷಯದಲ್ಲಿ ಧಾರಕ ನಿಯನ್ತಾವಾಗಿರಬಹುದು. ಇದು **ಸೋಪಾಧಿಕ**ವಾಗಿ ಬಂದುದು. ಸ್ವಾಮಿಯೊಬ್ಬನೇ **ನಿರುಪಾಧಿಕ**ನಾದ ಧಾರಕನು, ಮತ್ತೂ ನಿಯನ್ತಾ ಎಂದು ಹೇಳುವದಕ್ಕಾಗಿ "**ಒರುಮನವಾಯ್**" ಎಂಬ ಪಾಠಾಂತರವಿರಬಹುದು. ಎಲ್ಲಾದಕ್ಕೂ ಧಾರಕ ನಿಯನ್ತಾವಾಗಿರೋಣವೂ, ಎಲ್ಲಾ ಚೇತನಾಚೇತನರ ಸ್ವರೂಪಸ್ಥಿತಿ ಪ್ರವೃತ್ತಿಗಳೂ ಶ್ರೀಮನ್ನಾರಾಯಣನ ಸಙ್ಕಲ್ಪಾಧೀನವೆಂದು ಏರ್ಪಟ್ಟಿತೋ, ಆಗ ಜಗತ್ತಿನ ಸೃಷ್ಟಿಯು ಬ್ರಹ್ಮನಿಂದಲೂ, ಸ್ಥಿತಿವಿಷ್ಣುವಿನಿಂದಲೂ, ಲಯರುದ್ರನಿಂದಲೂ ಎಂದು ಹೇಳಿ ಆ ತ್ರಿಮೂರ್ತಿಗಳೊ ಸಮವೆಂಬುವ ಅಪಸಿದ್ಧಾಂತವು ಇದರಿಂದ ನಿರಾಕರಿಸಲ್ಪಟ್ಟಿತು. ಆದುದರಿಂದಲೇ "**ಇಲದೊನ್ರಿಲಾವಕ್ಕೈ**"ಎಂದು ಪ್ರಯೋಗಿಸಿರುತ್ತಾರೆ.

(1) "**ನತ್ವತ್ಸಮೋಸ್ತ್ಯಭ್ಯಧಿಕಃ ಕುತೋನ್ಯಃ**" ಆದುದರಿಂದ ಆತನಿಗೆ ಯಾರೂ ಸಮರಿಲ್ಲವು, ಅಧಿಕರೂ ಇಲ್ಲವೆಂದು ಹೇಳತಕ್ಕದ್ದೇನಿದೆ ಎಂದಭಿಪ್ರಾಯವು. "ಎಲ್ಲಾಂತನದು" ಎಂಬುವದರಿಂದ ಸಮಸ್ತ ಚೇತನಾಚೇತನಗಳಿಗೂ ಸ್ವಾಮಿಯು ಶೇಷಿಯು. ಲಕ್ಷ್ಮಿಗೂ ಶೇಷಿಯೋ ಅಂದರೆ ಅಂತಹ ಸಮಸ್ತ ಚೇತನಾಚೇತನಗಳಿಗೂ ಈಶ್ವರೀ ಎಂದೆನಿಸಿದ ಮಹಾಲಕ್ಷ್ಮಿಗೂ ಶೇಷಿಯು. ಈ ಸರ್ವ ಜಗತ್ತಿಗೆಲ್ಲಾ ಲಕ್ಷ್ಮೀನಾರಾಯಣರಿಬ್ಬರೂ ಈಶ್ವರೀ ಮತ್ತು ಈಶ್ವರರು. ಹಾಗೆ ಇಬ್ಬರೂ ಈಶ್ವರರಾಗಿರಬಹುದೋ ಎಂದರೆ ನಿರುಪಾಧಿಕವಾದ ಪರ

(1) ಗೀ. 11. 43.

ಸ್ಪರ ಸಮರಸಭಾವ (ಐಕಮತ್ಯ) ವಿರುವಲ್ಲಿ ಇಬ್ಬರು ಈಶ್ವರಾಗು ವದರಿಂದ ಏನೊಂದೂ ತೊಂದರೆಯಿಲ್ಲವು. ಅನೇಕ ಸಂಘಗಳ ಜನ ರಲ್ಲೇ ಉತ್ತಮ ಐಕಮತ್ಯವಿರುವಾಗ ಲೋಕದಂಪತಿಗಳಲ್ಲಿ ದಾಂ ಪತ್ಯಾನುರಾಗವು ಅಮೋಘವಾಗಿದೆ ಎಂದು ತಿಳಿಯಲು ಏನೊಂದೂ ತೊಂದರೆ ಇರುವದಿಲ್ಲವು. (1) "**ಪತಿಂ ವಿಶ್ವಸ್ಯ**" ಎಂಬ ಶ್ರುತ್ಯನು ಸಾರವಾಗಿಯೂ, (2) "**ಮಚ್ಛೇಷಭೂತಾ ಸರ್ವೇಷಾ ಮೀಶ್ವರೀ ವಲ್ಲಭಾಮಮ। ತಸ್ಯಾಶ್ಚ ಜಗತಶ್ಚಾಹ ಮೀಶ್ವರೋ ಲೋಕವಿ ಶ್ರುತಃ**" ಅಂದರೆ "ನನಗೆ ಶೇಷಭೂತಳಾಗಿಯೂ, ಎಲ್ಲಾದಕ್ಕೂ ಈಶ್ವರೀ ಎನ್ನಿಸಿಕೊಂಡು ನನ್ನ ಪ್ರಿಯಪತ್ನಿಯಾದ ಲಕ್ಷ್ಮಿಯು ಇದ್ದಾಳೆ. ಅವಳಿಗೂ ಮತ್ತು ಸರ್ವಜಗತ್ತುಗಳಿಗೂ ಕೂಡ ನಾನು ಈಶ್ವರನೆಂಬುವದು ಲೋಕಪ್ರಸಿದ್ಧವಾದುದು" ಎಂಬ ವಾಕ್ಯಾನುಸಾ ರವಾಗಿಯೂ, ಸ್ವಾಮಿಗೆ ಸ್ವಾಮಿತ್ವವೂ ನಮ್ಮಗಳಿಗೆಲ್ಲಾ ನಿರುಪಾಧಿಕ ದಾಸತ್ವವೂ ಉಂಟು. ಅದರಿಂದಲೇ ಸ್ವಾಮಿಯು ರಕ್ಷಕನು ನಾವು ರಕ್ಷ್ಯರು ಎಂಬ ಸಂಬಂಧವು ಏರ್ಪಟ್ಟರುತ್ತದೆ ಎಂದು "**ಅಡಿಯೋಂ**" ಎಂಬುವದರಿಂದ ಹೇಳಿರುತ್ತಾರೆ.

"**ತುಳೈಯೊನ್ರಿಲ್ಮೈಯೆನ ನಿನ್ರ ತುಳಾಯ್ ಮುಡಿಯೂನುಡ ಮ್ಬಾಯ್**" ಎಂದು ಹೇಳಿರುವದರಿಂದ ಸ್ವಾಮಿಯು ತುಳಸೀಮಾಲಾ ಯುಕ್ತವಾದ ಕಿರೀಟವನ್ನು ಧರಿಸಿರುವುದು, ಆತನ ದಿವ್ಯಮಂಗಳ ವಿಗ್ರಹಯುಕ್ತತೆಯನ್ನೂ, ಆತನಿಗೆ ಸರ್ವವೂ ಶರೀರವಾಗಿ, ಆತನು ಎಲ್ಲಾದಕ್ಕೂ ಆತ್ಮವಾಗಿ ಆಧೇಯತ್ವ ಮೊದಲಾದವುಗಳಿಂದ ಸ್ವಾಮಿಯು ಸರ್ವೇಶ್ವರತ್ವವನ್ನೂ, ಸೂಚಿಸುತ್ತದೆ. ಹಾಗೆ ನಮಗೂ ಸರ್ವೇಶ್ವರನಾ ದುದರಿಂದ "**ವಿಲ್ಮೈಯಿನ್ರಿನಾಮುಡಿಯೋಂ**" ಎಂಬುವದರಿಂದ, ನಾವೆಲ್ಲಾ ಸ್ವಾಮಿಗೆ ನಿರುಪಾಧಿಕ ದಾಸಭೂತರೆಂದು, "**ದಾಸಭೂತಾಸ್ಸ್ವತಸ್ಸರ್ವೆ**" ಎಂಬ ಪ್ರಮಾಣ ತಾತ್ಪರ್ಯವನ್ನು ತೋರಿಸಿರು ತ್ತಾರೆ. ಈ ಅಭಿಪ್ರಾಯವನ್ನೇ ಮುಖ್ಯವಾಗಿ ಮಹಾ ಭಾಗವತೋ ತ್ತಮರಾದ ನಮ್ಮ ಆಚಾರ್ಯರು ಪರಮಾರ್ಥವಾಗಿ ಗ್ರಹಿಸಿದರೆಂದು

(1) ಪುರುಷಸೂಕ್ತ. (2) ವಿಷ್ವಕ್ಸೇನ ಸಂಹಿತೆ.

ಯದ್ಯೇತಂ ಯತಿಸಾರ್ವಭೌಮ ಕಥಿತಂ ವಿದ್ಯಾದ ವಿದ್ಯಾತಮಃ। ಪ್ಪಸತ್ಯೂಷಂ ಪ್ರತಿತನ್ತ್ರ ಮನ್ತ್ರಿಮ ಯುಗೇ ಕಶ್ಚಿದ್ವಿಪಶ್ಚಿತ್ತಮಃ।

ತಿಳಿಸುವದಕ್ಕಾಗಿ **"ವೇದಿಯರ್ ಮೆಯ್ ಪ್ಪೊರುಳೇ"** ಎಂದು ಪ್ರಯೋಗಿಸಿರುತ್ತಾರೆ. ಇಲ್ಲಿ **"ವೇದಿಯರ್"** ಎಂದುಪಯೋಗಿಸಿರುವದರಿಂದ ಆ ಮಹಾನುಭಾವರೆಂತವರೆಂದರೆ, **"ಮಿಕ್ಕ ವೇದಿಯರ್ ವೇದಿತ್ತಿನುಳ್ ಪೊರುಳ್ ನಿರ್ಕಪ್ಪಾಡಿ ಎನ್ನೆಞ್ಜಿಲ್‌ನಿರಿತ್ತಿನಾ᳚"** ಎಂದು ಹೇಳಿರುವಹಾಗೆ ವೇದದ ಯಥಾರ್ಥವಾದ ಸೂಕ್ಷ್ಮಾರ್ಥಗಳನ್ನುಗ್ರಹಿಸಿ ನಮ್ಮ ಮನಸ್ಸಿನಲ್ಲಿ ದೃಢವಾಗಿ ನಿಲ್ಲುವಹಾಗೆ ಮಾಡಿದವರು. ವೇದವಾಕ್ಯಗಳಿಗೂ ಮತ್ತು ಇತರವಾದ ಸ್ಮೃತಿ ಇತಿಹಾಸಾದಿ ವಾಕ್ಯಗಳಿಗೂ ಪರಸ್ಪರ ವಿರುದ್ಧವಿಲ್ಲದೆ ಸಮಂಜಸವಾದ ಅರ್ಥಗಳನ್ನು ಹೇಳಿದವರು; ವೇದಗಳಿಗೆ ಇತರ ಅಪಸಿದ್ಧಾಂತಿಗಳು ಹೇಳಿದಹಾಗೆ ಲಾಕ್ಷಣಿಕಾರ್ಥಗಳನ್ನು ಹೇಳದೆ ಮುಖ್ಯಾರ್ಥವನ್ನೇ ಹೇಳಿದವರು. ಆದುದರಿಂದ ಅಂತಹ ಭಾಗವತೋತ್ತಮರ ಅಭಿಪ್ರಾಯಗಳೇ ಯಥಾರ್ಥವಾದ ಶಾಸ್ತ್ರವೆಂಬದಾಗಿ "ವೇದಿಯರ್ ಮೆಯ್ ಪೊರುಳೇ" ಎಂದು ಹೇಳಿರುತ್ತಾರೆ.

ಅವತಾರಿಕೆಯು:—ಹಿಂದಿನ ಪಾಶುರದಲ್ಲಿ ಜಗತ್ತಿಗೂ ಈಶ್ವರನಿಗೂ ಹೇಳುವ ಶರೀರಾತ್ಮಭಾವರೂಪವಾದ ಈ ನಮ್ಮ ಪ್ರತಿತನ್ತ್ರವು ತುಂಬಾ ಪ್ರಯೋಜನವುಳ್ಳದುದಾಗಿ ಹೇಳಿದರು ಹೇಗೆಂದರೆ:—

೧. ಶ್ರುತಿಗಳಲ್ಲಿ ಕೆಲವು ವೇದಾನ್ತವಾಕ್ಯಗಳುಮಾತ್ರ ಮುಖ್ಯವಾದವು, ಕೆಲವಲ್ಲವೆಂದು, ಇತರರು ಹೇಳುವಹಾಗೆ ಹೇಳದೆ, ಎಲ್ಲವೂ ಮುಖ್ಯವಾದವು; ಅವುಗಳಿಗೆ ಬಾಧ್ಯಬಾಧಕಭಾವವಿಲ್ಲೆಂದು ಸ್ಥಾಪಿಸಿ, ಈ ಶ್ರುತಿಗಳಿಗೂ, ಸ್ಮೃತಿ ಇತಿಹಾಸ ಪುರಾಣಗಳಿಗೂ, ಪರಸ್ಪರ ವಿರೋಧವಿಲ್ಲವೆಂಬದಾಗಿ ಸ್ಥಾಪಿಸಲ್ಪಟ್ಟಿತು.

೨. ಶ್ರುತಿಗಳಲ್ಲಿ ಕೆಲವುಕಡೆ ಮುಖ್ಯಾರ್ಥವನ್ನು ಹೇಳಿ, ಇನ್ನು ಕೆಲವುಕಡೆಯಲ್ಲಿ ಮುಖ್ಯವಾಗಿ ಭೇದವನ್ನು ಪ್ರತಿಪಾದಿಸುವ

**ತತ್ರೈಕತ್ರ ಝುಟಿತ್ಯುಪೈತಿ ವಿಲಯಂ ತತ್ತನ್ಮತಸ್ಥಾಪನಾ ।
ಹೈವಾಕ ಪ್ರಥಮಾನ ಹೈತುಕ ಕಥಾ ಕಲ್ಲೋಲ ಕೋಲಾ
ಹಲಃ ॥ ೧೧ ॥**

ಸ್ಥಳಗಳಲ್ಲಿ ಲಾಕ್ಷಣಿಕಾರ್ಥವನ್ನು ಇತರರು ಹೇಳಿದಹಾಗೆ ಹೇಳದೆ ಎಲ್ಲಾ ಕಡೆಯಲ್ಲೂ ಸರ್ವ ಸಮಞ್ಜಸವಾದ ಮುಖ್ಯಾರ್ಥವೇ ಸರಿ ಎಂದು ನಮ್ಮ ಪ್ರತಿತನ್ತ್ರದಿಂದ ಸ್ಥಾಪಿಸಲ್ಪಟ್ಟಿತು.

ಈ ಶ್ಲೋಕದಿಂದಲಾದರೋ ಈ ಪ್ರತಿತನ್ತ್ರಕ್ಕೆ ಒಳ್ಳೇ ಅಸ್ತಿಭಾರ ದೊರತಿದುದು ಶ್ರೀಯತಿವರ್ಯರ ದಿವ್ಯಸೂಕ್ತಿಯಾದ ಶ್ರೀಭಾಷ್ಯದಿಂದ ಎಂದು ಹೇಳಿ, ಅಷ್ಟು ನಿಪುಣತರವಾಗಿ ಈ ಪ್ರತಿತನ್ತ್ರವು ಅಲ್ಲಿ ಶ್ರೀ ಯತಿವರ್ಯರ ದಿವ್ಯ ಫಣಿತಿಯಿಂದ ಉದ್ಘೋಷಿಸಲ್ಪಟ್ಟಿರುವದರಿಂದ, ಇನ್ನೊಂದು ಹೆಚ್ಚು ಪ್ರಯೋಜನ ಉಂಟಾಯಿತು. ಅದೇನೆಂದರೆ ಇತರ ಅಪಸಿದ್ಧಾನ್ತಗಳು ವಾದರೂಪದಲ್ಲಿ ತಲೆ ಎತ್ತದಂತಾಯಿತೆಂದು ತಿಳಿಸುತ್ತಾರೆ:—

ಅರ್ಥ.—**ಏತಂ** - ಈ, ಎಂದರೆ, ಚೇತನಾಚೇತನ ರೂಪವಾದ ಜಗತ್ತಿಗೂ ಈಶ್ವರನಿಗೂ ಇರುವ ಶರೀರಾತ್ಮ ಭಾವವನ್ನು ಬೋಧಿಸುವ, **ಯತಿಸಾರ್ವಭೌಮ ಕಥಿತಂ** - ಯತಿಗಳಲ್ಲೆಲ್ಲಾ ಶ್ರೇಷ್ಠರಾಗಿರುವ ಶ್ರೀ ಭಾಷ್ಯಕಾರರಿಂದ ಹೇಳಲ್ಪಟ್ಟ, **ಅವಿದ್ಯಾತಮಃಪ್ರತ್ಯೂಷಂ** - ಅಜ್ಞಾನ, ಅನ್ಯಥಾಜ್ಞಾನ, ವಿಪರೀತ ಜ್ಞಾನಗಳೆಂಬ ಅಂಧಕಾರಕ್ಕೆ ಉಷಃಕಾಲರೂಪವಾದ, ಎಂದರೆ ಬೆಳಕು ಹರದರೆ ಕತ್ತಲು ಹೇಗೆ ಸರಿಯುತ್ತದೋ ಹಾಗೆ ಅಜ್ಞಾನವನ್ನು ಹೋಗಲಾಡಿಸುವಂಥಾದ್ದು ಎಂಬ ತಾತ್ಪರ್ಯವು. **ಪ್ರತಿತನ್ತ್ರಂ** - ಈ ಅಧಿಕಾರದಲ್ಲಿ ವಿಶದೀಕರಿಸಲ್ಪಟ್ಟ ಪ್ರತಿತನ್ತ್ರವನ್ನು, **ಅಂತಿಮಯುಗೆ** - ಕೊನೇ ಯುಗವಾದ ವೇದಬಾಹ್ಯ ಕುದೃಷ್ಟಿಗಳ ಅಪಸಿದ್ಧಾನ್ತಭೂಯಿಷ್ಠವಾದ ಕಲಿಯುಗದಲ್ಲಿ, **ವಿಪಶ್ಚಿತ್ತಮಃ** - ಈ ಸರ್ವವೂ ವಿವಿಧವಾಗಿ ಸ್ವಾಮಿ ಶರೀರವಾಗಿ ತಿಳಿದ ಚಿತ್ತವೃತ್ತಿಯುಳ್ಳ ಮಹಾಪಂಡಿತನಾದ, **ಕಶ್ಚಿತ್**- ಯಾವನಾದರೂ ಒಬ್ಬನು, **ವಿದ್ಯಾದ್ಯದಿ** - ಅರಿತಿದ್ದೇಯಾದರೆ, **ತತ್ರ ಏಕತ್ರ** - ಆ ಅವನೊಬ್ಬನಲ್ಲೇ, **ತತ್ತನ್ಮತ ಸ್ಥಾಪನಾ ಹೇವಾಕ**

ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತನ್ತ್ರ ಸ್ವತನ್ತ್ರಸ್ಯ
ಶ್ರೀಮದ್ವೇಙ್ಕಟನಾಥಸ್ಯ ಶ್ರೀವೇದಾಂತಾಚಾರ್ಯಸ್ಯ ಕೃತಿಷು
ಶ್ರೀಮದ್ರಹಸ್ಯತ್ರಯಸಾರೇ ಪ್ರಧಾನ ಪ್ರತಿತನ್ತ್ರಾಧಿಕಾರಃ ಸ್ತ್ರಯೋದಶಃ
॥ ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ ॥

ಪ್ರಥಮಾನ ಹೈತುಕ ಕಥಾ ಕಲ್ಲೋಲ ಕೋಲಾಹಲಃ, ತತ್ತನ್ಮತ - ಆಯಾ ಬಾಹ್ಯಕುದೃಷ್ಟಿಗಳು, ತಮ್ಮ ತಮ್ಮ ಮತಗಳ, **ಸ್ಥಾಪನಾ** - ಸ್ಥಾಪನೆಯ, **ಹೇವಾಕ** - ಕೌತೂಹಲದಿಂದ, **ಪ್ರಥಮಾನ** - ಆಧಿಕ್ಯಹೊಂದಿದ, ಇದು ಕೋಲಾಹಲ ಶಬ್ದಕ್ಕೆ ವಿಶೇಷಣವು, **ಹೈತುಕ** - ವಾದಿಗಳ, **ಕಥಾ** - ಪ್ರಸಂಗದ ಎಂದರೆ ವಾಗಾಡಂಬರದ; **ಕಲ್ಲೋಲ** - ತರಂಗಗಳ, **ಕೋಲಾಹಲಃ** - ಕಲಕಲ ಧ್ವನಿಯು, **ಝಟಿತಿ** - ಶೀಘ್ರದಲ್ಲಿ, **ವಿಲಯಂ** - ನಾಶವನ್ನು, **ಉಪೈತಿ** - ಹೊಂದುತ್ತದೆ.

ತಾತ್ಪರ್ಯವು:—ಈ ಸಮಸ್ತ ಚಿದಚಿದ್ರೂಪವಾದ ಸಮಸ್ತ ಜಗತ್ತಿಗೂ ಈಶ್ವರನಿಗೂ ಶರೀರಾತ್ಮಭಾವವನ್ನು ಬೋಧಿಸುವ ಪ್ರತಿತನ್ತ್ರವು, **ಯತಿಸಾರ್ವಭೌಮಕಥಿತಂ,** ಯತಿರಾಜರವರಿಂದ ಉಪಪಾದಿಸಲ್ಪಟ್ಟದುದು. ಅಂತಹಸಿದ್ಧಾನ್ತದ ಸ್ವಾರಸ್ಯವನ್ನು ಯಥಾವತ್ತಾಗಿ ಗ್ರಹಿಸಿದ ಮಹನೀಯರಾದ ಪಂಡಿತಶ್ರೇಷ್ಠರಲ್ಲೊಬ್ಬರಾದರೂ ಸಾಕು. ಅಂತಹ ಮಹಾನುಭಾವರು ಸಕಲ ಇತರ ಅಪಸಿದ್ಧಾನ್ತಿಮತಪ್ರಕ್ರಿಯೆಗಳನ್ನೆಲ್ಲಾ ನಿರಾಕರಿಸಲು ಸಾಮರ್ಥ್ಯವುಳ್ಳವರಾಗುತ್ತಾರೆಂಬದಾಗಿಯೂ, ಈ ಪ್ರತಿತನ್ತ್ರವು, ಸರ್ವ ಶ್ರುತಿಗಳೂ ಎಂದರೆ, ಅದ್ವೈತ ಪ್ರತಿಪಾದಕಭೇದ ಪ್ರತಿಪಾದಕ ಘಟಕ ಶ್ರುತಿಗಳೆಲ್ಲವೂ, ಇತರ ಅಪಸಿದ್ಧಾನ್ತಿಗಳು ಹೇಳುವ ಹಾಗೆ ಪರಸ್ಪರ ವಿರೋಧವಾದವುಗಳೆಂದು ಹೇಳದೆ ಸರ್ವ ಸಮಂಜಸವಾದುವುಗಳೆಂದು ಹೇಳುವದರಿಂದ ಅಂತಹ ಮಹಾನುಭಾವರ ಎದುರಿಗೆ ವಾದಕ್ಕೆ ಇತರ ಸಿದ್ಧಾನ್ತಿಗಳ್ಯಾರೂ ನಿಲ್ಲಲಾರರೆಂದೂ, ಮತ್ತೂ ಆ ಅಪಸಿದ್ಧಾನ್ತಿಗಳ ಕೋಲಾಹಲ ಧ್ವನಿಯು ಶೀಘ್ರವಾಗಿ ಉಪಶಾನ್ತತೆಯನ್ನು ಹೊಂದುತ್ತದೆಂದು ಹೇಳಿ ಅಧಿಕಾರ ಪರಿಸಮಾಪ್ತಿಯನ್ನು ಮಾಡಿರುತ್ತಾರೆ.

ಈ ಸರ್ವಚಿದಚಿತ್ತುಗಳೂ ಸ್ವಾಮಿಗೆಶರೀರವು ಸ್ವಾಮಿಯೇ ಇವೆಲ್ಲಕ್ಕೂ ಆತ್ಮಾ ಎಂಬ ಭಾವವನ್ನು ಶ್ರೀಯತಿವರ್ಯರು, "ಅವಸ್ಥಿತೇರಿತಿಕಾಶಕೃತ್ಸ್ನಃ" (1-4-22) ಎಂಬ ವ್ಯಾಸಸೂತ್ರದ ಉಪಬ್ರಹ್ಮಣದಲ್ಲಿ ಬಹು ಚನ್ನಾಗಿ ಶ್ರುತಿ ಪ್ರಮಾಣಗಳಮೂಲಕ ಸ್ಥಾಪಿಸಿರುತ್ತಾರೆ. ಈ ಶರೀರ ಶರೀರಿ ಭಾವವು ಹೇಗೆ ಕೂಡುತ್ತದೆಂದರೆ ನಮ್ಮ ಶರೀರ, ಶರೀರಿಯಾದ ಆತ್ಮಾ, ಇವುಗಳಿಗಿರುವ ಸಂಬನ್ಧ ದೃಷ್ಟಾನ್ತವೇ ಅಲ್ಲಿಯೂ ಸರಿಹೋಗುತ್ತದೆಂದು "ನತುದೃಷ್ಟಾನ್ತಾಭಾವತ್" (2-1-18) ಎಂಬ ಸೂತ್ರದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. ಆದುದರಿಂದಲೇ **ಯತಿಸಾರ್ವಭೌಮಕಥಿತಂ** ಎಂಬ ಪ್ರಯೋಗವು.

ಇಂತಹ ಅಮೋಘಾಭಿಪ್ರಾಯವನ್ನು ಹೀಗೆ ನಿಪುಣತರವಾಗಿ ಉಪಪಾದಿಸಿದ ಮಾತ್ರದಿಂದಲೇ ಇವರು **ಯತಿಸಾರ್ವಭೌಮರಲ್ಲವು.** ಯತಿಧರ್ಮವು ಎಂಥಾದ್ದು, ಅದರ ಸ್ವರೂಪವೆಂಥಾದ್ದು, ಇತಿಕರ್ತವ್ಯಗಳೇನು ಎಂದು ಪರಿಶೀಲಸಿ, ಇತರ ಸಿದ್ಧಾನ್ತಿಗಳಾದ ಏಕದಂಡಿ ಸನ್ಯಾಸಿಗಳು ಬ್ರಾಹ್ಮಣ ಚಿನ್ಹೆಗಳಾದ ಯಜ್ಞೋಪವೀತ, ಶಿಖೆ, ಊರ್ಧ್ವಪುಂಡ್ರಾದಿಗಳನ್ನು ತ್ಯಜಿಸಿರುವದು ಯುಕ್ತಾಯುಕ್ತವೇ ಎಂದು ವಿಚಾರ ಮಾಡಿ, ತಮ್ಮ ಗುರುಗಳಾದ ಯಾದವ ಪ್ರಕಾಶರು ಇವುಗಳನ್ನು ತ್ಯಜಿಸಿರುವದು ಸರಿಯಲ್ಲವೆಂದು ತೋರಿಸಲು ತಮ್ಮ ಪರಮ ಶಿಷ್ಯರಾದ ಕೂರತ್ತಾಳ್ವಾರ್ ಎಂಬುವರನ್ನು ಕಳುಹಿಸಿ, ಅವರ ಮೂಲಕ ಆಯಾದವ ಪ್ರಕಾಶರನ್ನು ಗೆದ್ದು, ಅವರನ್ನು ವಿಶಿಷ್ಟಾದ್ವೈತಸಿದ್ಧಾನ್ತಿಯನ್ನಾಗಿ ಮಾಡಿ, ಅವರು ಪಂಚಸಂಸ್ಕಾರಾದಿಗಳ ಮೂಲಕ ಯಜ್ಞೋಪವೀತ, ಶಿಖೆ, ಊರ್ಧ್ವಪುಂಡ್ರ, ತ್ರಿದಣ್ಡಾದಿಗಳನ್ನು ಸ್ವೀಕರಿಸುವ ಹಾಗೆ ಮಾಡಿ, ಗೋವಿಂದಭಟ್ಟರೆಂಬ ನಾಮವನ್ನು ಧರಿಸುವಹಾಗೆ ಹೇಳಿ, ವಾದದಲ್ಲಿ ಅವರು ಪ್ರಮಾಣಗಳ ಮೂಲಕ ಗ್ರಹಿಸಿದ ಯತಿಧರ್ಮಗಳನ್ನೆಲ್ಲಾ ಪ್ರಕಟನಮಾಡುವದಕ್ಕಾಗಿ **ಯತಿಧರ್ಮಸಮುಚ್ಚಯ** ವೆಂಬ ಗ್ರಂಥವನ್ನು ರಚಿಸುವಹಾಗೆ ಶ್ರೀ ಭಾಷ್ಯಾಕಾರರು ಆಜ್ಞಾಪಿಸಿದುದರಿಂದ ಇವರಿಗೆ **ಯತಿಸಾರ್ವಭೌಮ** ರೆಂಬ ನಾಮವು ಸರಿ

ಯಾಗಿ ಸಾರ್ಥಕ್ಯವಾದುದೇ ವಿನಾ ಬರೀ ಗೌರವಕ್ಕಾಗಿ ಪ್ರಯೋಗಿಸಿದುದಲ್ಲವು.

ಈ ಪ್ರತಿತನ್ತ್ರವು ಇನ್ನೂ ಎಂಥಾದ್ದೆಂದರೆ **ಅವಿದ್ಯಾತಮಃ ಪ್ರತ್ಯೂಷರೂಪವಾದುದು,** ಅಜ್ಞಾನವೆಂಬ ಅಂಧಕಾರಕ್ಕೆ ಉಷಃಕಾಲ ರೂಪವಾದುದು. ಈ ಅವಿದ್ಯೆಯು ಜೀವಾತ್ಮನಿಗೆ (1) **ಸೋಪರಾಧಸ್ಸ್ವದೋಷಜಃ** ಎಂದು ಹೇಳಿರುವ ಹಾಗೆದುಷ್ಕರ್ಮದಿಂದ ಪ್ರಾಪ್ತವಾದುದಾಗಿ (2) **"ಅನಾತ್ಮನ್ಯಾತ್ಮ ಬುದ್ಧಿರ್ಯಾ ಅಸ್ವೇಸ್ವಮಿತಿಯಾಮತಿಃ"**ಎಂದು ಹೇಳಿರುವ ಹಾಗೆ (1) ಆತ್ಮವಲ್ಲದ ದೇಹದಲ್ಲಿ ಆತ್ಮವೆಂಬಬುದ್ಧಿಯನ್ನೂ (2) ತನ್ನದಲ್ಲದೇ ಇರುವ ಆತ್ಮನಲ್ಲಿ ತನ್ನದೆಂಬಬುದ್ಧಿಯನ್ನೊ ಎಂದರೆ ಪರತನ್ತ್ರನಾಗಿರುವಾಗ ಸ್ವತನ್ತ್ರನೆಂಬ ಬುದ್ಧಿಯನ್ನೂ (3) ಪರಮಾತ್ಮನಿಗೆ ದಾಸನಾದ ತಾನು, ಪರಮಾತ್ಮನೇ ಎಂಬ ಬುದ್ಧಿಯನ್ನೂ ಉಂಟುಮಾಡುತ್ತದೆ. ಈ ಮೂರು ಭ್ರಮೆಗಳೂ ಈ ಪ್ರತಿತನ್ತ್ರದಿಂದ ದೂರೀಕೃತವಾಗುವದರಿಂದ **ಅವಿದ್ಯಾತಮಃ ಪ್ರತ್ಯೂಷ** ವೆಂದು ಪ್ರಯೋಗಿಸಿರುತ್ತಾರೆ. ಇನ್ನೂ ಈಶ್ವರನೇ ಇಲ್ಲವೆಂದೂ, ಜಗತ್ತೆಲ್ಲಾ ಮಿಥ್ಯೆ ಎಂದೂ, ಇವೇ ಮೊದಲಾದ ವಾದಗಳ ಭ್ರಮೆಯೂ ತೊಲಗುತ್ತದೆಂಬಭಾವವು. ಇಂತಹ ಪ್ರತಿತನ್ತ್ರದಜ್ಞಾನಪ್ರಾಪ್ತಿಯು ಈ ಅಂತಿಮಯುಗವಾದ ಕಲಿಯುಗದಲ್ಲಿ ಎಲ್ಲರಿಗೂ ಲಭಿಸಲಾರದು.

(3) **"ಕಲೌ ಜಗತ್ಪತಿಂ ವಿಷ್ಣುಂ ಸರ್ವಸ್ರಷ್ಟಾರಮೀಶ್ವರಂ ।**
ನಾರ್ಚಯಿಷ್ಯಂತಿ ಮೈತ್ರೇಯಪಾಷಂಡೋಪಹತಾಜನಾಃ" ॥

ಕಲಿಯುಗದಲ್ಲಿ ಜನರು ಪಾಷಂಡಿಗಳಾಗಿ ಸರ್ವಜಗತ್ಕಾರಣನಾದ ವಿಷ್ಣುವನ್ನು ಆರಾಧಿಸುವದಿಲ್ಲವೆಂಬದಾಗಿ ಹೇಳಿರುವ ಮೇರಿಗೆ ಈ ಯಥಾರ್ಥವಾದ ಪ್ರತಿತನ್ತ್ರವನ್ನು ಅರಿತವರೂ ಪರಮದುರ್ಲಭವೆಂಬದಾಗಿಯೂ, ಯಾರಾದರೂ ಒಬ್ಬೊಬ್ಬರು ಸುಕೃತಪರಿಪಾಕದಿಂದ ಅಂತಹ ಅವಿದ್ಯಾನಿವೃತ್ತಿಯನ್ನು ಸದಾಚಾರ್ಯಕಟಾಕ್ಷ ಮತ್ತು ದೈವಾನುಗ್ರಹಮೂಲಕ ಪಡೆದವರಾಗಿ ಅದರಿಂದ **ವಿಪಶ್ಚಿತ್ತನು** ರೆಂದು

(1) ವಿ. ಪು. 5. 30. 20 (2) ವಿ. ಪು. 6. 7. 11 (3) ವಿ. ಪು. 6. 1. 50.

ಹೇಳಿಸಿಕೊಳ್ಳುತ್ತಾರೆಂಬ ತಾತ್ಪರ್ಯವು. ಗೀತೆಯಲ್ಲಿಯೂ ಕೂಡ ಅಂತಹ ಮಹನೀಯರು ಪರಮ ದುರ್ಲಭವೆಂದು

(1) **"ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೆ ।**
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ ॥"

ಎಂಬ ಶ್ಲೋಕದಿಂದ ಹೇಳಲ್ಪಟ್ಟಿರುತ್ತದೆ. **ವಿಪಶ್ಚಿತ್ವವೆಂದರೆ,** ವಿವಿಧ ವಿಚಿತ್ರ ಪದಾರ್ಥಗಳೆಲ್ಲಾ ಭಗವಚ್ಛರೀರವೆಂದು ತಿಳಿಯುವ ಚಿತ್ತವೃತ್ತಿಯು. ಅಂತಹ ಜ್ಞಾನವುಳ್ಳ ಸರ್ವಶ್ರೇಷ್ಠನೆನಿಸಿದ ಪಂಡಿತನು **ವಿಪಶ್ಚಿತ್ತ**ಮನೆನಿಸುವನು. ಇಂತಹ ಪಂಡಿತನು ಒಬ್ಬನಿದ್ದರೂ ಸಾಕು. ಅಂತವನ ಮುಂದೆ ಬಾಹ್ಯಕುದೃಷ್ಟಿ ಸಿದ್ಧಾಂತಿಗಳು ಒಂದು ಕ್ಷಣವಾದರೂ ನಿಂತು, ವಾದ ಮಾಡಲು ಸಾಮರ್ಥ್ಯವಿಲ್ಲದವರಾಗಿ, ಉತ್ಸಾಹ ತೊರೆದು, ತಮ್ಮ ಕೋಲಾಹಲಧ್ವನಿಯ ಉಪಶಾಮ್ಯತೆಯನ್ನು ಹೊಂದುವರಾಗುತ್ತಾರೆ. ನಿರೀಶ್ವರವಾದವೇನು, ಲೋಕದಲ್ಲಿ ಪರಮಾಣುಗಳೇ ಸರ್ವಕಾರಣಭೂತವೆನ್ನುವದೇನು, ಪ್ರಕೃತಿಯೇ ಎಲ್ಲವು ಎಂಬುವದೇನು, ಲೋಕದಲ್ಲಿ ಇರುವುದು ಪ್ರಕೃತಿ ಪುರುಷರೇ ಎಂಬುವದೇನು, ಕರ್ಮವೇ ಬ್ರಹ್ಮವೆಂಬುವದೇನು, ಲೋಕದಲ್ಲಿ ನಿರ್ಗುಣ ಬ್ರಹ್ಮ ಒಂದೇ ಇರುವದು ಎಂಬುವದೇನು, ಇಂತಹ ನಾನಾವಿಧ ಅಪಸಿದ್ಧಾನ್ತಗಳೆಲ್ಲಾ ಶ್ರೀ ಯತಿರಾಜರ ಸಿದ್ಧಾನ್ತವರಿತ ಪಣ್ಡಿತನೆದುರಿಗೆ ತಲೆಬಾಗಿ ಮೌನವನ್ನವಲಂಬಿಸುತ್ತವೆ ಎಂಬ ತಾತ್ಪರ್ಯವು. ಶ್ರೀ ಭಾಷ್ಯಕಾರರವರು ಶ್ರೀಭಾಷ್ಯದ ದ್ವಿತೀಯಾಧ್ಯಾಯದಲ್ಲಿ ಇಂತಹ ಅಪಸಿದ್ಧಾನ್ತಗಳನ್ನೆಲ್ಲಾ ಬಹು ಸ್ವಾರಸ್ಯವಾಗಿ ಶ್ರುತಿ ಪಙ್ತಿಗಳನ್ನನುಸರಿಸಿ ಖಂಡಿಸಿರುತ್ತಾರಾದುದರಿಂದ ಇಂತಹ ಅಪಸಿದ್ಧಾನ್ತಿಗಳ ಕೋಲಾಹಲ ಶಬ್ದವು **ಝುಟಿತ್ಯುಪೈತಿ ವಿಲಯಂ** ಶೀಘ್ರವಾಗಿ ನಾಶವನ್ನು ಹೊಂದುತ್ತದೆಂದು ಹೇಳುತ್ತಾರೆ. ಹಾಗೆ ವಿಶಿಷ್ಟಾದ್ವೈತ ಸ್ವಾರಸ್ಯವನ್ನೆಲ್ಲಾ ಯತಿಸಾರ್ವಭೌಮರ ಅಮೋಘೋಕ್ತಿಯ ಮೂಲಕ ಗ್ರಹಿಸಿ, ಇತರ ಮತಗಳು ತಲೆ ಎತ್ತದ ಹಾಗೆ ಮಾಡಿರುವದಕ್ಕೆ ಒಂದು ಒಳ್ಳೇ ನಿದರ್ಶನವು

(1) ಗೀ. 7. 3.

ಈ ಗ್ರಂಥಕರ್ತ್ರರಾಗಿರುವ ಆಚಾರ್ಯವರ್ಯರಾದ ಶ್ರೀ ನಿಗಮಾಂತ ಮಹಾ ದೇಶಿಕರವರೇ. ಶ್ರೀರಂಗಕ್ಕೆ ಇತರ ಸಿದ್ಧಾನ್ತಿಗಳ ಹಾವಳಿಯು ಪ್ರಾಪ್ತವಾದಾಗ ಅಲ್ಲಿರುವ ಮಹಾ ಶ್ರೀವೈಷ್ಣವರಿಗೆ ದಿಕ್ಕು ತೋಚದೆ, ಇವರನ್ನು ಕಾಞ್ಚೀಪುರದಿಂದ ಕರಿಸಿಕೊಂಡು ಇವರ ಸಹಾಯವನ್ನು ಆ ಶ್ರೀ ವೈಷ್ಣವರು ಪ್ರಾರ್ಥಿಸಲು ; ತಾವೊಬ್ಬರೇ ವಾದ ಮಾಡಿ ಅವರೆಲ್ಲರನ್ನೂ ವಾದದಲ್ಲಿ ಗೆದ್ದು, ಆ ವಾದ ಪ್ರಕ್ರಿಯೆಗಳನ್ನೆಲ್ಲಾ "ಶತದೂಷಣಿ" ಎಂಬ ಗ್ರಂಥವಾಗಿ ರಚಿಸಿದರು, ಆದುದರಿಂದ ತತ್ರೈಕತ್ರ ವೆಂಬ ಪ್ರಯೋಗವು ತಮಗೇನೇ ಸ್ವಾರಸ್ಯವಾಗಿ ಅನ್ವಯಿಸುತ್ತದೆ. ಶ್ರೀ ನಿಗಮಾನ್ತ ದೇಶಿಕರೆಂಬ ಬೇಲಿಯು ವಿಶಿಷ್ಟಾದ್ವೈತವೆಂಬ ಹೊಲಕ್ಕೆ ಇಲ್ಲದಿದ್ದರೆ, ಅಪ್ಪೈಯ ದೀಕ್ಷಿತರೆಂಬ ಆಡು ಹೊಲವನ್ನೆಲ್ಲಾ ಮೇದು ಬಿಡುತ್ತಿತ್ತು, ಎಂಬ ಹೇಳಿಕೆಯನ್ನು ಕೇಳಿರುತ್ತೇವೆ ಯಷ್ಟೆ.

ಆದುದರಿಂದ ಯತಿಸಾರ್ವಭೌಮರ ಸೂಕ್ತಿಯನ್ನು ಗ್ರಹಿಸಿದವರಿಗೆ ಬಾಹ್ಯಕುದೃಷ್ಟಿಮತಗಳ ನಿರಸನವೆಂಬುವದು ಅತಿ ಸುಲಭವು ಎಂಬುವದು ಮುಖ್ಯತಾತ್ಪರ್ಯವು.

ಶ್ರೀಮದ್ರಹಸ್ಯತ್ರಯ ಸಾರದ ಪ್ರಧಾನ ಪ್ರತಿತನ್ತ್ರಾಧಿಕಾರ ವೆಂಬ ಮೂರನೇ ಅಧಿಕಾರಕ್ಕೆ

ತಿರು ನಾರಾಯಣ ಪುರಂ, ವಿಜಯರಾಘವಾಚಾರ್ಯಕೃತ

ಆಚಾರ್ಯ ಹೃದಯಾನ್ವೇಷಿಣೀ

ಎಂಬ ಕನ್ನಡ **ಅರ್ಥ ತಾತ್ಪರ್ಯಗಳು** ಸಮಾಪ್ತವಾದುವು.

ಶ್ರೀಮತೇ ಶ್ರೀನಿವಾಸ ಮಹಾ ದೇಶಿಕಾಯನಮಃ

॥ ಶ್ರೀಮತೇ ರಾಮಾನುಜಾಯನಮಃ ॥

ಶ್ರೀಮತೇ ನಿಗಮಾಂತ ಮಹಾದೇಶಿಕಾಯನಮಃ



ಶ್ರೀಮಾನ್ವೇಂಕಟನಾಥಾರ್ಯಃ ಕವಿತಾರ್ಕಿಕಕೇಸರೀ ।
ವೇದಾಂತಾಚಾರ್ಯವರ್ಯೋಮೇ ಸನ್ನಿಧತ್ತಾಂ ಸದಾಹೃದಿ ॥

ಶ್ರೀಮದ್ರಹಸ್ಯ ತ್ರಯಸಾರೇ

ಅರ್ಥಪಞ್ಚಕಾಧಿಕಾರಃ

ಆದೌಪ್ರಾಪ್ಯಂ ಪರಮ ಮನಘಂ ಪ್ರಾಪ್ತೃರೂಪಂಚ ಮಾದಾ । ವಿಷ್ಣೋಃಪಾಯನ್ತ್ವಯನ ನಮಸೋಃರೀಪ್ಸಿತಾರ್ಥಂ ಚತುರ್ಥ್ಯಾಂ ॥

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯನಮಃ

ಅವತಾರಿಕೆ:—ಹಿಂದಿನ ಅಧಿಕಾರದಲ್ಲಿ ಸರ್ವವಿಶ್ವವೂ ಸ್ವಾಮಿಗೆ ಶರೀರವೂ, ಆತನು ಎಲ್ಲಕ್ಕೂ ಆತ್ಮಾ ಎಂಬುವದೇ ಪ್ರಧಾನ ಪ್ರತಿತನ್ತ್ರವೆಂದೂ, ಈ ಸಂಬನ್ಧವು ರಹಸ್ಯ ತ್ರಯಗಳಲ್ಲಿ ತೋರಿ ಬರುತ್ತದೆಂದೂ ಹೇಳಿದರು. ಈ ಅಧಿಕಾರದಲ್ಲಿ, ಮುಖ್ಯವಾಗಿ ಶಾಸ್ತ್ರಗಳೆಲ್ಲಾ ಐದು ಅರ್ಥಗಳನ್ನು ಬೋಧಿಸುತ್ತವೆ, ಅವುಗಳಿಗೆ ಅರ್ಥಪಞ್ಚಕಗಳೆನ್ನುವರೆಂದೂ, ಈ ಐದು ಅರ್ಥಗಳು ಯಾವವೆಂಬುವುದನ್ನೂ, ಈ ಸಾರತಮವಾದ ರಹಸ್ಯತ್ರಯಗಳಲ್ಲಿ ಇವು ಎಲ್ಲಿ ಉಪಪಾದಿತವಾಗಿವೆ ಎಂಬುದನ್ನೂ, ಹೇಳುತ್ತಾರೆ.

ತದ್ವ್ಯಾಘಾತಂ ಮಮಕೃತಿಗಿರಿ ವ್ಯಂಜಯಂತಂ ಮನುಂ ತಂ । ತತ್ಸ್ವಾಧ್ಯಾಯಂಚ ದ್ವಯಮಪಿ ವಿದರ್ಸಮ್ಮತ ಸರ್ವವೇದೀ ॥ ೨ ॥

ಅರ್ಥ:—(1) **ಆದೌ** - ಅಕಾರವೇ ಮೊದಲಾದವುಗಳಲ್ಲಿ (ಅಂದರೆ ಮೂಲ ಮಂತ್ರದಲ್ಲಿನ ಅಕಾರ ಮತ್ತು ಆದಿ ಶಬ್ದದಿಂದ ನಾರಾಯಣ ಎಂಬ ಶಬ್ದಗಳಲ್ಲಿ), **ಅನಘಂ** - ನಿರ್ದುಷ್ಟವಾದ, ಹೇಯಪ್ರತ್ಯನೀಕನಾದ, **ಪರಮಂ** - ತನಗಿಂತಲೂ ಶ್ರೇಷ್ಠವಾದುದು ಇಲ್ಲದ ಅಂದರೆ ಸರ್ವೋತ್ಕೃಷ್ಟವಾದ, ಅಥವಾ ಪರಾಮಾಯಸ್ಯತತ್ ಎಂಬುವ ವ್ಯುತ್ಪತ್ತಿಯಿಂದ ಶ್ರೇಷ್ಠಳಾದ ಲಕ್ಷ್ಮಿಯನ್ನು ಪತ್ನಿಯಾಗಿ ಉಳ್ಳ, **ಪ್ರಾಪ್ಯಂ** – ಉಪೇಯವಾದ ಪರಬ್ರಹ್ಮಸ್ವರೂಪವನ್ನು, **ವ್ಯಂಜಯಂತಂ** – ಬೋಧಿಸುವ (2) **ಮಾದೌ** - ಮಕಾರ ಮೊದಲಾದವುಗಳಲ್ಲಿ, ಅಂದರೆ ಪ್ರಣವದ ಮಕಾರ ಮತ್ತು ನಾರಾಯಣ ಶಬ್ದದನಾರ ಎಂಬ ಪದಗಳಲ್ಲಿ, **ಪ್ರಾಪ್ತೃರೂಪಂ** - ಪ್ರಾಪ್ತೃವಾದ ಜೀವಾತ್ಮ ಸ್ವರೂಪವನ್ನೂ, **ವ್ಯಂಜಯಂತಂ** - ಬೋಧಿಸುವ, **ಅಯನನಮಸೋಃ** - ನಾರಾಯಣ ಶಬ್ದದಲ್ಲಿರುವ ಅಯನವೆಂಬ ಶಬ್ದ, ಮತ್ತು ನಮಶ್ಶಬ್ದಗಳಲ್ಲಿ, **ಇಷ್ಟೋಪಾಯಂ** - ತುಂಬಾ ಅಭಿಮತವಾದ ಸಿದ್ಧೋಪಾಯ ಸಾಧ್ಯೋಪಾಯವನ್ನೂ, ವ್ಯಂಜಯಂತಂ - ಬೋಧಿಸುವ **ಚತುರ್ಥ್ಯಾಂ** - ನಾರಾಯಣಾಯ ಎಂಬ ಶಬ್ದದಲ್ಲಿ ವ್ಯಕ್ತವಾಗಿ ತೋರುತ್ತಿರುವ ಚತುರ್ಥೀ ವಿಭಕ್ತಿಯಲ್ಲಿ, **ಈಪ್ಸಿತಾರ್ಥಂ** - ಈ ಜೀವನಿಗೆ ಪುರುಷಾರ್ಥರೂಪವಾದ, ಮೋಕ್ಷ ಪದವಿಯಲ್ಲಿ ಸ್ವಾಮಿ ಕೈಂಕರ್ಯ ಲಾಭವನ್ನೂ, ವ್ಯಂಜಯಂತಂ - ಬೋಧಿಸುವ, **ಮಮಕೃತಗಿರಿ** - ಸಖಂಡವಾದ, ನಮಃ ಎಂಬ ಶಬ್ದಗಳಲ್ಲಿರುವ ಮಮಕಾರ ಬೋಧಿಸುವ ಮಃ ಎಂಬ ಶಬ್ದದಲ್ಲಿ, **ತದ್ವ್ಯಾಘಾತಂ** - ಮೇಲೆ ಹೇಳಿದ ಪುರುಷಾರ್ಥ

---

(1) ಅಃ ಆದಿರ್ಯಸ್ಯ ತಸ್ಮಿನ್ ಎಂಬದಾಗಿ ವ್ಯುತ್ಪತ್ತಿಯು.

(2) ಮನ್ ಎಂಬುವದು ಮನ ಜ್ಞಾನೇ, ಮನು ಅವಬೋಧನೆ ಎಂಬ ಧಾತುಗಳಿಂದ ಜೀವನು ಜ್ಞಾನಸ್ವರೂಪನೂ, ಜ್ಞಾನಗುಣಕನೂ ಆದುದರಿಂದ, ಮಕಾರವು ಜೀವನನ್ನು ಬೋಧಿಸುತ್ತದೆ.

ಪ್ರಾಪ್ತಿಗೆ ವಿರೋಧವಾದುದನ್ನೂ, ಹೀಗೆ ಐದನ್ನೂ **ವ್ಯಂಜಯಂತಂ** ಬೋಧಿಸುವ, **ತಂ** - ಮಂತ್ರಗಳಲ್ಲೆಲ್ಲಾ ಶ್ರೇಷ್ಠವಾದುದಾಗಿ ಮಂತ್ರ ರತ್ನವೆನಿಸಿ ಪ್ರಸಿದ್ಧಿ ಹೊಂದಿದ, **ಮನುಂ**-ಅಷ್ಟಾಕ್ಷರ ಮಂತ್ರವನ್ನೂ, **ದ್ವಯಮಪಿ** - ಶರಣಾಗತಿ ಮಂತ್ರವೆನಿಸುವ ದ್ವಯವನ್ನೂ ಕೂಡ, (**ಅಪಿ** ಶಬ್ದದಿಂದ ಚರಮ ಶ್ಲೋಕವೂ ಹೇಳಲ್ಪಟ್ಟಿತು.) ಅಥವಾ **ದ್ವಯಮಪಿ** - ಮಿಕ್ಕೆರಡಾದ ದ್ವಯ ಚರಮ ಶ್ಲೋಕಗಳನ್ನೂ ಕೂಡ **ತತ್ಪ್ರಾಯಃ** - ಹಾಗೆಯೇ ಈ ಮುಖ್ಯ ಐದು ಅರ್ಥಗಳುಳ್ಳದ್ದಾಗಿಯೂ, **ವಿದನ್** - ತಿಳಿದವನು, **ಸರ್ವವೇದೀ** - ಸರ್ವಜ್ಞನಾಗಿ ಮೋಕ್ಷೋಪಯುಕ್ತವಾದ ಸರ್ವ ವಿಷಯಗಳನ್ನೂ ತಿಳಿದವನೆಂಬುವದು, **ಸಮ್ಮತಃ** - ಸರ್ವಸಮ್ಮತವಾದುದು.

ತಾತ್ಪರ್ಯ:—ಹಿಂದೆ ಶ್ರೀಮದ್ರಹಸ್ಯತ್ರಯಗಳೇ ಸಾರತಮವಾದುದೆಂದು ನಿರ್ಧರಿಸಿದ ಬಳಿಕ, ಸರ್ವಶಾಸ್ತ್ರಗಳೂ ಬೋಧಿಸುವ ಅರ್ಥಪಂಚಕ ಜ್ಞಾನವೂ ಕೂಡ, ಇವುಗಳಲ್ಲೇ ಬೋಧಿತವಾಗಿರ ಬೇಕಷ್ಟೆ. ಹಾಗೆ ಈ ಮೂರು ಮಂತ್ರಗಳಲ್ಲಿ ಎಲ್ಲಿ ಈ ಐದೂ ಉಪಪಾದಿತಗಳಾಗಿವೆ ಎಂದರೆ ಅದನ್ನು ವಿಶದವಾಗಿ ಉಪದೇಶಿಸುತ್ತಾರೆ.

ಹಿಂದೆ ಪ್ರಧಾನ ಪ್ರತಿತನ್ತ್ರಾಧಿಕಾರದಲ್ಲೂ ಈ ಐದು ವಿಷಯಗಳು ಅನೇಕ ಕಡೆಗಳಲ್ಲಿ ಪ್ರಾಸಙ್ಗಿಕವಾಗಿ ಹೇಳಲ್ಪಟ್ಟಿರುತ್ತವೆ. ಈ ಐದು ಭಾವಗಳೂ ಆ ಅಧಿಕಾರದ ಪ್ರಥಮ ಶ್ಲೋಕದಲ್ಲೂ ಗರ್ಭಿತವಾಗಿವೆ:—ಹೇಗೆಂದರೆ, "**ಆದಿಕರ್ತುಃ**" ಎಂಬ ಶಬ್ದದಿಂದ ಪ್ರಾಪ್ಯವೂ, "**ಪಶ್ಯನ್**" ಎಂಬುವದರಿಂದ ಪ್ರಾಪ್ತೃವಾದ ಜೀವನೂ, "**ಏತದಾಯತ್ತ**" ಎಂಬುವದರಿಂದ ಸಿದ್ಧೋಪಾಯನೂ, "**ಪ್ರಯತನ ಫಲೇಷು**" ಎಂಬುವದರಿಂದ ಸಾಧ್ಯೋಪಾಯ, ಫಲಪ್ರಾಪ್ತಿಗಳು, "**ಗಾಹತೆ ಚಿತ್ತವೃತ್ತಿಂ**" ಎಂಬುವದರಿಂದ ಫಲಕ್ಕೆ ವಿರೋಧಿಯಾದುದರ ನಿರಸನ ಭಾವವೂ ಸೂಚಿಸಲ್ಪಟ್ಟಿತು ಅವುಗಳನ್ನೇ ಕ್ರೋಡೀಕರಿಸಿ ಈ ಅಧಿಕಾರದಲ್ಲಿ ನಿಪುಣತರವಾಗಿ ಉಪಪಾದಿಸುತ್ತಾರೆ. ಈ ಅಧಿಕಾರದಲ್ಲಿ, ಮುಖ್ಯವಾಗಿ ಅರ್ಥ ಪಂಚಕಗಳು

ಯಾವುವೆಂಬುವದೂ, ಅವುಗಳು ಮೂಲ ಮಂತ್ರ, ದ್ವಯ, ಚರಮ ಶ್ಲೋಕಗಳಲ್ಲಿ ಎಲ್ಲಿ ತೋರಿ ಬರುತ್ತವೆಂಬುವದೂ, ಉಪನ್ಯಸಿಸಲ್ಪಟ್ಟಿರುವದರಿಂದ, ಈ ಅಧಿಕಾರಾರ್ಥವು ಈ ಶ್ಲೋಕದಲ್ಲಿ ಸಂಗ್ರಹಿಸಲ್ಪಟ್ಟಿರುತ್ತದೆ.

ಅರ್ಥ ಪಂಚಕಗಳು ಯಾವುವೆಂದರೆ:—

1. ಪ್ರಾಪ್ಯ ಸ್ವರೂಪ-ನಾವು ಹೊಂದತಕ್ಕ ಪರಬ್ರಹ್ಮನ ಸ್ವರೂಪವು. ಪ್ರಾಪ್ಯವನ್ನು ಉಪೇಯವೆಂದೂ ಹೇಳುವರು.
2. ಪ್ರಾಪ್ತೃ ಸ್ವರೂಪ—ಆತನನ್ನು ಹೊಂದತಕ್ಕವರು, ಬದ್ಧ ಜೀವಾತ್ಮರಾದ ನಾವುಗಳು, ಅಂತಹ ನಮ್ಮ ಸ್ವರೂಪವು.
3. ಪ್ರಾಪ್ತ್ಯುಪಾಯ :— ಆತನನ್ನು ಹೊಂದಲು ಉಪಾಯವು:—ಇದು ಸಿದ್ಧೋಪಾಯ ಸಾಧ್ಯೋಪಾಯವೆಂದು ಎರಡು ತೆರನಾಗಿರುವದು. ಅದರಲ್ಲಿ ಸಿದ್ಧೋಪಾಯನು, ಸರ್ವೇಶ್ವರನೇ, ಸಾಧ್ಯೋಪಾಯವು ಭಕ್ತಿ ಪ್ರಪತ್ತಿ ಎಂದು ಎರಡು ವಿಧವು.
4. ಫಲಪ್ರಾಪ್ತಿ:—ನಾವು ಈ ಮೇಲೆ ಹೇಳಿದ ಮಾರ್ಗವನ್ನವಲಂಬಿಸುವದರಿಂದುಂಟಾಗುವ ಫಲಾನುಭವವು. ನಿತ್ಯ ವಿಭೂತಿಯನ್ನು ಸೇರಿ, ಮೋಕ್ಷಪದವಿಯನ್ನು ಹೊಂದಿ, ಸ್ವಾಮಿಯೊಂದಿಗೆ ನಿತ್ಯ ಮುಕ್ತರ ಜೊತೆಯಲ್ಲಿ ನಿರತಿಶಯಾನಂದವನ್ನನುಭವಿಸುತ್ತಾ ಆತನಿಗೆ ಕೈಂಕರ್ಯವನ್ನೆಸಗುವ ಸಾಮ್ರಾಜ್ಯ ಪ್ರಾಪ್ತಿ.
5. ಫಲ ಪ್ರಾಪ್ತಿಗೆ ವಿರೋಧಿಗಳು - ಇವು, ಕರ್ಮ ಅವಿದ್ಯಾ ವಾಸನಾದಿಗಳೆಂದು ಹಿಂದೆಯೇ ಹೇಳಲ್ಪಟ್ಟಿವೆ.

ಈ ಐದು ವಿಷಯಗಳನ್ನೇ ಸರ್ವ ಅಧ್ಯಾತ್ಮ ಶಾಸ್ತ್ರಗಳೂ, ಸರ್ವ ಶ್ರುತಿ ಸ್ಮೃತಿ ಇತಿಹಾಸ ಪುರಾಣಗಳೂ ಉಪಪಾದಿಸುತ್ತವೆ. ಈ ಐದು ಅರ್ಥಗಳೂ ರಹಸ್ಯ ತ್ರಯಗಳಲ್ಲೂ ಉಪಪಾದಿತವಾಗಿರುತ್ತವೆ ಎಂದು ಅಪ್ಪಣೆ ಕೊಡಿಸುತ್ತಾರೆ.

ಪ್ರಥಮತಃ ಮೂಲಮಂತ್ರದ ಯಾವಯಾವ ಪದಗಳಿಂದ ಹೇಗೆ ಈ ಅರ್ಥ ಪಞ್ಚಕಗಳಭಿಪ್ರಾಯವು ತೋರಿಬರುತ್ತದೆಂಬುವದನ್ನು ವಿಶದೀಕರಿಸುತ್ತಾರೆ:—

1. "**ಆದೌಪ್ರಾಪ್ಯಂ**"—ಪ್ರಣವದ ಅಕಾರದಲ್ಲೂ, ನಾರಾಯಣಶಬ್ದದಲ್ಲೂ ಪರಮಪುರುಷನಾದ ಶ್ರೀಮನ್ನಾರಾಯಣನೇ ಪ್ರಾಪ್ಯನೆಂಬುವದು ತೋರುತ್ತದೆ. "**ಅಕಾರಾರ್ಥೋವಿಷ್ಣುಃ**" (ಅಷ್ಟಶ್ಲೋಕಿ. ೧) "**ಅಕಾರೇಣಾಖಿಲಾಧಾರಃ ಪರಮಾತ್ಮಾಭಿಧೀಯತೆ**", "**ಅಕಾರೇಣೋಚ್ಯತೇವಿಷ್ಣುಃ**" ಇತ್ಯಾದಿ ವಾಕ್ಯಗಳಿಂದ ಅಕಾರವಾಚ್ಯನು ಶ್ರೀಮನ್ನಾರಾಯಣನೆಂಬದಾಗಿ ವ್ಯಕ್ತಪಡುತ್ತದೆ.

2. "**ಪ್ರಾಪ್ತೃರೂಪಞ್ಚಮಾದೌ**"—ಮಕಾರ ಮೊದಲಾದವುಗಳಲ್ಲಿ ಅಂದರೆ ಮಕಾರ, ನಾರಶಬ್ದಗಳಿಂದ ಪ್ರಾಪ್ತೃವಾದ ಜೀವಾತ್ಮಸ್ವರೂಪವು ಬೋಧಿತವಾಯಿತು. "**ಮಕಾರೋಜೀವವಾಚಕಃ**", "**ಮಕಾರಸ್ತುತಯೋರ್ದಾಸಃ**" ಇತ್ಯಾದಿ ಪ್ರಮಾಣಗಳಿಂದ ಮಕಾರವಾಚ್ಯನು ಜೀವನು; ಮತ್ತು ನಾರಾಯಣಶಬ್ದದಲ್ಲಿ "**ನಾರ**" ಪದದಿಂದಲೂ ಜೀವನು ಹೇಳಲ್ಪಟ್ಟನು. ರಿಙ್ಕ್ಷಯೆ ಎಂಬ ಧಾತುವಿನಿಂದ, ರಾಃ ಎಂದರೆ ನಾಶವುಳ್ಳವುಗಳೆಂಬರ್ಥವು. ನಾಶವಿಲ್ಲದವುಗಳು "**ನರಾಃ**" ನಿತ್ಯವಾದವುಗಳೆನಿಸುವವು; ಅಂತಹ ನಿತ್ಯವಾದವುಗಳ ಸಮೂಹವು ಅಥವಾ ಸಂಬನ್ಧ ಉಳ್ಳವು "**ನಾರಾಃ**" ಎಂಬದಾಗಿ ಹೇಳಲ್ಪಡುವವು. ಜೀವರುಗಳು ನಾಶವಿಲ್ಲದೆ ನಿತ್ಯರಾದುದರಿಂದ, ನಾರ ಎಂಬ ಶಬ್ದದಲ್ಲಿ ಅಂತರ್ಗತರು.

3. "**ಇಷ್ಟೋಪಾಯನ್ತ್ವಯನ ನಮಸೋಃ**"–"**ಅಯನ**" ಮತ್ತು "**ನಮ**" ಶಬ್ದಗಳಲ್ಲಿ ಇಷ್ಟೋಪಾಯವು ತೋರಿಬರುತ್ತದೆ. ಇಷ್ಟೋಪಾಯವು ಎರಡುವಿಧವು:—ಸಿದ್ಧೋಪಾಯ, ಸಾಧ್ಯೋಪಾಯವೆಂಬದಾಗಿ. **ನಾರಾಯಣ** ಶಬ್ದಕ್ಕೆ **ನಾರಾಣಾಂ ಅಯನಂ** ಎಂಬ ಯೋಜನೆಯಿಂದ **ಅಯನ** ಶಬ್ದವು, **ಈಯತೆ ಅನೇನ** ಎಂಬ ವ್ಯುತ್ಪತ್ತಿಯಿಂದ ಪ್ರಾಪಕನೆಂಬರ್ಥವು ತೋರಿಬರುತ್ತದೆ. ಆದುದರಿಂದ

ಸಿದ್ಧೋಪಾಯನಾಗಿ ಮಾರ್ಗ ತೋರಿಸುವವನು ಸ್ವಾಮಿಯೇ. **"ಯಮೇ ವೈಷವೃಣತೇ ತೇನಲಭ್ಯಃ"** "ಯಾವನನ್ನು, ಪರಮಪದಕ್ಕೆ ಯೋಗ್ಯನೆಂಬದಾಗಿ ಆಕೃಪಾಸಾಗಾರನು ವರಿಸುವನೋ ಅವನಿಗೇನೇ ಆತನು ಪ್ರಾಪ್ಯನು." ಎಂಬ ಶ್ರುತಿಯು ಇದನ್ನೇ ಉಪಪಾದಿಸುತ್ತದೆ. ಇನ್ನು ಸಾಧ್ಯೋಪಾಯಗಳು **"ನಮ"** ಶ್ಯಬ್ದದಿಂದ ಬೋಧಿತವಾಗು ವಭಕ್ತಿ ಪ್ರಪತ್ತಿಮಾರ್ಗಗಳು. **"ನಮಸ್ಕಾರಾತ್ಮಕಂಯಸ್ಮೈ ವಿಧಾಯಾತ್ಮನಿವೇದನಂ"**, ಈ ಆತ್ಮನನ್ನು ಸ್ವಾಮಿಗೆ ಸಮರ್ಪಿಸುವದು ನಮಸ್ಕಾರರೂಪವಾದುದು; ಮತ್ತು **"ನಮಶ್ಚಕ್ರುರ್ಜನಾರ್ದನಂ"** ಎಂಬ ಪ್ರಮಾಣದಲ್ಲೂ ದ್ರೌಪದೀ ಮೊದಲಾದ ಪಾಂಡವರು ವಾಸುದೇವನಲ್ಲಿ ಶರಣಾಗತಿ ಮಾಡಿದರು ಎಂಬರ್ಥದಲ್ಲಿ ನಮಶ್ಶಬ್ದವನ್ನು ಪಯೋಗಿಸಿರುವದರಿಂದ, ಸಾಧ್ಯೋಪಾಯವು ಹೇಳಲ್ಪಟ್ಟಿತು.

4. **"ಈಪ್ಸಿತಾರ್ಥಂ ಚತುರ್ಥ್ಯಾಂ"—'ನಾರಾಯಣಾಯ'** ಎಂಬ ಪದದ ಚತುರ್ಥೀವಿಭಕ್ತಿಯಲ್ಲಿ, ಮೋಕ್ಷದೆಶೆಯಲ್ಲಿ ಈ ಚೇತನನು ಮಾಡುವ ಕೈಂಕರ್ಯರೂಪವಾದ ಪರಮಪುರುಷಾರ್ಥವು ತೋರಿಬರುತ್ತದೆ. ತಾದರ್ಥ್ಯವನ್ನು ಬೋಧಿಸುವ ಈ ಚತುರ್ಥೀವಿಭಕ್ತಿಯು ಪರಪ್ರಯೋಜನವನ್ನೇ ಸೂಚಿಸುವದರಿಂದ, ಈ ಶೇಷನಾದ ಜೀವಾತ್ಮನಿಗೆ ಸದಾ ಸ್ವಾಮಿ ಕೈಂಕರ್ಯನಿರತನಾಗಿರುವ ಭಾವವೇ ಪರಮಪುರುಷಾರ್ಥವೆಂದು ವ್ಯಕ್ತಪಡುತ್ತದೆ. ಸರ್ವವಿಧ ಕೈಂಕರ್ಯಗಳೂ ಶ್ರೀಮನ್ನಾರಾಯಣನಿಗೇನೆ ವಿನಾ ತನಗಲ್ಲವೆಂಬುವದು **"ನಾರಾಯಣಾಯೈವ, ಮಃ ನ"** ಎಂಬ ಯೋಜನೆಯಿಂದುಂಟಾಗುತ್ತದೆ. ಈ ಜೀವನಿಗೆ ಈಶ್ವರಕೈಂಕರ್ಯವೇ ಮುಖ್ಯೈಶ್ವರ್ಯವೆಂಬುವದು **"ಕುರುಷ್ವಮಾಮನುಚರಂ"** "ನನ್ನನ್ನು ದಾಸನನ್ನಾಗಿ ಮಾಡಿಕೋ", **"ಕ್ರಿಯತಾಂ ಇತಿಮಾಂವದ"** "ಹೀಗೆಮಾಡು ಎಂದು ಆಜ್ಞಾಪಿಸು," **"ನಿತ್ಯಕಿಂಕರೋಭವಾನಿ"** "ಸದಾ ಕೈಂಕರ್ಯಮಾಡುವಂಥಾವನಾಗುವೆನು," **"ಅಹಂಸರ್ವಂಕರಿಷ್ಯಾಮಿ"** "ನಾನು ಸರ್ವವಿಧ ಕೈಂಕರ್ಯಗಳನ್ನೂ ಮಾಡುವೆನು" ಇತ್ಯಾದಿ ವಚನಗಳಿಂದೇರ್ಪಡುತ್ತದೆ.

(5) **ತದ್ವ್ಯಾಘಾತಂ ಮಮಕೃತಿಗಿರಿ—** ಈ ಕೈಂಕರ್ಯ ಪ್ರಾಪ್ತಿಗೆ ಜೀವಾತ್ಮನ ಅನಾದ್ಯವಿದ್ಯಾ ಕರ್ಮ ವಾಸನಾದಿಗಳಿಂದ ದೇಹಾತ್ಮಭ್ರಾಂತಿ ಯುಂಟಾಗುವದರಿಂದ ಇವು ಅಂತಹ ಪ್ರಾಪ್ತಿಗೆ ವಿರೋಧವಾದುವು. ಆದುದರಿಂದ ಮುಖ್ಯವಾಗಿ ಫಲಪ್ರಾಪ್ತಿಗೆ ಅವಿದ್ಯಾ ನಿವೃತ್ತಿಯಾಗಬೇಕಾಗಿರುವದರಿಂದ ಅಂತಹ ವಿರೋಧಿ ಯಾವುದು ಎಂಬುವದನ್ನು ತಿಳಿಯತಕ್ಕದ್ದು. ಈ ಅಭಿಪ್ರಾಯವು ಮೂಲ ಮಂತ್ರದಲ್ಲಿರುವ ನಮಶ್ಶಬ್ದದಲ್ಲಿ ತೋರಿಬರುವ "ಮಃ" ಎಂದರೆ ಮಮ ಎಂಬ ಪದದಿಂದ ಮಮಕಾರವು ತೋರಿಬರುತ್ತದೆ. ಈ ಮಮ ಭಾವವು ಪ್ರಸನ್ನನಿಗೆ ಮುಖ್ಯವಾಗಿ ತೊಲಗತಕ್ಕದ್ದು.

"ದ್ವ್ಯಕ್ಷರಸ್ತು ಭವೇನ್ಮೃತ್ಯುಃ ತ್ರ್ಯಕ್ಷರಂ ಬ್ರಹ್ಮಣಃ ಪದಂ ।
ಮಮೇತಿದ್ವ್ಯಕ್ಷರೋ ಮೃತ್ಯುಃ ನಮಮೇತಿಚ ಶಾಶ್ವತಂ" ॥

ಅಂದರೆ "**ಮಮ**" ಎಂಬೆರಡಕ್ಷರವು ಮೃತ್ಯು ಸ್ವರೂಪವಾದುದು; ಮಮ ಎಂಬಭಿಪ್ರಾಯವು ಈ ಚೇತನನಿಗಿರುವ ತನಕ, ಸಂಸಾರದಲ್ಲೇ ಲಿಪ್ತನಾಗಿ ಪುನಃ ಪುನಃ ಸಂಸಾರದಲ್ಲೇ ಸುತ್ತುತ್ತಿರುವನು. ಯಾವಾಗ "ಮಮ" ಕಾರ ಹೋಯಿತೋ ಆಗ ಐಹಿಕ ವಿಷಯದಲ್ಲಿ ಲಿಪ್ತನಾಗದೇ ಮೋಕ್ಷಪದವನ್ನು ಹೊಂದುವನು" ಎಂಬರ್ಥವು.

ಹೀಗೆ ಅರ್ಥಪಂಚಕದ ಅಭಿಪ್ರಾಯವೆಲ್ಲಾ ಮೂಲಮಂತ್ರದಲ್ಲಿರುತ್ತದೆ ಎಂದು ಹೇಳಿರುತ್ತಾರೆ.

"ತತ್ಪ್ರಾಯಂ ದ್ವಯಮಪಿವಿದುಃ" ಹೀಗೆಯೇ ದ್ವಯಮನ್ತ್ರದಲ್ಲೂ, ಚರಮ ಶ್ಲೋಕದಲ್ಲೂ ಸಹ ಈ ಅರ್ಥಪಂಚಕದ ಅಭಿಪ್ರಾಯಗಳನ್ನು ಗ್ರಹಿಸಬಹುದು ಎಂಬದಾಗಿ ಹೇಳಿರುತ್ತಾರೆ. ಹೇಗೆಂದರೆ:—

(1) **ದ್ವಯಮನ್ತ್ರದಲ್ಲಿ:—**

ಪ್ರಾಪ್ಯವು— **ಮನ್ನಾರಾಯಣ** ಶಬ್ದದಿಂದಲೂ,

ಪ್ರಾಪ್ತೃವು— **ಪ್ರಪದ್ಯೇ** ಎಂಬ ಶಬ್ದದಲ್ಲಿ ತೋರಿಬರುವ ಉತ್ತಮ ಪುರುಷದಲ್ಲೂ,

ಪ್ರಾಪ್ತ್ಯುಪಾಯವು— **ಚರಣೌ** ಎಂಬಲ್ಲಿ ತೋರುವ ಭಗವತ್ಸಂಬಂಧದಿಂದ ಸ್ವಾಮಿಯೇ ಸಿದ್ಧೋಪಾಯನೆಂದು ಏರ್ಪಡುವದರಿಂದಲೂ, **ಪ್ರಪದ್ಯೆ** ಎಂಬಲ್ಲಿ ಸಾಧ್ಯೋಪಾಯವೂ ಏರ್ಪಡುವದರಿಂದಲೂ, "**ಚರಣೌ ಶರಣಂ ಪ್ರಪದ್ಯೇ** ಎಂಬ ಪದಗಳಿಂದಲೂ, .

ಫಲವು—ಕೈಂಕರ್ಯಾರ್ಥವನ್ನು ಬೋಧಿಸುವ ಚತುರ್ಥೀ ವಿಭಕ್ತಿಯುಳ್ಳ "**ನಾರಾಯಣಾಯ**" ಎಂಬ ಪದದಿಂದಲೂ,

ಪ್ರಾಪ್ತಿವಿರೋಧಿಯು— **ನಮ** ಶ್ಯಬ್ದದಲ್ಲಿರುವ **ಮನು** ಎಂಬ ಪದದಿಂದಲೂ ತೋರಿಬರುತ್ತವೆ, ಎಂಬಭಿಪ್ರಾಯವು.

(2) **ಚರಮಶ್ಲೋಕದಲ್ಲಿ:—**

ಪ್ರಾಪ್ಯವು— "**ಅಹಂ**" "**ಮಾಮೇಕಂ**" ಇತ್ಯಾದಿ ಪದಗಳಿಂದಲೂ,

ಪ್ರಾಪ್ತೃವು— "**ವ್ರಜ**" ಎಂಬ ಶಬ್ದದಲ್ಲಿರುವ ಮಧ್ಯಮ ಪುರುಷದಿಂದಲೂ, "**ತ್ವಾ**" ಎಂಬ ಪದದಿಂದಲೂ, "**ಮಾಶುಚಃ**" ಎಂಬಲ್ಲಿ ತೋರುವ ಮಧ್ಯಮಪುರುಷದಿಂದಲೂ,

ಪ್ರಾಪ್ತ್ಯುಪಾಯವು—ಸಿದ್ಧೋಪಾಯ ರೂಪದಲ್ಲಿ "**ಮಾಮೇಕಂ**" ಎಂಬ ಪದಗಳಿಂದಲೂ, ಸಾಧ್ಯೋಪಾಯರೂಪದಲ್ಲಿ "**ಶರಣಂ ವ್ರಜ**" ಎಂಬ ಪದಗಳಿಂದಲೂ,

ಫಲವು— "**ಮೋಕ್ಷಯಿಷ್ಯಾಮಿ**" ಎಂಬುವ ಶಬ್ದದಿಂದಲೂ,

ಪ್ರಾಪ್ತಿವಿರೋಧಿಯು— "**ಸರ್ವಪಾಪೇಭ್ಯಃ**" ಎಂಬ ಶಬ್ದದಿಂದಲೂ, ತೋರಿಬರುತ್ತವೆ ಎಂಬ ತಾತ್ಪರ್ಯವು.

ಹೀಗೆ ಈ ಮೂರು ರಹಸ್ಯಗಳಲ್ಲೂ ಅರ್ಥಪಂಚಕಾಭಿಪ್ರಾಯಗಳನ್ನು ಯಾವನು ಗ್ರಹಿಸುವನೋ, ಅವನು "**ಸಮ್ಯತಸ್ಸರ್ವವೇದೀ**" ಮೋಕ್ಷೋಪಾಯಕ್ಕೆ ಬೇಕಾದ ಸಮಸ್ತವನ್ನೂ ಚನ್ನಾಗಿ ಗ್ರಹಿಸಿದವನೆಂಬದಾಗಿ ಒಪ್ಪತಕ್ಕದ್ದು. ಇದು ಸರ್ವಸಮ್ಮತ

ಅರ್ಥಪಞ್ಚಕ ಸ್ವರೂಪ ಕಥನಂ, ಅರ್ಥಪಞ್ಚಕ ಷಡರ್ಥ ಶಬ್ದಯೋರಭೇದಃ

ನಾರಾಯಣಾದಿ ಶಬ್ದಂಗಳಿಲೇ ವಿವಕ್ಷಿತಮಾನ ಸಂಬನ್ಧ ವಿಶೇಷಣತ್ತೈ ಸಿದ್ಧಾನ್ತತ್ತುಕ್ಕುತ್ತಳಮಾಕ್ಕಿ ಇತ್ತೈಯನು ಬನ್ಧಿತ್ತಿರುಕ್ಕು ಮರ್ಥಪಞ್ಚಕತ್ತೈ ಶಿಲರ್ ವಿಚಾರಿತ್ತಾರ್ ಗಳ್. ಇಸ್ಸಂಬಂಧತ್ತೋಡೇ ಕೂಡ ಷಡರ್ಥ

ವಾದ ವಿಷಯವೆಂಬ ತಾತ್ಪರ್ಯವು; ಅಥವಾ ಅಂತವನು ಸರ್ವಜ್ಞನಾದುದರಿಂದ ನಮಗೆ ತುಂಬಾ ಇಷ್ಟನಾದವನು ಎಂಬ ತಾತ್ಪರ್ಯವು.

ಇನ್ನು ಮುಂದೆ ಈ ಸಂಗ್ರಹ ಶ್ಲೋಕಾಭಿಪ್ರಾಯವನ್ನೇ ವಿಸ್ತರಿಸಿ ಅನುವಾದಮಾಡಿ ಅನುಗ್ರಹಿಸುತ್ತಾರೆ.

ಅರ್ಥ.—ನಾರಾಯಣಾದಿ ಶಬ್ದಂಗಳಿಲೆ--ನಾರಾಯಣ ಮೊದಲಾದ ಶಬ್ದಗಳಲ್ಲಿ, ಮೊದಲಾದ ಎಂಬುವದರಿಂದ ಪ್ರಣವವು ಹೇಳಲ್ಪಟ್ಟಿತು. **ವಿವಕ್ಷಿತಮಾನ**- ಶಬ್ದಾತ್ ತೋರಿಬರದಿದ್ದರೂ ತಾತ್ಪರ್ಯ ಮುಖೇನ ಸ್ಫುಟವಾಗಿ ತೋರುವ, **ಸಂಬನ್ಧ ವಿಶೇಷಣತ್ತೈ** - ಶರೀರಾತ್ಮಭಾವವನ್ನು, **ಸಿದ್ಧಾನ್ತತ್ತುಕ್ಕು** - ನಮ್ಮ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ, **ತಳಮಾಕ್ಕಿ** - ಮುಖ್ಯಾಧಾರವಾಗಿ ಇಟ್ಟುಕೊಂಡು, **ಇತ್ತೈಯನು ಬನ್ಧಿತ್ತಿರುಕ್ಕುಂ** - ಈ ಸಿದ್ಧಾಂತವನ್ನು ಆಶ್ರಯಿಸಿ

ತಾತ್ಪರ್ಯ:—ಮೂಲ ಮಂತ್ರದಲ್ಲಿರುವ ನಾರಾಯಣ ಶಬ್ದ ಮತ್ತು ಪ್ರಣವ ಇವುಗಳಲ್ಲಿ ತೋರಿಬರುವ ಆಧಾರಾಧೇಯ ಸಂಬಂಧ ಮತ್ತು ಶೇಷಿಶೇಷ ಸಂಬಂಧ, ಇವುಗಳಿಂದ ಊಹಿಸಬಹುದಾದ ಶರೀರಿ ಶರೀರ ಸಂಬಂಧವನ್ನು ಈ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಮೂಲಾಧಾರವಾಗಿಟ್ಟುಕೊಂಡು, ಈ ಸಂಬಂಧವನ್ನು ಆಶ್ರಯಿಸಿ ಕೊಂಡಿರುವದು ಐದು ಅಭಿಪ್ರಾಯಗಳೆಂದೂ, ಅವುಗಳಿಗೆ ಅರ್ಥಪಂಚಕವೆಂದೂ ಹೇಳಿ, ಆ ಅರ್ಥಪಂಚಗಳಾವುವು ಎಂಬುವದನ್ನು ಕೆಲವರು ವಿಚಾರ ಮಾಡಿದರು. ಮಹರ್ಷಿಯರಾದ ಸೋಮಾಶಿಯಾಂಡಾನ್ ಪ್ರಭೃತಿಗಳು ಈ ಶರೀರ ಶರೀರಿ ಸಂಬಂಧವನ್ನೂ ಸೇರಿಸಿಕೊಂಡು ನಾವುಗಳು ಮುಖ್ಯವಾಗಿ ತಿಳಿಯತಕ್ಕದ್ದು ಷಡರ್ಥಗಳೆಂದೂ, ಅವುಗಳಾವುವೆಂಬುವದನ್ನೂ ವಿಚಾರ

ಜ್ಙಳೈನ್ನು ಶಿಲರ್ ಅನುಸಂಧಿತ್ತಾರ್ಗಳ.

ರುವ, **ಅರ್ಥಪಂಚಕತ್ತೈ** - ಐದು ಅಭಿಪ್ರಾಯಗಳನ್ನು ಅರ್ಥ ಪಂಚಕವೆಂಬದಾಗಿ, **ಶಿಲತ್ ವಿಚಾರಿತ್ತಾರ್‌ಗಳ್** - ಕೆಲವರು ವಿಚಾರ ಮಾಡಿದರು. **ಇಸ್ಸಂಬಂಧತ್ತೋಡೆ ಕೂಡ** - ಈ ಶರೀರ ಶರೀರಿ ಸಂಬಂಧವನ್ನು ಸೇರಿಸಿ, **ಷಡರ್ಥಜ್ಙಳೈನ್ನು** - ಆರು ಅರ್ಥಗಳೆಂಬ ದಾಗಿ, ಅಂದರೆ ಷಡರ್ಥಗಳು ಮುಖ್ಯವಾಗಿ ತಿಳಿಯತಕ್ಕದೆಂಬದಾಗಿ ಅವುಗಳನ್ನು, **ಶಿಲರ್** - ಇನ್ನು ಕೆಲವರು ಅಂದರೆ ಮಹನೀಯರಾದ ಸೋಮೇಶಿಯಾಂಡಾರ್ ಪ್ರಭೃತಿಗಳು, **ಅನುಸಂಧಿತ್ತಾರ್ಗಳ್** - ಅವು ಯಾವವು ಎಂಬುವದನ್ನು ಅನು ಸಂಧಾನ ಮಾಡಿದರು ಅಂದರೆ ವಿಚಾರ ಮಾಡಿದರು.

ಮಾಡಿದರು. (ಮುಖ್ಯವಾಗಿ ಮುಮುಕ್ಷುವು ತಿಳಿಯತಕ್ಕದ್ದು. ಶರೀರ ಶರೀರಿ ಭಾವ, ಶೇಷ ಶೇಷಿ ಭಾವಗಳಿಂದ ಕೂಡಿದ ಅರ್ಥ ಪಂಚಕವೆನಿಸುವ ಐದು ವಿಷಯಗಳು. ಕೆಲವರು ಶರೀರ ಶರೀರಿ ಭಾವ ಶೇಷ ಶೇಷಿ ಭಾವಗಳು ಪ್ರಧಾನ ಪ್ರತಿತನ್ತ್ರವಾಗಿ ತುಂಬಾ ಮುಖ್ಯವಾದುದಾಗಿ ನಮ್ಮ ಸಿದ್ಧಾಂತಕ್ಕೇನೇ ಮೂಲಾ ಧಾರವಾದುದರಿಂದ, ಅದನ್ನು ಪ್ರತ್ಯೇಕವಾಗಿ ಉಪಪಾದನ ಮಾಡಿ ಅರ್ಥ ಪಂಚಕಗಳನ್ನು ವಿವರಿಸುತ್ತಾರೆ. ಇವುಗಳನ್ನೆಲ್ಲಾ ಒಟ್ಟಿಗೆ ಸೇರಿಸಿ ಷಡರ್ಥ ಗಳು ನಾವು ತಿಳಿಯತಕ್ಕದ್ದೆಂಬದಾಗಿ ಇನ್ನು ಕೆಲವು ಆಚಾರ್ಯರುಗಳು ಉಪ ಪಾದನೆ ಮಾಡಿರುತ್ತಾರೆ. ಈ ಎರಡು ಕ್ರಮದಲ್ಲೂ ಪರಸ್ಪರ ವಿರೋಧವೇನೂ ಇರುವದಿಲ್ಲವೆಂಬ ಭಾವವು. ತಾವಾದರೋ ಈ ಸಂಬಂಧವನ್ನು ಪ್ರಧಾನ ಪ್ರತಿ ತನ್ತ್ರಾಧಿಕಾರದಲ್ಲಿ ಬಹು ವಿಶದವಾಗಿಯೂ ನಿಪುಣತರವಾಗಿಯೂ ಉಪಪಾದಿಸಿರು ವದರಿಂದ, ತಾವು ಈಗ ವಿಚಾರಿಸತಕ್ಕದ್ದು ಅರ್ಥಪಂಚಕವೆಂದು ಹೇಳಿ, ಅವು ಗಳು ಯಾವುವೆಂಬುವದನ್ನು ವಿಚಾರ ಮಾಡುತ್ತಾರೆ. "ಇತ್ತೈ ಅನು ಬಂಧಿತ್ತಿರುಕ್ಕುಂ ಅರ್ಥಪಂಚಕತ್ತೈ" ಎಂಬುವದರಿಂದ ಅರ್ಥಪಂಚಕವು ಈ ಶರೀರಿ ಶರೀರ ಅಥವಾ ಶೇಷಿ ಶೇಷ ಸಂಬಂಧವನ್ನಾಶ್ರಯಿಸಿರುತ್ತೆದೆಂಬದಾಗಿ ಹೇಳಲ್ಪಟ್ಟಿರುತ್ತದೆ. ಅದು ಹೇಗೆಂದರೆ ಯಾವಾಗ ಶೇಷಿಯು ಪರಮಾತ್ಮ ನೆಂದೂ ಜೀವನು ಶೇಷನೆಂದೂ ಏರ್ಪಟ್ಟಿತೋ, ಆಗ ಪರಮಾತ್ಮ ಪ್ರಾಪ್ಯ ನೆಂದೂ, ಜೀವಾತ್ಮನು ಪ್ರಾಪ್ತೃವೆಂದೂ ಹೇಳಿದಂತಾಯಿತು. ಯಾವಾಗ ಸರ್ವೇಶ್ವರನು ಶೇಷಿಯಾಗಿ ನಿಯನ್ತಾವಾಗಿ ಯಾದನೋ, ಆಗ ಆತನ ಸಂಕ ಲ್ಪಕ್ಕೆ ಅಧೀನವಾಗಿ ಈ ಚೇತನನು ಮಾಡಬೇಕಾದ ವ್ಯಾಜರೂಪವಾದ ಕಿಂಚ ತ್ಪ್ರಯತ್ನವೇ ಉಪಾಯವಾಗಿಯೂ, ಶೇಷಿಯಾದುದರಿಂದ ಆತನನ್ನು ಹೊಂದಿ

ಇಸ್ಸಂಬನ್ಧಂಪೋಲೆ, ಮುಮುಕ್ಷುವುಕ್ಕು ವಿಶೇಷಿತ್ತರಿಯವೇ ಣ್ಡುವದಾಕ ಚ್ಚೇರನ್ದವರ್ಥಪ ಞ್ಚಕಮೇದೆನ್ನಿಲ್:—
"ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ ಪ್ರಾಪ್ತುಶ್ಚಪ್ರತ್ಯಗಾತ್ಮನಃ।
ಪ್ರಾಪ್ತ್ಯುಪಾಯಂ ಫಲಂಚೈವ ತಥಾಪ್ರಾಪ್ತಿ ವಿರೋಧಿಚ।
ವದನ್ತಿ ಸಕಲಾ ವೇದಾಸ್ಸೇತಿಹಾಸ ಪುರಾಣಕಾಃ"

ಇಸ್ಸಂಬಂಧಂಪೋಲೆ— ಈ ಶರೀರ ಶರೀರಿ ಅಥವಾ ಶೇಷ ಶೇಷಿ ಸಂಬಂಧಜ್ಞಾನವು ಹೇಗೆ ಪ್ರಧಾನವಾದುದೋ ಹಾಗೆಯೇ **ಮುಮುಕ್ಷುವುಕ್ಕು ವಿಶೇಷಿತ್ತರಿಯ ವೇಣುವದಾಕಚೇರ್ನ್ದ**— ಮೋಕ್ಷಾರ್ಥಿಗೆ ಮುಖ್ಯವಾಗಿ ತಿಳಿಯಬೇಕಾಗಿರುವ, **ಅರ್ಥಪಞ್ಚಕಮೇದೆನ್ನಿಲ್**— ಅರ್ಥಪಂಚಕ ವ್ಯಾವುದೆಂದರೆ:—

ಅವತಾರಿಕೆ. ಅರ್ಥಪಞ್ಚಕಗಳು ಯಾವುವೆಂಬುದನ್ನು ಸಪ್ರಮಾಣವಾಗಿ ತಿಳಿಸುತ್ತಾರೆ.

ಅರ್ಥ— (1) ಪ್ರಾಪ್ಯಸ್ಯ—ಚೇತನನು ಹೊಂದಲು ಯೋಗ್ಯನಾದ, **ಬ್ರಹ್ಮಣಃ**- ಪರಬ್ರಹ್ಮನ, **ರೂಪಂ**- ಸ್ವರೂಪವೊದಲಾದವುಗಳನ್ನೂ, ಇಲ್ಲಿ **ರೂಪಂ** ಎಂಬ ಪದವು ಕಾಕಾಕ್ಷಿನ್ಯಾಯಪ್ರಕಾರ ಎರಡು ಕಡೆಗೂ ಅನ್ವಯವು. (2) **ಪ್ರಾಪ್ತುಶ್ಚ**—ಪರಬ್ರಹ್ಮವನ್ನುಹೋಗಿ ಸೇರುವನಾದ, **ಪ್ರತ್ಯಗಾತ್ಮನಃ**—ಜೀವಾತ್ಮನ, **ರೂಪಂ** ಸ್ವರೂಪ ಮೊದಲಾದವುಗಳನ್ನೂ, (3) **ಪ್ರಾಪ್ತ್ಯುಪಾಯಂ**— ಆ ಪರಬ್ರಹ್ಮನನ್ನು ಹೊಂದುವ ಉಪಾಯವನ್ನೂ, (4) **ಫಲಂ**- ಅದರಿಂದುಂಟಾಗುವ ಫಲವನ್ನೂ, (5) **ತಥಾ**—ಹಾಗೆಯೇ, **ಪ್ರಾಪ್ತಿ**

ಆತನಿಗೇನೇ ತಾನು ಪ್ರಯೋಜನವಾಗಿ ಮಾಡುವ ಕೈಂಕರ್ಯವೇ, ಫಲವಾಗಿಯೂ ಆಗುತ್ತದೆ. ಈ ಭಾವಗಳು ಅವಿದ್ಯೆಯಿಂದ ಗೋಚರವಾಗದೇ ಸ್ವಾತಂತ್ರ್ಯಾಭಿಮಾನ ದೇಹಾಭಿಮಾನಗಳು ವಿರೋಧಿಗಳೆಂಬ ಭಾವವು ತೋರಿಬರುತ್ತದೆ. ಹೀಗೆ ಈ ಅರ್ಥಪಂಚಕಾಭಿಪ್ರಾಯಗಳೂ, ಶರೀರಿ ಶರೀರ ಭಾವ ಜ್ಞಾನದಿಂದ ತೋರುವ ಶೇಷ ಶೇಷಿ ಭಾವದಲ್ಲೇ ಅಂತರ್ಗತವೆಂಬ ಭಾವವು. ಈ ಶರೀರ ಶರೀರಿ ಅಥವಾ ಶೇಷ ಶೇಷಿ ಭಾವವು ಹೇಗೆ ಮುಖ್ಯವಾಗಿ ತಿಳಿಯತಕ್ಕದ್ದೋ, ಹಾಗೆಯೇ ಮೋಕ್ಷಾರ್ಥಿಗೆ ಮುಖ್ಯವಾಗಿ ಈಗ ತಿಳಿಯಬೇಕಾಗಿ ಪ್ರಾಪ್ತವಾಗಿರುವ ಅರ್ಥಪಂಚಕಗಳು ಯಾವುದೆಂದರೆ:—

ಎನ್ರುಶೊಲ್ಲಪ್ಪಟ್ಟನ. ಇವತ್ತಿಲ್ ಪ್ರಾಪ್ಯಮಾನ ಬ್ರಹ್ಮತ್ತಿನುಡೈಯ ಸ್ವರೂಪಂತಿರುಮನ್ತ್ರತ್ತಿಲ್ ಪ್ರಥಮಾಕ್ಷರತ್ತಿಲುಂ, ನಾರಾಯಣ ಶಬ್ದತ್ತಿಲುಂ, ದ್ವಯತ್ತಿಲ್ ಸವಿಶೇಷಣಙ್ಗಳಾನ ನಾರಾಯಣ ಶಬ್ದಂಗಳಿಲುಂ, ಚರಮಶ್ಲೋಕತ್ತಿಲ್ "ಮಾಂ" "ಅಹಂ" ಎಙ್ಗಿರ ಪದಙ್ಗಳಿಲು ಮನು ಸನ್ಧೇಯಂ.

ವಿರೋಧಿಚ - ಪರಬ್ರಹ್ಮವನ್ನು ಹೊಂದುವದಕ್ಕೆ ವಿಘಾತವನ್ನುಂಟುಮಾಡುವದನ್ನೂ, ಹೀಗೆ ಇವು ಐದನ್ನೂ, **ಸೇತಿಹಾಸಪುರಾಣಕಾಃ** ಇತಿಹಾಸಪುರಾಣಗಳಿಂದ ಕೂಡಿದ, **ಸಕಲಾವೇದಾಃ** - ಸಮಸ್ತವೇದಗಳೂ, **ವದನ್ತಿ**-ಹೇಳುತ್ತವೆ, **ಎನ್ರು**-ಎಂದು, **ಶೊಲ್ಲಪಟ್ಟನ** - ಹಾರೀತಸಂಹಿತೆಯಲ್ಲಿ ಹೇಳಲ್ಪಟ್ಟದೆ.

1. ನಾವು ಪರಮ ಪದದಲ್ಲಿ ಹೊಂದುವ ಎಂದರೆ ಸೇವಿಸವ ಪರಬ್ರಹ್ಮನ ಸ್ವರೂಪ ಮೊದಲಾದವು.
2. ಜೀವಾತ್ಮರಾದ ನಮ್ಮಗಳ ಸ್ವರೂಪ ಮೊದಲಾದವು.
3. ಆ ಪರಬ್ರಹ್ಮನನ್ನ ಹೊಂದುವ ಉಪಾಯಗಳು, ಮಾರ್ಗಗಳೂ, ಮಾರ್ಗ ತೋರಿಸುವವನೂ ಇತ್ಯಾದಿ.
4. ಆ ಪರಬ್ರಹ್ಮವನ್ನು ಹೋಗಿ ಸೇರುವದರಿಂದುಂಟಾಗುವ ಫಲವು.
5. ಆ ಪರಬ್ರಹ್ಮ ಪ್ರಾಪ್ತಿಗೆ ವಿರೋಧಿಗಳು;—ಇವ್ರಗಳೇ ಅರ್ಥ ಪಂಚಕಗಳು.

ಹಾಗಾದರೆ, ಈ ರಹಸ್ಯ ತ್ರಯಗಳು ತುಂಬಾ ಸಾರತಮವಾಗಿ ಮುಖ್ಯವಾಗಿ ತಿಳಿಯತಕ್ಕವು ಎಂದು ಹೇಳಲ್ಪಟ್ಟಿತಲ್ಲಾ, ಅವುಗಳು ಈ ಅರ್ಥಪಂಚಕಗಳನ್ನು ಉಪಪಾದಿಸುತ್ತವೆಯೇ, ಎಂದರೆ, ಹಾಗೆ ಉಪಪಾದಿಸುತ್ತವೆ ಎಂದೂ, ಆ ಉಪಪಾದಿಸುವ ಭಾಗಗಳು ಯಾವವು ಎಂದೂ ಹೇಳುತ್ತಾರೆ.

ಈ ಅರ್ಥಪಂಚಕಗಳಲ್ಲಿ ಪ್ರಾಪ್ಯವಾದ ಪರಬ್ರಹ್ಮನ ಸ್ವರೂಪವನ್ನು,

ಮೂಲಮಂತ್ರದಲ್ಲಿ, ಮೊದಲನೇ ಅಕ್ಷರವಾದ **"ಅ"** ಕಾರದಲ್ಲೂ, **ಮೂರನೇಪದವಾದ "ನಾರಾಯಣ"** ಶಬ್ದದಲ್ಲೂ,

ಶ್ರಿಯಃ ಪತಿತ್ವಂ

ಅನ್ವಿಡಙ್ಗಳಿಲನುಸನ್ಧಿಕ್ಕುಮ್ ಪೋದು (1) ಶ್ರಿಯಾಸಾರ್ಧಂ ಜಗತ್ಪತಿಃ" (2) "ಏಷನಾರಾಯಣಶ್ರೀಮಾನ್" (3) ಭವಾನ್ನಾರಾಯಣೋದೇವಃ ಶ್ರೀಮಾಂಶ್ಚಕ್ರಧರೋವಿಭುಃ"

ದ್ವಯಮಂತ್ರದಲ್ಲಿ, **"ಶ್ರೀಮತ್," "ಶ್ರೀಮತೇ"** ಎಂಬ ವಿಶೇಷಣಗಳನ್ನು ಹೊಂದಿದ **"ನಾರಾಯಣ"** ಶಬ್ದಗಳಲ್ಲೂ,

ಚರಮಶ್ಲೋಕದಲ್ಲಿ, ಉತ್ತಮಪುರುಷವಾದ "**ಮಾಂ**" "**ಅಹಂ**" ಎಂಬುವ ಪದಗಳಲ್ಲೂ ತಿಳಿಯತಕ್ಕದ್ದು.

(ಮೂಲಮಂತ್ರದಲ್ಲಿ "**ಅ**" ಕಾರದಿಂದ ಸ್ವಾಮಿಯು ಶೇಷಿ ಎಂದೂ ಜೀವನು ಆತನಿಗೆ ಶೇಷನೆಂದೂ ತೋರಿಬರುತ್ತದೆ. **ನಾರಾಯಣಾಯ** ಎಂಬಲ್ಲಿ ತತ್ಪುರುಷಾರ್ಥದಿಂದ, ಸಮಸ್ತ ನಿತ್ಯವಸ್ತುಗಳಿಗೂ ಪ್ರಾಪ್ಯನು, ಪ್ರಾಪಕನು, ಆಧಾರವು ಎಂಬುದು ವ್ಯಕ್ತಪಡುತ್ತದೆ. ಬಹುವ್ರೀಹಿ ಅರ್ಥದಿಂದ ಅಂತರ್ಯಾಮಿತ್ವವು ಸೂಚಿಸಲ್ಪಡುತ್ತದೆ.

ದ್ವಯದಲ್ಲಿ ನಾರಾಯಣ ಶಬ್ದದಿಂದ ಈ ಮೇಲಿನ ಅಭಿಪ್ರಾಯಗಳೇ ಉಂಟಾಗುತ್ತವೆ. "**ಶ್ರೀಮತ್**" "**ಶ್ರೀಮತೆ**" ಎಂಬ ವಿಶೇಷಣಗಳಿಂದ ಶ್ರಿಯಃ ಪತಿತ್ವವು ವ್ಯಕ್ತಪಟ್ಟು ಲಕ್ಷ್ಮೀನಾರಾಯಣರಿಬ್ಬರಿಗೂ ಪ್ರಾಪ್ಯಪ್ರಾಪಕ ಮುಂತಾದದೆಶೆಗಳಲ್ಲಿ ಅನ್ವಯ ಉಂಟೆಂದು ತೋರಿಬರುತ್ತದೆ.

ಚರಮಶ್ಲೋಕದಲ್ಲಿ, "**ಮಾಂ**" ಎಂಬುವದರಿಂದ ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯಾದಿ ಗುಣಗಳುಳ್ಳ ಭಾವವೂ, "**ಅಹಂ**" ಶಬ್ದದಿಂದ ಸರ್ವಜ್ಞತ್ವ ಮೊದಲಾದ ಷಾಡ್ಗುಣ್ಯಾದಿ ಗುಣಗಳುಳ್ಳ ಭಾವವೂ, ಹೀಗೆ ಆಶ್ರಿತರಕ್ಷಣೆಗೆ ಉಪಯುಕ್ತವಾದ ಸಕಲಕಲ್ಯಾಣ ಗುಣಾಕರತ್ವವು ಹೇಳಲ್ಪಟ್ಟಿರುತ್ತದೆ.)

ಅನ್ವಿಡಙ್ಗಳಿಲ್— ಆ ಸ್ಥಳಗಳಲ್ಲಿ ಎಂದರೆ ಆ ಪರಬ್ರಹ್ಮಸ್ವರೂಪವನ್ನು ಅನುಸನ್ಧಾನ ಮಾಡುವಾಗೆಲ್ಲಾ, ಲಕ್ಷ್ಮೀವಿಶಿಷ್ಟನಾಗಿ

(1) ಲೈಙ್ಗಪುರಾಣಂ (2) ಹರಿವಂಶ 54-50 (3) ರಾ. ಯುದ್ಧ. 120-13.

ಯೇ ಅನುಸನ್ಧಾನ ಮಾಡಬೇಕೆಂಬದಾಗಿಯೂ, ಶ್ರಿಯಃ ಪತಿತ್ವವು ಬಂದು ಮುಖ್ಯವಾದ **ಸ್ವರೂಪ ನಿರೂಪಕ ಧರ್ಮ**ವೆಂದು ತೋರಿಸುವದಕ್ಕಾಗಿಯೂ, ಅನೇಕ ಪ್ರಮಾಣಗಳನ್ನು ಉದಾಹರಿಸುತ್ತಾರೆ.

(1) **ವೈಕುಂಠೇತು ಪರೇಲೋಕೇ ಶ್ರಿಯಾಸಾರ್ಧಂ ಜಗತ್ಪತಿಃ । ಆಸ್ತೇವಿಷ್ಣುರಚಿನ್ತ್ಯಾತ್ಮಾ ಭಕ್ತೈರ್ಭಾಗವತೈಸ್ಸಹ ॥**

ಈ ಲೀಲಾ ವಿಭೂತಿಗಿಂತಲೂ ಶ್ರೇಷ್ಠವಾದ ವೈಕುಂಠಲೋಕವಾದ ನಿತ್ಯವಿಭೂತಿಯಲ್ಲಿ, ಎಲ್ಲಾ ಲೋಕಗಳಿಗೂ ಈಶ್ವರನಾದ ಶ್ರೀ ಮಹಾವಿಷ್ಣುವು, **ಲಕ್ಷ್ಮೀಯುಕ್ತನಾಗಿ**, ಊಹಿಸಲಸಾಧ್ಯವಾದ ಸ್ವಭಾವ ವುಳ್ಳವನಾಗಿ, ಭಕ್ತರಿಂದಲೂ ಭಾಗವತರಿಂದಲೂ ಅಂದರೆ ನಿತ್ಯಮುಕ್ತರುಗಳೊಂದಿಗೆ ಬಿಜಮಾಡಿಸಿರುತ್ತಾನೆ.

(2) **ಏಷನಾರಾಯಣ ಶ್ರೀಮಾನ್ ಕ್ಷೀರಾರ್ಣವನಿಕೇತನಃ । ನಾಗಪರ್ಯಂಕ ಮುತ್ಸೃಜ್ಯ ಹ್ಯಾಗತೋಮಧುರಾಂಪುರೀಂ ॥**

ಕ್ಷೀರಾಬ್ಧಿಯನ್ನೇ ಆವಾಸವಾಗಿವುಳ್ಳ **ಲಕ್ಷ್ಮೀಯುಕ್ತನಾದ** ಈ ನಾರಾಯಣನು, ಅಲ್ಲಿ ಆದಿಶೇಷನೆಂಬ ಮಞ್ಚವನ್ನು ಬಿಟ್ಟು ಈ ಮಧುರಾಪಟ್ಟಣಕ್ಕೆ ಬಂದಿರುತ್ತಾನಷ್ಟೇ. ಇದರಿಂದ ಪರರೂಪದಲ್ಲಿ ನಿತ್ಯವಿಭೂತಿಯಲ್ಲಿರುವಾಗಲೂ, ಲೀಲಾವಿಭೂತಿಯಲ್ಲಿ ಅಂತರ್ಯಾಮಿಯಾಗಿರುವಾಗಲೂ, ಅರ್ಚ್ಯಾವತಾರಿಯಾಗಿರುವಾಗಲೂ ಸಹ ಲಕ್ಷ್ಮೀವಿಶಿಷ್ಟನಾಗಿಯೇ ಇರುತ್ತಾನೆಂಬ ಭಾವವು.

(3) **ಭವಾನ್ನಾರಾಯಣೋದೇವಃ ಶ್ರೀಮಾಂಶ್ಚಕ್ರಾಯುಧೋ ವಿಭುಃ । ಏಕಶೃಂಗೋ ವರಾಹಸ್ತ್ವಂಭೂತಭವ್ಯ ಸಪತ್ನಿಜಿತ್"**

ಸೀತೆಯು ಅಗ್ನಿಪ್ರವೇಶ ಮಾಡಿದನಂತರ, ಬ್ರಹ್ಮ ರುದ್ರೇನ್ದ್ರಾದಿಗಳೆಲ್ಲಾ ಶ್ರೀರಾಮುನನ್ನು ಕುರಿತು ಹೇಳುವ ವಾಕ್ಯವು. ನೀನು ಸಾಕ್ಷಾತ್ ಜಗತ್ತಿಗೆಲ್ಲಾ ಆಧಾರನಾಗಿ, ಚೇತನರಿಗೆ ಪ್ರಾಪಕಪ್ರಾಪ್ಯನಾಗಿ, ಸಕಲ ಜಗದಂತರ್ಯಾಮಿಯಾಗಿರುವ ನಾರಾಯಣನು, ಲೀಲಾವಿಭೂತಿಯಿಂದ ಕ್ರೀಡಿಸುವವನು ; **ಲಕ್ಷ್ಮೀಯುಕ್ತನು**, ಚಕ್ರಾ

(4) "ಶ್ರೀವತ್ಸವಕ್ಷಾ ನಿತ್ಯಶ್ರೀಃ", (5) "ವಿಷ್ಣೋಃ ಶ್ರೀರನಪಾಯಿನೀ", (6) "ಸೀತಾ ಸಮಕ್ಷಂ ಕಾಕುತ್ಸ್ಥ ಮಿದಂ ವಚನ ಮಬ್ರವೀತ್ (7) "ಸೀತಾಮುವಾಚಾತಿಯಶಾಃ ರಾಘವಂಚ ಮಹಾವ್ರತಂ"

ಯುಧವುಳ್ಳವನು, ಸರ್ವವ್ಯಾಪಿಯು, ಒಂದು ಕೋರದಾಡೆಯುಳ್ಳವನಾಗಿ ವರಾಹಾವತಾರವನ್ನೆತ್ತಿದವನು, ಹಿಂದೆ ಇದ್ದ ಮುಂದೆಬರುವ ದುಷ್ಟರನ್ನು ನಿಗ್ರಹಿಸುವವನು. ಇದರಿಂದ ಸರ್ವವಿಭವಾತಾರದಲ್ಲೂ ಲಕ್ಷ್ಮಿಯೊಂದಿಗೇನೇ ಇರುವವನೆಂಬುವದು ವ್ಯಕ್ತಪಡುತ್ತದೆ.

(4) "ಶ್ರೀವತ್ಸವಕ್ಷಾ ನಿತ್ಯಶ್ರೀಃ", ಶ್ರೀವತ್ಸವೆಂಬ ಚಿನ್ಹೆಯನ್ನು ವಕ್ಷಸ್ಥಳದಲ್ಲಿ ಧರಿಸಿರುವವನು, **ಸದಾಲಕ್ಷ್ಮಿಯೊಂದಿಗೆ ಸೇರಿರುವವನು,** ಇದರಿಂದ **ನಿತ್ಯಯೋಗವು** ಎಲ್ಲಾ ಅವಸ್ಥೆಗಳಲ್ಲೂ ಹೇಳಲ್ಪಟ್ಟಿತು. " **ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ** " ಸೂರ್ಯನು ಹೇಗೆ ದಿವ್ಯ ತೇಜಸ್ಸಿನಿಂದ ಯುಕ್ತನಾಗಿದ್ದಾನೋ ಹಾಗೆ ಎಂಬ ಭಾವವು.

(5) ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ

ಈ ಲೋಕಮಾತೆಯಾದ ಲಕ್ಷ್ಮಿಯು ವಿಷ್ಣುವಿಗೂ ಕೂಡ ಸಂಪತ್ತನ್ನುಂಟುಮಾಡುವವಳು, ನಿತ್ಯದಲ್ಲೂ ಒಟ್ಟಿಗೆ ಇರುವವಳು, ವಿಷ್ಣುವು ಹ್ಯಾಗೆ ಎಲ್ಲವನ್ನೂ ವ್ಯಾಪಿಸಿದ್ದಾನೋ, ಹಾಗೆಯೇ ಈಕೆಯೂ ಕೂಡ ಎಲ್ಲವನ್ನೂ ವ್ಯಾಪಿಸಿರುವವಳು. ಇದರಿಂದ ವಿಷ್ಣುವಿನೊಂದಿಗಿರುವ ನಿತ್ಯಯೋಗವು, ಸ್ವರೂಪತಃಕೂಡ ಉಂಟೆಂದು ಹೇಳಲ್ಪಟ್ಟಿತು. ನಮ್ಮಲ್ಲೇ ಕೆಲವರು, ಸ್ವರೂಪತಃ ನಿತ್ಯಯೋಗವು ಲಕ್ಷ್ಮಿಗೆ ಇಲ್ಲವೆಂಬ ವಾದವು ಶಾಸ್ತ್ರವಿರುದ್ಧವಾದುದೆಂಬುವದು ಹೇಳಲ್ಪಟ್ಟಿತು.

---

(5) ವಿ. ಪು. 1. 8. 17. (6) ರಾ. ಅರಣ್ಯ. 15. 6

(6) ಸೀತಾ ಸಮಕ್ಷಂ ಕಾಕುತ್ಸ್ಥ ಮಿದಂ ವಚನ ಮಬ್ರವೀತ್।
ಪರವಾನಸ್ಮಿ ಕಾಕುತ್ಸ್ಥತ್ವಯಿ ವರ್ಷಶತಂ ಸ್ಥಿತೇ॥

ಇದು ಲಕ್ಷ್ಮಣನು ಶ್ರೀರಾಮನಂ ಕುರಿತು ಹೇಳುವವಾಕ್ಯವು. ಹಿಂದೆ ಶ್ರೀರಾಮನು ವನಕ್ಕೆ ಬರಬೇಡವೆಂದು ಎಷ್ಟು ಹೇಳಿದರೂ, ಮುಷ್ಕರಹಿಡಿದು ಸ್ವತಂತ್ರಿಸಿ ಬಂದನು. ಈಗ ತಾನು ಪರಮಾತ್ಮನಿಗೆ ಅಧೀನನಾದುದರಿಂದ ಅಸ್ವತನ್ತ್ರನೆಂಬುವದು ವಿದಿತ ವಾದುದರಿಂದ, ಶ್ರೀರಾಮನು ಒಂದು ರಮ್ಯವಾದ ಪ್ರದೇಶದಲ್ಲಿ ಆಶ್ರಮವನ್ನು ರಚಿಸು ಎಂದಾಜ್ಞಾಪಿಸಲಾಗಿ, ಸ್ಥಳನಿರ್ಣಯದಲ್ಲಿ ತಾನು ಸ್ವತನ್ತ್ರಿಸುವದು ಅಯುಕ್ತವೆಂದು ಭಾವಿಸಿ ಲಕ್ಷ್ಮಣನು ಹೇಳುವ ಪ್ರಕರಣವು. ಇದರಿಂದ ಲಕ್ಷ್ಮಣನು ತನ್ನ ಪಾರತಂತ್ರ್ಯವನ್ನು ವ್ಯಕ್ತಪಡಿಸುತ್ತಾನೆ. **ಪುರುಷಕಾರ ಭೂತೆಯಾಗಿ**, ಯಾವಾಗಲೂ ಜೊತೆಯಲ್ಲೇ ಇರುವ ಲಕ್ಷ್ಮಿಯ ಅವತಾರವಾದ ಸೀತೆಯ ಸಮಕ್ಷದಲ್ಲಿ ನಾನು **ಪರವಾನ್** ಸ್ವಾಮಿಯುಳ್ಳವನಾದುದರಿಂದ ಅಸ್ವಾತಂತ್ರ್ಯನು ಎಂದು ಹೇಳಿಕೊಂಡನು. ಇದರಿಂದ ಲಕ್ಷ್ಮಿಯು ಪುರುಷಕಾರಭೂತೆಯೆಂದೂ, ಮತ್ತು ದ್ವಯದ ಉತ್ತರಖಂಡದಲ್ಲಿ ತೋರುವ ಉಪೇಯಭಾವದಲ್ಲಿ ಲಕ್ಷ್ಮೀನಾರಾಯಣರಿಬ್ಬರೂ ಉದ್ದೇಶ್ಯರೆಂದು ಹೇಳಿದಂತಾಯಿತು. ಸರ್ವಕೈಙ್ಕರ್ಯಗಳೂ ಇಬ್ಬರಿಗೂ ಎಂಬ ಭಾವವು.

(7) ಸಭ್ರಾತು ಶ್ಚರಣೌ ಗಾಢಂ ನಿಪೀಡ್ಯ ರಘುನನ್ದನಃ।
ಸೀತಾ ಮುವಾಚಾತಿಯಶಾಃ ರಾಘವಂಚ ಮಹಾವ್ರತಃ॥

ಇದೂ ಲಕ್ಷ್ಮಣನು ಶ್ರೀರಾಮನನ್ನು ಕುರಿತು ಹೇಳುವ ವಾಕ್ಯವು. ವನಕ್ಕೆ ಅನುಸರಿಸಿ ಹೋಗಲು ಯಾವಾಗ ಶ್ರೀರಾಮನು ಸೀತೆಗೆ ಅನುಜ್ಞೆಯನ್ನಿತ್ತನೋ, ಆಗ ಲಕ್ಷ್ಮಣನು ಸ್ವಾಮಿಯ ಚರಣಾರವಿಂದದಲ್ಲಿ ಪೂರ್ಣಶರಣಾಗತಿಯನ್ನು ಅನುಷ್ಠಿಸಿದವನಾಗಿ, ತನ್ನ ಶರಣಾಗತಿಯು ವಿಫಲವಾಗದೆಂಬ ಮಹಾ ವಿಶ್ವಾಸದಿಂದ ಹೇಳುವ ಸಂದರ್ಭವು. **ಅತಿಯಶಾಃ** – ಮಹಾ ಖ್ಯಾತಿಯುಳ್ಳ **ಸರಘುನಂದನಃ** – ಆ ರಘುವಂ

(೮) "ಅಲ ಮೇಷಾ ಪರಿತ್ರಾತುಂ ರಾಘವಾ ದ್ರಾಕ್ಷಸೀಗಣಂ"

ಶೋತ್ಪನ್ನನಾದ ಲಕ್ಷ್ಮಣನು, **ಭ್ರಾತುಃ** - ಅಣ್ಣನಾದ ಶ್ರೀ ರಾಮನ, **ಚರಣೌ** - ಎರಡು ಕಾಲುಗಳನ್ನು, **ಗಾಢಂ** - ಘಟ್ಟಿಯಾಗಿ **ನಿಪೀಡ್ಯ**- ಹಿಡಿದವನಾಗಿ, **ಸೀತಾಂ** - ಸೀತೆಯನ್ನೂ, **ಮಹಾವ್ರತಂ** - ಶರಣಾಗತನ ಕೋರಿಕೆಯನ್ನು ಹೇಗಾದರೂ ಸಲ್ಲಿಸತಕ್ಕವನೆಂಬ ಮಹಾವ್ರತವನ್ನು ಕೈಕೊಂಡಿರುವ, **ರಾಘವಂಚ** - ರಾಮನನ್ನೂ ಕುರಿತು, **ಉವಾಚ** - ಹೇಳಿದನು ಅಂದರೆ ಪ್ರಾರ್ಥಿಸಿದನು. ಸೀತೆಯು ಅನುಗ್ರಹಮಯಳು ಬಹು ಸುಲಭವಾಗಿ ತನ್ನನ್ನು ಕರದುಕೊಂಡು ಹೋಗಲು ಒಪ್ಪುವಳು, ಆದರೂ ಪತಿಸಾನ್ನಿಧ್ಯದಲ್ಲಿ ಪತಿ ಇಂಗಿತಾನುಸಾರವಾಗಿಯೇ ನಡಿಯುವವಳು. ಆದುದರಿಂದ ಈಗ ಒಡಂಬಡಿಸತಕ್ಕದ್ದು ರಾಮನನ್ನೇ ಎಂದು ತಿಳಿದು "ಭ್ರಾತು ಶ್ಚರಣೌ ಗಾಢಂ ನಿಪೀಡ್ಯ" ಸೀತಾರಾಮರಿಬ್ಬರನ್ನೂ ಕುರಿತು ಪ್ರಾರ್ಥಿಸುತ್ತಾನೆ. ಆದುದರಿಂದ ದ್ವಯಮಂತ್ರದ ಪೂರ್ವಖಂಡದ "ಶ್ರೀಮತ್" ಎಂಬ ಶಬ್ದಾನುಸಾರ ಇಬ್ಬರೂ ಉಪಾಯದಲ್ಲಿ ಉದ್ದೇಶ್ಯರೆಂಬುವದು ಇದರಿಂದ ವ್ಯಕ್ತಪಡುತ್ತದೆ.

(೮) "ಅಲಮೇಷಾ ಪರಿತ್ರಾತುಂ ರಾಘವಾದ್ರಾಕ್ಷಸೀಗಣಂ" ಇದು ಅಶೋಕವನದಲ್ಲಿ ಸೀತೆಯ ಸುತ್ತಲಿದ್ದ ರಾಕ್ಷಸಿಯರನ್ನು ಕುರಿತು ಹೇಳುವ ತ್ರಿಜಟಾ ವಾಕ್ಯವು. ಉತ್ತರಾರ್ಧವು "**ಅಭಿಯಾಚಾಮ ವೈದೇಹೀಮೇತದ್ಧಿ ಮಮರೋಚತೆ,**" **ರಾಘವಾತ್** - ಶ್ರೀ ರಾಮನ ದೆಶೆಯಿಂದ **ರಾಕ್ಷಸೀಗಣಂ** - ಈ ರಾಕ್ಷಸ ಸ್ತ್ರೀಯರ ಸಮೂಹವನ್ನು, **ಪರಿತ್ರಾತುಂ** - ಸಂರಕ್ಷಿಸುವದಕ್ಕೆ, **ಏಷಾ** - ಈ ಸೀತೆಯೇ, **ಅಲಂ** - ಸಾಕು. ಆದುದರಿಂದ **ಅಭಿಯಾಚಾಮ ವೈದೇಹೀಂ** - ಈ ಸೀತೆಯನ್ನು ಪ್ರಾರ್ಥಿಸೋಣ, **ಏತದ್ಧಿ ಮಮರೊಚತೆ** - ಇದೀಗ ಸರಿಯಾದ ಉಪಾಯವಾಗಿ ನನಗೆ ತೋರುತ್ತದೆ. ಇದರಿಂದ ಲಕ್ಷ್ಮಿಗೂ ಕೂಡ ವಾಲ್ಲಭ್ಯಾತಿಶಯದಿಂದ ಸಾಕ್ಷಾತ್ತಾಗಿ ಉಪಾಯ ರೂಪದಲ್ಲಿದ್ದು ರಕ್ಷಿಸಲು

---

(8) ರಾ. ಸುಂದರ. 58,87.

(9) " **ಭವೇಯಂ ಶರಣಂ ಹಿವಃ,**" (10) " **ಭವಾಂಸ್ತು ಸಹ ವೈದೇಹ್ಯಾ,**" (11) " **ತಯೂಸಹಾಸೀನ ಮನಂತ ಭೋಗಿನಿ.**"

ಶಕ್ತಿಯುಂಟೆಂದು ತೋರುತ್ತದೆ. ಎಂಬ ಭಾವವು.

9. **ತತಸ್ಸಾ ಹ್ರೀಮತೀ ಬಾಲಾಭರ್ತು ರ್ವಿಜಯಹರ್ಷಿತಾ ।**
ಅವೋಚದ್ಯದಿ ತತ್ತಥ್ಯಂ ಭವೇಯಂ ಶರಣಂ ಹಿವಃ ॥

ಇದು ಮೇಲೆ ಹೇಳಿದ ರೀತಿಯಲ್ಲಿ ತ್ರಿಜಟೆಯು ಸೀತೆಯಲ್ಲಿ ಮಾಡಿದ ಪ್ರಣಾಮರೂಪಶರಣಾಗತಿಯನ್ನನುಷ್ಠಿಸಿ ಪ್ರಾರ್ಥಿಸಿದ ನಂತರ, ಸೀತೆಯ ಪ್ರತ್ಯುತ್ತರವು. "ಯಾವಾಗ ತ್ರಿಜಟೆಯು ಪಾರ್ಥಿಸಿದಳೋ ಆಗ ಬಾಲೆಯಾದ ಸೀತೆಯು ತನ್ನ ಪ್ರಶಂಸಾಕಥನದಿಂದ ಸ್ವಲ್ಪ ಲಜ್ಜಿತಳಾಗಿ ತನ್ನ ಗಂಡನಾದ ಶ್ರೀರಾಮನಿಗೆ ವಿಜಯ ಸೂಚಕ ಸ್ವಪ್ನದಿಂದ ಹರ್ಷಿತಳಾಗಿ, ನೀವು ಹೇಳುವ ಸಪ್ನವು ಯಥಾರ್ಥ ವಾದರೆ, ನಾನು ನಿಮಗೆ ರಕ್ಷಕಳಾಗುವೆನು" ಎಂದು ಸೀತೆಯು ಹೇಳಿದಳು. ಇದರಿಂದ ಲಕ್ಷ್ಮಿಯು ಯಾವಾಗಲೂ ಸರ್ವೇಶ್ವರ ನೊಂದಿಗೆ ಇರುವವಳಾಗಿ ತಾನೂ ಉಪಾಯ ಭೂತಳು ಎಂಬುವದು ವ್ಯಕ್ತಪಡುತ್ತದೆ.

10. " **ಭವಾಂಸ್ತು ಸಹವೈದೇಹ್ಯಾ ಗಿರಿಸಾನುಷುರಂಸ್ಯತೇ ।**
ಅಹಂ ಸರ್ವಂ ಕರಿಷ್ಯಾಮಿ ಜಾಗ್ರತ ಸ್ಸ್ವಪತಶ್ಚತೆ."

ಇದು ರಾಮನನ್ನು ಕುರಿತು, ವನಕ್ಕೆ ತನ್ನನ್ನೂ ಕರದುಕೊಂಡು ಹೋಗು ಎಂದು ಪ್ರಾರ್ಥಿಸುವ ಲಕ್ಷ್ಮಣನ ವಾಕ್ಯವು. **ಭವಾಂಸ್ತು ವೈದೇಹ್ಯಾಸಹ** - ನೀನು ಸೀತೆಯೊಡನೆ, **ಗಿರಿಸಾನುಷು** - ಪರ್ವತ ತೊಪ್ಪಲುಗಳಲ್ಲಿ, **ರಂಸ್ಯತೇ** - ವಿಹರಿಸು, **ಅಹಂ** - ನಾನು, **ಜಾಗ್ರತಃ,** ನೀನು ಎಚ್ಚರವಾಗಿಯೇ ಇರಲಿ ಅಥವಾ, **ಸ್ವಪತಶ್ಚ** - ಮಲಗಿಯೇ ಇರಲಿ, **ತೇ** - ನಿನಗೆ, **ಸರ್ವಂ** - ಸಮಸ್ತ ಕೈಂಕರ್ಯಗಳನ್ನೂ, **ಕರಿಷ್ಯಾಮಿ** - ಮಾಡುವೆನು. ಈ ಶ್ಲೋಕವು ತುಂಬಾ ಅಮೋಘಾರ್ಥ ಗರ್ಭಿತವಾದುದು. ಜೀವಾತ್ಮನು ಲಕ್ಷ್ಮೀನಾರಾಯಣ ರಿಬ್ಬರಿಗೂ ಶೇಷಭೂತನೆಂದೂ ಅವರಿಗೆ ಕೈಂಕರ್ಯಮಾಡುವದೇ ತನಗೆ

---

(1) ರಾಮಾ. ಸುಂ. 58-89. (10) ರಾಮಾ. ಅರ. 31-27. (11) ಆಳ. ಸ್ತೋತ್ರಂ

ಸ್ವರೂಪವೆಂದೂ, ಪ್ರಾಪ್ಯದೆಶೆಯಲ್ಲಿ ಲಕ್ಷ್ಮೀಯುಕ್ತನಾಗಿ ಜೀವಾತ್ಮನ ಕೈಂಕರ್ಯವನ್ನು ಸ್ವೀಕರಿಸುವನೆಂದೂ ಈ ಶ್ಲೋಕವು ತಿಳಿಸುತ್ತದೆ. ಈ ಸಂದರ್ಭದಲ್ಲಿ ಸ್ವಾಮಿಯು ಲಕ್ಷ್ಮಿಯೊಂದಿಗೇನೆ ಸದಾ ಇರುತ್ತಾನೆಂಬುವದು ಪ್ರತಿಪಾದಿಸಲ್ಪಟ್ಟಿರುತ್ತದೆ.

ಇದುವರಿವಿಗೂ ಹೇಳಿದುದರಲ್ಲಿ ಪರ, ವ್ಯೂಹ, ವಿಭವಾವತಾರ ಕಾಲ ಮುಂತಾದ ಸಮಯಗಳಲ್ಲೆಲ್ಲಾ ಸ್ವಾಮಿಯು ಲಕ್ಷ್ಮಿಯೊಂದಿಗೇನೆ ಸದಾ ಇರುವನೆಂದೂ, ಆದುದರಿಂದ ಪರಮಾತ್ಮ ಸ್ವರೂಪವನ್ನು ಅನುಸಂಧಾನ ಮಾಡುವಾಗೆಲ್ಲಾ ಲಕ್ಷ್ಮೀ ವಿಶಿಷ್ಟನಾಗಿದ್ದಾನೆಂದೂ, "**ಏಕೋ ವಿದ್ಯಾಸಹಾಯಸ್ತ್ವಂ**" ಎಂಬ ವ್ಯಾಸಮಹರ್ಷಿಯ ಉಕ್ತ್ಯನುಸಾರವಾಗಿ ಪರಮಾತ್ಮನು ಒಬ್ಬನೇ ಎಂದು ಹೇಳುವ ಸಂದರ್ಭದಲ್ಲೆಲ್ಲಾ ಲಕ್ಷ್ಮೀವಿಶಿಷ್ಟನಾಗಿಯೇ ಇರುವ ಒಬ್ಬನು ಎಂದು ಭಾವಿಸಬೇಕೆಂದು ಹೇಳಲ್ಪಟ್ಟಿತು. ಅಂತೂ ಅವತಾರ ಕಾಲದಲ್ಲೂ ಲಕ್ಷ್ಮೀವಿಶಿಷ್ಟನಾಗಿಯೇ ಇರುತ್ತಾನೆಂದು ಹೇಳಲ್ಪಟ್ಟಿತು. ಆದರೆ ಬ್ರಹ್ಮಚಾರಿಯಾಗಿ ವಾಮನಾವತಾರ ಮಾಡಿದನಲ್ಲಾ ಆಗಲೂ ಲಕ್ಷ್ಮೀವಿಶಿಷ್ಟನಾಗಿಯೇ ಇದ್ದನೇ ಎಂದರೆ "**ಕೃಷ್ಣಾಜಿನೇನ ಸಂವೃಣ್ವನ್ ವಧೂಂ ವಕ್ಷಸ್ಥಲಾಲಯಾಂ,**" ಬ್ರಹ್ಮಚಾರಿಯಾಗಿ ಕೃಷ್ಣಾಜಿನವನ್ನು ಧರಿಸಿದಾಗ, ವಕ್ಷಸ್ಥಲದಲ್ಲಿದ್ದ ತನ್ನಪತ್ನಿಯಾದ ಲಕ್ಷ್ಮಿಯನ್ನು ಕೃಷ್ಣಾಜಿನದಿಂದ ಮರಿಸಿಕೊಂಡಿದ್ದನೆಂದು ಹೇಳಲ್ಪಟ್ಟಿರುತ್ತದೆ. ಆದುದರಿಂದಲೇ

"ರಾಘವತ್ವೇಭವತ್ಸೀತಾ ರುಕ್ಮಿಣೀ ಕೃಷ್ಣ ಜನ್ಮನಿ
ಅನ್ಯೇಷು ಚಾವತಾರೇಷು ವಿಷ್ಣೋ ರೇಷಾನ ಪಾಯಿನೀ"

ಅಂದರೆ ರಾಮಾವತಾರದಲ್ಲಿ ಸೀತೆಯಾಗಿಯೂ, ಕೃಷ್ಣಾವತಾರದಲ್ಲಿ ರುಕ್ಮಿಣಿಯಾಗಿಯೂ, ಇನ್ನೂ ಇತರ ಅವತಾರಕಾಲಗಳಲ್ಲಿ ಅನುರೂಪವಾದ ದಿವ್ಯಮಂಗಳ ವಿಗ್ರಹಯುಕ್ತಳಾಗಿ ಶ್ರೀ ಮಹಾವಿಷ್ಣುವನ್ನನುಸರಿಸಿ ಹೋಗುವಳಾಗಿಯೂ ಇದ್ದಾಳೆಂದು ವಿಷ್ಣುಪುರಾಣದಲ್ಲಿ ಶ್ರೀ ಪರಾಶರರು ಹೇಳಿರುತ್ತಾರೆ. ಹಿಂದೆ ಎಲ್ಲಾ ಋಷಿಪ್ರೋಕ್ತಗ

(12) " **ಕಾಂತಸ್ತೇ ಪುರುಷೋತ್ತಮಃ** " (13) " **ಸ್ವಪರಿಚರಣಭೋಗೈಶ್ರ್ಶೀಮತಿ ಪ್ರೀಯಮಾಣೇ**"

ಳಾದ ಪುರಾಣೇತಿಹಾಸಪ್ರಮಾಣಗಳನ್ನು ತೋರಿದವರಾಗಿ ಇನ್ನು ಮುಂದೆ ಆಚಾರ್ಯರುಗಳು ಆಳ್ವಾರುಗಳು ಅಪ್ಪಣೆಕೊಡಿಸಿದ ಪ್ರಮಾಣಗಳನ್ನು ಉದಾಹರಿಸುತ್ತಾರೆ.

11 " **ತಯಾಸಹಸೀನ ಮನನ್ತಭೋಗಿನಿ** " ಶ್ರೀಯಾಮುನಾರ್ಯರವರು, ಮುಕ್ತದೆಶೆಯಲ್ಲಿ ಸೇವೆಯನ್ನೀಯುವ ಪರಮಪುರುಷನನ್ನು ಸ್ತುತಿಸುವ ಭಾಗವು. ಅಂತಹ ಪ್ರಾಪ್ಯದೆಶೆಯಲ್ಲಿಯೂ ಸ್ವಾಮಿಯು ಲಕ್ಷ್ಮೀವಿಶಿಷ್ಟನಾಗಿಯೇ ಇರುತ್ತಾನೆಂದು ಹೇಳಲ್ಪಟ್ಟಿರುತ್ತದೆ ; ಏಕೆಂದರೆ ಪರತತ್ವಸ್ವರೂಪವೇ ಲಕ್ಷ್ಮೀವಿಶಿಷ್ಟತೆಯನ್ನು ಹೊಂದಿದುದು, ಆದುದರಿಂದ **ಅನಂತ ಭೋಗಿನಿ** ಆದಿಶೇಷನ ಹೆಡೆಯಮೇಲೆ, **ತಯಾಸಹ** ಅಂತಹ ವಿಭವೈಶ್ವರ್ಯಾದಿಗಳುಳ್ಳ ಲಕ್ಷ್ಮಿಯೊಂದಿಗೆ, **ಆಸೀನಂ** - ಬಿಜಮಾಡಿಸಿರುವ ಪರಮಾತ್ಮನನ್ನು

" ತಯಾಸಹಾಸೀನ ಮನನ್ತ ಭೋಗಿನಿ ಪ್ರಕೃಷ್ಟ ವಿಜ್ಞಾನ ಗುಣೈಕಧಾಮನಿ।
ಫಣಾಮಣಿ ವ್ರಾತಮಯೂಖ ಮಣ್ಡಲ ಪ್ರಕಾಶ ಮಾನೋದರ ದಿವ್ಯಧಾಮನಿ ॥

ಎಂಬುವದು ಪೂರಾ ಶ್ಲೋಕವು.

12. ಇದು ಚತುಶ್ಲೋಕಿಯ ಆರಂಭವು. " **ತೇ ಕಾನ್ತಃ** " ನಿನ್ನ ವಲ್ಲಭನು, **ಪುರುಷೋತ್ತಮಃ** - ನಿತ್ಯ, ಮುಕ್ತ, ಭದ್ಧರಾದ ತ್ರಿವಿಧ ಜೀವಾತ್ಮರುಗಳಿಗಿಂತಲೂ ತುಂಬಾ ವಿಲಕ್ಷಣನಾಗಿ ಉತ್ತಮನು. ಈ ಚತುಶ್ಲೋಕಿಯಲ್ಲಿ ಉಪಾಯತ್ವ, ಉಪೇಯತ್ವ

---

(13) ಶ್ರಿ ಆಳ. ಆತ್ಮಸಿದ್ಧಿ,

(14) **"ಶ್ರೀಮತೆ ನಿರ್ಮಲಾನಂದೋ ದನ್ವತೇ ವಿಷ್ಣವೇ ನಮಃ"** (15) **ಶ್ರಿಯಃಕಾಂತೋಽನಂತೋ ವರಗುಣ ಗಣೈ ಕಾಸ್ಪದವಪುಃ,**

ದಲ್ಲೂ, ಮತ್ತು ಐಹಿಕ ಸರ್ವಭೋಗಗಳು, ಕೈವಲ್ಯ, ಮೋಕ್ಷ ಮುಂತಾದ ಅಭೀಷ್ಟಗಳನ್ನೆಲ್ಲಾ ಕೊಡುವ ಶಕ್ತಿಯುಳ್ಳವಳಾಗಿ ಪರ ಬ್ರಹ್ಮನೊಂದಿಗೇನೇ ಇರುವಳೆಂದು ಪ್ರತಿಪಾದಿಸಿರುವದರಿಂದ ಉದಾ ಹರಿಸಿರುತ್ತಾರೆ. ಈ ಶ್ಲೋಕದಲ್ಲಿ ಉಭಯ ವಿಭೂತಿಗಳಿಗೂ ಸ್ವಾಮಿ ಯಹಾಗೆ ಈಕೆಯೂ ಶೇಷಿಯು ಎಂಬುದು ತೋರಿಬರುತ್ತದೆ.

13. **"ಸ್ವಪರಿಚರಣ ಭೋಗೈಃ"**- ತನಗೆ ಮಾಡುವ ಕೈಂ ಕರ್ಯ ರೂಪವಾದ ಭೋಗಗಳಿಂದ, **ಶ್ರೀಮತಿ** - ಲಕ್ಷ್ಮೀಯುಕ್ತ ನಾದ ನಾರಾಯಣನು, **ಪ್ರೀಯಮಾಣೆ** - ಸಂತುಷ್ಟನಾಗಲಾಗಿ, ಎಂ ಬರ್ಥವು. ಇದರಿಂದ ಜೀವಾತ್ಮರುಗಳು ಮಾಡುವ ಸರ್ವವಿಧ ಕೈಂಕ ರ್ಯಗಳೂ **ಲಕ್ಷ್ಮೀವಿಶಿಷ್ಟನಾದ** ಪರಮಾತ್ಮನಿಗೇನೆ ಎಂದೂ, ಇಬ್ಬರೂ ಯಾವಾಗಲೂ ಒಟ್ಟಿಗಿರುವುದರಿಂದ ಆ ಕೈಂಕರ್ಯಗಳಿಗೆ ಇಬ್ಬರೂ ಉದ್ದೇಶ್ಯರೆಂದೂ ಹೇಳಿದಂತಾಯಿತು.

14. **"ಶ್ರೀಮತೇ ನಿರ್ಮಲಾನಂದೋ ದನ್ವತೇ ವಿಷ್ಣವೇ ನಮಃ,"** **ಶ್ರೀಮತೆ** - ಲಕ್ಷ್ಮೀಯುಕ್ತನಾದ, **ನಿರ್ಮಲ** - ಹೇಯ ಗುಣಗಳೊಂದೂ ಇಲ್ಲದ, **ಆನಂದ** - ಆನಂದ ಮೊದಲಾದವುಗಳಿಗೆ, **ಉದನ್ವತೇ** - ಸಮುದ್ರವಾಗಿರುವ, **ವಿಷ್ಣವೇ** - ವಿಷ್ಣುವಿಗೆ, **ನಮಃ**- ನಮಸ್ಕಾರವು. ಇಲ್ಲಿ ಪರಬ್ರಹ್ಮ ಸ್ವರೂಪವೂ, ಹೇಗೆ ಜ್ಞಾನಾ ನಂದ ಅಮಲತ್ವಾದಿಗಳುಳ್ಳದ್ದೋ ಹಾಗೆಯೇ ಅವಿನಾಭೂತೆಯಾದ, ಲಕ್ಷ್ಮಿಯೂ ಕೂಡ ಜ್ಞಾನಾನಂದ ಅಮಲತ್ವಾದಿಗಳುಳ್ಳ ಸ್ವರೂಪ ಉಳ್ಳವಳು ಎಂದು ಹೇಳಿದಂತೆ ಆಯಿತು.

15. **"ಶ್ರಿಯಃಕಾನ್ತೋಽ ನನ್ತೋವರಗುಣ ಗಣೈಕಾಸ್ಪದ ವಪುಃ"** ಸರ್ವೇಶ್ವರನು **ಶ್ರಿಯಃಕಾಂತಃ** - ಲಕ್ಷ್ಮೀವಲ್ಲಭನು,

---

(14) ಶ್ರೀ ಭಾಷ್ಯಕಾರರ ವೇದಾಂತ ಸಾರ. (15) ಶ್ರೀ ಭಾಷ್ಯಕಾರರ ವೇದಾನ್ತ ದೀಪದ ಮಂಗಳಶ್ಲೋಕವು.

(16) "ಬ್ರಹ್ಮಣಿ ಶ್ರೀನಿವಾಸೆ,"

ಅನನ್ತಃ - ಮೂರುವಿಧವಾದ ಪರಿಚ್ಛೆನ್ನತೆಯೂ ಇಲ್ಲದ ಅಪರಿಚ್ಛೆನ್ನ ಸ್ವರೂಪನು, **ವರಗುಣಗಣ** - ಶ್ರೇಷ್ಠವಾದ ಕಲ್ಯಾಣಗುಣಗಳ ಸಮೂಹಕ್ಕೆ, **ಏಕಾಸ್ಪದ** - ಮುಖ್ಯಾಶ್ರಯವಾದ, **ವಪುಃ** - ದಿವ್ಯಮಂಗಳ ವಿಗ್ರಹ ಉಳ್ಳವನು. ಇದರಿಂದ ಸ್ವಾಮಿಯು ಹಾಗೆ ಅಪರಿಚ್ಛೆನ್ನ ಸ್ವರೂಪಳು, ಕಲ್ಯಾಣಗುಣಾಕರಳು, ದಿವ್ಯಮಂಗಳವಿಗ್ರಯುಕ್ತಳೆಂದು ಹೇಳಲ್ಪಟ್ಟಿತು.

16. **ಶ್ರೀನಿವಾಸೆ** - ಲಕ್ಷ್ಮಿಗೆ ಆವಾಸಭೂತನಾದ, **ಬ್ರಹ್ಮಣಿ**- ಪರಬ್ರಹ್ಮನಲ್ಲಿ. ಇಂತಹ ಪರಬ್ರಹ್ಮನಲ್ಲಿ ಭಕ್ತಿರೂಪವಾದ ಬುದ್ಧಿಯುಂಟಾಗಲಿ ಎಂದು ಪ್ರಾರ್ಥಿಸುತ್ತಾರೆ. ಶ್ರೀಭಾಷ್ಯದಲ್ಲಿ ಪರಬ್ರಹ್ಮನನ್ನು ಹೇಳುವ ಸ್ಥಳಗಳಲ್ಲೆಲ್ಲಾ ಲಕ್ಷ್ಮಿಯನ್ನು ಹೇಳಲಿಲ್ಲವೆಂಬ ಬುದ್ಧಿಭ್ರಾಮಕದಿಂದ ಎಲ್ಲಾದರೂ ಲಕ್ಷ್ಮಿಯಿಂದ ಪ್ರತ್ಯೇಕಿಸಲ್ಪಟ್ಟ ಪರಬ್ರಹ್ಮವೆಂದು ತಿಳಿದುಕೊಂಡಾರೋ ಎಂದು ಹೇಳುವುದಕ್ಕಾಗಿ ಪರಬ್ರಹ್ಮವೆಂದರೆ ಶ್ರೀನಿವಾಸನೆಂದು ಹೇಳಿದರು. ಹೀಗೆ ಬ್ರಹ್ಮ ಅಥವಾ ಪರಬ್ರಹ್ಮಶಬ್ದವು ಎಲ್ಲಿ ಉಪಯೋಗಿಸಿರುತ್ತದೋ ಅಲ್ಲೆಲ್ಲಾ ಶ್ರೀನಿವಾಸನೇ ಹೇಳಲ್ಪಟ್ಟನೆಂದು ತಿಳಿಯುವುದಕ್ಕಾಗಿ "**ಬ್ರಹ್ಮಣಿ ಶ್ರೀನಿವಾಸೇ**" ಎಂದು ಬ್ರಹ್ಮಣಿ ಎಂದು ಹೇಳಿದ ಒಡನೆಯೇ ಶ್ರೀನಿವಾಸ ಶಬ್ದವನ್ನುಪಯೋಗಿಸಿರುತ್ತಾರೆ.

"ಅಖಿಲ ಭುವನ ಜನ್ಮ ಸ್ಥೇಮ ಭಙ್ಗಾದಿ ಲೀಲೆ
ವಿನತ ವಿವಿಧ ಭೂತ ವ್ರಾತ ರಕ್ಷೈಕ ದೀಕ್ಷೆ ।
ಶ್ರುತಿ ಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ
ಭವತು ಮಮ ಪರಸ್ಮಿಞ್ಶೇಮುಷೀ ಭಕ್ತಿರೂಪಾ ॥"

ಎಂಬುವದು ಪೂರ್ಣಶ್ಲೋಕವು.

(16) ಶ್ರೀ ಭಾಷ್ಯಕಾರರ ಶ್ರೀಭಾಷ್ಯದ ಪ್ರಥಮ ಶ್ಲೋಕವು.

(17) ಶ್ರಿಯಃಪತಿರ್ನಿಖಿಲಹೇಯ ಪ್ರತ್ಯನೀಕ ಕಲ್ಯಾಣೈಕ ತಾನಾನಂತ ಜ್ಞಾನಾನಂದೈಕ ಸ್ವರೂಪಃ," (18) "ನೀಯು ನ್ತಿರುಮಕಳುಂ ನಿನ್ರಾಯಾಲ್,"

---

17. ಸರ್ವೇಶ್ವರನು **ಶ್ರಿಯಃಪತಿಃ** – ಲಕ್ಷ್ಮಿಗೆ ಭರ್ತೃವಾದವನು, **ನಿಖಿಲ ಹೇಯ ಪ್ರತ್ಯನೀಕ** - ಸಮಸ್ತ ಹೇಯಗುಣಗಳ ಗಂಧವೂ ಇಲ್ಲದೆ, **ಕಲ್ಯಾಣೈಕತಾನ** – ಕಲ್ಯಾಣಗುಣಗಳಿಗೆ ಮುಖ್ಯಾಶ್ರಯನಾಗಿ, **ಜ್ಞಾನಾನಂದೈಕ ಸರೂಪಃ** – ಜ್ಞಾನ, ಆನಂದ ಮೊದಲಾದವುಗಳೇ ಮುಖ್ಯ ಸ್ವರೂಪವಾಗಿ ಉಳ್ಳವನು. ಎಂದರೆ ಸರ್ವೇಶ್ವರನಿಗೆ ಜ್ಞಾನಾನಂದಾದಿಗಳು ಹೇಗೆ ಸ್ವರೂಪ ನಿರೂಪಕ ಧರ್ಮಗಳೋ, ಹಾಗೆಯೇ ಶ್ರಿಯಃಪತಿತ್ವವೂ ಕೂಡ ಸ್ವರೂಪ ನಿರೂಪಕ ಧರ್ಮವು ಎಂಬಭಿಪ್ರಾಯವು. ಶ್ರೀ ಪರಾಶರ ಭಟ್ಟರೂ ಕೂಡ ಇದೇ ಅಭಿಪ್ರಾಯವನ್ನೇ ಶ್ರೀ ಗುಣರತ್ನಕೋಶದಲ್ಲಿ "**ಸ್ವರೂಪಂ ಸ್ವಾತಂತ್ರ್ಯಂ ಭಗವತ ಇದಂ ಚಂದ್ರವದನೇ ತ್ವದಾಶ್ಲೇಷೋತ್ಕರ್ಷಾದ್ಭವತಿ ಖಲು ನಿಷ್ಕರ್ಷ ಸಮಯೇ**" ಅಂದರೆ "ಓ ಚಂದ್ರನ ಹಾಗೆ ಮುಖವುಳ್ಳ ಲಕ್ಷ್ಮಿಯೇ ಭಗವಂತನಿಗೆ ಸ್ವರೂಪವೂ, ಸ್ವಾತಂತ್ರ್ಯವೂ ಎಲ್ಲಾ ಯಾರಿಂದುಂಟಾಯಿತೆಂದು ನಿಷ್ಕರ್ಷೆ ಮಾಡುವ ಸಮಯದಲ್ಲಿ ನಿನ್ನ ಸಂಬಂಧದ ಮಾಹಾತ್ಮ್ಯೆಯಿಂದಲೇ ಉಂಟಾಗಿರುತ್ತದೆಂದು ಹೇಳಬೇಕಾಗುತ್ತದೆ." ಎಂದು ಹೇಳಿರುವುದರಿಂದ ಲಕ್ಷ್ಮೀಪತಿಯಾಗಿರುವುದೇ ಸ್ವಾಮಿಯ ಸ್ವರೂಪ ನಿರೂಪಕಧರ್ಮವೆಂದು ಏರ್ಪಟ್ಟಿತು.

18 **ನೀಯುಂ**-ನೀನೂ, **ತಿರುಮಕಳುಂ** - ಲಕ್ಷ್ಮಿಯೂ ಸಹ, **ನಿನ್ರಾಯಾಲ್**-ಸೇರಿನಿಂತಿರುವದರಿಂದ, ಎಂದರೆ ಬಿಟ್ಟಗಿರುವುದರಿಂದ ಇಲ್ಲಿ ಪರತತ್ವಸ್ವರೂಪದಲ್ಲಿ ಲಕ್ಷ್ಮಿಗೂ ಅನ್ವಯ ಉಂಟೆಂದೂ, ತಿರಕ್ಕೋವಲೂರು ಮುಂತಾದ ಸ್ಥಳಗಳಲ್ಲಿ ಆಳ್ವಾರುಗಳಿಗೆ ಸೇವೆಯನ್ನಿತ್ತಿದುದು ಹೀಗೆ ಎಂದು ವ್ಯಕ್ತಪಡುತ್ತದೆ.

---

(17) ಶ್ರೀ ಗೀತಾಭಾಷ್ಯದಪ್ರಾರಂಭ. (18) ಮೊದಲ್ ತಿರುವಂದಾದಿ 86

( ) "ಒಣ್ತೊಡಿಯಾಳ್ ತಿರುಮಕಳುಂ ನೀಯುಮೇ ನಿಲಾ ನಿರ್ಪ," (20) "ಕೋಲತ್ತಿರುಮಾಮಕಳೋಡುನ್ನೈ," (21) "ನಿನ್ತಿರುವರುಳುಮ್ ಪಙ್ಗಯತ್ತಾಳ್ ತಿರುವರುಳುಮ್."

---

19. **ಒಣ್**-ಸುಂದರವಾದ, **ತೊಡಿಯಾಳ್** - ಹಸ್ತಾಭರಣ ಮೊದಲಾದವುಗಳುಳ್ಳ, **ತಿರುಮಗಳುಂ**-**"ಸರ್ವಲಕ್ಷಣಸಂಪನ್ನಾ ನಾರಿಣಾಂ ಉತ್ತಮಾವಧೂಃ"** ಎಂದು ಮಹರ್ಷಿಯು ಹೇಳಿರುವಹಾಗೆ ಶ್ರೇಷ್ಠಳಾದ ಲಕ್ಷ್ಮಿಯೂ, **ನೀಯುಮೇ**-ನೀನೂ ಸಹ, **ನಿಲಾನಿರ್ಪ**-ಇರುತ್ತಿರುವಾಗ; ನಿತ್ಯವಿಭೂತಿಯಲ್ಲಿ ಪ್ರಾಪ್ಯದೆಶೆಯಲ್ಲಿ ಪರಸ್ವರೂಪವು ಲಕ್ಷ್ಮೀಯುಕ್ತವಾದುದೆಂದು ಇದರಿಂದ ಹೇಳಲ್ಪಟ್ಟಿತು.

20 **ಕೋಲ**-ದಿವ್ಯಸುಂದರವಿಗ್ರಹಯುಕ್ತಳಾದ ಅಂದರೆ ಶ್ರೀ ವಿಷ್ಣುಪುರಾಣದಲ್ಲಿ, **"ವಿಷ್ಣೋರ್ದೇಹಾನು ರೂಪಾಂ ವೈ ಕರೋತ್ಯೇಷಾತ್ಮನಸ್ತನುಂ"** ಎಲ್ಲಾ ಅವತಾರ ಮೊದಲಾದ ದೆಶೆಗಳಲ್ಲಿಯೂ, ಸರ್ವಲಾವಣ್ಯಯುಕ್ತವಾದ ಸ್ವಾಮಿಯ ದಿವ್ಯಮಂಗಳ ವಿಗ್ರಹಕ್ಕೆ ಅನುರೂಪವಾದ ಸರ್ವಲಾವಣ್ಯಯುಕ್ತವಾದ ದಿವ್ಯಮಂಗಳ ವಿಗ್ರಹ ಉಳ್ಳವಳು ಎಂಬರ್ಥವು. **ತಿರುಮಾ ಮಕಳೊಡು**-ಲಕ್ಷ್ಮಿಯೊಂದಿಗೆ, ಉನ್ನೈ-ನಿನ್ನನ್ನು, ಶ್ರೀಪೆರ್ಮ್ಬೆಟ್ಟಲೂರು ನರಸಿಂಹಾಚಾರ್ಯರವರು **ಕೋಲ** ಅಂದರೆ **ಸ್ವಾಮಿಗೇನೇ, ಅಭರಣಭೂತಳಾದ** ಎಂದು ವ್ಯಾಖ್ಯಾನ ಮಾಡಿರುತ್ತಾರೆ. ಇದೂ ಸ್ವಾರಸ್ಯವಾಗಿದೆ. ಈ ಪಾಶುರದಲ್ಲೂ ಪ್ರಾಪ್ಯದೆಶೆಯಲ್ಲಿ ಪರತತ್ವಸ್ವರೂಪವು ಲಕ್ಷ್ಮೀಯುಕ್ತವಾದುದೆಂದು ನಿರೂಪಿಸಲ್ಪಟ್ಟಿರುತ್ತದೆ.

21. **ನಿನ್ತಿರುವರುಳುಮ್** - ನಿಮ್ಮ ಕೃಪೆಯನ್ನೂ, **ಪಙ್ಗಯತ್ತಾಳ್ ತಿರುವರುಳುಮ್** - ಕಮಲವಾಸಿನಿಯಾಗಿ ನಿನ್ನ ಪತ್ನಿಯಾದ ಮಹಾಲಕ್ಷ್ಮಿಯ ಕೃಪೆಯನ್ನೂ **"ಕೊಂಡು ನಿನ್ಕೋಯಿಲ್ ಶೀಯ್ತ್ತು"** ಹೊಂದಿ ನಿನ್ನ ದೇವಾಲಯದಲ್ಲಿ ಸಮ್ಮಾರ್ಜನ ಮೊದಲಾದ ಕೈಂಕರ್ಯ ಮಾಡಿಕೊಂಡು" ಎಂದು ಮುಂದಕೆ

---

(19) ತಿರುವಾಯ್ಮೊಳಿ. 4. 9. 10. (20) ತಿರುವಾಯ್ಮೊಳಿ. 6. 9. 3.
(21) ತಿರುವಾಯ್ಮೊಳಿ. 9. 2. 1.

(22) " **ಉನ್ ತಾಮರೈ ಮಙ್ಗೈಯುಮ್ ನೀಯುಮ** "
(23) " **ಅಕಿಲಕಿಲ್ಲೇ ನಿರೈಯುಮ್,** "

ಇರುತ್ತದೆ. ಇಲ್ಲಿ ಅರ್ಚ್ಯಾವತಾರ ದೆಶೆಯಲ್ಲಿಯೂ ಉಪಾಯಭೂತನಾಗುವಾಗಲೂ ಲಕ್ಷ್ಮೀಯುಕ್ತನಾಗಿಯೇ ಇರುತ್ತಾನೆಂಬುವದು ತೋರುತ್ತದೆ.

22. **ಉನ್** - ನಿನಗೆ ಶೇಷಭೂತಳಾದ, **ತಾಮರೈ ಮಙ್ಗೈಯುಮ್** - ಕಮಲೋದ್ಭವಳಾಗಿಯೂ ಕಮಲವಾಸಿನಿಯಾಗಿಯೂ ಇರುವದರಿಂದ ಭೋಗ್ಯತೆ, ಶಾಂತತೆ, ಮಾರ್ದವ, ಕರುಣಾರ್ದ್ರಭಾವ ಮೊದಲಾದುವುಗಳನ್ನುಳ್ಳ ಲಕ್ಷ್ಮಿಯೂ, ನೀನೂ ಸಹ, " **ಇಡಙ್ಗೊಳ್ ಮೂವುಲಕುಮ್ ಕೊಳ ಇರನ್ದರುಳಾಯ್** " ಎಂದು ಮುಂದಕ್ಕೆ ಹೇಳಿರುತ್ತದೆ ; ವಿಶಾಲವಾದ ಮೂರು ಲೋಕವು ಆಶ್ರಯಿಸುವ ಹಾಗೆ ದಯಮಾಡಿ ಸೇವೆಯನ್ನು ಕೊಡಬೇಕು ಎಂಬರ್ಥವು - ಇಲ್ಲಿಯೂ ಉಪಾಯ ಭಾವದಲ್ಲೂ ಸರ್ವೇಶ್ವರನು ಲಕ್ಷ್ಮೀಯುಕ್ತನೆಂಬ ಭಾವವು ತೋರುತ್ತದೆ.

23. " **ಅಕಿಲಕಿಲ್ಲೇ ನಿರೈಯುಮ್,** " ಮುಂದಕ್ಕೆ " **ಎನ್ರು ಅಲರ್ ಮೇಲ್ ಮಙ್ಗೈಯುರೈ ಮಾರ್ಪಾ** " ಎಂದು ಇರುತ್ತದೆ. **ಇರೈಯುಮ್** - ಒಂದು ಕ್ಷಣವೂ ಕೂಡ, **ಅಕಲಕಿಲ್ಲೇನ್** - ಅಗಲಿರಲು ಸಮರ್ಥಳಲ್ಲವು. ಎನ್ರು - ಎಂದು, **ಅಲರ್ ಮೇಲ್** - ಕಮಲ ಪುಷ್ಪದಮೇಲೆ ವಾಸ ಮಾಡಿಕೊಂಡು ಹಾಗೆಯೇ ಮಾರ್ದವ, ಭೋಗ್ಯತೆ ವಾಲ್ಲಭ್ಯಾತಿಶಯಗಳನ್ನು ಹೊಂದಿದ **ಮಙ್ಗೈ** - ಲಕ್ಷ್ಮಿಯು, **ಉರೈಮಾರ್ಪಾ** - ನಿತ್ಯವಾಸ ಮಾಡುವ ವಕ್ಷಸ್ಥಳವುಳ್ಳವನೇ, ಲಕ್ಷ್ಮಿಯು ಸದಾ ಸರ್ವೇಶ್ವರನೊಂದಿಗೇ ಇದ್ದು ಆತನೊಂದಿಂಗೆ ಉಪಾಯ ಭೂತಳು ಎಂಬಭಿಪ್ರಾಯವು. ೧೧೦ನೇ ಪುಟದಲ್ಲಿ ಈ ಪಾಶುರತಾತ್ಪರ್ಯವು ಸೂಚಿಸಿರುತ್ತದೆ.

(22) ತಿರುವಾಯ್ ಮೊಳಿ. 9. 2. 3.

(23) ತಿರುವಾಯ್ ಮೊಳಿ. 6. 10. 10.

(24) "ಉಣರ್ ಮುಳುನಲಂ" ( ) "ನನ್ತಾ ವಿಳಕ್ಕೇ ಯುಳತ್ತರ್ಕ್ಕರಿಯಾಯ್," ಎನ್ರುಂ ಪ್ರಮಾಣಙ್ಗಳ್ ಶೊಲ್ಲುಗಿರಪಡಿಯೇ ಸರ್ವಪ್ರಕಾರತ್ತಾಲುಂ ; ಸ್ಸರ್ವಾವಸ್ಥೈಯಿಲುಂ ಸಹಧರ್ಮಚಾರಿಣಿಯಾನ ಪೆರಿಯ ಪಿರಾಟ್ಟಿಯಾರೋಡು (3) ಪಿರಿವಿಲ್ಲಾದ ಮುಳುನಲಮಾನವನನ್ತ ಜ್ಞಾನಾನಂದೈಕ ಸ್ವರೂಪಮಾಕವನು ಸನ್ನಿಧಿಕ್ಕವೇಣುಮ್.

---

24. "ಉಣರ್ ಮುಳುನಲಂ" ಇಲ್ಲಿ **ಮುಳು** ಅಂದರೆ ಪರಿಪೂರ್ಣವಾದ ಎಂಬ ಪದವು ಕಾಕಾಕ್ಷಿ ನ್ಯಾಯದ ಪ್ರಕಾರ, **ಮುಳು ವುಣರ್ವು** - ಸಂಪೂರ್ಣ ಜ್ಞಾನ, **ಮುಳು ನಲಂ** - ಸಂಪೂರ್ಣಾನಂದ ಸ್ವರೂಪನಾದ ಸರ್ವೇಶ್ವರನು. **"ಸತ್ಯಂ ಜ್ಞಾನ ಮನಂತಂ ಬ್ರಹ್ಮ" "ಕೃತ್ಸ್ನೋ ರಸ ಘನ ಏವ" "ಕೃತ್ಸ್ನೋ ವಿಜ್ಞಾನ ಘನ ಏವ"** ಎಂಬ ಶ್ರುತಿಗಳು ಪರಮಾತ್ಮ ಸ್ವರೂಪವನ್ನು ಬೋಧಿಸುತ್ತವೆ. ಇಲ್ಲಿ ರಸವೆಂದರೆ ಆನಂದವು.

25. **ನನ್ತಾ** - ನಾಶರಹಿತನಾದ, ಇದರಿಂದ ಸತ್ಯತ್ವವು ಹೇಳಲ್ಪಟ್ಟಿತು, **ವಿಳಕ್ಕೆ** - ದೀಪಂ, ಇದರಿಂದ ಜ್ಞಾನತ್ವವು ಹೇಳಲ್ಪಟ್ಟಿತು, **ಅಳತ್ತರ್ಕ್ಕು** - ಅಳೆಯುವುದಕ್ಕೆ, **ಅರಿಯಾಯ್** - ಅಶಕ್ಯನಾಗಿ, ಇದರಿಂದ ಅನನ್ತತ್ವವು ಹೇಳಲ್ಪಟ್ಟಿತು. **"ಸತ್ಯಂ ಜ್ಞಾನ ಮನಂತಂ ಬ್ರಹ್ಮ"** ಎಂಬ ಶ್ರುತ್ಯರ್ಥವು ಇದರಿಂದ ಹೇಳಲ್ಪಟ್ಟಿತು.

ಹೀಗೆ ಮೇಲಿನ ಪ್ರಮಾಣಗಳು ಹೇಳುವ ಹಾಗೆ ಸರ್ವಪ್ರಕಾರಗಳಾಗಿ ತೋರುವಾಗಲೂ, ಚತುಶ್ಲೋಕಿಯ "ಶಾಂತಾನಂತ" ಎಂಬ ಶ್ಲೋಕದಲ್ಲಿ ಹೇಳಿರುವ ಹಾಗೆ, ಸ್ವರೂಪ, ದಿವ್ಯಮಂಗಳವಿಗ್ರಹ, ವಿಭೂತಿಗಳು ಹೀಗೆ ಎಲ್ಲಾ ವಿಧದಿಂದಲೂ, ಮತ್ತು ಸರ್ವಾವಸ್ಥೆಗಳಲ್ಲೂ ಅಂದರೆ ಪರ, ವ್ಯೂಹ, ವಿಭವ, ಅರ್ಚ್ಯಾವತಾರಾದಿ ಅವಸ್ಥೆಗಳನ್ನು ಹೊಂದಿರುವಾಗಲೂ ಮತ್ತು ಉಪಾಯತ್ವ ಉಪೇಯತ್ವ ಮೋಕ್ಷಪ್ರದತ್ವಗಳಲ್ಲೂ ಕೂಡ ತನಗೆ ಸಹಧರ್ಮಚಾರಿಣಿ ಎಂದೆನಿಸಿ

---

(24) ತಿರುವಾಯ್ಮೊಳಿ 1. 1. 2. (25) ಪೆರಿಯ ತಿರುಮೊಳಿ 3. 8. 10. (3) ಪಿರಿವಿಲ್ಲಾದ – ಎಂದಿಗೂ ಅಗಲದೇ ಇರುವ.

ಪಟ್ಟಮಹಿಷಿ ಅಥವಾ ಹಿರೆ ಹೆಂಡತಿಯೊಂದಿಗೆ ಎಂದಿಗೂ ವಿಶ್ಲೇಷೆ ಇಲ್ಲದೆ ನಿತ್ಯಯೋಗವುಳ್ಳ, ಹಾಗೆಯೇ ಪರಿಪೂರ್ಣವಾದ ಅನಂತತ್ವ, ಜ್ಞಾನತ್ವ, ಆನಂದತ್ವಗಳುಳ್ಳ, ಸ್ವರೂಪ ಉಳ್ಳವನೆಂದು ಅನುಸಂಧಾನ ಮಾಡತಕ್ಕದ್ದು. (ಇದರ ಮುಖ್ಯಾಭಿಪ್ರಾಯವೇನೆಂದರೆ, ಸತ್ಯತ್ವ, ಜ್ಞಾನತ್ವ, ಅನಂತತ್ವ ಮೊದಲಾದವುಗಳು ಹೇಗೆ ಸ್ವರೂಪವನ್ನು ಹೇಳುವವೋ ಹಾಗೆಯೇ ಲಕ್ಷ್ಮೀಪತಿತ್ವವೂ ಕೂಡ ಸ್ವರೂಪಕ ನಿರೂಪಕ ಧರ್ಮವು. ಸ್ವಾಮಿಯ ಸ್ವರೂಪವೆಂಥಾದ್ದೆಂದು ಕೇಳಿದರೆ, ಸತ್ಯತ್ವ, ಜ್ಞಾನತ್ವ, ಅನಂತತ್ವ, ಆನಂದತ್ವಾದಿಗಳಿಂದ ಸದಾ ಯುಕ್ತವಾದುದು ಎಂದು ಹೇಗೆ ಹೇಳಲ್ಪಡುತ್ತದೋ ಹಾಗೆಯೇ ಲಕ್ಷ್ಮಿಯಿಂದಲೂ ಸದಾ ಸೇರಿಯೇ ನಿತ್ಯಯೋಗ ಉಳ್ಳದ್ದೆಂದು ಭಾವವು. ಇಲ್ಲಿ "**ಸಹಧರ್ಮಚಾರಿಣೀ**" ಎಂದು ಹೇಳಿರುವದರಿಂದ ಲಕ್ಷ್ಮಿಯು ಸ್ವಾಮಿಗೆ ಸಮಾನವಾದ ಕಲ್ಯಾಣ ಗುಣಗಳನ್ನೂ ಪ್ರವೃತ್ತಿಗಳನ್ನೂ ಉಳ್ಳವಳೆಂದು ಭಾವಿಸತಕ್ಕದ್ದು. "**ಪಿರಾಟ್ಟಿಯಾರೋಡು ಪಿರಿವಿಲ್ಲಾದ ಮುಳನಲಮಾನ**" ಎಂದು ಹೇಳಿರುವುದರಿಂದ ಪರಬ್ರಹ್ಮ ಸ್ವರೂಪವನ್ನು ಹೇಳುವ "**ಸತ್ಯಜ್ಞಾನ**" ಮೊದಲಾದವುಗಳಲ್ಲಿ ಲಕ್ಷ್ಮಿಗೂ ಕೂಡ ಸಂಬಂಧವುಂಟೆಂಬುದು ತೋರಿಬರುತ್ತದೆ. ಲಕ್ಷ್ಮಿಯೊಂದಿಗೇನೆ ಸೇರಿಯೇ ಸ್ವಾಮಿಯು ಸತ್ಯಜ್ಞಾನಾದಿ ಸ್ವರೂಪಗಳುಳ್ಳವನು ಎಂಬುವದು ಆಚಾರ್ಯರವರ ಅಭಿಪ್ರಾಯವು. ಪೆರಿಯ ಪಿರಾಟ್ಟಿ ಲಕ್ಷ್ಮಿಯು, ಚೆರಿಯ ಪಿರಾಟ್ಟಿ - ಭೂಮಿದೇವಿಯು, "**ಹ್ರೀಶ್ಚತೇ ಲಕ್ಷ್ಮೀಶ್ಚಪತ್ನ್ಯೌ**" ಎಂಬ ಶ್ರುತಿವಾಕ್ಯವಿರುತ್ತದೆ.

ಸರ್ವೇಶ್ವರನನ್ನು ಅನುಸಂಧಾನ ಮಾಡುವಾಗೆಲ್ಲಾ ಯಾವಾಗಲೂ **ಲಕ್ಷ್ಮೀವಿಶಿಷ್ಟನನ್ನಾಗಿಯೂ, ಸತ್ಯತ್ವ, ಜ್ಞಾನತ್ವ, ಅನಂತತ್ವ, ಆನಂದತ್ವ** ಉಳ್ಳವನಾಗಿಯೂ ಅನುಸನ್ಧಾನ ಮಾಡಬೇಕೆಂದು ಹೇಳಿದರು. ಮುಂದೆ, ಹೇಯ ಪ್ರತ್ಯನೀಕತ್ವ ಉಳ್ಳವನೆಂದೂ ಅನುಸನ್ಧಾನ ಮಾಡತಕ್ಕದ್ದೆಂದೂ ಸಪ್ರಮಾಣವಾಗಿ ತಿಳಿಸುತ್ತಾರೆ.)

ಹೇಯಪ್ರತ್ಯನೀಕತ್ವಂ.

ಇಪ್ಪಡಿ (1) "ಸಮಸ್ತ ಹೇಯ ರಹಿತಂ ವಿಷ್ಣ್ವಾಖ್ಯಂ ಪರಮಂ ಪದಂ," (2) "ಪರಃಪರಾಣಾಂ ಸಕಲಾನಯತ್ರ ಕ್ಲೇಶಾದಯಸ್ಸಂತಿ ಪರಾವರೇಶೇ" ಎನ್ಗಿರ ಪಡಿಯೇ ಹೇಯಪ್ರತ್ಯನೀಕನಾಕ ಅನುಸನ್ಧೇಯನ್

ಹೇಯಪ್ರತ್ಯನೀಕತ್ವ.

1. **ವಿಷ್ಣ್ವಾಖ್ಯಂ** - ವಿಷ್ಣುವೆಂದು ಹೆಸರುಳ್ಳ (ಎಲ್ಲವನ್ನೂ ವ್ಯಾಪಿಸಿರುವವನು.) (3) **ಪರಮಂ** - ತುಂಬಾಶ್ರೇಷ್ಠನಾದ, ಅಥವಾ ಶ್ರೇಷ್ಠಳಾದ ಲಕ್ಷ್ಮಿಯುಳ್ಳ, **ಪದಂ** - ಪ್ರಾಪ್ಯನಾದ ಭಗವಂತನು, **ಸಮಸ್ತ ಹೇಯ ರಹಿತಂ** - ಸಮಸ್ತವಾದ ಹೇಯಗುಣಗಳಿಲ್ಲದವನು. ಕೆಲವು ಪುಸ್ತಕಗಳಲ್ಲಿ "**ಸಮಸ್ತ ಭೇದ ರಹಿತಂ ವಿಷ್ಣ್ವಾಖ್ಯಂ ಪರಮಂ ಪದಂ**" ಎಂದು ಇರುತ್ತದೆ. ಈ ಶ್ಲೋಕದ ಪೂರ್ವಾರ್ಧವು, **ಏವಂ ಪ್ರಕಾರ ಮಮಲಂ ನ್ನಿತ್ಯಂ ವ್ಯಾಪಕಮಕ್ಷಯಂ.**" ಇಲ್ಲಿ **ಅಮಲಂ** ಎಂಬುವದರಿಂದಲೂ ಹೇಯಪ್ರತ್ಯನೀಕತ್ವವು ಬೋಧಿತವಾಯಿತು. **ಭೇದರಹಿತಂ** ಎಂಬುವದು ಅದ್ವೈತಿಗಳ ಪಾಠವಾಗಿರಬಹುದು ಅಲ್ಲಿ ಎಲ್ಲವೂ ಶುದ್ಧಸತ್ವಮಯವಾಗಿರುವುದರಿಂದ **ಸಮಸ್ತ ಭೇದರಹಿತಂ** ಎಂದು ಹೇಳಲ್ಪಟ್ಟಿತೆಂದೂ ಭಾವಿಸಬಹುದು. ಅಥವಾ ಭೋಗದಲ್ಲೂ **ಸಮಸ್ತ ಭೇದರಹಿತಂ** ಎಂದೂ ಭಾವಿಸಬಹುದು. **ಪರಮಂ ಸಾಮ್ಯ ಮುಪೈತಿ** ಎಂದು ಆನಂದದಲ್ಲಿ ತಾರತಮ್ಯವಿಲ್ಲದುದರಿಂದ ಭೇದವಿಲ್ಲದ ಸಮಭಾವವೆಂದಾದರೂ ಭಾವಿಸಬಹುದು.

2. **ಪರಾಣಾಂ** - ಶ್ರೇಷ್ಠರಾದ ಬ್ರಹ್ಮರುದ್ರಾದಿಗಳಿಗಿಂತಲೂ, **ಪರಃ** - ಶ್ರೇಷ್ಠನಾದ ಪರಬ್ರಹ್ಮನು. ಏತಕ್ಕೆಂದರೆ, **ಯತ್ರ** - ಯಾವ ಪರಮಾತ್ಮನಲ್ಲಿ, **ಕ್ಲೇಶಾದಯಃ** - ಕರ್ಮವಾಸನಾದಿಗಳಿಂದುಂಟಾಗುವ ದುಃಖಗಳು, ಇಲ್ಲಿ ಆದಿಶಬ್ದದಿಂದ ರಾಗದ್ವೇಷಾದಿಗಳು ಹೇಳಲ್ಪಟ್ಟವು.

---

(1) ವಿ. ಪು. 1. 22. 53. (2) ವಿ. ಪು. 6. 5. 85. (3) ಪರಾಮಾಯಸ್ಯಸಃ ಎಂಬ ವ್ಯುತ್ಪತ್ತಿಯಿಂದ ಶ್ರೇಷ್ಠಳಾದ ಲಕ್ಷ್ಮಿಯುಳ್ಳವನು.

ಅನಂತಕಲ್ಯಾಣ ಗುಣಾಕರತ್ವಂ.

(1) "ತೈರ್ಯುಕ್ತ ಶ್ರೂಯತಾಂ ನರಃ,"

ಪರಾವರೇಶೇ, **ಪರ** - ಶ್ರೇಷ್ಠವಾದ ಚೆತ್ತೂ, **ಅವರ** - ನಿಕೃಷ್ಟವಾದ ಅಚೆತ್ತೂ ಇವುಗಳಿಗೆಲ್ಲಾ, **ಈಶೇ** - ಸ್ವಾಮಿಯಾದ ಸರ್ವೇಶ್ವರನಲ್ಲಿ, **ನಸನ್ತಿ** - ಇರುವದಿಲ್ಲವು. **"ತೇಜೋಬಲೈಶ್ವರ್ಯ ಮಹಾವಬೋಧ ಸುವೀರ್ಯಶಕ್ತ್ಯಾದಿ ಗುಣೈಕರಾಶಿಃ"** ಎಂದು ಪೂರ್ವಾರ್ಧವು ಇರುತ್ತದೆ:—"ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸೆಂಬ ಷಡ್ಗುಣಗಳೇ ಮೊದಲಾದ ಅನನ್ತಗುಣಗಣಗಳುಳ್ಳವನು. ಸರ್ವೇಶ್ವನಿಗೆ **ಭಗವಾನ್** ಎಂಬ ಶಬ್ದಪ್ರಯೋಗ ಹೇಗೆ ಎಂಬುವದಕ್ಕೆ, ಶ್ರೀ ಪರಾಶರರು ಪೂರ್ವಾರ್ಧದಿಂದ ಭಗವಚ್ಛಬ್ದದ ಮೂರು ಅಕ್ಷರಗಳು ಷಾಡ್ಗುಣ್ಯಾದಿ ಕಲ್ಯಾಣಗುಣಾಕರತ್ವವನ್ನು ಬೋಧಿಸುತ್ತವೆಂದೂ, **ಭಗವಾನ್** ಎಂಬ ಪದದಲ್ಲಿನ ನಕಾರದಿಂದ ಹೇಯಪ್ರತ್ಯನೀಕತ್ವವು ಹೇಳಲ್ಪಟ್ಟಿತೆಂದೂ ಉಪದೇಶಿಸುತ್ತಾರೆ.

(ಇದುವರಿವಿಗೂ ಸ್ವಾಮಿಯ ಸ್ವರೂಪವು:—(1)ಲಕ್ಷ್ಮೀಪತಿತ್ವ, (2) ಸತ್ಯಜ್ಞಾನಮನನ್ತತ್ವ ಆನಂದತ್ವ ಉಳ್ಳದೆಂದು ಹೇಳಲ್ಪಟ್ಟಿತು.

ಈಗ ನಿರೂಪಿತಸ್ವರೂಪ ವಿಶೇಷಣಗಳಾದ ಗುಣಗಳ ವಿಷಯವಾಗಿ ಹೇಳುತ್ತಾರೆ. (1) ಹೇಯಗುಣಗಳಿಗೆ ಸ್ವಲ್ಪವೂ ಅವಕಾಶವಿಲ್ಲವೆಂದು ಹೇಳಿ (2) ಕಲ್ಯಾಣಗುಣಗಳಿಗೆ ಆಕರನೆಂದು ಹೇಳುವದಕ್ಕೆ ಪ್ರಾರಂಭಿಸಿ ಪ್ರಮಾಣಗಳನ್ನು ಉದಾಹರಿಸುತ್ತಾರೆ.)

1. **ತೈರ್ಯುಕ್ತಃ** - ನಿನ್ನಿಂದ ಹೇಳಲ್ಪಟ್ಟ ಕಲ್ಯಾಣಗುಣಗಳಿಂದ ಯುಕ್ತನಾದ, **ನರಃ**-ಮನುಷ್ಯನು ಯಾರು ಎಂಬುವದು, **ಶ್ರೂಯತಾಂ**-ಕೇಳಲ್ಪಡಲಿ ಹೇಳುವನು. ವಾಲ್ಮೀಕಿಮಹರ್ಷಿಯು ನಾರದರನ್ನು ಕುರಿತು ಸಮಸ್ತ ಕಲ್ಯಾಣಗುಣಗಳಿಂದ ಶೋಭಿಸುವ ಮನುಷ್ಯನು ಯಾರು ಎಂದು ಪ್ರಶ್ನಿಸಲು; ಅದಕ್ಕೆ ನಾರದರು ಹೇಳುವ ಪ್ರತ್ಯುತ್ತರವು:—

(1) ರಾಮಾ. ಬಾಲ. 1. 7

(2) "**ತಮೇವಂ ಗುಣಸಂಪನ್ನಂ,**" (3) **ಜ್ಯೇಷ್ಟಂ ಶ್ರೇಷ್ಠಗುಣೈರ್ಯುಕ್ತಂ,**" (4) "**ಏವಂ ಶ್ರೇಷ್ಠಗುಣೈರ್ಯುಕ್ತಂ**" (5) "**ಗುಣೈರ್ವಿರುರುಚೇ ರಾಮಃ**"

ಬಹವೋ ದುರ್ಲಭಾಶ್ಚೈವ ಯೇತ್ವಯಾ ಕೀರ್ತಿತಾಗುಣಾಃ ।
ಮುನೇವಕ್ಷ್ಯಾಮ್ಯಹಂಬುಧ್ವಾ ತೈರ್ಯುಕ್ತಃ ಶ್ರೂಯತಾಂನರಃ ॥

ಓ ವಾಲ್ಮೀಕಿಮುನಿಯೇ ನಿನ್ನಿಂದ ಹೊಗಳಲ್ಪಟ್ಟ ಕಲ್ಯಾಣಗುಣಗಳು ಅನೇಕವಾದವು, ಅಪರಿಚ್ಛಿನ್ನವಾದುವು, ಅವೆಲ್ಲವೂ ಒಬ್ಬ ಮನುಷ್ಯನಲ್ಲೇ ಇರುವದು ಕಷ್ಟವು, ಆದರೂ ನನ್ನ ತಪೋಬಲದಿಂದುಂಟಾದ ಅಂತಹ ಗುಣಗಳೆಲ್ಲವುಗಳಿಂದಲೂ ಕೂಡಿದ ಒಬ್ಬ ಮನುಷ್ಯನು ಯಾರೆಂಬುವದನ್ನು ತಿಳಿದು ಹೇಳುತ್ತೇನೆ ಕೇಳು ಎಂದು ಹೇಳಿ, ಆತನು ಇಕ್ಷ್ವಾಕುವಂಶಪ್ರಭವನಾದ ರಾಮನೆಂದು ಹೇಳಿ, ಆತನ ಕಲ್ಯಾಣಗುಣಗಳನ್ನು ನಾರದರು ವರ್ಣಿಸುತ್ತಾರೆ.

2. **ಏವಂ**-ಮೇಲೆ ಹೇಳಿದ ಪ್ರಕಾರವಾಗಿ, **ಗುಣಸಂಪನ್ನಂ**-ಸರ್ವಕಲ್ಯಾಣಗುಣಗಳಿಂದ ಯುಕ್ತನಾದ, **ತಂ**-ಆ ರಾಮಚಂದ್ರನನ್ನು, "ರಾಮಂ ಸತ್ಯಪರಾಕ್ರಮಂ ಅಕಾಮಯತ ಮೇದಿನೀ" ಭೂದೇವಿಯು ರಾಮನನ್ನು ನಾಥನನ್ನಾಗಿ ಅಪೇಕ್ಷಿಸಿದಳು ಎಂದು ಇದೆ.

3. **ಜ್ಯೇಷ್ಟಂ** - ಜ್ಯೇಷ್ಟನಾದ, **ಶ್ರೇಷ್ಠಗುಣೈರ್ಯುಕ್ತಂ** - ಶ್ರೇಷ್ಠವಾದ ಕಲ್ಯಾಣಗುಣಗಳಿಂದ ಕೂಡಿದ, "ಪ್ರಿಯಂ ದಶರಥಸ್ಸುತಂ" ಎಂದು ಪಾದಪೂರ್ಣವು.

4. **ಏವಂ** - ಈ ಪ್ರಕಾರವಾಗಿ, **ಶ್ರೇಷ್ಠಗುಣೈರ್ಯುಕ್ತಃ** - ಶ್ರೇಷ್ಠವಾದ ಕಲ್ಯಾಣಗುಣಗಳುಳ್ಳವನು ಶ್ರೀರಾಮನು. "**ಪ್ರಜಾನಾಂ ಪಾರ್ಥಿವಾತ್ಮಜಃ**" ಎಂದು ಪಾದಪೂರ್ಣವು.

5. **ರಾಮಃ** - ಶ್ರೀರಾಮನು, **ಗುಣೈಃ** - ಕಲ್ಯಾಣಗುಣಗಳಿಂದ, **ವಿರುರುಚೇ** - ಪ್ರಕಾಶಿಸಿದನು, ಹೇಗೆಂದರೆ "**ದೀಪ್ತಸ್ಸೂರ್ಯ**

---

(2) ರಾಮಾ. ಅಯೋ. 2. 48. (3) ರಾಮಾ. ಬಾಲ. 1. 20. (4) ರಾಮಾ. ಅಯೋಧ್ಯಾ. 1. 32. (5) ರಾಮಾ. ಅಯೋಧ್ಯಾ 2. 47.

(6) "ತಮೇವಂ ಗುಣಸಂಪನ್ನ ಮಪ್ರಧೃಷ್ಯ ಪರಾಕ್ರಮಂ" (7) "ಬಹವೋನೃಪ ಕಲ್ಯಾಣ ಗುಣಾಃ ಪುತ್ರಸ್ಯ ಸನ್ತಿತೇ" (8) "ಆನೃಶಂಸ್ಯ ಮನುಕ್ರೋಶ ಶ್ಶ್ರುತಂಶೀಲಂ ದಮ ಶ್ಶಮಃ। ರಾಘವಂ ಶೋಭಯನ್ತ್ಯೇತೇ ಷಡ್ಗುಣಾಃ ಪುರುಷೋತ್ತಮಂ"

ಇವಾಂಶುಭಿಃ" ಎಂದು ಮುಂದಕ್ಕಿರುತ್ತದೆ. ಬೆಳಗುವ ಸೂರ್ಯನು ಕಿರಣಗಳಿಂದ ಹೇಗೆ ಪ್ರಕಾಶಿಸುತ್ತಾನೋ ಹಾಗೆ.

6. ಹೀಗೆ ಕಲ್ಯಾಣಗುಣಗಳಿಂದ ಸೇರಿದ, **ಅಪ್ರಧೃಷ್ಯ ಪರಾಕ್ರಮಂ** - ತಿರಸ್ಕರಿಸಲಸಾಧ್ಯವಾದ ಪರಾಕ್ರಮವುಳ್ಳ ಶ್ರೀರಾಮನನ್ನು, **"ಲೋಕಪಾಲೋ ಪಮಂನಾಥ ಮಕಾಮಯತಮೇದಿನೀ"** ಎಂಬುವದು ಪೂರಾ ಶ್ಲೋಕವು.

7. ಇದು ಪುರಜನರು ಶ್ರೀರಾಮನನ್ನು ಯುವರಾಜನನ್ನಾಗಿ ಮಾಡಬೇಕೆಂದು ದಶರಥನನ್ನು ಕುರಿತು ಹೇಳುವ ವಾಕ್ಯವು. **ಹೇ ನೃಪ** - ರಾಜನಾದ ದಶರಥನೇ, **ತೇ** - ನಿನ್ನ, **ಪುತ್ರಸ್ಯ** - ಮಗನಾದ ಶ್ರೀರಾಮನಿಗೆ, **ಬಹವಃ** - ಅಸಂಖ್ಯಾತವಾದ, **ಕಲ್ಯಾಣಗುಣಾಃ** - ಕಲ್ಯಾಣಗುಣಗಳು, **ಸನ್ತಿ** - ಇವೆ.

8. **ಆನೃಶಂಸ್ಯಂ** - ಹಿಂಸಿಸದಿರೋಣವೂ ಎಂಬುವದು ಪದದ ಅರ್ಥವು, ಆದುದರಿಂದ, ಆಶ್ರಿತರಕ್ಷಣೆಯು, **ಅನುಕ್ರೋಶಃ** - ಸರ್ವಭೂತದಯೆಯು, **ಶ್ರುತಂ** - ಶಾಸ್ತ್ರಜನ್ಯಜ್ಞಾನವು, **ಶೀಲಂ** - ಸದಾಚಾರವೂ, **ದಮಃ** - ಬಹಿರಿಂದ್ರಿಯ ನಿಗ್ರಹವೂ, **ಶಮಃ** - ಅಂತರಿಂದ್ರಿಯ ನಿಗ್ರಹವೂ, **ಏತೇ ಷಡ್ಗುಣಾಃ**- ಈ ಆರು ಕಲ್ಯಾಣಗುಣಗಳೂ, **ಪುರುಷೋತ್ತಮಂ** - ಪುರುಷರಲ್ಲೆಲ್ಲಾ ಸರ್ವೋತ್ಕೃಷ್ಟನಾದ, **ರಾಘವಂ** - ಶ್ರೀರಾಮನನ್ನು, **ಶೋಭಯಂತಿ** - ಪ್ರಕಾಶಗೊಳಿಸುತ್ತವೆ. **"ಪುರುಷೋತ್ತಮ"** ಶಬ್ದಾರ್ಥವನ್ನು ಗೀತಾ 15-18 ನೇ **ಶ್ಲೋಕವು** ಉಪಪಾದಿಸುತ್ತದೆ:—

---

(6) ರಾಮಾ. ಅಯೋಧ್ಯಾ. 1. 34. (7) ರಾಮಾ. ಅಯೋಧ್ಯಾ. 2. 26. (8) ರಾಮಾ. ಅಯೋಧ್ಯಾ. 33. 12.

(9) "ವಿದಿತಸ್ಸಹಿ ಧರ್ಮಜ್ಞಶ್ಶರಣಾಗತವತ್ಸಲಃ" (10) "ಶರಣ್ಯಂ ಶರಣಂ ಚತ್ವಾಮಾಹುರ್ದಿವ್ಯಾ ಮಹರ್ಷಯಃ"

"ಯಸ್ಮಾತ್ಕ್ಷರ ಮತೀತೋಽಹಂ ಅಕ್ಷರಾದಪಿಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇಚಪ್ರಥಿತಃ ಪುರುಷೋತ್ತಮಃ ॥

"ಯಾವಕಾರಣದಿಂದ ನಾನು ಕ್ಷರಶಬ್ದವಾಚ್ಯರಾದ ಬದ್ಧಜೀವಾತ್ಮರುಗಳಿಗಿಂತಲೂ, ಮತ್ತೂ ಅಕ್ಷರ ಶಬ್ದವಾಚ್ಯರಾದ ನಿತ್ಯಮುಕ್ತರುಗಳಿಗಿಂತಲೂ ಉತ್ತಮನೋ, ಆ ಕಾರಣದಿಂದ ಲೋಕದಲ್ಲೂ ವೇದಗಳಲ್ಲೂ ಪುರುಷೋತ್ತಮನೆಂದು ಪ್ರಖ್ಯಾತಿಯನ್ನು ಹೊಂದಿರುವೆನು."

9. "**ಸಹಿ** - ಆ ಶ್ರೀರಾಮನಾದರೋ, **ಧರ್ಮಜ್ಞಃ** - ಸರ್ವಧರ್ಮಗಳನ್ನೂ, ಪ್ರಕೃತದಲ್ಲಿ ಮುಖ್ಯವಾದ ಆಶ್ರಿತರಕ್ಷಣ ಧರ್ಮವನ್ನು ತಿಳಿದಂತಾವನು, **ಶರಣಾಗತವತ್ಸಲಃ** - ತನ್ನನ್ನು ಶರಣ ಹೊಂದಿದವರಲ್ಲಿ ವಾತ್ಸಲ್ಯವುಳ್ಳವನು. ಹಿ ಎಂಬುವದರಿಂದ, ಆ ಜಗದ್ವಿಖ್ಯಾತ ವಿಷಯವು ನಿನಗೆ ತಿಳಿಯದೋ? ಎಂಬ ಭಾವವು. ಇದು ರಾವಣನನ್ನು ಕುರಿತು ಅನುಗ್ರಹಮಯಳಾದ ಸೀತೆಯು ಉಪದೇಶಿಸುವ ವಾಕ್ಯವು. "**ತೇನ ಮೈತ್ರೀ ಭವತು ತೇಯದಿ ಜೀವಿತು ಮಿಚ್ಛತಿ**" ಎಂದರೆ, "ನಿನಗೆ ಬದುಕಬೇಕೆಂಬಪೇಕ್ಷೆಯಿದ್ದುದಾದರೆ ಆ ಶರಣಾಗತವತ್ಸಲನಾದ ಶ್ರೀರಾಮನೊಂದಿಗೆ ಸ್ನೇಹವನ್ನು ಸಂಪಾದಿಸಿಕೋ" ಎಂದು ಮುಂದೆ ಹೇಳುತ್ತಾಳೆ. ಆತ್ಮೋಜ್ಜೀವನ ಮಾಡಿಕೊಳ್ಳಬೇಕೆಂಬ ಆಶೆಯಿದ್ದರೆ, ಶ್ರೀರಾಮನಾದ ಪರತತ್ವದಲ್ಲಿ ನಿನಗೆ ಪ್ರೀತಿ ಇರಲಿ ಎಂಬುವದು ಮುಖ್ಯಾಭಿಪ್ರಾಯವು.

10. **ದಿವ್ಯಾಮಹರ್ಷಯಃ** - ಶ್ರೇಷ್ಠರಾದ ಮಹರ್ಷಿಗಳು, **ತ್ವಾಂ** - ನಿನ್ನನ್ನು, **ಶರಣ್ಯಂ** - ಶರಣ ಹೊಂದಲು ಯೋಗ್ಯನನ್ನಾಗಿಯೂ, **ಶರಣಂ** - ಮೋಕ್ಷ ಪ್ರಾಪ್ತಿಗೆ ಉಪಾಯ ಅಥವಾ ಸಾಧಕನನ್ನಾಗಿಯೂ, **ಆಹುಃ** - ಹೇಳುತ್ತಾರೆ. ಸೀತೆಯ ಅಗ್ನಿ ಪ್ರವೇಶಾನಂತರ ಶ್ರೀರಾಮನನ್ನು ಕುರಿತು ಹೇಳುವ ಚತುರ್ಮುಖನ ಸ್ತೋ

---

(9) ರಾಮ. ಸುಂದರ. 21. 20. (10) ರಾ. ಯುದ್ಧ. 120. 18.

(11) "ನಿವಾಸ ವೃಕ್ಷಸ್ಸಾಧೂನಾಂ" (12) ತೇಜೋಬಲೈಶ್ವರ್ಯ ಮಹಾವಬೋಧ ಸುವೀರ್ಯ ಶಕ್ತ್ಯಾದಿ ಗುಣೈಕರಾಶಿಃ,"

ತ್ರವು, ನಿನ್ನಲ್ಲಿ ಶರಣ ಹೊಂದಲು ಯೋಗ್ಯವಾದ ಮತ್ತೂ ಆಶ್ರಿತ ರಕ್ಷಣೋಪಯುಕ್ತವಾದ, ಸೌಲಭ್ಯ ಸೌಶೀಲ್ಯದಯಾ ಸಾಮರ್ಥ್ಯಾದಿ ಕಲ್ಯಾಣ ಗುಣಗಳು ಇವೆ ಎಂಬಭಿಪ್ರಾಯವು.

11. **ಸಾಧೂನಾಂ** - ನಿನ್ನನ್ನಾಶ್ರಯಿಸುವ ಮಹಾಭಾಗವತೋತ್ತಮರುಗಳಿಗೆ, **ನಿವಾಸವೃಕ್ಷಃ** - ಆಶ್ರಯಿಸಿ ವಾಸಮಾಡಲು ಯೋಗ್ಯವಾದ ವೃಕ್ಷವಾದುದರಿಂದ ತಂಪಾದ ನೆರಳೂ ಫಲವೂ ದೊರೆಯಬಹುದಾದುದರಿಂದ ನಿರತಿಶಯ ಸುಖರೂಪ ಮೋಕ್ಷ ಪ್ರಾಪ್ತಿಯುಂಟೆಂಬುವದು ತೋರಿಬರುತ್ತದೆ.

"ನಿವಾಸ ವೃಕ್ಷಸ್ಸಾಧೂನಾ ಮಾಪನ್ನಾನಾಂ ಪರಾಗತಿಃ।
ಆರ್ತಾನಾಂ ಸಂಶ್ರಯಶ್ಚೈವ ಯಶಸ್ಶ್ಚೈಕ ಭಾಜನಂ ॥

ಎಂದು ಪುರಾ ಶ್ಲೋಕವು. ರಾಮಾಯಣ ಷಟ್ಕಾಂಡಗಳಿಂದಲೂ ಕಲ್ಯಾಣ ಗುಣಾಕರತ್ವಕ್ಕೆ ಪ್ರಮಾಣಗಳನ್ನು ತೋರಿಸಿ ಮುಂದೆ ಪುರಾಣೋಕ್ತಿಗಳನ್ನು ಉದಾಹರಿಸುತ್ತಾರೆ.

12. **ತೇಜಃ**-ಸಮಸ್ತ ಕೆಲಸಗಳಲ್ಲೂ ಇನ್ನೊಬ್ಬರ ಸಹಾಯವಿಲ್ಲದೆ ನೆರವೇರಿಸೋಣವು. **ಬಲಂ** - ಸ್ವಲ್ಪವೂ ಶ್ರಮವಿಲ್ಲದೆ ಎಲ್ಲವನ್ನೂ ಧಾರಣೆ ಮಾಡುವ ಶಕ್ತಿಯು, **ಐಶ್ವರ್ಯಂ** - ಏನೊಂದೂ ಪ್ರತಿಬಂಧಕವಿಲ್ಲದೆ ತನ್ನ ಇಷ್ಟಾನುಸಾರ ಎಲ್ಲವನ್ನೂ ನಿಯಮಿಸುವ ಶಕ್ತಿಯು, **ವೀರ್ಯಂ** - ಹೀಗೆ ಸರ್ವಕ್ಕೂ ಕಾರಣನಾಗಿ ಅವುಗಳನ್ನೆಲ್ಲಾ ಧರಿಸಿ ನಿಯಮಿಸುವ ಶಕ್ತಿಯಿದ್ದರೂ ಸ್ವಲ್ಪವೂ ವಿಕಾರವನ್ನು ಹೊಂದದೇ ಇರುವಿಕೆಯು, **ಶಕ್ತಿಃ** - ಇತರರು ಯಾರಿಂದಲೂ ಸಾಧ್ಯವಲ್ಲದುದನ್ನು ಸಾಧಿಸುವ ಅಘಟಿತಘಟನಾ ಶಕ್ತಿಯು **ಮಹಾವಬೋಧ** ವೆಂದರೆ ಮಹಾಜ್ಞಾನವು, ಎಲ್ಲವನ್ನೂ ಸಾಕ್ಷಾತ್ಕರಿಸುವ ಸರ್ವಜ್ಞತ್ವವು. ಇವು ಆರು ಗುಣಗಳೂ ಷಡ್ಗುಣಗಳು.

---

(11) ರಾಮಾ. ಕಿಷ್ಕಿಂ. 15. 19. (12) ವಿ. ಪ್ರ. 6. 5. 85.

(13) " ಸರ್ವಭೂತಾತ್ಮ ಭೂತಸ್ಯ ವಿಷ್ಣೋಃ ಕೋ ವೇದಿತುಂ ಗುಣಾನ್ " (14) " ಯಥಾ ರತ್ನಾನಿ ಜಲಧೇ ರಸಙ್ಖ್ಯೇಯಾನಿ ಪುತ್ರಕ । ತಥಾಗುಣಾಶ್ಚ ದೇವಸ್ಯ ತ್ವಸಙ್ಖ್ಯೇಯಾ ಹಿ ಚಕ್ರಿಣಃ ॥" (15) " ವರ್ಷಾಯುತೈರ್ಯಸ್ಯ ಗುಣಾ ನ ಶಕ್ಯಾ ವಕ್ತುಂ

ಆದುದರಿಂದ ಷಾಡ್ಗುಣ್ಯ ಪರಿಪೂರ್ಣನೆಂದು ಸ್ವಾಮಿಗೆ ಹೆಸರು. ಇವು ಆರು ಗುಣಗಳೇ **ಆದಿ** - ಮೊದಲಾದ ಇನ್ನೂ ಇತರ ಕಲ್ಯಾಣ ಗುಣಗಳ **ಏಕರಾಶಿಃ** - ಎಲ್ಲಾ ಒಟ್ಟಿಗೆ ಒಂದೇ ಕಡೆ ಸೇರಿರುವ ಸಮೂಹವುಳ್ಳವನು ಇಲ್ಲಿ **ಆದಿ** - ಶಬ್ದದಿಂದ, ಸೌಶೀಲ್ಯ, ಸೌಲಭ್ಯ, ವಾತ್ಸಲ್ಯ, ದಯಾದಿಗಳು ಹೇಳಲ್ಪಟ್ಟವು.

13. ಈ ವಾಕ್ಯದ ಶೇಷವು :—" ಶಕ್ತೋ ಮಹೇಶ್ವರಾದನ್ಯಃ." ಎಂಬದಾಗಿ **ಸರ್ವಭೂತಾತ್ಮ ಭೂತಸ್ಯ** - ಸರ್ವಭೂತಗಳಿಗೂ ಆತ್ಮಾವಾದ, **ವಿಷ್ಣೋಃ** - ವಿಷ್ಣುವಿನ, **ಗುಣಾನ್** - ಕಲ್ಯಾಣ ಗುಣಗಳನ್ನು, ಮಹೇಶ್ವರಾತ್ - **ರುದ್ರನಿಗಿಂತಲೂ, ಅನ್ಯಃ** - ಬೇರೆಯಾದವನು, **ಕಃ**- ಯಾರು, **ವೇದಿತುಂ**- ತಿಳಿಯಲು, **ಶಕ್ತಃ** - ಶಕ್ತರು?

14. **ಹೇ ಪುತ್ರಕ** - ಓ ಬಾಲನೇ, **ಜಲಧೇಃ** - ಸಮುದ್ರದ, **ರತ್ನಾನಿ** - ರತ್ನಗಳು, **ಯಥಾ** - ಹೇಗೆ, **ಅಸಙ್ಖ್ಯೇಯಾನಿ**- ಲೆಖ್ಖಮಾಡಲು ಅಸಾಧ್ಯವೋ, **ತಥಾ** - ಹಾಗೆಯೇ, **ದೇವಸ್ಯ** - ಲೀಲಾ ಚೇಷ್ಟಿತನಾದ, **ಚಕ್ರಿಣಃ** - ಚಕ್ರಧರನಾದ ಸ್ವಾಮಿಯ, **ಗುಣಾಶ್ಚ** - ಕಲ್ಯಾಣ ಗುಣಗಳೂ ಕೂಡ, **ಅಸಙ್ಖ್ಯೇಯಾಹಿ** - ಅಸಙ್ಖ್ಯಯಗಳಷ್ಟೇ (ಶಿವ ಗುಹ ಸಂವಾದವು).

15. **ಯಸ್ಯ** - ಯಾವ ಮಹಾನುಭಾವನ, **ಗುಣಾಃ** - ಗುಣಗಳು, **ಸಮೇತೈಃ** - ಒಟ್ಟಿಗೆ ಸೇರಿರುವ, **ಸರ್ವದೇವೈಃ** - ಬ್ರಹ್ಮರುದ್ರೇಂದ್ರಾದಿಗಳಾದ ಸಮಸ್ತ ದೇವತೆಗಳಿಂದಲೂ, **ವರ್ಷಾಯುತೈಃ** - ಹತ್ತುಸಾವಿರ ವರ್ಷಗಳಲ್ಲೂ, ಅಂದರೆ ಅನೇಕವರ್ಷಗಳಲ್ಲಿ **ವಕ್ತುಂ** -

---

(13) ಬ್ರಾಹ್ಮ ಪುರಾಣಂ. (14) ವಾಮನ ಪುರಾಣಂ. 74. 70. (15) ಭಾರತ, ಭೀಷ್ಮ, ಕರ್ಣನು ಹೇಳುವದು.

ಸಮೇತ್ಯೈ ರವಿ ಸರ್ವದೇವ್ನೈಃ । ಚತುರ್ಮುಖಾಯುರ್ಯದಿ ಕೋಟಿವಕ್ತ್ರೋ ಭವೇನ್ನರಃ ಕ್ವಾಪಿ ವಿಶುದ್ಧಚೇತಾಃ ॥ ಸತೇ ಗುಣಾನಾ ಮಯುತೈಕ ಮಂಶಂ ವದೇನ್ನವಾ ದೇವ ವರ ಪ್ರಸೀದ." (16) **ತವಾನನ್ತ ಗುಣಸ್ಯಾಪಿ ಷಡೇಕ**

ಹೇಳುವದಕ್ಕೆ ಅಂದರೆ ವರ್ಣಿಸುವದಕ್ಕೆ, **ನಶಕ್ಯಾಃ** - ಸಾಧ್ಯವಿಲ್ಲವು. "ಮಹಾತ್ಮನ ಶ್ಶಙ್ಖಚಕ್ರಾಸಿ ಪಾಣೇರ್ವಿಷ್ಣೋ ರ್ಜಿಷ್ಣೋರ್ವಸುದೇವಾತ್ಮಜಸ್ಯ" ಎಂದು ಉತ್ತರಾರ್ಧವಿರುತ್ತದೆ. **ಕ್ವಾಪಿ** - ಎಲ್ಲಿಯೂಕೂಡ, **ನರಃ** - ಒಬ್ಬ ಮನುಷ್ಯನು, **ಚತುರ್ಮುಖಾಯುಃ** - ಚತುರ್ಮುಖನ ಆಯುಸ್ಸನ್ನು ಹೊಂದಿದವನಾಗಿಯೂ, **ಕೋಟಿವಕ್ತ್ರಃ**- ಒಂದು ಕೋಟಿ ಮುಖಗಳುಳ್ಳವನಾಗಿಯೂ, **ವಿಶುದ್ಧಚೇತಾಃ** - ಪರಿಶುದ್ಧವಾದ ಮನಸ್ಸುಳ್ಳವನಾಗಿಯೂ, **ಭವೇದ್ಯದಿ** - ಆದವನಾದರೆ, **ಸಃ** - ಅಂತವನು, **ತೇ** - ನಿನ್ನ, **ಗುಣಾನಾಂ** - ಗುಣಗಳ, **ಅಯುತೈಕಮಂಶಂ** - ಹತ್ತು ಸಾವಿರ ಭಾಗದಲ್ಲಿ ಒಂದು ಭಾಗವನ್ನು, **ವದೇತ್** - ಹೇಳಿಯಾನೋ, ಅಥವಾ, **ನವಾ** - ಆಗಲೂ ಹೇಳಲಾರದೇ ಹೋದಾನೋ; ಆದುದರಿಂದ, **ದೇವವರ** - ದೇವತೆಗಳಿಗಿಂತಲೂ ಶ್ರೇಷ್ಠನಾದವನೇ, **ಪ್ರಸೀದ** - ಪ್ರಸನ್ನನಾಗು. ಅಂದರೆ ಎಲ್ಲಾದೇವತೆಗಳೂ ಒಟ್ಟಿಗೆ ಸೇರಿ ಹತ್ತುಸಾವಿರ ವರ್ಷಗಳು ವರ್ಣಿಸಿದರೂ ಕೂಡ ಆತನ ಕಲ್ಯಾಣಗುಣಗಳನ್ನೂ ಪೂರಾ ಹೇಳಲು ಸಾಧ್ಯವಾಗಲಾರರು. ಹಾಗೆಯೇ ಒಬ್ಬಾನೊಬ್ಬ ಮನುಷ್ಯನು ಪರಿಶುದ್ಧವಾದ ಮನಸ್ಸನ್ನು ಹೊಂದಿದವನಾಗಿ ಚತುರ್ಮುಖನ ಆಯುಸ್ಸಾದ ಒಂದು ಕಲ್ಪಕಾಲ ಬದುಕಿದ್ದು, ಒಂದು ಕೋಟಿ ಮುಖವಿದ್ದು ಅಷ್ಟುಮುಖಗಳಿಂದಲೂ ಅಷ್ಟುಕಾಲ ವರ್ಣಿಸುತ್ತಾ ಹೋದರೆ ಆಗಲಾದರೂ ಹತ್ತುಸಾವಿರಭಾಗದಲ್ಲಿ ಒಂದುಭಾಗವನ್ನಾದರೂ, ವರ್ಣಿಸಲಾದೀತೋ ಇಲ್ಲವೋ ಹೇಳಲಾಗುವದಿಲ್ಲವೆಂಬ ಭಾವವು.

16. **ಅನನ್ತಗುಣಸ್ಯಾಪಿ** - ಅನನ್ತವಾದಕಲ್ಯಾಣ ಗುಣಗಳುಳ್ಳವನಾಗಿದ್ದರೂ, **ತವ** - ನಿನ್ನ **ಷಡೇವ** - ಆರು ಮಾತ್ರವೇ,

(16) ನಾರಸಿಂಹಪುರಾಣ.

ಪ್ರಥಮ ಗುಣಾಃ । ಯೈಸ್ತ್ವಯೈವ ಜಗತ್ಕುಕ್ಷಾ ವನ್ಯೇ ಪ್ಯಂತರ್ನಿವೇಶಿತಾಃ ॥ (17) ಇಷುಕ್ಷಯಾ ನ್ನಿವರ್ತಂತೇ ನಾಂ ತರಿಕ್ಷ ಕ್ಷಿತಿಕ್ಷಯತ್ । ಮತಿಕ್ಷಯಾ ನ್ನಿವರ್ತಂತೇ ನ ಗೋವಿನ್ದಗುಣ ಕ್ಷಯಾತ್ ॥

ಪ್ರಥಮ ಗುಣಾಃ - ಮುಖ್ಯವಾದ ಗುಣಗಳು; **ಜಗತ್** - ಈ ಲೋಕವು, **ತ್ವಯಾ** - ನಿನ್ನಿಂದ, **ಕುಕ್ಷೌ** - ಉದರದಲ್ಲಿರುವ ಹಾಗೆ, **ಯೈಃ** - ಯಾವ ಈ ಗುಣಗಳಿಂದ, **ಅನ್ಯೇಪಿ** - ಇತರ ಗುಣಗಳಾದ ದಯಾ, ಸೌಲಭ್ಯ, ಸೌಶೀಲ್ಯಾದಿಗಳೂ, **ಅಂತರ್ನಿವೇಶಿತಾಃ** - ಗರ್ಭೀಕರಿಸಲ್ಪಟ್ಟವೋ, ಅಥವಾ ಅಂತರ್ಗತವಾದವೋ, ಅಂದರೆ ಮುಖ್ಯವಾದ ಗುಣಗಳು ಜ್ಞಾನ ಬಲೈಶ್ವರ್ಯಾದಿಗಳು. ಈ ಗುಣ ಗಳಲ್ಲೇ ಮಿಕ್ಕ ಇತರ ಅನೇಕ ಕಲ್ಯಾಣ ಗುಣಗಳೂ, ಸ್ವಾಮಿಯ ಉದರದಲ್ಲಿ ಸರ್ವ ವಿಶ್ವವೂ ಅಡಗಿರುವ ಹಾಗೆ, ಅಡಗಿವೆ ಎಂಬ ಭಾವವು.

17. **ಇಷುಕ್ಷಯಾತ್** - ಬಾಣಗಳೆಲ್ಲಾ ಮುಗಿದು ಹೋದು ದರಿಂದ, **ನಿವರ್ತಂತೇ** - ಆಕಾಶದಲ್ಲಿ ಬಾಣ ಬಿಡುವವರು ಹಿಂತಿರು ಗುತ್ತಾರೆ. **ಅಂತರಿಕ್ಷ ಕ್ಷಿತಿ ಕ್ಷಯಾತ್** - ಆಕಾಶದಲ್ಲಿ ಸ್ಥಳವಿಲ್ಲ ವೆಂಬುವದರಿಂದ, **ನ** - ಅಲ್ಲವು. ಹಾಗೆಯೇ, **ಮತಿಕ್ಷಯಾತ್** - ಬುದ್ಧಿಯೋಡುವದು ನಶಿಸಿ ಹೋದುದರಿಂದ, **ನಿವರ್ತನ್ತೆ** - ಸ್ವಾಮಿ ಯ ಗುಣ ಕಥನ ಮಾಡುವವರು ಹಿಂತಿರುಗುತ್ತಾರೆ. **ಗೋವಿನ್ದ ಗುಣ ಕ್ಷಯಾತ್** - ಗೋವಿಂದನ ಕಲ್ಯಾಣ ಗುಣಗಳು ಮುಗಿದು ಹೋದುದರಿಂದ ಎಂದು **ನ** - ಅಲ್ಲವು, ಅಂದರೆ ಒಬ್ಬನು ಆಕಾಶ ದಲ್ಲಿ ಬಾಣಗಳನ್ನು ಬಿಡುತ್ತಾ ಬಿಡುತ್ತಾ ಇದ್ದರೆ, ಬಾಣಗಳು ಮುಗಿದು ಹೋದರೆ ವಿರಾಮವನ್ನು ಹೊಂದುತ್ತಾನೆ. ಹಾಗೆ ವಿರಾ ಮವನ್ನು ಹೊಂದುವದು, ಆಕಾಶದಲ್ಲಿ ಸ್ಥಳವಿಲ್ಲದುದರಿಂದ ಎಂದಲ್ಲವು. ಹಾಗೆಯೇ ಸ್ವಾಮಿ ಗುಣವರ್ಣನೆ ಮಾಡಲು ಹೊರಟವನು, ಸ್ವಲ್ಪ ದೂರ ಹೇಳಿ ವಿರಾಮ ಹೊಂದುತ್ತಾನೆ. ಇದು ತನ್ನಲ್ಲಿರುವ ಕುಶಲ

---

(17)

(18) "ವಲ್ವಿನ್ಯೈ ಯೇನ್ಯೈ ಯೀರ್ಕಿನ್ರ ಗುಣಙ್ಗಳ್ಯೈಯುಡೈಯಾಯ್" (19) "ಉಯರ್ವರ ಪುಯರ್ನಲ ಮುಡೈಯವನ್" ಎನ್ನಿರಪಡಿಯೇ ಪ್ರಾಪ್ಯತ್ವಪ್ರಾಪಕೋಪಯುಕ್ತಙ್ಗಳಾನಗುಣಙ್ಗಳಾಲೇ ವಿಶಿಷ್ಟ ಮಾಕವನುಸನ್ಧೇಯಂ.

ತೆಯು ಪೂರೈಸಿದುದರಿಂದ ಮಾತ್ರವೇ ಅಲ್ಲದೆ, ಗೋವಿನ್ದನಲ್ಲಿ ಕಲ್ಯಾಣ ಗುಣಗಳು ಅಷ್ಟುಮಾತ್ರವೇ, ಇನ್ನಿಲ್ಲವೆಂಬುವದಕ್ಕಾಗಿ ಅಲ್ಲವು, ಆತನ ಕಲ್ಯಾಣ ಗುಣಗಳಾದರೋ ಅಪಾರವಾದುವೆಂಬ ಭಾವವು.

ಮುಂದೆ ಬಂದೆರಡು ಆಳ್ವಾರ್ ಸೂಕ್ತಿಗಳನ್ನು ಪ್ರಮಾಣವಾಗಿ ಉದಾಹರಿಸಿರುತ್ತಾರೆ.

18. **ವಲ್ವಿನ್ಯೈಯೇನ್ಯೈ** - ಬಲವಾದ ಪಾಪಗಳುಳ್ಳವನನ್ನು, **ಈರಗಿನ್ರ** - ನಿನ್ನ ಸ್ಮರಣೆಯನ್ನುಂಟುಮಾಡಿ, ನಿನ್ನ ವಿಶ್ಲೇಷೆ ಮೂಲಕ ನನ್ನನ್ನು ತೊಂದರೆ ಮಾಡುವ, **ಗುಣಙ್ಗಳ್ಯೈಯುಡಯಾಯ್** - ಕಲ್ಯಾಣ ಗುಣಗಳನ್ನು ಹೊಂದಿರುವನಾಗಿ ; ಎಂದರೆ, ನೀನಾದರೋ ಸೌಶೀಲ್ಯ, ಸೌಲಭ್ಯ, ವಾತ್ಸಲ್ಯಾದಿ ಗುಣಗಳುಳ್ಳವನು ; ಕ್ರೂರ ಪಾಪಗಳನ್ನು ನಾನು ಮಾಡಿರುವದರಿಂದ, ಇಂಥಾವನನ್ನು ಬಿಟ್ಟು ಅಗಲಿರುತ್ತೀನೆಯೇ ಎಂದು ನಿನ್ನ ಕಲ್ಯಾಣಗುಣಗಳು ನನಗೆ ತುಂಬಾ ದುಃಖವನ್ನುಂಟುಮಾಡಿ ಹಿಂಸಿಸುತ್ತವೆ, ಎಂಬ ತಾತ್ಪರ್ಯವು. ಶ್ರೀರಾಮನ ಕಲ್ಯಾಣ ಗುಣಗಳು ವಿಶ್ಲೇಷೆಯ ದೆಸೆಯಲ್ಲಿ, ಸೀತೆಗೂ, ದಶರಥಾದಿಗಳಿಗೂ, ಪುರಜನರಿಗೂ, ಹೇಗೆ ಖೇದವನ್ನುಂಟು ಮಾಡಿತೋ ಹಾಗೆ. **ವಿಶ್ಲೇಷೆ** ಎಂದರೆ ಅಗಲುವಿಕೆ; ಸಂಶ್ಲೇಷೆ ಎಂದರೆ ಸೇರಿರುವಿಕೆ.

19. **ಉಯರ್ವರ** - ಏನೊಂದೂ ಶ್ರಮವಿಲ್ಲದೆ ಅಥವಾ ಉಛ್ರಾಯವಿಲ್ಲದೆ ಅಂದರೆ ಅತಿಶಯವಿಲ್ಲದೆ, ನಿರತಿಶಯವಾದ, **ಉಯರ್** - ಉತ್ಕೃಷ್ಟವಾದ, **ನಲಮುಡ್ಯೈಯವನ್** - ಆನನ್ದಾದಿ ಕಲ್ಯಾಣಗುಣಗಳುಳ್ಳವನಾಗಿ, **ಯುವನವರ್** - ಪ್ರಮಾಣ ಪ್ರಸಿದ್ಧನಾಗಿ ಯಾವುನಿದ್ದಾನೋ, ಅವನು.

---

(18) ತಿರುವಾಯ್ಮೊಳಿ. 8. 1. 8· (19) ತಿರುವಾಯ್ಮೊಳಿ. 1. 1. 1.

ದಿವ್ಯಮಙ್ಗಳ ವಿಗ್ರಹ ವಿಶಿಷ್ಟತ್ವಂ.

(1) "ಸದೈಕರೂಪ ರೂಪಾಯ"

ಉಯರ್ವ್ವರ ಉಯರ್ನ್ನಲ ಮುಡೈಯರ್ವ ಯವನರ್ವ।
ಮಯರ್ವ್ವರ ಮತಿನಲ ಮರುಳಿನ್ರ್ ಯವನರ್ವ।
ಅಯರ್ವ್ವರು ಮಮರರ್‌ಗಳಧಿಪತಿ ಯವನರ್ವ।
ತುಯರರು ಶುಡರಡಿ ತೊಳುತೆ ಳೆನ್ಮನವೇ॥

ಎಂಬುವದು ಪೂರಾಪಾಶುರವು. ತಿರುವಾಯ್ ಮೊಳಿಯ ಮಙ್ಗಳ ಶ್ಲೋಕವಾಗಿ ತುಂಬಾ ಅರ್ಥಗರ್ಭಿತವಾದುದು.

ಹೀಗೆ ಮೇಲೆಹೇಳಿದ ಪ್ರಮಾಣಗಳಿಗೆ ಅನುಸಾರವಾಗಿ, ಸರ್ವೇಶ್ವರನು ಪ್ರಾಪ್ಯನಾಗಿರುವದಕ್ಕೂ, ಪ್ರಾಪಕನಾಗಿರುವದಕ್ಕೂ, ಯೋಗ್ಯಗಳಾದ ಅನನ್ತ ಕಲ್ಯಾಣ ಗುಣಗಳಿಂದ ಯುಕ್ತನಾಗಿರುವವನಾಗಿ, ಆತನನ್ನು ಅನುಸನ್ಧಾನ ಮಾಡತಕ್ಕದ್ದು.

ದಿವ್ಯಮಂಗಳ ವಿಗ್ರಹತ್ವವು.

ಸರ್ವೇಶ್ವರನು, ಶ್ರಿಯಃಪತಿಯಾಗಿಯೂ, ಸತ್ಯಜ್ಞಾನಾನನ್ತತ್ವಯುಕ್ತನಾಗಿಯೂ ನಿರತಿಶಯಾನಂದ ಸ್ವರೂಪನಾಗಿಯೂ, ಹೇಯ ಪ್ರತ್ಯನೀಕನಾಗಿಯೂ, ಕಲ್ಯಾಣಗುಣಾಕರನಾಗಿಯೂ, ಪ್ರಾಪ್ಯ ಪ್ರಾಪಕನಾಗಿಯೂ, ಇದ್ದಾನೆಂದನುಸನ್ಧಾನ ಮಾಡತಕ್ಕದ್ದೆಂದು ಹೇಳಲ್ಪಟ್ಟಿತು. ಮುಂದೆ ದಿವ್ಯಮಙ್ಗಳ ವಿಗ್ರಹಯುಕ್ತನೆಂದೂ ಅನುಸನ್ಧಾನ ಮಾಡತಕ್ಕದ್ದೆಂದು ಹೇಳುವದಕ್ಕಿದೆ ಅದಕ್ಕೆ ಅನೇಕ ಪ್ರಮಾಣಗಳನ್ನು ನಿದರ್ಶಿಸುತ್ತಾರೆ.

(1) **ಸದಾ** - ಯಾವಾಗಲೂ, **ಏಕರೂಪರೂಪಾಯ** - ವೃದ್ಧಿಕ್ಷಯಾದಿಪರಿಣಾಮಾದಿಗಳಿಲ್ಲದೆ ನಿತ್ಯವಾಗಿ ಒಂದೇ ವಿಧವಾಗಿರುವ ಸ್ವಭಾವವುಳ್ಳ ದಿವ್ಯಮಙ್ಗಳ ವಿಗ್ರಹವುಳ್ಳವನಿಗೋಸ್ಕರ, **ನಮಃ** - ನಮಸ್ಕಾರವು ಎಂದು ಮುಂದೆ ಇದೆ.

"ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ।
ಸದೈಕರೂಪರೂಪಾಯ ವಿಷ್ಣವೇ ಸರ್ವಜಿಷ್ಣವೇ"

ವಿ. ಪು. 1. 2. 1.

(2) "ನಿತ್ಯಸಿದ್ಧೇತದಾಕಾರೇ ತತ್ಪರತ್ವೇಚ ಪೌಷ್ಕರ।
ಯಸ್ಯಾಸ್ತಿ ಸತ್ತಾಹೃದಯೇತಸ್ಯಾ ಸೌ ಸನ್ನಿಧಿಂ ವ್ರಜೇತ್."
(3) "ಸಮಸ್ತಾ ಶ್ಯಕ್ತಯಶ್ಚೈತಾ ನೃಪಯತ್ರ ಪ್ರತಿಷ್ಠಿತಾಃ।
ತದ್ವಿಶ್ವರೂಪ ವೈರೂಪ್ಯಂ ರೂಪ ಮನ್ಯದ್ಧರೇ ರ್ಮಹತ್"

ಎಂಬುವದು ಪೂರಾಶ್ಲೋಕವು, ಮೊದಲನೇ **ರೂಪ** ಶಬ್ದಕ್ಕೆ ಸ್ವಭಾವವೆಂದೂ, ಎರಡನೇ ರೂಪಶಬ್ದಕ್ಕೆ ದಿವ್ಯಮಙ್ಗಳ ವಿಗ್ರಹವೆಂಬರ್ಥವು. **ಅವಿಕಾರಾಯ** - ಅಚೇತ್ತುಗಳ ಹಾಗೆ ವಿಕಾರವಿಲ್ಲದವನೆಂಬರ್ಥವು. ಹಾಗಾದರೆ ಬದ್ಧನಾದ ಚಿತ್ತಿನ ಹಾಗೋ ಎಂದರೆ, **ಶುದ್ಧಾಯ** - ಜೀವಾತ್ಮನಹಾಗೆ ಹೇಯಗುಣಗಳಿಲ್ಲದವನು. ಹಾಗಾದರೆ ಮುಕ್ತರ ಹಾಗೋ ಎಂದರೆ, **ನಿತ್ಯಾಯ** - ಎಂದಿಗೂ ಹೇಯಸಂಬಂಧವಿಲ್ಲದೆ, ನಿತ್ಯವಾದ ಹೇಯಪ್ರತ್ಯನೀಕತ್ವ, ಕಲ್ಯಾಣಗುಣಾಕರತ್ವಗಳುಳ್ಳವನು. ಹಾಗಾದರೆ ನಿತ್ಯರ ಹಾಗೋ ಎಂದರೆ, **ಪರಮಾತ್ಮನೇ** - ಅವರಿಗೂ ವಿಲಕ್ಷಣನಾಗಿ ಸರ್ವಶ್ರೇಷ್ಠನಾದವನು, ಇಂಥಾವನಿಗೆ ನಮಸ್ಕಾರವು ಎಂಬರ್ಥವು. ಈ ವಾಕ್ಯಪ್ರಕಾರ ಸರ್ವೇಶ್ವರನ ದಿವ್ಯಮಙ್ಗಳ ವಿಗ್ರಹಕ್ಕೆ ಪರಿಣಾಮಾದಿಗಳಿಲ್ಲವೆಂದು ಭಾವಿಸತಕ್ಕದ್ದು.

(2) ಹೇ **ಪೌಷ್ಕರ** - ಓ ಕಮಲದಲ್ಲಿ ಹುಟ್ಟಿದ ಬ್ರಹ್ಮನೇ, **ನಿತ್ಯಸಿದ್ಧೇ** - ಯಾವಾಗಲೂ ಸ್ಥಿರವಾಗಿರುತ್ತಿರುವ, **ತದಾಕಾರೇ** - ಆ ಭಗವಂತನ ದಿವ್ಯಮಙ್ಗಳ ವಿಗ್ರಹದಲ್ಲೂ, **ತತ್ಪರತ್ವೇಚ** - ಆಸರ್ವೇಶ್ವನ ಪರಸ್ವರೂಪದಲ್ಲೂ, **ಯಸ್ಯಹೃದಯೇ** - ಯಾವನ ಮನಸ್ಸಿನಲ್ಲಿ. **ಸತ್ತಾ** - ದೃಢಭಾವವು, **ಅಸ್ತಿ** - ಇರುತ್ತದೆಯೋ, ತಸ್ಯ - ಅಂಥಾವನಿಗೆ, **ಅಸೌ** - ಈ ಕೃಪಾಸಾಗರನು, **ಸನ್ನಿಧಿಂ** - ತನ್ನ ಸಾನ್ನಿಧ್ಯವನ್ನು **ವ್ರಜೇತ್** - ಹೊಂದಿಸುವನು, ಎಂದರೆ ಸಾಕ್ಷಾತ್ಕರಿಸುವಹಾಗೆ ಮಾಡುವನೆಂಬ ಭಾವವು. ಇಲ್ಲಿ ಪರಮಾತ್ಮನ ದಿವ್ಯಮಙ್ಗಳ ವಿಗ್ರಹವು ನಿತ್ಯಸಿದ್ಧವಾದುದೆಂದು ಹೇಳಲ್ಪಟ್ಟಿರುತ್ತದೆ.

(3) "**ಹೇನೃಪ** - ಓ ರಾಜನೇ, **ಏತಾಃ** - ಈ, **ಸಮಸ್ತಾಃ** - ಎಲ್ಲಾ, **ಶಕ್ತಯಃ** - ಶಕ್ತಿಗಳು, ಅಂದರೆ ಮೇಲೆ ಪ್ರಕರಣದಲ್ಲಿ ಹೇಳ

(2) ಪೌಷ್ಕರ ಸಂಹಿತೆ. (3) ವಿ. ಪು. 6. 7. 70.

(4) **"ಇಚ್ಛಾ ಗೃಹೀತಾಭಿಮತೋರುದೇಹಃ"** (5) **"ನಭೂತಸಙ್ಘ ಸಂಸ್ಥಾನೋ ದೇಹೋಽಸ್ಯ ಪರಮಾತ್ಮನಃ"**

ಲ್ಪಟ್ಟ ಅಚೇತನಶಕ್ತಿ, ಚೇತನಶಕ್ತಿ, ಕರ್ಮಶಕ್ತಿ ಎಂಬ ಮೂರು ಶಕ್ತಿಗಳು, **ಯತ್ರ**- ಯಾವ ದಿವ್ಯಮಂಗಳ ವಿಗ್ರಹದಲ್ಲಿ, **ಪ್ರತಿಷ್ಠಿತಾಃ**-ಅಸ್ತ್ರ ಭೂಷಣ ಮೊದಲಾದ ರೂಪದಲ್ಲಿ ಸ್ಥಾಪಿಸಲ್ಪಟ್ಟಿರುವವೋ, **ತತ್**- ಅಂತಹ, ಹರೇಃ - ವಿಷ್ಣುವಿನ, **ರೂಪಂ**- ದಿವ್ಯಮಙ್ಗಳ ವಿಗ್ರಹವು, **ವಿಶ್ವರೂಪವೈರೂಪ್ಯಂ** - ಪ್ರಪಂಚದ ಎಲ್ಲಾ ರೂಪಗಳಿಗಿಂತಲೂ ವಿಲಕ್ಷಣವಾದುದು, **ಅನ್ಯತ್** - ಬೇರೆಯಾಗಿ ಅಪ್ರಾಕೃತವಾದುದು, **ಹರೇಃರೂಪಂಹರೇರನ್ಯತ್** - ಎಂಬ ಯೋಜನೆಯಿಂದ ಹರಿಯ ದಿವ್ಯಮಙ್ಗಳ ವಿಗ್ರಹವು ಹರಿಯಧರ್ಮಿಸ್ವರೂಪಕ್ಕಿಂತಲೂ ಬೇರೆಯಾದುದು ಎಂದು ಅರ್ಥಹೇಳಬಹುದು. ಇದರಿಂದ ಭಗವಂತನ ಸ್ವರೂಪರೂಪಗಳ ಅಭೇದವಾದವು ನಿರಸನಮಾಡಲ್ಪಟ್ಟಿತು. **ಮಹತ್** - ಮಹತ್ತಾದುದು. (ಇದು ಕೇಶಿಧ್ವಜಖಾಂಡಿಕ್ಯ ಸಂವಾದ ಪ್ರಕರಣವು)

(4) **ಇಚ್ಛಾಗೃಹೀತ** - ಸ್ವಸಂಕಲ್ಪ ಮಾತ್ರದಿಂದಲೇ ಪರಿಗ್ರಹಿಸಲ್ಪಟ್ಟ ಅಂದರೆ ಕರ್ಮಮೂಲಕ ಬಂದುದಲ್ಲವೆಂಬ ಭಾವವು, **ಅಭಿಮತ** - ತನಗೆ ತುಂಬಾ ಇಷ್ಟವಾದ, **ಉರುದೇಹಃ** - ಉತ್ಕೃಷ್ಟವಾದ ಶರೀರವುಳ್ಳವನು. ಪರವ್ಯೂಹ ವಿಭವಾವತಾರಾದಿ ದೆಶೆಯಲ್ಲಿ ಪರಿಗ್ರಹಿಸಲ್ಪಟ್ಟ ದಿವ್ಯಮಂಗಳ ವಿಗ್ರಹಗಳೆಲ್ಲಾ ಅಪ್ರಾಕೃತವಾದವುಗಳೆಂಬಭಿಪ್ರಾಯವು. **"ಸಮಸ್ತಕಲ್ಯಾಣಗುಣಾತ್ಮಕೋಽಸೌ ಸ್ವಶಕ್ತಿಲೇಶಾವೃತ ಭೂತವರ್ಗಃ । ಇಚ್ಛಾಗೃಹೀತಾಭಿಮತೋರುದೇಹ ಸ್ಸಂಸಾಧಿತಾಶೇಷ ಜಗದ್ಧಿತೋಽಯಃ"** ಎಂದು ಪೂರಾ ಶ್ಲೋಕವು

(5) **ಅಸ್ಯ** - ಈ, **ಪರಮಾತ್ಮನಃ** - ಪರಮಾತ್ಮನ, **ದೇಹಃ** - ದಿವ್ಯಮಂಗಳವಿಗ್ರಹವಾದ ಶರೀರವು, **ಭೂತಸಙ್ಘಸಂಸ್ಥಾನಃ** - ಪ್ರಾಕೃತವಾದ ಪಂಚಭೂತಗಳ ಸಮೂಹವು ಸೇರಿ ಉಂಟಾದುದು, **ನ** - ಅಲ್ಲವು ಅಂದರೆ ಸ್ವಾಮಿಯ ದಿವ್ಯಮಂಗಳವಿಗ್ರಹವು ಅಪ್ರಾಕೃತವಾದುದು. ಇದು ಭೀಷ್ಮರು ಯುಧಿಷ್ಠರರಿಗೆ ಉಪದೇಶಿಸುವ ಸಂದರ್ಭವು.

---

(4) ವಿ. ಪು. 6. 5. 84. (5) ಭಾರತ. ಶಾಂತಿ. 206. 60.

(6) "ನತಸ್ಯಪ್ರಾಕೃತಾ ಮೂರ್ತಿ ರ್ಮಾಂಸಮೇಧೋಸ್ಥಿ ಸಂಭವಾ" (7) "ಭುಜೈ ಶ್ಚತುರ್ಭಿ ಸ್ಸಮುಪೇತ ಮೇತದ್ರೂಪಂ ವಿಶಿಷ್ಟಂದಿವಿ ಸಂಸ್ಥಿತಂಚ," (8) "ರುಕ್ಮಾಭಂಸ್ವಪ್ನಧೀ ಗಮ್ಯಂ," (9) ತತ್ರೈಕಸ್ಥಂ ಜಗತ್ಕೃತ್ಸ್ನಂ"

"ತದೇವ ಕೃಷ್ಣೋದಾಶಾರ್ಙ್ಗಃ ಶ್ರೀವರ್ಣ ಶ್ರೀವತ್ಸಲಕ್ಷಣಃ ।
ನಭೂತಸೃಷ್ಟಿಸಂಸ್ಥಾನಾಂ ದೇಹೋಸ್ಯ ಪರಮಾತ್ಮನಃ"

ಎಂಬುವದು ಭಾರತಶ್ಲೋಕವು. ಅರ್ಥದಲ್ಲೇನೂ ವ್ಯತ್ಯಾಸವಿಲ್ಲವು.

6. **ತಸ್ಯ** - ಆ ಸರ್ವೇಶ್ವರನಿಗೆ, **ಮಾಂಸಮೇಧೋ ಸ್ಥಿಸಂಭವಾ, ಮಾಂಸ** - ಮಾಂಸವು, **ಮೇಧ** - ಮೇಧಸ್ಸು ಕೊಬ್ಬು, **ಅಸ್ಥಿ** - ಎಲಬು, ಇವುಗಳಿಂದ, **ಸಂಭವಾ** - ಉತ್ಪನ್ನವಾದ, **ಪ್ರಾಕೃತಾ**- ಪ್ರಕೃತಿಸಂಬಂಧವಾದ, ಅಂದರೆ ಪರಿಣಾಮಗಳುಳ್ಳ **ಮೂರ್ತಿಃ**- ವಿಗ್ರಹವು, ಶರೀರವು, **ನ** - ಅಲ್ಲವು, ಅಂದರೆ ಅಪ್ರಾಕೃತವಾದ ದಿವ್ಯಮಂಗಳ ವಿಗ್ರಹವು ಎಂಬರ್ಥವು.

7. **ಚತುರ್ಭಿಃ** - ನಾಲ್ಕಾದ, **ಭುಜೈಃ** - ಕೈಗಳಿಂದ, **ಸಮುಪೇತಂ** - ಕೂಡಿಕೊಂಡಿರುವ, **ಏತದ್ರೂಪಂ** - ಸರ್ವೇಶ್ವರನ ಈ ದಿವ್ಯಮಂಗಳ ವಿಗ್ರಹವು, **ವಿಶಿಷ್ಟಂ** - ಲೋಕವಿಲಕ್ಷಣವಾಗಿ ಅಮೋಘವಾದುದು, **ದಿವಿ** - ದಿವ್ಯವೈಕುಂಠದಲ್ಲಿ, **ಸಂಸ್ಥಿತಂಚ** - ಇರುವಂಥಾದ್ದು.

8. **ರುಕ್ಮಾಭಂ** - ಸುವರ್ಣದ ಕಾಂತಿಯೋಪಾದಿಯಲ್ಲಿ ಕಾಂತಿಯುಳ್ಳ, **ಸ್ವಪ್ನಧೀಗಮ್ಯಂ** - ಸ್ವಪ್ನದಲ್ಲಿನ ಹಾಗೆ ಇರುವ, **ಧೀ** - ಯೋಗರೂಪವಾದ ಬುದ್ಧಿಯಿಂದ, **ಗಮ್ಯಂ** - ತಿಳಿಯಲು ಸಾಧ್ಯವಾದುದು, ದಿವ್ಯಮಂಗಳವು ಶುಭಾಶ್ರಯವೆಂದು ಹೇಳಿದಂತಾಯಿತು.

9. **ತತ್ರ** - ಆ ವಿಶ್ವರೂಪವಾದ ದಿವ್ಯಮಂಗಳ ವಿಗ್ರಹದಲ್ಲಿ, **ಕೃತ್ಸ್ನಂ** - ಸಮಸ್ತವಾದ ಜಗತ್ತನ್ನು, **ಏಕಸ್ಥಂ** - ಒಂದು ಏಕದೇಶದಲ್ಲಿರುವ ಹಾಗೆ ಕಂಡನು. ಅನೇಕ ವಿಭಾಗ ಹೊಂದಿದ ದೇವ

---

(6) ವಾರಾಹಪುರಾಣಂ. 34. 40. (7) ಭಾರತಮೌಸಲ. 5. 34.
(8) ಮನುಸ್ಮೃತಿ. 12. 123. (9) ಗೀತೆ. 11. 13.

(10) " ಪಶ್ಯಾಮಿ ದೇವಾಂ ಸ್ತವ ದೇವ ದೇಹೇ"
(11) " ಅಸ್ತ್ರಭೂಷಣ ಸಂಸ್ಥಾನ ಸ್ವರೂಪಂ"

ತಿರ್ಯಙ್ಮನುಷ್ಯಸ್ಥಾವರುಗಳಾದ ಭೋಕ್ತೃವರ್ಗಗಳನ್ನೂ, ಸ್ವರ್ಗ ಪಾತಾಳಾದಿ ಸಮಸ್ತಲೋಕಗಳಾದ ಭೋಗಸ್ಥಾನಗಳನ್ನೂ, ಅವುಗಳ ಲ್ಲಿರುವ ಅಚಿದ್ರೂಪವಾದ ಭೋಗೋಪಕರಣಗಳನ್ನೂ, ಹೊಂದಿರುವ ಈ ಸಮಸ್ತಲೋಕವೂ, ಆ ಸರ್ವೇಶ್ವರನ ವಿಶ್ವರೂಪವಾದ ದಿವ್ಯ ಮಂಗಳ ವಿಗ್ರಹದ ಒಂದು ಏಕದೇಶದಲ್ಲಿ ಅಂದರೆ ಒಂದು ಭಾಗದಲ್ಲಿ ರುವ ಹಾಗೆ ಅರ್ಜುನನು ಕಂಡನು ಎಂಬ ಭಾವವು.

" ತತ್ರೈಕಸ್ಥಂ ಜಗತ್ಕೃತ್ಸ್ನಂ ಪ್ರವಿಭಕ್ತ ಮನೇಕಧಾ ।
ಅಪಶ್ಯದ್ದೇವ ದೇವಸ್ಯ ಶರೀರೆ ಪಾಂಡವ ಸ್ತಥಾ "

ಎಂಬುವದು ಪೂರಾ ಶ್ಲೋಕವು.

10. " ಪಶ್ಯಾಮಿ ದೇವಾಂ ಸ್ತವದೇವ ದೇಹೇ ಸರ್ವಾಂ ಸ್ತಥಾ ಭೂತವಿಶೇಷ ಸಂಘಾರ್ । ಬ್ರಹ್ಮಾಣಮೀಶಂ ಕಮಲಾಸ ನಸ್ಥಂ ಋಷೀಂಶ್ಚಸರ್ವಾ ನುರಗಾಂ ಶ್ಚ ದಿವ್ಯಾ" ಎಂಬುವದು ಪೂರಾ ಶ್ಲೋಕವು. **ಹೇದೇವ** - ಓ ಲೀಲಾಸಕ್ತನಾದ ಸ್ವಾಮಿಯೇ, **ತವದೇಹೇ** - ನಿನ್ನ ದಿವ್ಯಮಂಗಳ ವಿಗ್ರಹದಲ್ಲಿ, **ಸರ್ವಾ** - ಸಮಸ್ತ ವನ್ನೂ, **ತಥಾ** - ಹಾಗೆಯೇ, **ಭೂತವಿಶೇಷಸಂಘಾರ್** - ಸ್ಥಾವರ ಜಂಗಮ ಸಮಸ್ತ ಭೂತಗಳನ್ನೂ, **ಕಮಲಾಸನಸ್ಥಂ** - ಕಮಲಾಸ ನದಲ್ಲಿರುವ, **ಬ್ರಹ್ಮಾಣಂ** - ಚತುರ್ಮುಖ ಬ್ರಹ್ಮನನ್ನೂ, **ಈಶಂ** - ರುದ್ರನನ್ನೂ, **ಋಷೀಂಶ್ಚ** - ಸಮಸ್ತ ಋಷಿಗಳನ್ನೂ, **ದಿವ್ಯಾ** - ವಿಚಿತ್ರರಾದ, **ಉರಗಾಂಶ್ಚ** - ತಕ್ಷಕಾದಿ ನಾಗರನ್ನೂ, **ಪಶ್ಯಾಮಿ** - ನೋಡುವೆನು.

11. " ಅಸ್ತ್ರಭೂಷಣ ಸಂಸ್ಥಾನ ಸ್ವರೂಪಂ ರೂಪವರ್ಜಿತಃ। ಬಿಭರ್ತಿ ಮಾಯಾ ರೂಪೋಸೌ ಶ್ರೇಯಸೇ ಪ್ರಾಣಿನಾಂ ಹರಿಃ ॥" **ಅಸ್ತ್ರಭೂಷಣ ಸಂಸ್ಥಾನ ಸ ರೂಪಂ. ಅಸ್ತ್ರಭೂಷಣ** - ಮೇಲೆ ಹೇ ಳಿದ ಸ್ವಾಮಿಯ ದಿವ್ಯಾಯುಧ ದಿವ್ಯಾಭರಣಗಳಿಗೆ, **ಸಂಸ್ಥಾನ** - ಆಸ್ಪ

---

(10) ಗೀತೆ. 11. 15. (11) ವಿ. ಪು. 1. 22. 76.

ದವಾದ, **ಸ್ವರೂಪಂ** - ವಿಗ್ರಹವನ್ನು, **ರೂಪವರ್ಜಿತಃ** - ಕರ್ಮನಿಮಿತ್ತವಾದ ಪ್ರಾಕೃತ ಶರೀರವಿಲ್ಲದ, **ಮಾಯಾರೂಪಃ** - ಅನಂತಾಶ್ಚರ್ಯರೂಪವುಳ್ಳ, **ಅಸೌ ಹರಿಃ** - ಈ ವಿಷ್ಣುವು, **ಪ್ರಾಣಿನಾಂ** - ಪ್ರಾಣಿಗಳ, **ಶ್ರೇಯಸೇ** - ದರ್ಶನ, ಸ್ಮರಣ, ನಾಮಸಂಕೀರ್ತನಾದಿಗಳಿಂದ ಜಗತ್ತಿನ ಏಳಿಗೆಗೋಸ್ಕರವಾಗಿಯೂ, ಧರ್ಮಸ್ಥಾಪನಕ್ಕಾಗಿಯೂ, **ಬಿಭರ್ತಿ**- ಧರಿಸಿರುತ್ತಾನೆ. ಈ ಅಸ್ತ್ರಗಳೂ ಭೂಷಣಗಳೂ ಯಾವುವು, ಅವು ಏನನ್ನು ನಿರ್ದೇಶಿಸುತ್ತವೆ, ಎಂಬುವದನ್ನು ಮುಂದೆ ಶ್ರೀಮದಾಚಾರ್ಯರವರು "ಪುರುಡನ್ ಮಣಿವರ ಮಾಕ" ಎಂಬ ಪಾಶುರದಿಂದ ಮುಂದಿನ ತತ್ವತ್ರಯಾಧಿಕಾರದಲ್ಲಿ ವಿಶದವಾಗಿ ತಿಳಿಸುತ್ತಾರೆ. ಸರ್ವ ಆತ್ಮರನ್ನೂ ಕೌಸ್ತುಭಮಣಿಯನ್ನಾಗಿಯೂ, ಪ್ರಧಾನಬುದ್ಧಿ ಮಹತ್ತತ್ವಗಳನ್ನು ಗದೆಯನ್ನಾಗಿಯೂ, ತಾಮಸಾಹಂಕಾರ, ರಾಜಸಾಹಂಕಾರಗಳನ್ನೂ ಶಂಖ ಮತ್ತು ಶಾರ್ಙ್ಗವನ್ನಾಗಿಯೂ, ಸಾತ್ವಿಕಾಹಂಕಾರವಾದ ಮನಸ್ಸನ್ನು ಚಕ್ರವನ್ನಾಗಿಯೂ, ಪಂಚತನ್ಮಾತ್ರೆಗಳನ್ನು ವೈಜಯನ್ತಿಮಾಲೆಯನ್ನಾಗಿಯೂ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು ಶರಗಳನ್ನಾಗಿಯೂ, ಜ್ಞಾನ ಅಜ್ಞಾನ (ಅವಿದ್ಯೆ) ಗಳನ್ನೂ ಕತ್ತಿ ಮತ್ತು ಅದರ ಒರೆಯನ್ನಾಗಿಯೂ, ಸ್ವಾಮಿಯು ತನ್ನ ದಿವ್ಯಮಂಗಳ ವಿಗ್ರಹದಲ್ಲಿ ಧರಿಸುತ್ತಾನೆಂಬದಾಗಿ ವಿಷ್ಣುಪುರಾಣದ ೧ನೇ ಅಧ್ಯಾಯ ೨೨ನೇ ಸರ್ಗಿಯಲ್ಲಿ ೬೮ರಿಂದ ೭೫ನೇ ಶ್ಲೋಕಗಳವರಿವಿಗೆ ಹೇಳಲ್ಪಟ್ಟವೆ.

12. "**ಭೂಷಣಾಸ್ತ್ರ ಸ್ವರೂಪಸ್ಥಂ ಯದೇತ ದಖಿಲಂಜಗತ್**
ಬಿಭರ್ತಿ ಭಗವಾನ್ ವಿಷ್ಣು ಸ್ತನ್ಮಮಾಖ್ಯಾತು ಮರ್ಹಸಿ"

ಎಂದು ಪೂರಾ ಶ್ಲೋಕವು. ಇದು ಮೈತ್ರೇಯ ಪ್ರಶ್ನೆಯು. ಅದಕ್ಕೆ ಹಿಂದೆ ಉದಾಹರಿಸಿರುವ "**ಅಸ್ತ್ರಭೂಷಣ**" ವೆಂಬ ಶ್ಲೋಕವು ಪರಾಶರರ ಉತ್ತರದಲ್ಲಿ ಸೇರಿರುತ್ತದೆ. **ಏತದಖಿಲಂಜಗತ್** - ಈ ಎಲ್ಲಾ ಜಗತ್ತನ್ನೂ, **ಭಗವಾನ್** - ಹೇಯಪ್ರತ್ಯನೀಕನಾಗಿ ಷಾಡ್ಗುಣ್ಯಪರಿಪೂರ್ಣನಾದ, **ವಿಷ್ಣುಃ** - ಸರ್ವವ್ಯಾಪಿಯಾದ ವಿಷ್ಣುವು, **ಭೂಷಣಾಸ್ತ್ರ**

(12) ವಿ. ಪ್ರ. 1. 22. 66.

(13) **"ತಮಸಃ ಪರಮೋಧಾತಾ ಶಂಕಚಕ್ರ ಗದಾಧರಃ" ಎನ್ಗಿರಪಡಿಯೇ, ಸರ್ವಜಗದಾಶ್ರಯಮಾನ ವಪ್ರಾಕೃತ ದಿವ್ಯಮಙ್ಗಳವಿಗ್ರಹ ವಿಶಿಷ್ಟಮಾಕ ವನುಸನ್ಧೇಯಂ.**

ಸ್ವರೂಪಸ್ಥಂ- ದಿವ್ಯಭೂಷಣ ದಿವ್ಯಾಸ್ತ್ರಗಳುಳ್ಳ ವಿಗ್ರಹದಲ್ಲಿರುವದಾಗಿ, **ಬಿಭರ್ತಿ** - ಧರಿಸಿರುತ್ತಾನೆಂಬುವದು, **ಯತ್** - ಯಾವುದುಂಟೋ, **ತತ್** - ಅದನ್ನು, **ಮಮ** - ನನಗೆ, **ಆಖ್ಯಾತುಂ** - ಉಪದೇಶಿಸಲು, **ಅರ್ಹಸಿ** - ಯೋಗ್ಯರಾಗಿದ್ಧೀರಿ.

13. **ಶ್ರೀವತ್ಸವಕ್ಷಾ ನಿತ್ಯಶ್ರೀರಜಯ್ಯಃ ಶಾಶ್ವತೋ ಧೃವಃ"** ಎಂಬುವದು ಉತ್ತರಾರ್ಧವು. **ತಮಸಃ** - ಪ್ರಾಕೃತ ಮಂಡಲಕ್ಕಿಂತ, **ಪರಮಃ** - ಪ್ರತ್ಯೇಕವಾಗಿ ಶ್ರೇಷ್ಟವಾಗಿರುವ ಅಪ್ರಾಕೃತ ದಿವ್ಯ ವೈಕುಂಟದಲ್ಲಿರುವ. **ಧಾತಾ** - ಸೃಷ್ಟಿಕರ್ತನಾದ, **ಶಂಖಚಕ್ರಗದಾಧರಃ** - ಶಂಖಚಕ್ರಗದಾಪದ್ಮಾದಿ ದಿವ್ಯಾಸ್ತ್ರಾದಿಗಳನ್ನು ಧರಿಸಿರುವ, **ಶ್ರೀವತ್ಸವಕ್ಷಾಃ** - ಶ್ರೀವತ್ಸವೆಂಬ ಚಿನ್ಹೆಯನ್ನು ವಕ್ಷಸ್ಸಿನಲ್ಲಿ ಧರಿಸಿರುವ, **ನಿತ್ಯಶ್ರೀಃ** - ನಿತ್ಯವಾಗಿ ಅನಪಾಯನಿಯಾದ ಲಕ್ಷ್ಮಿಯುಳ್ಳ, **ಅಜಯ್ಯಃ** - ಜಯಿಸಲಸಾಧ್ಯನಾದ, **ಶಾಶ್ವತಃ** - ನಿತ್ಯವಿಭೂತಿಯೊಂದಿಗೆ ಸ್ಥಿರವಾಗಿರುವ, **ಧೃವಃ** - ಪರಿಣಾಮಶೂನ್ಯನಾದ ಶ್ರೀಮಹಾವಿಷ್ಣುವೇ ಶ್ರೀರಾಮನು ಎಂಬುವದಾಗಿ ಮಂಡೋದರಿವಾಕ್ಯವು. ಇಲ್ಲಿಯೂ ದಿವ್ಯಾಸ್ತ್ರ ಭೂಷಣಗಳುಳ್ಳ ದಿವ್ಯಮಂಗಳವಿಗ್ರಹ **ಯುಕ್ತ**ನೆಂಬ ತಾತ್ಪರ್ಯವು.

ಈ ಮೇಲಿನ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, ಸರ್ವೇಶ್ವರನು ಸಮಸ್ತ ಜಗತ್ತಿಗೂ ಆಶ್ರಯವಾದ ಅಪ್ರಾಕೃತ ದಿವ್ಯಮಙ್ಗಳ ವಿಗ್ರಹವನ್ನು ಹೊಂದಿರುವ ಹಾಗೆ ಅನುಸನ್ಧಾನ ಮಾಡತಕ್ಕದ್ದು. ಇದರಿಂದ ಆತನ ಶರೀರವು ಅಪ್ರಾಕೃತವಾದುವೆಂದೂ, ಪರಿಣಾಮಾದಿ ರಹಿತವಾದುದೆಂದೂ, ಸಮಸ್ತ ತತ್ವಗಳನ್ನು ದಿವ್ಯಾಸ್ತ್ರಭೂಷಣಾದಿಗಳಾಗಿ ಹೊಂದಿರುವನೆಂದೂ ಭಾವಿಸತಕ್ಕದ್ದೆಂಬಭಿಪ್ರಾಯವು.

---

(13) **ರಾಮಾ. ಯುದ್ಧ. 114. 15.**

ಇವ್ವಿಗ್ರಹಂ ಪರ ವ್ಯೂಹ ವಿಭವ ಹಾರ್ದಾ ರ್ಚಾವತಾರ ರೂಪೇಣ ಪಂಚಪ್ರಕಾರ ಮಾಯಿರಕ್ಕುಂ ಪಡಿಯುಂ, ಇವ *ಱ್ಱಿ* **ಲುಳ್ಳ ವಿಶೇಷಙ್ಗಳುಂ ಭಗವಚ್ಛಾಸ್ತ್ರ ಸಂಪ್ರದಾಯ ತ್ತಾಲೆ ಯರಿಯಪ್ಪಡುಂ.**

"ಉಭಯ ವಿಭೂತಿಯುಕ್ತಃ"

(1) **"ವಿಷ್ಣೋರೇತಾ ವಿಭೂತಯಃ"**

ಮುಂದಿನ ವಾಕ್ಯದಿಂದ **ಈ ದಿವ್ಯಮಂಗಳ ವಿಗ್ರಹವು ಐದು ಪ್ರಕಾರವಾಗಿ** ಇರುವದೆಂದು ಹೇಳುತ್ತಾರೆ.

ಈ ದಿವ್ಯಮಂಗಳ ವಿಗ್ರಹವು (೧) ಪರರೂಪ (೨) ವ್ಯೂಹರೂಪ (೩) ಅವತಾರರೂಪಗಳು (೪) ಅಂತರ್ಯಾಮಿರೂಪ (೫) ಅರ್ಚ್ಯಾವ ತಾರರೂಪವೆಂದು ಐದು ವಿಧನಾಗಿರುವ ಅಂಶವನ್ನೂ, ಆ ರೂಪಗಳಿ ಗಿರುವ ವಿಶೇಷಗಳನ್ನೂ ಭಗವಚ್ಛಾಸ್ತ್ರವೆನಿಸುವ ಲಕ್ಷ್ಮೀತಂತ್ರ ಸಾತ್ವತಾದಿಗಳಿಂದಲೂ, ಮತ್ತು ಸಂಪ್ರದಾಯಂ ಅಂದರೆ ಪೂರ್ವಾ ಚಾರ್ಯರಸೂಕ್ತಿಗಳಿಂದಲೂ ತಿಳಿದುಕೊಳ್ಳತಕ್ಕದ್ದು. (ಪರವ್ಯೂಹಾ ದಿ ಐದುವಿಧ ವಿಗ್ರಹಗಳ ವಿಶೇಷಗಳನ್ನು ಮುಂದಿನ ಅಧಿಕಾರವಾದ ತತ್ವತ್ರಯಾಧಿಕಾರದಲ್ಲಿ ಶ್ರೀಮದಾಚಾರ್ಯವರೇ ವಿಶದವಾಗಿ ತಿಳಿಸು ತ್ತಾರಾದುದರಿಂದ ಇಲ್ಲಿ ಅವುಗಳನ್ನು ವಿವರಿಸುವ ಅವಶ್ಯಕವಿಲ್ಲವು),

(ಸ್ವಾಮಿಗೆ ಎಲ್ಲವೂ ಭೋಗ್ಯವಾಗ ಬೇಕಾದರೆ, ಆತನಿಗೆ ಭೋಗಸ್ಥಾನಗಳೂ ಭೋಗೋಪಕರಣಗಳೂ ಎಲ್ಲವೂ ಬೇಕಾಗು ವದರಿಂದ, ಸ್ವಾಮಿಗೆ ಭೋಗ್ಯತಾತಿಶಯವು ವಿಭೂತಿಗಳಿಲ್ಲದೇ ಸಿದ್ಧಿ ಸದಾದುದರಿಂದ ಸ್ವಾಮಿಯನ್ನು ಅನುಸಂಧಾನ ಮಾಡುವಾಗ

ಉಭಯ ವಿಭೂತಿಯುಕ್ತನು

ಎಂದು ಅನುಸಂಧಾನ ಮಾಡಬೇಕೆಂದು ತಿಳಿಸುತ್ತಾರೆ.

1. **ಏತಾಃ** - ಅಲ್ಲಿ ಹೇಳಲ್ಪಟ್ಟಿರುವದೆಲ್ಲಾ, **ವಿಷ್ಣೋಃ** - ವಿಷ್ಣುವಿನ, **ವಿಭೂತಯಃ** - ವಿಭೂತಿಗಳು ಅಂದರೆ ನಿಯಮಿಸಲ್ಪ ಡುವ ವಸ್ತುಗಳು.

(1) ವಿ. ಪು. 1. 22. 32.

(2) "ಮಹಾವಿಭೂತಿ ಸಂಸ್ಥಾನ" (3) "ನಾಂತೋಽಸ್ತಿ ಮಮದಿವ್ಯಾನಾಂ ವಿಭೂತೀನಾಂ ಪರಂತಪ"

ಬ್ರಹ್ಮಾ ದಕ್ಷಾದಯಃ ಕಾಲ ಸ್ತಥೈವಾ ಖಿಲಜಂತವಃ ।
ವಿಭೂತಯೋ ಹರೇ ರೇತಾ ಜಗತಸ್ಸೃಷ್ಟಿಹೇತವಃ ॥31॥

ವಿಷ್ಣು ರ್ಮನ್ವಾದಯಃ ಕಾಲ ಸ್ಸರ್ವಭೂತಾನಿಚದ್ವಿಜ ।
ಸ್ಥಿತೇ ರ್ನಿಮಿತ್ತಭೂತಸ್ಯ ವಿಷ್ಣೋರೇತಾವಿಭೂತಯಃ ॥32॥
ರುದ್ರಃಕಾಲಾಂತಕಾ ದ್ಯಾಶ್ಚ ಸಮಸ್ತಾ ಶ್ಚೈವ ಜಂತವಃ ।
ಚತುರ್ಥಾ ಪ್ರಳಯಾಯೈತಾ ಜನಾರ್ದನ ವಿಭೂತಯಃ ॥33॥

ಹೀಗೆ ಸ್ವಾಮಿಯ ಲೀಲಾ ವಿಭೂತಿಯು ಸೃಷ್ಟಿಸ್ಥಿತಿಲಯಗಳಿಗೆ ಹೇತು ಭೂತವಾಗಿವೆ ಎಂದು ಹೇಳಲ್ಪಟ್ಟಿರುತ್ತದೆ.

2. **ಸಕಲಾವರಣಾತೀತ ನಿರಾಲಂಬನ ಭಾವನಾ ।**
ಮಹಾವಿಭೂತಿ ಸಂಸ್ಥಾನ ನಮಸ್ತೇ ಪುರುಷೋತ್ತಮ ॥

ಈ ಎರಡನೇ ಪ್ರಮಾಣದಿಂದ ನಿತ್ಯವಿಭೂತಿಯುಕ್ತನೆಂಬುವದನ್ನು ತಿಳಿಯಪಡಿಸುತ್ತಾರೆ. ಶ್ರುತಿಯಲ್ಲಿ ತ್ರಿಪಾದ್ವಿಭೂತಿಯೆಂದುಹೇಳಿಸಿಕೊಳ್ಳುವ "**ಮಹಾವಿಭೂತಿ**" - ನಿತ್ಯವಿಭೂತಿಯಲ್ಲಿ, **ಸಂಸ್ಥಾನ** - ವಾಸವಾಗಿರತಕ್ಕವನೇ ಎಂದು ಸಂಬೋಧನೆ, ಅಂಥಾ. **ತೇ** - ನಿನಗೆ, **ನಮಃ**- ನಮಸ್ಕಾರವು ಎಂದು ಉತ್ತರಾರ್ಧದಲ್ಲಿರುತ್ತದೆ. ಇದು ಚತುರ್ಮುಖಬ್ರಹ್ಮನ ಸ್ತುತಿಯು, ಓ ಪುರುಷೋತ್ತಮನೇ, **ಸಕಲಾವರಣಾತೀತ** - ಸಮಸ್ತ ಪ್ರಕೃತಿಯಿಂದುಂಟಾಗುವ ತಿರೋಧಾನವಿಲ್ಲದವನೇ **ನಿರಾಲಂಬನ ಭಾವನಾ** - ನಿರ್ಗತಿಯುಳ್ಳವವರನ್ನು ಭಾವಿಸುವವನೇ, ನಿನಗೆ ನಮಸ್ಕಾರವು.

3. "**ಏಷತೂದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ**" ಎಂಬುವದು ಉತ್ತರಾರ್ಧವು. **ಹೇ ಪರಂತಪ** - ಓ ಶತ್ರುಗಳನ್ನು ತಪಿಸುವಹಾಗೆ ಮಾಡುವ ಅರ್ಜುನನೇ, **ದಿವ್ಯಾನಾಂ** -

---

(2) ವಿ. ಪು. 5, 6, 50. (3) ಗೀತಾ, 10. 40.

ಇತ್ಯಾದಿಗಳುದ್ದೈಯು ಸಂಗ್ರಹವೂನ (5) "ಯದಣ್ಡಮಣ್ಡಾಂತರ ಗೋಚರಂಯತ್"

ಮಂಗಳಕರವಾದ, (4) **ವಿಭೂತೀನಾಂ** - ವಿಭೂತಿಗಳಿಗೆ, **ಅಂತಃ** - ಕೊನೆಯು, **ನಾಸ್ತಿ**- ಇಲ್ಲವು, **ಏಷಃ** - ಈ, **ವಿಭೂತೇಃ** - ವಿಭೂತಿಯ **ವಿಸ್ತರಸ್ತು** - ವಿಸ್ತಾರವಾದರೋ, **ಮಯಾ** - ನನ್ನಿಂದ, **ಉದ್ದೇಶತಃ** - ಎಲ್ಲವನ್ನೂ ಹೇಳುವದು ಸಾಧ್ಯವಲ್ಲವಾದುದರಿಂದ ಕೆಲವನ್ನು ಮಾತ್ರ ಸಂಗ್ರಹವಾಗಿ, **ಪ್ರೋಕ್ತಃ** - ಹೇಳಲ್ಪಟ್ಟಿತು.

ಈ ಮೇಲಿನ ಪ್ರಮಾಣಗಳನ್ನೇ ಸಂಗ್ರಹಿಸಿ ಶ್ರೀಯಾಮುನಾಚಾರ್ಯರವರು "**ಯದಣ್ಡಮಣ್ಡಾಂತರ**" ವೆಂಬ ಶ್ಲೋಕವನ್ನು ಅನುಗ್ರಹಿಸಿರುತ್ತಾರೆ.

5. **ಯದಣ್ಡ ಮಣ್ಡಾಂತರ ಗೋಚರಂಚ ಯದ್ದಶೋತ್ತರಾ**
ಣ್ಯಾವರಣಾನಿ ಯಾನಿಚ ।
ಗುಣಾಃಪ್ರಧಾನಂ ಪುರುಷಃ ಪರಂಪದಂ ಪರಾತ್ಪರಂ
ಬ್ರಹ್ಮಚತೇ ವಿಭೂತಯಃ ॥

ಯತ್- ಯಾವ, **ಅಣ್ಡಾಂತರಗೋಚರಂಚ** - ಆ ಅಂಡದಲ್ಲಿತೋರುವ ಸಮಸ್ತವೂ ಕೂಡ, **ಯಾನಿ** - ಯಾವ, **ದಶೋತ್ತರಾಣಿ** - ಒಂದಕ್ಕಿಂತ ಒಂದು ಹತ್ತರಷ್ಟು ಹೆಚ್ಚಾದ (1) **ಆವರಣಾನಿ** - ಆವರಣಗಳಾದ ಪೃಥಿವ್ಯಪ್ತೇಜಸ್ಸೇ ಮೊದಲಾದವುಗಳೇನು, **ಗುಣಾಃ** - ಸತ್ವರಜಸ್ತಮೋಗುಣಗಳೂ, **ಪ್ರಧಾನಂ** - ಪ್ರಕೃತಿಯೂ, **ಪುರುಷಃ**- ಜೀವವರ್ಗವೂ, ಹೀಗೆ ಲೀಲಾವಿಭೂತಿಯಾದ ಎಲ್ಲವೂ, **ಪರಂಪದಂ** - ದಿವ್ಯ ವೈಕುಂಠವೂ, **ಪರಾತ್ಪರಂ** - ಶ್ರೇಷ್ಠರಾದ ಜೀವಾತ್ಮರುಗಳಿಂದಲೂ ಶ್ರೇಷ್ಠರಾಗ ನಿತ್ಯಮುಕ್ತವರ್ಗವೂ, **ಬ್ರಹ್ಮಚ** - ದಿವ್ಯಮಂಗಳ ವಿಗ್ರಹವೂ, ಇವೆಲ್ಲವೂ, **ತೇ** - ನಿನ್ನ, **ವಿಭೂತಯಃ** - ನಿಯಾಮ್ಯವರ್ಗಗಳಾಗಿವೆ.

(4) ವಿಭೂತಿ ಎಂದರೆ ನಿಯಾಮ್ಯವರ್ಗವು, ಸ್ವಾಮಿಯಿಂದ ನಿಯಮಿಸಲ್ಪಡುವ ಸಮಸ್ತಕ್ಕೂ ವಿಭೂತಿ ಎಂದು ಹೆಸರು. (5) ಆಳ. ಸ್ತೋತ್ರ. 17.

(1) ಈ ಆವರಣಗಳು ಸಪ್ತಾವರಣಗಳೆಂದು ಹೇಳುತ್ತಾರೆ. ಇವು ಯಾವುವು ಎಂದರೆ ಪೃಥಿವಿ, ಅಪ್ಪು, ತೇಜಸ್ಸು, ಆಕಾಶ, ಅಹಂಕಾರ, ಮಹತ್ತತ್ವಗಳು.

ಎಙ್ಗರ ಶ್ಲೋಕತ್ತಿನ್ ಪಡಿಯೇ ಅನನ್ತ ವಿಭೂತಿ ವಿಶಿಷ್ಟ ನಾಕ ವನುಸನ್ಧೇಯಂ.

“ ವಿಭೂತಿದ್ವಯಂ ”

ಇವ್ವಿಭೂತಿಗಳಿಲ್ ಚೇತನಙ್ಗಳಾಯುವ್ ಅಚೇತನಙ್ಗಳಾಯುವ್,

ಈ ಮೇಲೆ ಹೇಳಿದ ಶ್ಲೋಕಾಭಿಪ್ರಾಯ ಪ್ರಕಾರ ಅಪಾರವಾದ ವಿಭೂತಿಗಳಿಂದ ಯುಕ್ತನಾಗಿರುವ ಹಾಗೆ ಪರಬ್ರಹ್ಮವನ್ನು ಅನುಸಂಧಾನ ಮಾಡತಕ್ಕದ್ದು.

(ಮುಂದೆ ವಿಭೂತಿಯು (೧) ಲೀಲಾ ವಿಭೂತಿಯೆಂದೂ (೨) ಭೋಗ ವಿಭೂತಿ ಅಥವಾ ನಿತ್ಯವಿಭೂತಿ ಎಂದೂ ಎರಡು ವಿಧವೆಂದು ತಿಳಿಸುತ್ತಾರೆ.)

ಈ ಎಲ್ಲಾ ನಿರೂಪಿಸಲ್ಪಟ್ಟ ವಿಭೂತಿಗಳಲ್ಲಿ ಚೇತನಂಗಳೆಂದೂ ಅಚೇತನಂಗಳೆಂದೂ ಇರುವ ಎರಡು ತತ್ವಗಳೂ (೧) ಸ್ವಾಮಿಗೆ ಲೀಲೆಗೋಸ್ಕರವಾಗಿಯೂ (೨) ಭೋಗಕ್ಕೋಸ್ಕರವಾಗಿಯೂ ಎರಡು ವಿಧವಾಗಿ ವಿಭಾಗಿಸಲ್ಪಟ್ಟಿವೆ. (ಲೀಲೆಗೋಸ್ಕರವಾದ ವಿಭೂತಿಯೇ ಈ ಜಗತ್ತೇ ಮೊದಲಾದ ಸೃಷ್ಟಿ ಸ್ಥಿತಿಲಯರೂಪ ಪರಿಣಾಮಕ್ಕೆ ವಶಪಟ್ಟ ಲೀಲಾವಿಭೂತಿಯು. ಭೋಗಕ್ಕೋಸ್ಕರ ಏರ್ಪಟ್ಟ ವಿಭೂತಿಯು ಸೃಷ್ಟಿ ಮೊದಲಾದ ಪರಿಣಾಮಕ್ಕೆ ಬಳಪಡದಿರುವ ನಿತ್ಯವಿಭೂತಿಯು. ಈ ಲೀಲಾವಿಭೂತಿ ನಿತ್ಯವಿಭೂತಿಗಳೆರಡರಲ್ಲೂ ಚೇತನ ಅಚೇತನಗಳೆಂಬ ಎರಡು ವಿಧ ತತ್ವಗಳುಂಟು. **“ ಹೇಲಾಯಾ ಮಖಿಲಂ ಚರಾಚರಮಿದಂ ಭೋಗೇ ವಿಭೂತಿಃ ಪರಾ”** ಎಂದು ಶ್ರೀ ಪರಾಶರ ಭಟ್ಟರವರು ಹೇಳಿರುತ್ತಾರೆ. “ಈ ಲೋಕಗಳ ಸಮಸ್ತ ಸ್ಥಾವರ ಜಂಗಮಗಳೆಲ್ಲಾ ಲೀಲೆಗಾಗಿಯೂ, ಇನ್ನೊಂದಾದ ಶ್ರೇಷ್ಠವಾದ ನಿತ್ಯವಿಭೂತಿಯೂ ಹಾಗೆಯೇ ಚರಾಚರಯುಕ್ತವಾದುದಾಗಿ ಭೋಗಕ್ಕಾಗಿಯೂ ಏರ್ಪಟ್ಟಿವೆ ಎಂದು ಹೇಳಲ್ಪಟ್ಟಿರುತ್ತದೆ.)

ಉಳ್ಳ ವಿರಣ್ಡು ವಗೈಯುಮ್ ಲೀಲಾರ್ಥಙ್ಗಳಾಯುಮ್. ಭೋಗಾರ್ಥಂಗಳಾಯುಮ್ ವಿಭಕ್ತಙ್ಗಳಾಯಿರುಕ್ಕುಮ್, ಆನುಕೂಲ್ಯ ಮಾತ್ರಂಪೊದುವಾಯಿರುಕ್ಕ ರಸವೈಷಮ್ಯತ್ತಾಲೇ ಲೀಲಾಭೋಗ ವಿಭಾಗಂ ಯಥಾಲೋಕಙ್ಕಣ್ಡು ಕೊಳ್ವದು.

(ಈ ಎರಡು ವಿಭೂತಿಗಳೂ ಸ್ವಾಮಿಗೆ ಸಂಬಂಧಪಟ್ಟವುಗಳಾಗಿ ಆತನಿಗೆ ಅನುಕೂಲವಾದುವುಗಳಾದರೆ ಬಂದಕ್ಕೆ ಲೀಲಾವಿಭೂತಿಯೆಂದೂ, ಇನ್ನೊಂದು ಭೋಗ ವಿಭೂತಿಯೆಂದೂ, ವಿಭಾಗ ಹೇಗೆ ಎಂದರೆ ಲೋಕ ದೃಷ್ಟಾಂತದಿಂದ ವ್ಯಕ್ತ ಪಡುತ್ತದೆಂದು ಮುಂದಕ್ಕೆ ಹೇಳುತ್ತಾರೆ.) **"ಆನುಕೂಲ್ಯಮಾತ್ರಂ ಪೊದುವಾಯಿರಕ್ಕ"** - ಈ ಲೀಲಾವಿಭೂತಿ ಭೋಗವಿಭೂತಿ ಎರಡಕ್ಕೂ ಸ್ವಾಮಿಗೆ ಆನುಕೂಲ್ಯವಾಗಿರುವ ಭಾವವು ಸಾಧಾರಣವಾಗಿರುವಲ್ಲಿ, ಈ ವಿಭಾಗ ಹೇಗೆಂದರೆ, **"ರಸವೈಷಮ್ಯತ್ತಾಲೆ"** - ರಸದ ವೈಲಕ್ಷಣ್ಯದಿಂದ, ಅಂಥಹ ವಿಭಾಗವನ್ನು, **"ಯಥಾಲೋಕಂ ಕಣ್ಡುಕೊಳ್ವದು"** - ಲೋಕದಲ್ಲಿ ನೀವು ಕಾಣುವ ಹಾಗೆ ಇಲ್ಲಿಯೂ ಕಾಣಬಹುದು. (ಹೇಗೆಂದರೆ, ಲೋಕದಲ್ಲಿ ರಾಜನಿಗೆ ಉದ್ಯಾನವನ ಚಂಡಾಟ ಮೊದಲಾದವು ಲೀಲೆಗಾಗಿ ಏರ್ಪಟ್ಟವು; ಹಾಲು, ಕಿತ್ತಲೇಹಣ್ಣು, ಪಟ್ಟಮಹಿಷಿ ಮೊದಲಾದವು ಭೋಗಾರ್ಥವಾಗಿ ಏರ್ಪಟ್ಟವು. ಎರಡು ವಿಧವಾದ ವಿಭೂತಿಯಿಂದಲೂ ಸ್ವಾಮಿಗೆ ಆನಂದ ಉಂಟು. ಈ ಆನಂದವು ಬಂದು ಸಂದರ್ಭದಲ್ಲಿ ಲೀಲೆಯಿಂದಲೂ ಇನ್ನೊಂದು ಸಂದರ್ಭದಲ್ಲಿ ಭೋಗದಿಂದಲೂ ಉಂಟಾಗುವದರಿಂದ **"ಆನುಕೂಲ್ಯ ಪೊದುವಾಯಿರಕ್ಕ"** ಎಂದು ಹೇಳಿರುತ್ತಾರೆ. ಲೀಲಾವಿಭೂತಿಯಲ್ಲಿ ಚೇತನನು ಕರ್ಮವಶ್ಯನಾಗಿ ದೇವತಿರ್ಯಙ್ಮನುಷ್ಯಾದಿ ದೇಹಗಳನ್ನು ಆರೋಪಿಸಿಕೊಂಡು ಭ್ರಮಿಸುವದನ್ನು ನೋಡಿ ಅಲಾಬಿ ಹಬ್ಬದ ಹುಲಿ ಕರಡಿ ವೇಷಗಳನ್ನು ನೋಡಿ ಇತರರು ಆನಂದಿಸುವ ತೆರದಿ ಸ್ವಾಮಿಯು ಆನಂದಪಡುವನು; ಆದುದರಿಂದ ಇದು ಲೀಲಾವಿಭೂತಿ ಎನಿಸುವದು; ನಿತ್ಯವಿಭೂತಿಯಲ್ಲಿ ಇತರರು ಮಾಡುವ ಕೈಂಕರ್ಯದಿಂದ ತೃಪ್ತಿಯನ್ನು ಹೊಂದಿ ಆನಂದಿಸುವದರಿಂದ ಭೋಗ ವಿಭೂತಿ ಎನಿಸುವದು ಎಂಬ ತಾತ್ಪರ್ಯವು.)

ಅಪ್ಪಡಿಯೇ (1) "ಜನ್ಮಾದ್ಯಸ್ಯಯತಃ (2) "ಕ್ರೀಡಾಹರೇರಿದಂಸರ್ವಂ" (3) "ಕ್ರೀಡತೋಬಾಲಕಸ್ಯೇವ" (4) "ಬಾಲಃಕ್ರೀಡನಕೈರಿವ"

ಇನ್ನು ಮುಂದೆ ಈ ಜಗತ್ತು ಮುಂತಾದ್ದೆಲ್ಲಾ ಲೀಲಾವಿಭೂತಿ ಎಂದು ಹೇಳಲು ಪ್ರಮಾಣಗಳನ್ನು ಉದಾಹರಿಸುತ್ತಾರೆ.

1. **"ಜನ್ಮಾದ್ಯಸ್ಯಯತಃ" ಅಸ್ಯ** - ವಿವಿಧವಿಚಿತ್ರ, ಭೋಕ್ತೃ ಭೋಗ್ಯ ವರ್ಗಗಳಿಂದ ಕೂಡಿದ ಜಗತ್ತಿಗೆ, **ಯತಃ** - ಯಾವನಿಂದ, **ಜನ್ಮಾದಿ** - ಸೃಷ್ಟಿ ಮೊದಲಾದವುಗಳು ಅಂದರೆ ಸೃಷ್ಟಿಸ್ಥಿತಿ ಲಯಗಳು, ಉಂಟಾದವೋ, ಆತನೇ ಪರಬ್ರಹ್ಮನು.

2. **"ಕ್ರೀಡಾ ಹರೇರಿದಂ ಸರ್ವಂ."** "ಇದಂ ಸರ್ವಂ" - ಈ ಪರಿದೃಶ್ಯವಾದ ಜಗತ್ತು ಮೊದಲಾದವೆಲ್ಲಾ, ಹರೇಃ ಕ್ರೀಡಾ - ಶ್ರೀಹರಿಯ ಲೀಲೆಯು.

"ಅವ್ಯಕ್ತಾದಿ ವಿಶೇಷಾನ್ತಂ ಪರಿಣಾಮಾರ್ಥಸಂಯುತಂ"
ಕ್ರೀಡಾ ಹರೇರಿದಂ ಸರ್ವಂ ಕ್ಷರ ಮಿತ್ಯವ ಧಾರ್ಯತಾಂ ।
ಅಕ್ಷರಂ ತತ್ಪರಂ ನಿತ್ಯಂ ವೈರೂಪ್ಯಂ ಜಗತೋ ಹರೇಃ"

ಎಂಬದಾಗಿ ಶಾಂತಿ ಪರ್ವದಲ್ಲಿರುತ್ತೆ. ಉಭಯ ವಿಭೂತಿಯನ್ನು ಕ್ಷರ ಅಕ್ಷರವೆಂದು ಹೇಳಿರುತ್ತದೆ.

3. **"ಕ್ರೀಡತೋ ಬಾಲಕಸ್ಯೇವ ಚೇಷ್ಟಾಂ ತಸ್ಯ ನಿಶಾಮಯ"** ಎಂದೂ ಪೂರಾ ವಾಕ್ಯವು. **"ಕ್ರೀಡತಃ"** ಆಡುತ್ತಿರುವ, **ಬಾಲಕಸ್ಯ** - ಬಾಲಕನ, **ಚೇಷ್ಟಾಮಿವ** - ಚೇಷ್ಟೆಯೋಪಾದಿಯಲ್ಲಿ, **ತಸ್ಯ**-ಆ ವಿಷ್ಣುವಿನ, **ಚೇಷ್ಟಾಂ**- ಚೇಷ್ಟೆಯನ್ನಾಗಿ, **ನಿಶಾಯಮ**-ತಿಳಿ.

(4) **"ಮೋದತೇ ಭಗವಾನ್ ಭೂತೈಃ ಬಾಲಃ ಕ್ರೀಡನಕೈರಿವ"** ಎಂಬುವದು ಪೂರಾ ವಾಕ್ಯವು. **ಭಗವಾನ್**- ಹೇಯ ಪ್ರತ್ಯನೀಕನಾಗಿಯೂ ಷಾಡ್ಗುಣ್ಯ ಪರಿಪೂರ್ಣನೂ ಆದ ಸರ್ವೇಶ್ವರನು,

---

(1) ಬ್ರಹ್ಮಸೂತ್ರ 1. 1. 2. (2) ಭಾರ. ಶಾಂತಿ. 206. 58. (3) ವಿ. ಪು. 1.2.18. (4) ಭಾರ. ಸಭಾ. 12. 57.

(5) "ಹರೇ ವಿಹರಸಿ ಕ್ರೀಡಾಕನ್ದುಕೈರಿವ ಜನ್ತುಭಿಃ"
(6) "ಲೋಕವತ್ತು ಲೀಲಾ ಕೈವಲ್ಯಂ, ಎನ್ಗಿರಪಡಿಯೇ ಲೀಲಾ ರೂಪ ಜಗದ್ವ್ಯಾಪಾರ ಲಕ್ಷಣಮಾಕವನು ಸನ್ಧೇಯಂ.

ಪ್ರಾಪ್ತೃ ಸ್ವರೂಪಂ

ಇಪ್ಪಡಿ ಲಕ್ಷ್ಮೀ ಸಹಾಯ ಮಾಯ್, ಅಪರಿಮಿತ

ಭೂತೈಃ - ಸರ್ವಚೇತನ ವರ್ಗಗಳಿಂದ, **ಮೋದತೇ** - ಸಂತೋಷ ಪಡುತ್ತಾನೆ, ಹೇಗೆಂದರೆ **ಬಾಲಃ** - ಬಾಲನು **ಕ್ರೀಡನ ಕೈರಿವ** - ಆಟದ ಸಾಮಾನುಗಳಿಂದ ಹೇಗೆ ಆಡುತ್ತಾ ಸಂತೋಷಿಸುವನೋ, ಹಾಗೆ ಎಂಬ ಭಾವವು.

(5) **ಹರೇ** - ಓ ಪಾಪ ಹರನೇ, **ಕ್ರೀಡಾಕನ್ದುಕೈರಿವ** - ಆಟದ ಚಂಡುಗಳಿಂದ ಲೋಪಾದಿಯಲ್ಲಿ, **ಜನ್ತುಭಿಃ** - ಜನ್ತುಗಳಿಂದ, **ವಿಹರಸಿ** - ವಿಹರಿಸುತ್ತೀಯೆ.

(6) **ಲೋಕವತ್ತು** - ಪರಿಪೂರ್ಣ ಕಾಮನಾದ ರಾಜನಿಗೆ ಲೋಕದಲ್ಲಿ ಹೇಗೋ ಹಾಗೆ, **ಲೀಲಾ ಕೈವಲ್ಯಂ** - ಪರಿಪೂರ್ಣ ಕಾಮನಾದ ಪರಬ್ರಹ್ಮನಿಗೆ ಕೇವಲ ಲೀಲೆಯೇ ಪ್ರಯೋಜನವು.

ಹೀಗೆ ಈ ಮೇಲಿನ ಪ್ರಮಾಣಗಳಿಗನುಸಾರವಾಗಿ ಲೀಲಾ ರೂಪ ವಾದ ಜಗತ್ತಿನ ಸೃಷ್ಟಿ ಸ್ಥಿತಿಲಯ ಮೊದಲಾದ ಸಕಲ ವ್ಯಾಪಾರ ಲಕ್ಷಣಗಳುಳ್ಳವನಾಗಿ ಪರಬ್ರಹ್ಮನನ್ನು ನಾವು ಅನು ಸಂಧಾನ ಮಾಡ ತಕ್ಕದ್ದು.

ಪ್ರಾಪ್ತಾವಾದ ಜೀವಾತ್ಮ ಸ್ವರೂಪವು.

(ಹಿಂದೆ ಹೇಳಿದ ಪರಬ್ರಹ್ಮ ಸ್ವರೂಪ ರೂಪ ಗುಣ ವಿಭವೈ ಶ್ವರ್ಯಾದಿಗಳನ್ನು ಪುನಃ ಸಂಗ್ರಹಿಸಿ ಹೇಳಿ ಪ್ರತ್ಯಗಾತ್ಮ ಸ್ವರೂಪಾದಿ ಗಳನ್ನು ಹೇಳಲುಪಕ್ರಮಿಸುತ್ತಾರೆ.)

ಇಪ್ಪಡಿ - ಹೀಗೆ, **ಲಕ್ಷ್ಮೀಸಹಾಯಮಾಯ್** - ಲಕ್ಷ್ಮೀ ಸಹಾಯನಾಗಿ, **ಅಪರಿಮಿತ ಜ್ಞಾನಾನನ್ದಮಾಯ್** - ನಿರತಿಶಯ

---

(5) ವಿಷ್ಣು ತತ್ವಂ. (6) ಬ್ರಹ್ಮ. ಸೂತ್ರ. 2. 1. 33.

ಜ್ಞಾನಾನನ್ದಮಾಯ್, ಹೇಯ ಪ್ರತ್ಯನೀಕ ಮಾಯ್, ಜ್ಞಾನ ಶಕ್ತ್ಯಾದ್ಯನನ್ತ ಮಙ್ಗಳಗುಣ ವಿಶಿಷ್ಟಮಾಯ್, ದಿವ್ಯ ಮಙ್ಗಳ ವಿಗ್ರಹೋ ಪೇತಮಾಯ್, ಶರೀರ ಭೂತ ವಿಭೂತಿದ್ವಯ ಯುಕ್ತಮಾಯ್, ಜಗತ್ಸೃಷ್ಟ್ಯಾದಿ ವ್ಯಾಪಾರ ಲೀಲಮಾಯ್ಕ್ಕೊಂಡು ಪ್ರಾಪ್ಯಮಾನ ಬ್ರಹ್ಮತ್ತೈ ಪ್ರಾಪಿಕ್ಕುಂ ಪ್ರತ್ಯಗಾತ್ಮಾವಿನುಡೈಯ ಬದ್ಧಮುಕ್ತ ನಿತ್ಯಸಾಧಾರಣ ರೂಪಮುಮ್, ಉಪಾಯಾಧಿಕಾರಿಯಾನ ತನಕಿಪ್ಪೋದು ಅಸಾಧಾರಣಮಾನ ರೂಪಮು ಮರಿಯುವೇಣುಂ.

ಜ್ಞಾನಾನನ್ದ ಸ್ವರೂಪನಾಗಿ, **ಜ್ಞಾನಶಕ್ತ್ಯಾದ್ಯನನ್ತ ಮಙ್ಗಳಗುಣ ವಿಶಿಷ್ಟಮಾಯ್** - ಜ್ಞಾನ ಶಕ್ತ್ಯಾದಿ ಷಡ್ಗುಣಗಳೇ ಮೊದಲಾಗಿ ಹೇಯಗುಣ ಗನ್ಧವೇ ಇಲ್ಲದ ಕಲ್ಯಾಣಗಳಾದ ಅನನ್ತಗುಣಗಳಿಂದ ಯುಕ್ತವಾಗಿ, **ದಿವ್ಯಮಙ್ಗಳ ವಿಗ್ರಹೋ ಪೇತಮಾಯ್** - ಅಪ್ರಾಕೃತವಾದ ನಿತ್ಯವಾದ ದಿವ್ಯಮಙ್ಗಳ ಶರೀರದಿಂದ ಯುಕ್ತವಾದುದಾಗಿ, **ಜಗತ್ಸೃಷ್ಟ್ಯಾದಿ ವ್ಯಾಪಾರ ಲೀಲಮಾಯ್ಕೊಂಡು** - ಜಗತ್ತಿನ ಸೃಷ್ಟಿ ಸ್ಥಿತಿಲಯ ನಿಯಮನವೇ ಮೊದಲಾದ ವ್ಯಾಪಾರಗಳೆಲ್ಲಾ ಲೀಲೆಯಾಗಿರುವ, **ಪ್ರಾಪ್ಯಮಾನ ಬ್ರಹ್ಮತ್ತೈ** ಪ್ರಾಪ್ಯವೆಂದು ಹಿಂದೆ ಹೇಳಿದ ಪರಬ್ರಹ್ಮವನ್ನು, **ಪ್ರಾಪಿಕ್ಕುಂ** - ಹೋಗಿ ಸೇರುವ, **ಪ್ರತ್ಯಗಾತ್ಮಾವಿನುಡೈಯ** - ಜೀವಾತ್ಮನ, **ಬದ್ಧಮುಕ್ತ ನಿತ್ಯಸಾಧಾರಣ ರೂಪಮುಂ** - ಬದ್ಧ, ಮುಕ್ತ, ನಿತ್ಯರು ಈ ಮೂರು ವಿಧ ಜೀವಾತ್ಮರಿಗೂ ನಿತ್ಯವಾದ ಸಾಧಾರಣವಾದ ಸ್ವರೂಪವನ್ನೂ, **ಉಪಾಯಾಧಿಕಾರಿಯಾನ** - ಮೋಕ್ಷಕ್ಕಾಗಿ ಉಪಾಯಾನುಷ್ಠಾನಕ್ಕೆ ಅಧಿಕಾರಿಯಾಗಿರುವ, **ತನಕಿಪ್ಪೋದು** - ತನಗೆ ಈಗ, **ಅಸಾಧಾರಣ ಮಾನ ರೂಪಮುಂ** - ಪ್ರಕೃತಿ ಸಂಬನ್ಧದಿಂದ ಪ್ರಾಪ್ತವಾಗಿರುವ, ಯಾವಾಗಲೂ ಸಹಜವಾಗಿ, ನಿತ್ಯಮುಕ್ತರುಗಳಿಗೆ ಇರುವ ಹಾಗೆ, ಇಲ್ಲದೇ ಇರುವ ಸ್ವರೂಪವನ್ನೂ, **ಅರಿಯುವೇಣುಮ್** - ತಿಳಿದು ಕೊಳ್ಳತಕ್ಕದ್ದು.

ಹಿಂದೆ ಪ್ರಾಪ್ಯವನ್ನು ಅನುಸನ್ಧಾನ ಮಾಡುವ ಕ್ರಮವು ತಿಳಿಸ ಲ್ಪಟ್ಟಿತು. ಹೇಗೆಂದರೆ:—ಸರ್ವೇಶ್ವರನು (1) ಶ್ರಿಯಃ ಪತಿ ಎಂದೂ, (2) ಸತ್ಯಜ್ಞಾನನನ್ತಾ ನನ್ದ ಸ್ವರೂಪನೆಂದೂ, (3) ಹೇಯ ಪ್ರತ್ಯ ನೀಕ ಕಲ್ಯಾಣ ಗುಣಾಕರನೆಂದೂ (4) ನಿತ್ಯವಾದ ಅಪ್ರಾಕೃತವಾದ, ತತ್ವಗಳನ್ನೇ ಅಸ್ತ್ರ ಭೂಷಣಾದಿ ರೂಪದಲ್ಲಿ ಉಳ್ಳ ದಿವ್ಯ ಮಙ್ಗಳ ವಿಗ್ರಹ ಯುಕ್ತನೆಂದೂ, ದಿವ್ಯ ವೈಕುಂಠವಾದ ಭೋಗ ವಿಭೂತಿ ಯೇನು, ನಮ್ಮ ಜಗತ್ತೇ ಮೊದಲಾದ ಲೀಲಾ ವಿಭೂತಿಯೇನು, ಹೀಗೆ ತನಗೆ ಶರೀರ ಭೂತವಾದ ಎರಡು ವಿಭೂತಿಗಳುಳ್ಳವನೆಂದೂ ಅನುಸನ್ಧಾನ ಮಾಡತಕ್ಕದ್ದು.

ಇಂತಹ ಪ್ರಾಪ್ಯನಾದ ಭಗವಂತನನ್ನು ಹೊಂದಿರುವ, ಮತ್ತು ಮುಂದೆ ಸೇರುವ ಜೀವಾತ್ಮರುಗಳಾದ ನಿತ್ಯಮುಕ್ತ ಬದ್ಧರುಗಳ ಸಾಧಾರಣವಾದ ಶುದ್ಧವಾದ ಸ್ವರೂಪವನ್ನೂ, ಮತ್ತು ದೈನ್ಯ ಭಾವ ವನ್ನು ಹೊಂದಿ ಮೋಕ್ಷಾರ್ಥಿಯಾಗಿ ಪ್ರಪತ್ತಿಯನ್ನನುಷ್ಠಿಸಲು ಅಧಿ ಕಾರಿಯಾದ ತನಗೆ ಈಗ ಪ್ರಾಪ್ತವಾಗಿರುವ ಅಸಾಧಾರಣ ಸ್ವರೂಪ ವನ್ನೂ, ತಿಳಿದುಕೊಳ್ಳುವದು ಆವಶ್ಯಕವು, ಜೀವಾತ್ಮನ ಯಥಾವತ್ತಾದ ಸ್ವರೂಪವೇನು? ನಿತ್ಯ ಮುಕ್ತರು ಹೇಗೆ ಇರುತ್ತಾರೆ? ತನಗೂ ಅವರಿಗೂ ಇರುವ ವ್ಯತ್ಯಾಸವೇನು? ಅಂತಹ ಸ್ವರೂಪವು ಈಗ ಈ ಬದ್ಧ ದೆಶೆಯಲ್ಲಿ ಹೇಗೆ ತಿರೋಹಿತವಾಗಿ ಎಂತಹ ದುರ್ದೆಸೆಯು ಪ್ರಾಪ್ತವಾಗಿರುತ್ತದೆ? ಎಂಬೀ ವಿಷಯಗಳು ಮುಖ್ಯವಾಗಿ ಜ್ಞಾತ ವ್ಯಾಂಶಗಳೆಂಬುವದು ಮುಖ್ಯಾಭಿಪ್ರಾಯವು. ಹೀಗೆ ತನಗೂ ನಿತ್ಯ ಮುಕ್ತರಿಗೂ ಸ್ವರೂಪದಲ್ಲಿರುವ ವ್ಯತ್ಯಾಸವು ತಿಳಿದರೆ, ಆಗ ಅಂತಹ ದುಸ್ಥಿತಿಯನ್ನು ಕಳೆದು ಕೊಳ್ಳಲು ಏನು ಮಾಡಬೇಕೆಂಬುವದನ್ನು ತಿಳಿದುಕೊಂಡು, ಆ ರೀತಿಯಲ್ಲಿ ಪ್ರವರ್ತಿಸಲು ಸಹಕಾರಿಯಾಗುತ್ತ ದೆಂಬ ಭಾವವು.

ಬದ್ಧಮುಕ್ತ ನಿತ್ಯಾನಾಂ ಲಕ್ಷಣಂ

(1) ಇವರ್ಗಳಿಲ್ ಬದ್ಧರಾವರ್? ಅನಾದಿಕರ್ಮ ಪ್ರವಾಹ ತ್ತಾಲೇಯನು ವೃತ್ತ ಸಂಸಾರರಾಯ್ ಬ್ರಹ್ಮಾದಿಸ್ತಂಬ ಪರ್ಯನ್ತ ವಿಭಾಗ ಬಾಗಿಗಳಾನಕ್ಷೇತ್ರಜ್ಞರ್.

ತ್ರಿವಿಧ ಚೇತನರ ಲಕ್ಷಣಗಳು.

(1) **ಇವರ್ಗಳಿಲ್** - ಈ ಮೂರು ವಿಧ ಚೇತನರಲ್ಲಿ, **ಬದ್ಧರಾವಾರ್** - ಬದ್ಧರೆಂದರೆ ಯಾರು? ಅನಾದಿಕರ್ಮ ಪ್ರವಾಹದಿಂದ, **ಅನುವೃತ್ತಸಂಸಾರರಾಯ್** - ಅನುಸರಿಸಿ ಬಂದ ಸಂಸಾರವನ್ನು ಹೊಂದಿದವರಾಗಿ, **ಬ್ರಹ್ಮಾದಿಸ್ತಂಬಪರ್ಯನ್ತ ವಿಭಾಗ ಬಾಗಿಗಳಾನ** - ಚತುರ್ಮುಖ ಬ್ರಹ್ಮನ ಮೊದಲುಗೊಂಡು ಇರುವೆ ಅಥವಾ ಕೀಟದವರಿವಿಗೂ ವಿಭಾಗಗಳನ್ನು ಹೊಂದಿದ, **ಕ್ಷೇತ್ರಜ್ಞರ್** - ದೇಹವನ್ನು ಹೊಂದಿದವರು. **ಅನುವೃತ್ತ ಸಂಸಾರಿಯೂಾಯ್** ಎಂದು ಹೇಳಿರುವವರಿಂದ ಸೃಷ್ಟಿಮೊದಲು ಇದುವರಿವಿಗೂ ಅನೇಕಜನ್ಮಸಂತತಿಯನ್ನು ಎತ್ತುತ್ತಿರುವವರು ಎಂಬ ಭಾವವು. ಬ್ರಹ್ಮಾದಿಸ್ತಂಬ ಪರ್ಯನ್ತನೆಂದು ಹೇಳಿರುವದರಿಂದ ಬ್ರಹ್ಮರುದ್ರೇಂದ್ರಾದಿಗಳಾದ ದೇವರೂ, ಮನುಷ್ಯರೂ, ತಿರ್ಯಕ್ಕುಗಳೂ, ಸ್ಥಾವರಗಳೂ ಸಹ ಹೇಳಲ್ಪಟ್ಟರು. **ಕ್ಷೇತ್ರವೆಂದರೆ,**

(1) **"ಇದಂಶರೀರಂ ಕಾನ್ತೇಯ ಕ್ಷೇತ್ರಮಿತ್ಯಭಿಧೀಯತೇ"** ಎಂದು ಹೇಳಿರುವ ಪ್ರಕಾರ ಶರೀರವು ಸ್ಥೂಲವಾಗಿ ತೋರುವದು. ಬೇರೆ ಶರೀರಿಯಾಗಿರುವ ಆತ್ಮನಾದವನು ಬೇರೆ ಎಂದು,

"ಏತದ್ಯೋವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ" ಎಂಬ ಗೀತಾವಾಕ್ಯಪ್ರಕಾರ, ಯಾವನು ತಿಳಿಯುವನೋ, ಆತನು ಕ್ಷೇತ್ರಜ್ಞನೆನಿಸುವನು. ಆದುದರಿಂದ ಕ್ಷೇತ್ರಜ್ಞನೆಂದರೆ ಜೀವಾತ್ಮ.

---

(1) ಗೀತೆ. 13. 1.

(೨) ಮುಕ್ತರಾವಾರ್? ಶಾಸ್ತ್ರಚೋದಿತಙ್ಗಳಾನ ಉಪಾಯ ವಿಶೇಷಙ್ಗಳಾಲುಣ್ಡಾನ ಭಗವತ್ಪ್ರಸಾದತ್ತಾಲೇ ಅತ್ಯನ್ತ ನಿವೃತ್ತ ಸಂಸಾರರಾಯ್ ಸಙ್ಕೋಚರಹಿತ ಭಗವದನು ಭವತ್ತಾಲೇ ನಿರತಿಶಯಾನಂದರಾಯಿರುಕ್ಕು ಮವರ್‌ಗಳ್.

---

(2) **ಮುಕ್ತರಾವರ್?**- ಮುಕ್ತರುಯಾರೆಂದರೆ:—**ಶಾಸ್ತ್ರಚೋದಿತಙ್ಗಳಾನ** - ಶಾಸ್ತ್ರಗಳಿಂದ ಪರಿಶೋಧಿಸಲ್ಪಟ್ಟ, ಎಂದರೆ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ, **ಉಪಾಯವಿಶೇಷಙ್ಗಳಾಲ್** - ಉಪಾಯ ವಿಶೇಷಗಳಾದ ಭಕ್ತಿ, ಪ್ರಪತ್ತಿಮಾರ್ಗಗಳಲ್ಲಿ, **ಉಂಡಾನ ಭಗವತ್ಪ್ರಸಾದತ್ತಾಲೇ** - ಪ್ರಾಪ್ತವಾದ ಭಗವದನುಗ್ರಹದಿಂದ, **ಅತ್ಯನ್ತ ನಿವೃತ್ತ ಸಂಸಾರರಾಯ್** - ಸಂಪೂರ್ಣವಾಗಿ ನಿವರ್ತಿಸಿ ಹೋದ ಸಂಸಾರ ಬನ್ಧವುಳ್ಳವರಾಗಿ, **ಸಙ್ಕೋಚರಹಿತ ಭಗವದನುಭವತ್ತಾಲೇ** - ಸ್ವಲ್ಪವೂ ನ್ಯೂನತೆಯಿಲ್ಲದೇ ಇರುವ ಭಗವದನುಭವದಿಂದ, ನಿರತಿಶಯವಾದ ಆನಂದವನ್ನು ಹೊಂದಿರುವಂಥಾವರು. ಮುಕ್ತಿಯನ್ನು ಹೊಂದಲು ಉಪಾಯಗಳು ಮುಖ್ಯವಾಗಿ ಎರಡೆಂದು ಹೇಳಿರುತ್ತದೆ:— (1) ಭಕ್ತಿಮಾರ್ಗ, (2) ಪ್ರಪತ್ತಿಮಾರ್ಗ. ಈ ಎರಡು ಮಾರ್ಗಗಳು ಗೀತೆಯಲ್ಲಿ ಉಪದೇಶಿಸಲ್ಪಟ್ಟಿರುತ್ತದೆ. ಶ್ರೀಕೃಷ್ಣನು ಅರ್ಜುನನಿಗೆ ಮೊದಲು ಭಕ್ತಿಮಾರ್ಗವನ್ನುಪದೇಶಿಸುತ್ತಾನೆ. ಆದರೆ ಇದು ಕಷ್ಟವಾದ ಮಾರ್ಗವೆಂದರಿತು ಅರ್ಜುನನು ಶೋಕಿಸಲಾಗಿ, ದಯಾಸಾಗರನಾದ ಶ್ರೀಕೃಷ್ಣನು, ಶೋಕಿಸಬೇಡವೆಂದು ಹೇಳಿ ಸುಲಭೋಪಾಯವಾದ ಪ್ರಪತ್ತಿಮಾರ್ಗವನ್ನು ಬೋಧಿಸಿದನು. ಮುಕ್ತನಿಗೆ ಲಕ್ಷಣವು, **ಅತ್ಯನ್ತ ನಿವೃತ್ತ ಸಂಸಾರಿಯು;** ಬದ್ಧನಿಗಾದರೋ, **ಅನುವೃತ್ತ ಸಂಸಾರಿ;** ಮುಂದೆ ನಿತ್ಯನಿಗೆ ಲಕ್ಷಣವು, **ಅಸ್ಪೃಷ್ಟಸಂಸಾರಿ** ಎಂದು ಹೇಳಲ್ಪಡುತ್ತದೆ. ಕೈವಲ್ಯದಲ್ಲಿ ಆತ್ಮಾನುಭವವನ್ನು ಹೊಂದಿದವರು, ಮುಕ್ತರಲ್ಲವೆಂದು ತಿಳಿಸುವದಕ್ಕಾಗಿ, **ಅತ್ಯನ್ತನಿವೃತ್ತಸಂಸಾರರಾಯ್** ಎಂಬ ಲಕ್ಷಣವು ಮುಕ್ತರಿಗೆ ಹೇಳಲ್ಪಟ್ಟಿರುತ್ತದೆ ಕೈವಲ್ಯ ಪ್ರಾಪ್ತಿಹೊಂದಿದವರು ಸಂಪೂರ್ಣ ನಿವೃತ್ತರಲ್ಲವೆಂದು ತಿಳಿಸುವದಕ್ಕಾಗಿ, **ಅತ್ಯನ್ತ** ಶಬ್ದವನ್ನುಪಯೋಗಿಸುತ್ತಾರೆ. ಅದೂ ಅಲ್ಲದೆ

3. ನಿತ್ಯರಾವಾರ್? ಈಶ್ವರನೈ ಪ್ಪೋಲೇ ಯನಾದಿಯಾ ಕ ಜ್ಞಾನ ಸಙ್ಕೋಚನಿಲ್ಲಾ ಮೆಯಾಲೇ (1) "ಸವಯಸ ಇವಯೇ ನಿತ್ಯನಿರ್ದೋಷಗಂಧಾಃ" ಎಙ್ಗಿರಿಪಡಿಯೇ ಅಸ್ಪೃಷ್ಟಸಂಸರರಾಯ್‌ಕ್ಕೊಂಡು ನಿತ್ಯಕೈಙ್ಕರ್ಯಂಪಣ್ಣುಕಿರ ಅನನ್ತ ಗರುಡ ವಿಷ್ವಕ್ಸೇನಾದಿಗಳ್

ಕೇವಲರಿಗೆ ಸಙ್ಕೋಚರಹಿತ ಭಗವದನುಭವವೂ ಇಲ್ಲವು. ಬದ್ಧರಲ್ಲೊ ಮುಮುಕ್ಷುವಾಗಿ ಭಕ್ತಿಮಾರ್ಗವನ್ನವಲಂಬಿಸಿದವರಿಗೆ ಭಗವದನುಭವವೇನೋ ಉಂಟು. ಆದರೆ ಉಪಾಸನಕಾಲದಲ್ಲಿ ಮಾತ್ರವೇ ಇದ್ದು, ಅನಂತರ ಇಲ್ಲದಿರುವವರಿಂದ, ಅಂತಹ ಭಗವದನುಭವವಲ್ಲವೆಂದು ತಿಳಿಸುವದಕ್ಕಾಗಿ, **ಸಙ್ಕೋಚರಹಿತಭಗವದನುಭವ**ವೆಂದು ಪ್ರಯೋಗಿಸುತ್ತಾರೆ. ಕೈವಲ್ಯಾನುಭವದಲ್ಲಿರುವವರು ಮುಕ್ತರಲ್ಲಿ ಸೇರಿಸಲು ಸಾಧ್ಯವಿಲ್ಲದುದರಿಂದ ಬದ್ಧರಲ್ಲೇ ದೇವತೆಗಳ ಹಾಗೆ ಇನ್ನೊಂದು ಪ್ರಭೇದವಾಗಿ ಭಾವಿಸತಕ್ಕದ್ದು. ಮುಂದೆ ಈ ವಿಷಯವು ಚರ್ಚಿಸಲ್ಪಡುತ್ತದೆ.

3. **ನಿತ್ಯರಾವಾರ್** - ನಿತ್ಯರೆಂದರೆ ಯಾರು? **ಈಶ್ವರನೈಪ್ಪೋಲೆ** - ಈಶ್ವರನಹಾಗೆ, **ಅನಾದಿಯಾಗ ಜ್ಞಾನಸಙ್ಕೋಚನಿಲ್ಲಾಮೆಯಾಲೆ** - ಅನಾದಿಯಾಗಿ ಜ್ಞಾನಸಙ್ಕೋಚವೇ ಇಲ್ಲದೆ **"ಸವಯಸಇವ** - ಸಮಾನವಯಸ್ಕರಾಗಿ ಎಂದರೆ ಸ್ನೇಹಿತರಾಗಿರುವ ಹಾಗೆ, ನಿತ್ಯ ನಿರ್ದೋಷಗನ್ಧಾಃ - ನಿತ್ಯರಾಗಿಯೂ, ಹೇಯಗುಣ ಗಂಧವೇ ಇಲ್ಲದವರಾಗಿದ್ದಾರೆ" **ಎನ್ಗಿರಪಡಿಯೇ** - ಎಂದು ಹೇಳಿರುವ ಮೇರಿಗೆ, **ಅಸ್ಪೃಷ್ಟಸಂಸಾರರಾಯ್‌ಕೊಂಡು** - ಎಂದಿಗೂ ಸಂಸಾರದ ಸ್ಪರ್ಶಕ್ಕೇ ಇಲ್ಲದವರಾಗಿ, **ನಿತ್ಯಕೈಙ್ಕರ್ಯ ಪಣ್ಣುಕಿರ** - ಯಾವಾಗಲೂ ಕೈಙ್ಕರ್ಯ ಮಾಡಿಕೊಂಡಿರುವ ಅನನ್ತ ಗರುಡ ವಿಷ್ವಕ್ಸೇನರೇ ಮೊದಲಾದವರು. (ಮುಕ್ತರಾದರೂ ಕೆಲವುಕಾಲ ಸಂಸಾರವನ್ನನುಭವಿಸಿ ಅನಂತರ ಸ್ವಾಮಿ ಕೃಪೆಯಿಂದ ಸಂಸಾರಬಂಧದಿಂದ ನಿವೃತ್ತರಾದವರು. ನಿತ್ಯರಾದರೋ ಸ್ವಾಮಿ ಸಙ್ಕಲ್ಪದಿಂದ ಎಂದಿಗೂ ಸಂಸಾರದ

(1) ಶ್ರೀಗುಣ. 27.

ಜೀವ ಸ್ವರೂಪ ನಿರೂಪಣಂ.

ಇವರ್ಗಳೆಲ್ಲಾರ್ಕ್ಕುಂ ಸಾಧಾರಣ ಮಾನರೂಪಂ ಅಣುತ್ವ

ಬಂಧನವನ್ನು ಅನುಭವಿಸದೇ ಇರುವವರು. ಇವರಿಗೆ ಪ್ರಕೃತಿಯ ಸಂಬಂಧವು ಬೇಡವೆಂದೇ ಸ್ವಾಮಿಯ ಸಙ್ಕಲ್ಪವು. ಆದುದರಿಂದ ಇವರು ಜ್ಞಾನಸಙ್ಕೋಚವನ್ನು ಎಂದಿಗೂ ಅನುಭವಿಸದೇ ಇರುವವರು. ಇದೀಗ ಮುಕ್ತರಿಗೂ ನಿತ್ಯರಿಗೂ ಇರುವ ವ್ಯತ್ಯಾಸವು, ಆದರೆ ಆನನ್ದದಲ್ಲೇನೂ ತಾರತಮ್ಯ ವಿಲ್ಲವು. "ಸವಯಸ ಇವ" ಎಂಬ ಶ್ರೀಗುಣ ರತ್ನಕೋಶ ಶ್ಲೋಕವು ಯಾವುದೆಂದರೆ:—

**"ತೇಸಾಧ್ಯಾಸ್ಸಂತಿದೇವಾಜನನಿ ಗುಣವಪುರ್ವೇಷವೃತ್ತಸ್ವರೂಪೈ
ರ್ಭೋಗೈರ್ವಾನಿರ್ವಿಶೇಷಾಸ್ಸವಯಸ ಇವಯೇ ನಿತ್ಯ ನಿರ್ದೋ
ಷಗಂಧಾಃ"**

'ಓ ತಾಯಿಯಾದಲಕ್ಷ್ಮಿಯೇ, ಆನಿತ್ಯಸೂರಿಗಳು ಕಲ್ಯಾಣ ಗುಣಗಳಲ್ಲೂ, ದಿವ್ಯಮಙ್ಗಳವಿಗ್ರಹದಲ್ಲೂ, ವೇಷ, ನಡತೆ ಸ್ವರೂಪದಲ್ಲೂ ಭೋಗಗಳಲ್ಲೂ ನಿಮ್ಮಗಳಿಗಿಂತ ಸ್ವಲ್ಪವೂ ವ್ಯತ್ಯಾಸವಿಲ್ಲದೆ, ಸಮಾನರಾದವರಾಗಿ, ನಿತ್ಯರಾಗಿ, ಸ್ವಲ್ಪವೂ ದೋಷವಿಲ್ಲದೆ ಇರುತ್ತಾರೆಂಬುವದು ಮುಖ್ಯಾಭಿಪ್ರಾಯವು.

ವಿಷ್ವಕ್ಸೇನಾದಿಗಳ್ ಎಂಬಲ್ಲಿನ ಆದಿ ಪದದಿಂದ,

**" ಕುಮುದಃ ಕುಮುದಾಕ್ಷಶ್ಚ ಪುಂಡರೀಕಶ್ಚ ವಾಮನಃ ।
ಶಙ್ಕುಕರ್ಣ ಸ್ಸರ್ಪನೇತ್ರ ಸ್ಸುಮುಖ ಸ್ಸುಪ್ರತಿಷ್ಠಿತಃ ॥"**

ಎಂಬ ಗಣನಾಥರೂ, ಚಂಡ, ಪ್ರಚಂಡ, ಭದ್ರ, ಸುಭದ್ರ, ಜಯ, ವಿಜಯ, ಧಾತೃ, ವಿಧಾತೃ, ಎಂಬ ಎಂಟು ದ್ವಾರಪಾಲಕರೂ ಹೇಳಲ್ಪಟ್ಟರು.

ಬದ್ಧಮುಕ್ತ ನಿತ್ಯರೆಂದು ಜೀವಾತ್ಮರು ಮೂರು ವಿಧವೆಂದೂ, ಅವರುಗಳು ಯಾರೂ ಎಂದು ತಿಳಿಸಿ, ಈ ಜೀವಾತ್ಮರುಗಳಿಗೆಲ್ಲಾ ನೈಜವಾದ ಸ್ವರೂಪವೇನೆಂಬುವವನ್ನು ಮುಂದೆ ತಿಳಿಸುತ್ತಾರೆ.

ಜೀವಾತ್ಮಸ್ವರೂಪವು.

ಇವರ್ಗಳೆಲ್ಲಾರ್ಕ್ಕುಂ– ಈ ಮೂರುವಿಧ ಜೀವಾತ್ಮರುಗಳೆಲ್ಲರಿಗೂ

ಜ್ಞಾನಾನನ್ದಾಮಲತ್ವಾದಿಗಳುಮ್, ಭಗವಚ್ಛೇಷತ್ವ, ಪಾರತನ್ತ್ರಾದಿಗಳುಮ್; ಮುಮುಕ್ಷುವಾನ ತನಕ್ಕಸಾಧಾರಣಮಾಕವರಿಯ ವೇಣ್ಡು ಮಾಕಾರಙ್ಗಳ್ ಉಪೋದ್ಘಾತತ್ತಿಲೇ ಶೊನ್ನೋಮ್, ಮೇಲುಮ್ ಕಣ್ಡುಕೊಳ್ವದು.

ಸಾಧಾರಣರೂಪಂ - ಮೂರುವಿಧ ಆತ್ಮರಿಗೂ ಸಾಧಾರಣವಾಗಿರುವ ನೈಜಸ್ವರೂಪವು ಯಾವುದೆಂದರೆ:—**ಅಣುತ್ವ** - ಅಣುವಾಗಿರುವ ಭಾವವೂ, **ಜ್ಞಾನಾನನ್ದಾಮಲತ್ವಾದಿಗಳುಂ** - ಜ್ಞಾನಸ್ವರೂಪನಾಗಿಯೂ ಜ್ಞಾನಗುಣಕನಾಗಿಯೂ ಇರುವಿಕೆಯೂ, ಆನನ್ದತ್ವವೂ, ಪರಿಶುದ್ಧರಾಗಿ ದೋಷಗನ್ಧವಿಲ್ಲದಿರುವಿಕೆಯೂ, **ಭಗವಚ್ಛೇಷಿತ್ವಪಾರತನ್ತ್ರಾದಿಗಳುಮ್** - ಸರ್ವೇಶ್ವರನಿಗೆ ತಾನು ದಾಸನಾಗಿರುವ ಭಾವವೂ, ಎಂದರೆ ಸರ್ವೇಸ್ವರನ ಪ್ರಯೋಜನಕ್ಕಾಗಿಯೇ ತಾನು ಎಂಬ ಭಾವವೂ ಮತ್ತು ತಾನು ಸ್ವತನ್ತ್ರನಲ್ಲವು, ಸರ್ವೇಶ್ವರನಿಗೆ ತಾನು ಅಧೀನನು ಎಂಬ ಭಾವವೂ, ಇವುಗಳು. ಮೊದಲನೇ **ಆದಿ** ಶಬ್ದದಿಂದ ಪ್ರಾಯಶಃದಾಸತ್ವವೂ ಎರಡನೇ **ಆದಿ** ಶಬ್ದದಿಂದ ನಿಯಾಮ್ಯತ್ವವೂ ಹೇಳಲ್ಪಟ್ಟವು. **ಮುಮುಕ್ಷುವಾನತನಕ್ಕು** - ಮೋಕ್ಷಾರ್ಥಿಯಾಗಿ ಬದ್ಧದೆಶೆಯಲ್ಲಿರುವ ತನಗೆ, **ಅಸಾಧಾರಣಮಾನ** - ನೈಜವಾದುದಲ್ಲದೆ ಕರ್ಮಮೂಲಕವಾಗಿ ಈಗ ಪ್ರಾಪ್ತವಾಗಿರುವ, **ಅರಿಯವೇಣ್ಡುಮಾಕಾರಙ್ಗಳ್** ತಾನು ತಿಳಿಯಬೇಕಾದ ತನ್ನ ಸ್ವರೂಪಗಳನ್ನು, **ಉಪೋದ್ಘಾತತ್ತಿಲೇ ಶೊನ್ನೋಂ** - ಹಿಂದೆ ಉಪೋದ್ಘಾತಾಧಿಕಾರದಲ್ಲಿ ಹೇಳಿದೆವು, **ಮೇಲುಮ್ ಕಣ್ಡುಕೊಳ್ವದು** - ಮುಂದೆ ಉಪಪಾದಿಸುವದರಿಂದಲೂ ತಿಳಿದು ಕೆಳ್ಳುವದು.

ಜೀವನು **ಅಣುಸರ್ವರೂಪನು** ಎಂಬುವದಕ್ಕೆ "**ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯಚ । ಭಾಗೋಜೀವಸ್ಸ ವಿಜ್ಞೇಯಃ**" ಎಂದರೆ ಭತ್ತದಮೊನೆಯನ್ನು ನೂರುಭಾಗಮಾಡಿ, ಆ ಒಂದುಭಾಗವನ್ನು ಪುನಃ ನೂರುಭಾಗಮಾಡಿದರೆ ಎಷ್ಟುಸ್ವಲ್ಪವೋ, ಅಷ್ಟು ಅಲ್ಪವಾದವನು ಎಂಬ ಶ್ರುತಿ ಪ್ರಮಾಣವಿರುತ್ತದೆ. ಹೀಗಿರುವಲ್ಲಿ ವಿಭುವಾದ ಪರಮಾತ್ಮನೇ ಇವನು ಎಂಬ ಅದ್ವೈತಿಗಳಮತವು ಹೇಗೆ

ಕೂಡುತ್ತದೆ? ಜೀವನು ಜ್ಞಾನಾನಂದಾಮಲ **ಸ್ವರೂಪನೆಂಬುವ** ದಕ್ಕೂ ಅನೇಕ ಪ್ರಮಾಣಗಳುಂಟು. **"ಯದಾ ತು ಶುದ್ಧಂ ನಿಜರೂಪಿ ಸರ್ವ ಕರ್ಮಕ್ಷಯೇ ಜ್ಞಾನ ಮಪಾಸ್ತ ದೋಷಂ"** (ವಿ. ಪು. 2. 12. 40) ಎಂಬ, **ಜ್ಞಾನಂ ವಿಶುದ್ಧಂ ವಿಮಲಂವಿಶೋಕ ಮಶೇಷ ಲೋಭಾದಿ ನಿರಸ್ತ ಸಙ್ಗಂ** (ವಿ. ಪು. 2. 12. 45) ಎಂಬವಿಷ್ಣು ಪುರಾಣ ವಾಕ್ಯಗಳಿಂದ ವ್ಯಕ್ತಪಡುತ್ತದೆ. ಅಂತಹ ಪರಿಶುದ್ಧ ಸ್ವರೂಪವು ಕರ್ಮಬದ್ಧವಾದುದರಿಂದ ಈಗ ತಿರೋಹಿತವಾಗಿರುತ್ತದೆ. ಆದುದರಿಂದ ಈಗ ಮೋಕ್ಷಾರ್ಥಿಯಾಗಿರುವ ತನಗೆ ಆರೋಪಿತವಾಗಿ, ನೈಜವಾಗಿರದೇ ಇರುವ ಆಕಾರಗಳು ಯಾವುವು ಎಂಬುವದನ್ನು ತಿಳಿದು ಕೊಳ್ಳತಕ್ಕದ್ದು.

ಈ ಅಭಿಪ್ರಾಯಗಳು ತಾರೆಯು ಲಕ್ಷ್ಮಣನಿಗೆ ಹೇಳುವ ವಾಕ್ಯವಾದ,

1. **"ಅಯಂ ಪ್ರಕೃತ್ಯಾ ಚಪಲಃ ಕಪಿಸ್ತು ಕಥಂನ ಸಜ್ಜೇತ ಸುಖೇನರಾಜಾ।"** ಎಂಬುವದರಿಂದ ವ್ಯಕ್ತವು ; **ಅಯಂ** - ಈ ಜೀವಾತ್ಮನು, **ಪ್ರಕೃತ್ಯಾಸಹ** - ಪ್ರಕೃತಿ ಸಂಬಂಧವಿರುವದರಿಂದ, **ಚಪಲಃ** - ಅತಿ ಚಪಲನಾಗಿದ್ದಾನೆ. ಮತ್ತೂ **ಕಪಿಸ್ತು** - ಕಂಪಿಬತೀತಿ ಕಪಿಃ, ಅಪ್ ಶಬ್ದದಿಂದ ಬೋಧಿತವಾಗುವ ಸರ್ವ ಭೋಗ್ಯ ವಸ್ತುವನ್ನು ಕರ್ಮಪರಿಪಾಕದಿಂದ ಅನುಭವಿಸುವವನು ಅಥವಾ ಕಂ - ಸುಖವನ್ನು ಅನುಭವಿಸುವವನು, ಆಗಲೂ ಅದೇ ಅಭಿಪ್ರಾಯವು, ಮತ್ತು ಈ ಪ್ರಕೃತಿಯಾದ ದೇಹ ಸಂಬಂಧದಿಂದ, ಈ ದೇಹವೆಂಬ ಪುರವಲ್ಲೇ ರಾಜನಾಗಿದ್ದುಕೊಂಡು, ಹೇಗೆ ತಾನೇ ಐಹಿಕ ಸುಖಾನುಭವವನ್ನುಮಾಡದೆ ಇದ್ದಾನೆಂಬಭಿಪ್ರಾಯವು. ಈ ಅಭಿಪ್ರಾಯಗಳೇ ಉಪೋದ್ಘಾತಾಧಿಕಾರದಲ್ಲಿ ರಾಜ ಕುಮಾರನಿಗೆ ಆರೋಪಿತವಾದ, ಶಬರತ್ವ,ಜ್ಞಾನ ಸಜಾತೀಯತ್ವ, ಹೇಯಸಂಸರ್ಗಗಳಿಂದ, ಹೇಳಲ್ಪಟ್ಟವು. ಮುಂದೆ ಪ್ರಾಪ್ತಿ ವಿರೋಧಿಗಳು ಯಾವುವು ಎಂದು ಇದೇ ಅಧಿಕಾರದಲ್ಲೇ ಹೇಳುವ ಸಂದರ್ಭದಲ್ಲೂ, ಅಧಿಕಾರ ವಿಭಾಗಾಧಿ ಕಾರದಲ್ಲೂ ಅವು ಯಾವುವೆಂಬುವದನ್ನು ತಿಳಿಯಬಹುದು ಎಂಬ ಭಾವವು.

---

(1) ಕಿಷ್ಕಿಂಧಾ. 33. 56.

ರಹಸ್ಯತ್ರಯೇ ಪ್ರಾಪ್ತೃ ಸ್ವರೂಪ ನಿರೂಪಣಂ

ಇಪ್ಪ್ರಾಪ್ತಾ ವಿನುಡೈಯ ಸ್ವರೂಪಂ ಪ್ರಣವ ನಮಸ್ಸು ಕ್ಕಳಿಲ್ ಮಕಾರಙ್ಗಳಿಲುಮ್, ಪ್ರಪದ್ಯೇ ಎಙ್ಗಿರ ಉತ್ತಮ ನಿಲುಮ್

ಈ ಮೂರು ರಹಸ್ಯಗಳಲ್ಲೂ ಜೀವ ಸ್ವರೂಪದ ನಿರೂಪಣವು.

ಇಪ್ಪ್ರಾಪ್ತಾವಿನುಡೈಯ ಸ್ವರೂಪಂ - ಈ ಪ್ರಾಪ್ತವಾದ ಜೀವಾತ್ಮನ ಸ್ವರೂಪವು, ಈ ಮೂರು ರಹಸ್ಯಗಳಲ್ಲೂ ಎಲ್ಲೆಲ್ಲಿ ತಿಳಿಯಬಹುದೆಂದರೆ ಹೇಳುತ್ತಾರೆ :—(೧) **ಪ್ರಣವ ನಮಸ್ಸುಕ್ಕಳಿಲ್** - ಪ್ರಣವವಾದ ಓಂಕಾರದ ಮತ್ತು ನಮಶ್ಶಬ್ದಗಳ ಮಕಾರ ಗಳಲ್ಲಿ ತಿಳಿಯಬಹುದು. **ಮ್ ಆಯ್ವೈವ** ಎಂಬ ಯೋಜನೆಯಿಂದ ಜೀವನ ಶೇಷತ್ವವೂ, ಮನಜ್ಞಾನೇ ಎಂಬ ಧಾತುವಿನಿಂದ ಜ್ಞಾನ ತ್ವಾಮಲತ್ವಾನಂದತ್ವಾದಿಗಳು ತೋರುತ್ತವೆ. **ಮಃ, ನ** ಎಂಬ ಸಖಂ ಡನಮಸ್ಸಿನಿಂದ ಪಾರತಂತ್ರ್ಯವು ತೋರಿಬರುತ್ತದೆ. ನಮಃ - ರಕ್ಷ ಣೋಪಾಯವು, ಮಃನ - ನನಗಿಲ್ಲವು ಎಂಬುವದರಿಂದ ಈಗ ಪ್ರಾಪ್ತ ವಾಗಿರುವ ಅಸಾಧಾರಣ ರೂಪವು ತೋರಿಬರುತ್ತದೆ.

2. **ನಾರ ಶಬ್ದಙ್ಗಳಿಲುಂ** - ಮೂಲ ಮಂತ್ರ, ದ್ವಯಗಳಲ್ಲಿ ರುವ ನಾರಾಯಣ ಪದದ ನಾರಶಬ್ದಗಳಲ್ಲೂ ಅನುಸನ್ಧೇಯವು. ಇದರಿಂದ, ನಿತ್ಯತ್ವವನ್ನೂ, ಚೇತನ ಬಹುತ್ವವನ್ನೂ ತಿಳಿಯಬಹುದು. ತಾನು ಪ್ರಾಪ್ತಾ ರಕ್ಷ್ಯನು, ಆಧೇಯನು ಎಂಬುವದೂ ಕೂಡ ತೋರಿ ಬರುತ್ತದೆ.

3. **ಪ್ರಪದ್ಯೇ ಎಙ್ಗಿರ ಉತ್ತಮನಿಲುಮ್** - ಪ್ರಪದ್ಯೇ ಎಂಬುವ ಪದದಲ್ಲಿರುವ ಉತ್ತಮ ಪುರುಷದಲ್ಲೂ ಅನುಸನ್ಧೇಯವು. ಇಲ್ಲಿಯೂ ತನ್ನ ಅಸಾಧಾರಣ ರೂಪವು ತೋರಿಬರುತ್ತದೆ. ಆ ಅಸಾಧಾರಣ ರೂಪವನ್ನು ಕಳೆದುಕೊಂಡು ಸಾಧಾರಣ ರೂಪವನ್ನು ಹೊಂದುವ ಬಗೆ ಹೇಗೆ ಎಂಬುವದು ತೋರಿಬರುತ್ತದೆ.

ವ್ರಜವೆಙ್ಗಿರ ಮಧ್ಯಮನಿಲುಮ್, ತ್ವಾ ಎಙ್ಗಿರ ಪದತ್ತಿಲುಮ್, ಮಾಶುಚಃ ಎಙ್ಗಿರವಾಕ್ಯತ್ತಿಲುಮ್ ಅನುಸನ್ಧೇಯಮ್

ಪ್ರಾಪ್ತ್ಯುಪಾಯ ಫಲ ಸ್ವರೂಪ ನಿರೂಪಣಂ.

ಪ್ರಾಪ್ತ್ಯುಪಾಯ ಮು ಮಿದಿಱ್ ಪರಿಕರಙ್ಗಳುಮ್ ಫಲ ಸ್ವರೂಪ ಮಿರುಕ್ಕುಮ್ ಪಡಿಯುಮ್, ಮೇಲೆ ಪ್ರಾಪ್ತ ಸ್ಥಳಙ್ಗಳಿಲೇ ಪರಕ್ಕ ಚ್ಚೊಲ್ಲಕ್ಕಡವೋಮ್.

---

4. **ವ್ರಜ ಎಙ್ಗಿರ ಮಧ್ಯಮ ನಿಲುಮ್** - ಹೊಂದು ಎಂಬುವದರಲ್ಲಿ ತೋರುವ ಮಧ್ಯಮ ಪು ರು ಷ ದ ಲ್ಲೂ ಅನುಸಂಧೇಯವು. **ಪ್ರಪದ್ಯೇ** - ಎಂಬುವದರಲ್ಲಿ ತೋರುವ ಭಾವಗಳೇ ಇಲ್ಲಿಯೂ ತೋರುತ್ತವೆ.

5. **ತ್ವಾ ಎಙ್ಗಿರ ಮಧ್ಯಮನಿಲುಮ್** - ಚರಮಶ್ಲೋಕದ ಉತ್ತರಾರ್ಧದಲ್ಲಿರುವ "**ತ್ವಾ**" ಎಂಬ ಮಧ್ಯಮ ಪುರುಷದಲ್ಲೂ ಜೀವ ಸ್ವರೂಪವು ತೋರಿಬರುತ್ತದೆ ಇಲ್ಲಿಯೂ ಬದ್ಧದೆಶೆಯ ಅಸಾಧಾರಣ ರೂಪವಾದ ಜ್ಞಾನಸಙ್ಕೋಚ, ದುಃಖಿತ್ವ, ಅಶಕ್ತತೆಗಳು ತೋರಿಬರುತ್ತವೆ.

6 **ಮಾಶುಚಃ** - ಎಂಬ ಚರಮಶ್ಲೋಕದ ಕೊನೇವಾಕ್ಯದಿಂದಲೂ ಅನುಸನ್ಧಾನಮಾಡಬಹುದು. ಇಲ್ಲಿಯೂ ಅಸಾಧಾರಣರೂಪವಾದ ಜ್ಞಾನಸಙ್ಕೋಚ, ದುಃಖಿತ್ವ, ಅಶಕ್ತತೆಗಳು ವ್ಯಕ್ತವಾಗಿವೆ.

ಹೀಗೆ ಅರ್ಥಪಞ್ಚಕದ ಮೊದಲನೇ ಎರಡನೇದಾದ ಪ್ರಾಪ್ಯ ಪ್ರಾಪ್ತೃಗಳ ಸ್ವರೂಪಗಳನ್ನು ತಿಳಿಸಿ, ಮೂರನೇ ನಾಲ್ಕನೇದಾನ ಪ್ರಾಪ್ತ್ಯುಪಾಯ ಫಲ ಸ್ವರೂಪಗಳು ಮುಂದೆ ಚನ್ನಾಗಿ ಉಪಪಾದಿಸಲ್ಪಡುತ್ತವೆಂದು ತಿಳಿಸುತ್ತಾರೆ.

ಪ್ರಾಪ್ತ್ಯುಪಾಯಮುಂ- ಸ್ವಾಮಿಯನ್ನು ಹೊಂದಲು ಬೇಕಾದ ಉಪಾಯದ ಸ್ವರೂಪವನ್ನೂ, **ಇದಿಱ್ ಪರಿಕರಙ್ಗಳುಮ್**- ಈ ಉಪಾಯಕ್ಕೆ ಬೇಕಾದ ಅಙ್ಗಗಳನ್ನೂ, **ಫಲಸ್ವರೂಪ ಮಿರುಕ್ಕುಮ್ ಪಡಿಯುಮ್** - ಆ ಸಾಧನಾನುಷ್ಠಾನದಿಂದುಂಟಾಗುವ ಫಲವಿರುವ ಸ್ಥಿತಿಯನ್ನೂ, **ಮೇಲೆ ಪ್ರಾಪ್ತಸ್ಥಳಙ್ಗಳಿಲೇ** - ಮುಂದೆ ಆ ವಿಷಯಗಳನ್ನು ಹೇಳಬೇಕಾದ ಸ್ಥಳಗಳಲ್ಲಿ, **ಪರಕ್ಕ ಚೊಲ್ಲಕ್ಕಡವೋಂ** - ತುಂಬಾ ವಿಸ್ತಾರವಾಗಿ ಹೇಳುವೆವು.

ರಹಸ್ಯತ್ರಯೇ ಪ್ರಾಪ್ಯೋಪಾಯ ಫಲಸ್ವರೂಪಾನುಸನ್ಧಾನ ಸ್ಥಲ ಪ್ರದರ್ಶನಂ.

ಇವತ್ತಿಲ್ ಉಪಾಯಮ್, ತಿರುಮನ್ತ್ರತ್ತಿಲ್ ನಮಸ್ಸಿಲುಮ್, ಅಯನ ಶಬ್ದತ್ತಿಲುಮ್, ದ್ವಯತ್ತಿಲ್ ಪೂರ್ವಖಣ್ಡತ್ತಿಲುಮ್, ಚರಮ ಶ್ಲೋಕತ್ತಿಲ್ ಪೂರ್ವಾರ್ಧತ್ತಿಲುಮನುಸನ್ಧೇಯಮ್.

ಉಪಾಯದ ವಿಷಯವಾಗಿ ಹೇಳುವಾಗ, ಉಪಾಯವು, ಸಿದ್ಧೋಪಾಯ, ಸಾಧ್ಯೋಪಾಯವೆಂಬದಾಗಿ, ಎರಡುವಿಧವೆಂದೂ, ಸಿದ್ಧೋಪಾಯನು ಲಕ್ಷ್ಮೀಯುಕ್ತನಾದ ನಾರಾಯಣನೇ ಎಂದೂ, ಸಾಧ್ಯೋಪಾಯಗಳು ಭಕ್ತಿಪ್ರಪತ್ತಿಮಾರ್ಗಗಳೆಂದೂ, ಅವುಗಳ ಸ್ವರೂಪಗಳು ಎಂಥಾವೆಂದೂ ಚನ್ನಾಗಿ ಉಪಪಾದಿಸಲ್ಪಡುತ್ತವೆಂಬ ಭಾವವು. ಇದೂ ಅಲ್ಲದೆ ಈ ಸಾಧ್ಯೋಪಾಯವಾದ ಭಕ್ತಿ ಶಬ್ದದಿಂದ ಹೇಳಲ್ಪಡುವ ಯೋಗಕ್ಕೆ ಎಂಟು ಅಙ್ಗಗಳೆಂದೂ, ಪ್ರಪತ್ತಿಗೆ ಆರು ಅಙ್ಗಗಳೆಂದೂ, ಆ ಅಙ್ಗಗಳಾವುವು ಎಂಬುವದೂ ಸಹ ಹೇಳಲ್ಪಡುತ್ತವೆ ಎಂಬ ಭಾವವು. ಆ ಸಾಧ್ಯೋಪಾಯಾನುಷ್ಠಾನದಿಂದುಂಟಾಗುವ ಫಲದ ಸ್ಥಿತಿ ಎಂದು ಹೇಳಿರುವದರಿಂದ, ಗತಿಚಿನ್ತನೆಯೂ, ದೇಹಾವಸಾನಕಾಲದಲ್ಲಿ ನಿರ್ಯಾಣವೂ, ಪ್ರಕೃತಿ ವಿಮುಕ್ತದೆಶೆಯೂ, ದಿವ್ಯಮಙ್ಗಳ ವಿಗ್ರಹಪ್ರಾಪ್ತಿಯೂ, ಪರಬ್ರಹ್ಮ ಕೈಙ್ಕರ್ಯಪ್ರಾಪ್ತಿ, ಪರಬ್ರಹ್ಮಾನುಭವ, ಇವೆಲ್ಲವೂ ಆಯಾ ಸ್ಥಳಗಳಲ್ಲಿ ಹೇಳಲ್ಪಡುತ್ತವೆ ಎಂಬ ತಾತ್ಪರ್ಯವು. ಇವುಗಳೆಲ್ಲಾ ತುಂಬಾ ಮುಖ್ಯವಾದವುಗಳಾದುದರಿಂದ ಸವಿಸ್ತಾರವಾಗಿ ಬೇರೆಬೇರೆ ಅಧಿಕಾರಗಳಲ್ಲಿ ಹೇಳಲ್ಪಡುತ್ತವೆ ಎಂದು ತಿಳಿಸುತ್ತಾರೆ. ಸದ್ಯದಲ್ಲಿ ಮುಂದೆ ಈ ಉಪಾಯವೂ ಅದರ ಫಲವೂ ಸಹ ಈ ಮೂರು ರಹಸ್ಯಗಳಲ್ಲೂ ಎಲ್ಲಿ ಹೇಳಿವೆ ಎಂಬುವದನ್ನು ವ್ಯಕ್ತಪಡಿಸುತ್ತಾರೆ.

ಇವತ್ತಿಲ್- ಈ ಉಪಾಯ ಫಲಗಳೆರಡರಲ್ಲಿ, **ಉಪಾಯಮ್**- ಉಪಾಯವು, ಎಲ್ಲಿ ಹೇಳಿರುತ್ತದೆ ಎಂದರೆ ತಿಳಿಸುತ್ತಾರೆ:—(1) **ತಿರುಮನ್ತ್ರತ್ತಿಲ್** - ಮೂಲಮಂತ್ರದಲ್ಲಿ, **ನಮಸ್ಸಿಲುಮ್** - ನಮಶ್ಶಬ್ದದಲ್ಲಿ, ಅನುಸನ್ಧೇಯವು. ಅಖಂಡವಾದ ನಮಶ್ಶಬ್ದಕ್ಕೆ ರಕ್ಷಣೋಪಾಯವಾದ ಶರಣಾಗತಿಯು ಅರ್ಥವು. ಮಾರ್ಕಂಡೇಯರು ಪಾಂಡವರನ್ನು ಕುರಿತು, “ **ಗಚ್ಛಧ್ವಮೇನಂ ಶರಣಂ,** ” ಈ ಶರಣ್ಯನಾದ ಶ್ರೀ ಕೃಷ್ಣನನ್ನು ಶರಣಹೊಂದಿರಿ ಎಂದುಪದೇಶಿಸಲು, “ **ದ್ರೌಪದ್ಯಾಸಹಿತಾ ಸ್ಸರ್ವೇ ನಮಶ್ಚಕ್ರುರ್ಜನಾರ್ದನಂ** ” “ಪಞ್ಚಪಾಂಡವರೂ

ಫಲಸ್ವರೂಪವ್, ಚತುರ್ಥ್ಯನ್ತ ಪದಙ್ಗಳಿಲುಂ, ದ್ವಯತ್ತಿಲ್ ನಮಸ್ಸಿಲುಮ್, ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎನ್ಗಿರ ವಿಡತ್ತಿಲುಮನುಸನ್ಧೇಯಮ್.

ದ್ರೌಪದೀ ಸಹಿತವಾಗಿ ನಮಸ್ಕಾರ ಮಾಡಿದರು ಎಂದರೆ ಶ್ರೀ ಕೃಷ್ಣನಲ್ಲಿ ಶರಣಾಗತಿ ಮಾಡಿದರೆಂಬಭಿಪ್ರಾಯವು. ಆದುದರಿಂದ **ನಮ** ಶ್ಶಬ್ದವು ಉಪಾಯವನ್ನು ಬೋಧಿಸುತ್ತದೆ. (2) **ಅಯನ ಶಬ್ದತ್ತಿಲುಮ್** - ನಾರಾಯಣ ಪದದಲ್ಲಿರುವ ಅಯನ ಶಬ್ದದಲ್ಲೂ ಉಪಾಯವು ಅನುಸನ್ಧೇಯವು. **ನಾರಾಣಾಂ ಅಯನಂ** ಎಂಬ ತತ್ಪುರುಷಾರ್ಥದಿಂದ, ನಾರಶಬ್ದವಾಚ್ಯರಾದ ಜೀವಾತ್ಮರಿಗೆ **ಪ್ರಾಪಕನು** ಎಂದರೆ ಸಿದ್ಧೋಪಾಯನು ಶ್ರಿಯಃಪತಿಯು. **ಅಯನ** ಶಬ್ದಕ್ಕೆ ಪ್ರಾಪಕನೆಂಬರ್ಥವು ಹೇಗೆಂದರೆ:—**ಈಯತೇ ಅನೇನೇತಿ ಅಯನಂ** ಎಂಬ ವ್ಯುತ್ಪತ್ತಿಯಿಂದ, ಈ ಶ್ರಿಯಃಪತಿಯಿಂದ ಹೊಂದುವನು, ಆದುದರಿಂದ **ಅಯನನು** ಎಂಬ ಭಾವವು.

(3) **ದ್ವಯತ್ತಿಲ್ ಪೂರ್ವಖಣ್ಡತ್ತಿಲುಮ್** - ದ್ವಯಮನ್ತ್ರದ ಪೂರ್ವಖಂಡದಿಂದಲೂ ಉಪಾಯವು ಅನುಸನ್ಧೇಯವು. **ಶ್ರೀಮನ್ನಾರಾಯಣ** ಎಂಬುವದರಿಂದ ಸಿದ್ಧೋಪಾಯವೂ, **ಚರಣೌ ಶರಣಂ ಪ್ರಪದ್ಯೇ** ಎಂಬುವದರಿಂದ ಸಾಧ್ಯೋಪಾಯವಾದ ಶರಣಾಗತಿಯೂ ಹೇಳಲ್ಪಟ್ಟಿತು.

(4) **ಚರಮ ಶ್ಲೋಕತ್ತಿಲ್ ಪೂರ್ವಾರ್ಧತ್ತಿಲು ಮನುಸನ್ಧೇಯಮ್** - ಚರಮ ಶ್ಲೋಕದ ಮೊದಲನೇ ಪದದಲ್ಲೂ ಅನುಸನ್ಧಾನ ಮಾಡಬಹುದು. **ಮಾಮೇಕಂ** ಎಂಬುವದರಿಂದ ಸಿದ್ಧೋಪಾಯವೂ, **ಶರಣಂವ್ರಜ** - ಎಂದು ಸಾಧ್ಯೋಪಾಯವಾದ ಶರಣಾಗತಿಯೂ ಹೇಳಲ್ಪಟ್ಟವು.

1. **ಫಲಸ್ವರೂಪಂ** - ಫಲ ಸ್ವರೂಪವು, **ಚತುರ್ಥ್ಯನ್ತ ಪದಙ್ಗಳಿಲುಮ್** - ಚತುರ್ಥೀವಿಭಕ್ತಿಯಿರುವ ಪದಗಳಲ್ಲಿ ಅನುಸನ್ಧೇಯವು. ಮೂಲಮನ್ತ್ರದಲ್ಲಿನ ಮತ್ತು ದ್ವಯಮನ್ತ್ರದ ಉತ್ತರಖಂಡದಲ್ಲಿನ **ನಾರಾಯಣಾಯ** ಎಂಬ ಪದದ ಮೇಲಿರುವ ಚತುರ್ಥೀವಿಭಕ್ತಿಯಿಂದ ಕೈಙ್ಕರ್ಯಪ್ರಾಪ್ತಿಯು ಸೂಚಿಸಲ್ಪಡುತ್ತದೆ.

ಪ್ರಾಪ್ತಿ ವಿರೋಧಿ ಸ್ವರೂಪ ಕಥನಂ.

ಪ್ರಾಪ್ತಿವಿರೋಧಿ ಯಾವದು? ಅವಿದ್ಯಾ ಕರ್ಮವಾಸನಾದಿ

---

2. **ದ್ವಯತ್ತಿಲ್ ನಮಸ್ಸಿಲುಮ್** - ದ್ವಯಮಂತ್ರದ ನಮಶ್ಶಬ್ದದಲ್ಲೂ ಅನುಸಂಧೇಯವು. ಅನಿಷ್ಟನಿವೃತ್ತಿಯೂ ಇಷ್ಟಪ್ರಾಪ್ತಿಯೂ ಫಲವಾದುದರಿಂದ **ಮಃ, ನ,** ಎಂದು ಪದ ಮಾಡುವದರಿಂದ ಕೈಂಕರ್ಯವು ಶ್ರಿಯಃಪತಿಗೇನೇ ವಿನಾ ತನಗಲ್ಲವು ಎಂಬುವದರಿಂದ, ಇಷ್ಟಪ್ರಾಪ್ತಿಯಾದ ಕೈಂಕರ್ಯಪ್ರಾಪ್ತಿಯೂ, ಅಹಂಕಾರ ಮಮಕಾರ ನಿವೃತ್ತಿರೂಪ ಅನಿಷ್ಟನಿವೃತ್ತಿಯೂ ಉಂಟಾಯಿತೆಂಬ ಭಾವವು. ಇದನ್ನೇ ಶ್ರೀ ಪರಾಶರಭಟ್ಟರು ಅಷ್ಟಶ್ಲೋಕಿಯಲ್ಲಿ **"ಪ್ರಬಲತರ ವಿರೋಧಿ ಪ್ರಹಾಣಂ"** ಎಂದು ಹೇಳಿರುತ್ತಾರೆ.

3. **ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎನ್ಗಿರ ವಿಡತ್ತಿಲನುಸನ್ಧೇಯಮ್** - ಚರಮ ಶ್ಲೋಕದ "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂಬುವ ವಾಕ್ಯದಲ್ಲೂ ಫಲವು ಅನುಸಂಧೇಯವು. ಇಲ್ಲಿಯೂ ಅನಿಷ್ಟವಾದ ಪಾಪಗಳ ನಿವೃತ್ತಿದ್ವಾರಾ ಇಷ್ಟಪ್ರಾಪ್ತಿಯೂ ಹೇಳಲ್ಪಟ್ಟಿರುತ್ತದೆ.

ಐದನೇದಾದ ಪ್ರಾಪ್ತಿವಿರೋಧಿಯು.

ಪ್ರಾಪ್ತಿವಿರೋಧಿ ಯಾವುದು? ಆ ಭಗವತ್ಪ್ರಾಪ್ತಿಗೆ ವಿರೋಧಿಎನಿಸುವದು ಯಾವುದು? ಅವಿದ್ಯಾ ಕರ್ಮವಾಸನಾದಿ ರೂಪವಾದ **ಮೋಕ್ಷ ಪ್ರತಿಬಂಧಕವರ್ಗಮ್** - ಮೋಕ್ಷಕ್ಕೆ ಅಡ್ಡಿಮಾಡುವಂತಹ ಎಲ್ಲವೂ, ಇಲ್ಲಿ ಆದಿಪದದಿಂದ, ಪ್ರಕೃತಿಸಂಬನ್ಧ, ರುಚಿಗಳು ಸೂಚಿಸಲ್ಪಟ್ಟವು. ಅವಿದ್ಯಾ ಕರ್ಮವಾಸನಾದಿಗಳಾವುವೆಂಬುವದು ಉಪೋದ್ಘಾತಾಧಿಕಾರದ ೧೮೫-೬ ನೇ ಪುಟಗಳಲ್ಲಿ ಉಪಪಾದಿತವಾಗಿರುತ್ತದೆ.

ರೂಪಮಾನ ಮೋಕ್ಷಪ್ರತಿಬನ್ಧಕವರ್ಗವ್. ಅದಿಲ್ ಪ್ರಧಾನಂ ಅನಾದಿಯಾಕ ಸಂತನ್ಯಮಾನ ವಾಜ್ಞಾತಿಲಂಘನಮಡಿಯಾಕ ಪ್ಪಿರನ್ದ ಭಗವನ್ನಿಗ್ರಹಂ.

ಪ್ರಧಾನಪ್ರಾಪ್ತಿ ವಿರೋಧಿಯು.

ಅದಿಲ್ ಪ್ರಧಾನಂ - ಆಪ್ರಾಪ್ತಿವಿರೋಧಿಯಲ್ಲಿ ಮುಖ್ಯವಾದುದು, ಅನಾದಿಯಾಗಿ, **ಸಂತನ್ಯಮಾನ** - ಅನುವರ್ತಿಸಿರುವ, **ಆಜ್ಞಾತಿಲಂಘನಂ** - ಆಜ್ಞೆಗಳನ್ನು ಅತಿಕ್ರಮಿಸುವುದರ, **ಅಡಿಯಾಕ** - ಮೂಲವಾಗಿ, **ಪಿರನ್ದ ಭಗವನ್ನಿಗ್ರಹಂ** - ಹುಟ್ಟಿದ ಭಗವನ್ನಿಗ್ರಹವು. ಪ್ರಾಪ್ತಿಗೆ ಮುಖ್ಯವಿರೋಧಿಯು ಭಗವನ್ನಿಗ್ರಹವು. ಇದು ಹೇಗೆ ಉಂಟಾಗುತ್ತದೆಂದರೆ:—ಸರ್ವೇಶ್ವರನು "ಶ್ರುತಿಸ್ಮೃತಿರ್ಮಮೈವಾಜ್ಞಾ" ಶ್ರುತಿಸ್ಮೃತಿಗಳಲ್ಲಿರುವ ವಿಧಿ ನಿಷೇಧವಾಕ್ಯಗಳು ನನ್ನ ಆಜ್ಞೆಯೆಂದು ಹೇಳಿಕೊಂಡಿರುತ್ತಾನೆ. ಅಂತಹ "ಆಜ್ಞಾಚ್ಛೇದೀ ಮಮದ್ರೋಹಿ" ಅಂತಹ ಆಜ್ಞೆಗಳನ್ನು ಯಾವನು ಉಲ್ಲಂಘಿಸುತ್ತಾನೋ ಆತನು ತನಗೆ ದ್ರೋಹಿ ಎಂದೂ ಹೇಳಿರುತ್ತಾನೆ. ಆದುದರಿಂದ ಶಾಸ್ತ್ರವಿಧಿ ನಿಷೇಧ ವಾಕ್ಯಗಳಿಗನುಸಾರವಾಗಿ ನಡೆಯದೆ, ಅಕೃತ್ಯಕರಣ, ಮಾಡಬೇಡವೆಂದು ನಿಷೇಧಿಸಿದುದನ್ನು ಮಾಡುವದು, ಕೃತ್ಯಾಕರಣ, ಮಾಡಬೇಕಾದುದನ್ನು ಮಾಡದಿರುವದು, ಹೀಗೆ ವಿಧಿ ನಿಷೇಧಿ ವಾಕ್ಯಗಳನ್ನುಲ್ಲಂಘಿಸಿದ ದುಷ್ಕರ್ಮವೇ, ಭಗವನ್ನಿಗ್ರಹಕ್ಕೆ ಮುಖ್ಯ ಕಾರಣವು. ಆ ಭಗವನ್ನಿಗ್ರಹವೇ ತುಂಬಾ ಪ್ರಬಲತರ ಪ್ರಾಪ್ತಿ ವಿರೋಧಿಯು. ಇಲ್ಲಿ ಭಗವನ್ನಿಗ್ರಹವು ಜೀವಾತ್ಮನಿಗೆ ಪ್ರಾಪ್ತವಾಗಿರುವದು **ಅನಾದಿ** ಎಂದು ಹೇಳಿರುವದರಭಿಪ್ರಾಯವೇನಂದರೆ:—ದುಷ್ಕರ್ಮಗಳನ್ನೆಸಗುವದರಿಂದ ಭಗವನ್ನಿಗ್ರಹವೂ, ಭಗವನ್ನಿಗ್ರಹದಿಂದ ದುಷ್ಕರ್ಮಗಳನ್ನು ಪುನಃ ಎಸಗುವದೂ, ಹೀಗೆ ಬೀಜಾಙ್ಕುರನ್ಯಾಯವಿರುವದರಿಂದ ಅನಾದಿ ಎಂದು ಹೇಳಲ್ಪಟ್ಟಿತು.

ಈ ಭಗವನ್ನಿಗ್ರಹವು ಹೇಗೆ ಹೇಗೆ ಪರಿಣಮಿಸಬಹುದೆಂಬುವದನ್ನು ಒಂದು ದೊಡ್ಡ ವಾಕ್ಯಮೂಲಕವಾಗಿ, **"ಇದು ಕ್ಷೇತ್ರಜ್ಞ**

ಭಗವನ್ನಿಗ್ರಹ ಜನಿತಾವಸ್ಥಾಃ

(1) ಇದು ಕ್ಷೇತ್ರಜ್ಞರ್ಕ್ಕು ಜ್ಞಾನ ಸಙ್ಕೋಚ ಕರಮಾನ ತ್ರಿಗುಣಾತ್ಮಕ ಪ್ರಕೃತಿ ಸಂಸರ್ಗ ವಿಶೇಷತ್ತೈ ಯುಂಡಾಕ್ಕಿಯುಮ್, ಪ್ರಕೃತಿಪರಿಣಾಮ ವಿಶೇಷಙ್ಗಳಾನ ಶರೀರೇಂದ್ರಿಯಾದಿಗಳೋಡೇ ತುವಕ್ಕಿ,

---

ರ್ಕ್ಕು" ಎಂದು ಪ್ರಾರಂಭಿಸಿ **"ಭಗವತ್ಪ್ರಾಪ್ತಿಕ್ಕಿ ವಿಲಕ್ಕಾಯಿರುಕ್ಕುಂ"** ಎಂದು ಮುಗಿಸಿ, ಮುಂದೆ ಹೇಳುತ್ತಾರೆ. ಸುಲಭವಾಗಿ ತಿಳಿಯುವದಕ್ಕಾಗಿ ಚಿಕ್ಕ ಚಿಕ್ಕ ವಾಕ್ಯಗಳಾಗಿ ವಿಭಾಗಿಸಲ್ಪಟ್ಟು ಅರ್ಥವು ಬರೆಯಲ್ಪಟ್ಟಿರುತ್ತದೆ.

ಭಗವನ್ನಿಗ್ರಹದಿಂದುಂಟಾಗುವ ದುರವಸ್ಥೆಗಳು.

೧. **ಇದು** - ಈ ಭಗವನ್ನಿಹವು, **ಕ್ಷೇತ್ರಜ್ಞರ್ಕ್ಕು** - ಬದ್ಧ ಚೇತನರಿಗೆ **ಜ್ಞಾನಸಙ್ಕೋಚಕರಮಾನ** - ಜ್ಞಾನಸಂಕೋಚವನ್ನುಂಟುಮಾಡುವ, **ತ್ರಿಗುಣಾತ್ಮಕ ಪ್ರಕೃತಿ ಸಂಸರ್ಗವಿಶೇಷತ್ತೈಯುಂಡಾಕ್ಕಿಯುಮ್** - ಸತ್ವರಜಸ್ತಮೋ ಗುಣಗಳೆಂಬ ಮೂರು ಗುಣಗಳಿಂದ ಯುಕ್ತವಾದ ಪ್ರಕೃತಿ ಸಂಬಂಧವನ್ನುಂಟುಮಾಡಿಯೂ, ಹೀಗೆ ಅನೇಕ ದುರವಸ್ಥೆಗಳುಂಟುಮಾಡುತ್ತದೆಂದು ಅಪ್ಪಣೆ ಕೊಡಿಸಿರುತ್ತಾರೆ. (ಆ ಪ್ರಕೃತಿಯ ಪರಿಣಾಮಗಳುಳ್ಳ ಶರೀರ ಮತ್ತು ಸಂಬಂಧಗಳನ್ನು ಪುನಃ ಉಂಟುಮಾಡಬಹುದು. ಸೃಷ್ಟಿಗೆ ಮೊದಲು ಈ ಮೂರು ಗುಣಗಳೂ, ಪ್ರಕೃತಿಯಲ್ಲಿ ಸಮಭಾವದಲ್ಲಿರುತ್ತವೆ. ಆ ಸಂದರ್ಭದಲ್ಲಿ ಸೃಷ್ಟಿಕ್ರಮಕ್ಕೆ ಸಾಧ್ಯವಿಲ್ಲವು. ತ್ರಿವೃತ್ಕರಣ ಅಥವಾ ಪಞ್ಚೀಕರಣದಿಂದ ಈ ಗುಣಗಳು ಸಮವಾಗಿಲ್ಲದೆ ವಿಷಮಗಳಾಗುತ್ತವೆ. ಆಗ ಸೃಷ್ಟಿಕ್ರಮವು ಪ್ರಾಪ್ತವಾಗುತ್ತದೆ. ಜೀವಾತ್ಮರುಗಳು ಶರೀರೇಂದ್ರಿಯಗಳ ಯೋಗವಿಲ್ಲದೆ ಪ್ರಕೃತಿಯೊಂದಿಗೆ ಏಕೀಭವಿಸಿ ಸೃಷ್ಟಿಗೆ ಮೊದಲು ಇರುತ್ತಾರೆ. ಸೃಷ್ಟಿಕಾಲದಲ್ಲಿ ಅವರವರುಗಳಿಗೆ ಪೂರ್ವಾರ್ಜಿತ ಕರ್ಮಾನುಸಾರ ದೇವ ತಿರ್ಯಙ್ಮಾನುಷ ಸ್ಥಾವರ ಶರೀರಗಳೂ, ಇಂದ್ರಿಯಗಳೂ ಪ್ರಾಪ್ತವಾಗುತ್ತವೆಂಬ ಭಾವವು.)

1. “ತಿಣ್ಣಮಳುನ್ದಕ್ಕಟ್ಟಿಪ್ಪಲಶೆಯ್ ವಿನೈ ವನ್‌ಕಯಿಟ್ರಾಲ್ ಪುಣ್ಣೈ ಮರಿಯ ವರಿನ್ದನ್ನೈ ಪೋರವೈತ್ತಾಯ್ ಪುರಮೇ” ಎನ್ನುಂ 2. “ಅನ್ನಾಳ್ ನೀತನ್ದ ವಾಕ್ಕೈಯಿನ್ ವಳಿಯುಳಲ್ ವೇನ್” ಎನ್ನುಂ,

---

೨. **ಪ್ರಕೃತಿ ಪರಿಣಾಮ ವಿಶೇಷಙ್ಗಳಾನ** - ಪ್ರಕೃತಿಯ ಪರಿಣಾಮಗಳಿಂದ ಉಂಟಾದ ವಿಶೇಷ ವಸ್ತುಗಳಾದ, ಶರೀರೇಂದ್ರಿಯಗಳೊಳಗೆ, **ತುವಕ್ಕಿ** - ಸಂಬಂಧವನ್ನುಂಟುಮಾಡಿ.

1. **ಪಲ** - ಬಹುವಾಗಿ, **ಶೆಯ್** - ಮಾಡಲ್ಪಟ್ಟ, **ವಿನೈ** - ಪಾಪಗಳೆಂಬುವ **ವನ್‌ಕಯಿತ್ತಾಲ್** - ಬಲವಾದ ಹಗ್ಗದಿಂದ, **ತಿಣ್ಣ** - ಬಿಡಿಸಿಕೊಳ್ಳಲು ಆಗದ ಹಾಗೆ ದೃಢತರವಾಗಿ, **ಅಳುನ್ದ ಕಟ್ಟಿ** - ದೇಹಾತ್ಮಗಳನ್ನು ವಿವೇಕಿಸುವುದಕ್ಕಾಗದ ಹಾಗೆ ಕಟ್ಟಿ, **ಪುಣ್ಣೈ** - ಹುಣ್ಣನ್ನು ಎಂದರೆ ಮಾಂಸ ರಕ್ತ ಮೊದಲಾದುವುಗಳಿಂದ ಯುಕ್ತವಾದುದೆಂಬುದನ್ನು, **ಮರಿಯ** - ಕಣ್ಣಿಗೆ ಕಾಣದಹಾಗೆ, **ವರಿನ್ದು** - ಚರ್ಮದಿಂದ ಮುಚ್ಚುವಹಾಗೆ ಮಾಡಿ, **ಎನ್ನೈ** - ಅಶಕ್ತನಾದ ನನ್ನನ್ನು, **ಪುರಮೆ ಪೋರವಿತ್ತಾಯ್** - ನಿನ್ನನ್ನು ಬಿಟ್ಟು ಹೊರಗೆ ಹೋಗುವ ಹಾಗೆ ಮಾಡಿರುತ್ತೀಯೋ ಎಂದರೆ ಪರಮ ಪದದಲ್ಲಿ ನಿನ್ನೊಂದಿಗೆ ಇರುವ ಸುಖವಿಲ್ಲದೆ ಹಾಗೆ ಮಾಡಿ, ವಿಷಯಾಂತರಗಳಲ್ಲಿ ಮನಸ್ಸು ಪ್ರವೇಶಿಸುವ ಹಾಗೆ ಮಾಡಿರುತ್ತೀಯೋ; ಅನೇಕ ಪಾಪಕರ್ಮಗಳೆಂಬುವ ಪಾಶದಿಂದ ಬನ್ಧಿಸಿ, ಅದರಿಂದ ಭ್ರಾಂತಿಯುಂಟಾಗಿ ವಿಷಯಾಂತರಗಳಲ್ಲಿ ಮನಸ್ಸು ಪ್ರವೇಶಿಸುವ ಹಾಗೆ ಮಾಡಿ, ನಿನ್ನ ವಿಶ್ಲೇಷತೆಯುಂಟಾಗುವ ಹಾಗೆ ನನ್ನನ್ನು ಹೊರಗೆ ಹಾಕಿರುತ್ತೀಯೋ ಎಂದೂ;

2. **ಅನ್ನಾಳ್** - ಆ ಸೃಷ್ಟಿಕಾಲದಲ್ಲಿ, **ನೀತನ್ದ** - (3) “**ಕರಣ ಕಳೇಬರಯೋಗಂ ವಿತರಸಿ**” ಎಂದೂ, (4) “**ಕರಣ ಕಳೇಬರೈರ್ಘಟಯಿತುಂ ದಯಮಾನಮನಾಃ**” ಎಂದೂ ಹೇಳಿರುವ ಹಾಗೆ ದಯಾಪರನಾಗಿ ನೀನು ಕೊಟ್ಟ, **ಆಕ್ಕೈ** - ಇಂದ್ರಿಯ ಶರೀರಗಳ

---

(1) ತಿರುವಾಯ್ಮೊಳಿ. (2) ತಿರುವಾಯ್ಮೊಳಿ. 3. 2. 1. (3) ದಯಾಶತಕ
(4) ರಂ. ಸ್ತ. 41.

ವಳಿ - ಮಾರ್ಗದಲ್ಲಿ, **ಉಳನ್ವೇ** - ಹೋಗಿ ಬಿದ್ದಿರುವೆನು. ಸ್ವಾಮಿಯು ಪರಮ ಕೃಪಾಳುವಾದುದರಿಂದ ಚೇತನರು ತನ್ನನ್ನು ಶ್ರವಣ ಕೀರ್ತನ ಧ್ಯಾನಾರ್ಚನಾದಿಗಳಿಂದ ತನ್ನಲ್ಲೇ ಮನಸ್ಸನ್ನು ನಿಲ್ಲಿಸಿ ತನ್ನನ್ನು ಹೊಂದುವ ಮಾರ್ಗವನ್ನವಲಂಬಿಸಲಿ ಎಂದು ಕರಣ ಕಳೇಬರಗಳನ್ನು ದಯಪಾಲಿಸಿದರೆ, ಹಾಗೆ ಉಪಯೋಗಿಸದೆ, ಕೃತಘ್ನನಾಗಿ, ಅವುಗಳನ್ನು ದುರುಪಯೋಗಪಡಿಸಿ, ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳದೆ ಆ ಇಂದ್ರಿಯಗಳಿಗೆ ತಾನು ವಶನಾಗಿ ದೇಹಾತ್ಮಭ್ರಾಂತಿ ಸ್ವತನ್ತ್ರಾತ್ಮ ಭ್ರಾಂತಿಗಳಿಂದ ಮಮತಾಯುಕ್ತನಾಗಿ, ಸಂಸಾರದಲ್ಲೇ ಪುನಃ ಪುನಃ ಪ್ರವೃತ್ತಿಯುಳ್ಳವನಾಗಿ ದುಃಖಿಸುತ್ತಲಿರುವೆನು ಎಂದು ಹೇಳಿರುವ ಹಾಗೆ ಈ ಭಗವನ್ನಿಗ್ರಹವು ಈ ಚೇತನನನ್ನು ದೇಹ ಮತ್ತು ಇಂದ್ರಿಯಗಳಿಗೆ ವಶನಾಗಿ ನರಳುವ ಹಾಗೆ ಮಾಡುತ್ತದೆ.

ಮುನ್ನೀರ್ ಞಾಲಮ್ಪಡೈತ್ತವೆಮ್ಮುಗಿಲ್ವಣ್ಣನೇ ।
ಯನ್ನಾಣೀ ತನ್ದ ವಾಕ್ಕೈಯ್ಯಿರ್ ವಳಿಯುಳಲ್ವೇ ।
ವೆನ್ನಾಣೋಯ್ ವೀಯ ವಿನೈ ಕಳ್ಳೈ ವೇರರಪ್ಪಾಯ್‌ನು
ಎನ್ನಾಳ್ ಯಾನುನ್ನೈ ಯಿನಿವನ್ದು ಕೂಡುವನೇ॥

ಎಂಬುವದು ಪೂರಾ ಪಾಶುರವು, **ಮುನ್ನೀರ್** - ತೇಜೋಬನ್ನಗಳೆಂಬ ಮೂರು ತತ್ವಗಳುಳ್ಳ **ಞಾಲಂ** - ಜಗತ್ತನ್ನು, **ಅಡೈತ್ತ** - ಸೃಷ್ಟಿಸಿದ, **ಎಮ್ಮುಗಿಲ್ವಣ್ಣನೇ** - ನನಗೆ ಮಹೋಪಕಾರಕನಾದ ನೀಲಮೇಘಶ್ಯಾಮನೇ ಎಂಬುವದು ಮೊದಲು ಪಾದದರ್ಥವು. ಎರಡನೇ ಪಾದದರ್ಥವು ಮೇಲೆ ಸೂಚಿಸಿರುತ್ತದೆ. **ವೆನ್ನಾಳ್** - ಕ್ರೂರವಾದ ಕಾಲದಲ್ಲಿ, ಹೀಗೆ ಇಂದ್ರಿಯಗಳಿಗೆ ವಶನಾದನೇ ಎಂದು ಪರಿತಾಪಹುಟ್ಟಿದ ನಂತರ, **ನೋಯ್** - ಅಹಙ್ಕಾರ ಮಮಕಾರರೂಪ ವ್ಯಾಧಿಗಳು, **ವೀಯ** - ನಶಿಸುವ ಹಾಗೆ, **ವಿನೈಕಳ್** - ಅವುಗಳಿಗೆ ಕಾರಣಭೂತವಾದ ಕರ್ಮಗಳು ಎಂದರೆ ಪಾಪಗಳು **ವೇರ್ ಅರುಪ್ಪಾಯನ್ದು** - ಬೇರುಸಹಿತ ಛೇದಿಸಿ ಹೋಗುವ ಹಾಗೆ, **ಯಾ್ನ್** - ಕೃತಘ್ನನಾದ ನಾನು, **ಉನ್ನೈ**- ಇಂತಹ ಪರಮೋಪಕಾರನಾದ ನಿನ್ನನ್ನು, **ಯಿನಿವನ್ದು ಕೂಡುವನೇ** - ಯಾವಾಗ ಬಂದು ಆಶ್ರಯಿಸಿ ಸೇರು

ಶೊಲ್ಲುಗಿರ ಪಡಿಯೇ ದೇಹೇಂದ್ರಿಯಾದಿ ಪರತನ್ತ್ರನಾಕ್ಕಿಯುಮ್; ಅನ್ವವಸ್ಥೈಯಿಲುಮ್ ಶಾಸ್ತ್ರವಶ್ಯತೆ ಕೂಡಾದ ತಿರ್ಯಗಾದಿ ದಶೈಗಳಿಲೇ ನಿರುತ್ತಿಯುಮ್; (4) ಶಾಸ್ತ್ರಯೋಗ್ಯಙ್ಗಳಾನ ಮನುಷ್ಯಾದಿ ಜನ್ಮಙ್ಗಳಿಲ್ ಬಾಹ್ಯಕುದೃಷ್ಟಿಮತಙ್ಗಳಾಲೇ ಕಲಕ್ಕಿಯುಮ್; (5) ಅವಱ್ಱಿಲ್ ಇಳಿ

ವೆನೋ ತಿಳಿಯದು. "**ದುರ್ಲಭೋ ಮಾನುಷೋ ದೇಹಃ**" ಎಂದೂ, "**ಭೂತಾನಾಂ ಪ್ರಾಣಿನಃ ಶ್ರೇಷ್ಠಾಃ ಪ್ರಾಣಿನಾಂ ಬುದ್ಧಿಜೀವಿನಃ । ಬುದ್ಧಿಮತ್ಸು ನರಾಃ ಶ್ರೇಷ್ಠಾಃ**" ಎಂದೂ ಹೇಳಿರುವ ಮೇರಿಗೆ ಈ ಮನುಷ್ಯ ದೇಹದಲ್ಲಿ ಸ್ವಾಮಿಯು ಪರಮ ಕೃಪೆಯಾ ದಶೇಂದ್ರಿಯಗಳನ್ನೂ ಇವುಗಳಿಗೆಲ್ಲಾ ಅಧಿಪತಿಯಾದ ಮನಸ್ಸನ್ನೂ ಸುಜ್ಞಾನವನ್ನೂ ಸಹ ಸ್ವಾಮಿಯು ಅನುಗ್ರಹಿಸಿರುತ್ತಾನೆ. ದರ್ಭೆ ಸಮಿತ್ತುಗಳನ್ನು ತರಹೇಳಿ ಗುರುವು ಶಿಷ್ಯನಿಗೆ ಕೊಟ್ಟ ಕತ್ತಿಯನ್ನು ಶಿಷ್ಯನು ಹಾಗೆ ಉಪಯೋಗಿಸದೆ, ತನ್ನ ಗದ್ದೆಯಲ್ಲಿ ಮೇಯುತ್ತಿದ್ದ ಇತರರ ಗೋವಿನ ಬಾಲವನ್ನು ಛೇದಿಸಲು ಉಪಯೋಗಿಸಿದ ಹಾಗೆ, ಮನುಷ್ಯನು ವಿಷಯಾಸಕ್ತನಾಗಿ, ಇಂದ್ರಿಯಗಳನ್ನು ದುರುಪಯೋಗಪಡಿಸಿ, ನಿರತಿಶಯ ಸುಖಾನುಭವಕ್ಕೆ ಅನುಕೂಲ ಮಾಡಿಕೊಳ್ಳದೆ ನಷ್ಟ ಹೊಂದುವನು, ಎಂದು ಶೊಲ್ಲುಗಿರಪಡಿಯೇ - ಈ ಮೇಲಿನ ಪಾಶುರಗಳಲ್ಲಿ ಹೇಳಿರುವಹಾಗೆ, **ದೇಹೇನ್ದ್ರಿಯಾದಿ ಪರತನ್ತ್ರನಾಕ್ಕಿಯುಮ್** - ದೇಹೇಂದ್ರಿಯ ಮೊದಲಾದವುಗಳಿಗೆ ವಶನಾಗುವ ಹಾಗೆ ಭಗವನ್ನಿಗ್ರಹವು ಮಾಡುತ್ತದೆಂಬ ಭಾವವು.

ಈ ನಮ್ಮ ಆತ್ಮನು ನಮ್ಮ ಶರೀರವೆಂಬ ರಥದಲ್ಲಿ ಕೂತುಕೊಂಡು ಸಂಚರಿಸುತ್ತಾನೆ. ಇಂದ್ರಿಯಗಳೇ ಆ ರಥಕ್ಕೆ ಕಟ್ಟಿರುವ ಕುದುರೆಗಳು. ಮನಸ್ಸೇ ಲಗಾಮು; ಆ ಲಗಾಮನ್ನು ಬುದ್ಧಿ ಎಂಬ ಸಾರಥಿಯು ಹಿಡಿದಿರುವನು. ಆ ಕುದುರೆಗಳು ಸಂಚರಿಸುವ ಮಾರ್ಗಗಳೇ ವಿಷಯಗಳು. ಭಗವನ್ನಿಗ್ರಹವು ಸಾರಥಿಗೆ ಪ್ರಮಾದ ಉಂಟಾಗುವ ಹಾಗೆ ಮಾಡಿ, ಲಗಾಮು ಸಡಲಿ, ಕುದುರೆಗಳು ಎಳೆದುಕೊಂಡು ಹಳ್ಳದಲ್ಲಿ ತಳ್ಳಿ ರಥದಲ್ಲಿ ಕೂತಿರುವ ಆತ್ಮನನ್ನು ಹಾಳುಮಾಡುತ್ತವೆ ಎಂಬ ಅಭಿಪ್ರಾಯವು.

ಯಾದವರ್‌ಗಳೈಯುಮುಳ್‌ಪಡ "ಭಗವತ್ಸ್ವರೂಪ ತಿರೋಧಾನಕರೀಂ ವಿಪರೀತ ಜ್ಞಾನ ಜನನೀಂ ಸ್ವವಿಷಯಾಯಾಶ್ಚ ಭೋಗ ಬುದ್ಧೇರ್ಜನನೀಂ," ಎನ್ಗಿರಪಡಿಯೇ ಇಮ್ಮೂಲಪ್ರಕೃತಿ ಮುದಲಾನ ಮೋಹನ ಪಿಂಛಿಕೈ ತನ್ನಾಲೇ ತತ್ತ್ವಜ್ಞಾನ ವಿಪರೀತಜ್ಞಾನ ವಿಷಯ ಪ್ರಾವಣ್ಯಙ್ಗಳೈ ಪಣ್ಣಿಯುಮ್;

---

3. ಅಥವಾ **ಅವ್ಯವಸ್ಥೈಯಿಲುಮ್** - ಆ ಇಂದ್ರಿಯಗ್ಗಳಿಗೆ ಒಳಪಟ್ಟ ಅವಸ್ಥೆಗಳಲ್ಲೂ, **ಶಾಸ್ತ್ರಾವಶ್ಯತೆ ಕೂಡಾದ** - ಶಾಸ್ತ್ರಕ್ಕೆ ಅನುಗುಣವಾಗಿ ನಡೆಯಲು ಜ್ಞಾನಾಭಾವದಿಂದ ಸಾಧ್ಯವಿಲ್ಲದ, **ತಿರ್ಯಗಾದಿ ದಶೈಗಳಿಲೆ ನಿರತಿಯುಮ್** ಪಶುಪಕ್ಷಿ ಮೃಗ ಮೊದಲಾದ ತಿರ್ಯಗ್ಜನ್ಮಗಳನ್ನು ಹೊಂದುವ ಹಾಗೆ, ಈ ಭಗವನ್ನಿಗ್ರಹವು ಮಾಡಬಹುದು. ಇಲ್ಲಿ **ತಿರ್ಯಗಾದಿ** ಎಂದು **ಆದಿ** ಪದವನ್ನು ಉಪಯೋಗಿಸಿರುವುದರಿಂದ ಸ್ಥಾವಿರ ದಶೆಯೂ ಸೂಚಿಸಲ್ಪಟ್ಟಿತು.

4. ಅಥವಾ, **ಶಾಸ್ತ್ರಯೋಗ್ಯಙ್ಗಳಾನ** - ಒಂದುವೇಳೆ ಶಾಸ್ತ್ರಗಳನ್ನು ಗ್ರಹಿಸುವ ಯೋಗ್ಯತೇ ಇರುವ, **ಮನುಷ್ಯಾದಿ ಜನ್ಮಙ್ಗಳಿಲ್** - ಮನುಷ್ಯನೇ ಮೊದಲಾದ ಜನ್ಮಗಳು ಪ್ರಾಪ್ತವಾದರೂ, ಇಲ್ಲಿ ಆದಿಪದದಿಂದ ದೇವಾಸುರ ಜನ್ಮಗಳೂ ಹೇಳಲ್ಪಟ್ಟವು, **ಬಾಹ್ಯ ಕುದೃಷ್ಟಿಮತಙ್ಗಳಾಲೇ** - ಚಾರ್ವಾಕ ಜೈನ ಬೌದ್ಧಬಾಹ್ಯ ಮತಗಳಿಂದಾಗಲಿ, ವೇದಗಳಿಗೆ ಅಪಾರ್ಥಗಳನ್ನು ಹೇಳುವ ಶಾಂಕರ ಯಾದವ ಪ್ರಕಾಶಾದಿ ಮತಗಳಿಂದಲಾಗಲಿ, **ಕಲಕ್ಕಿಯುಂ** - ಈ ಭಗವನ್ನಿಗ್ರಹವು ಈ ಮನುಷ್ಯನ ಮನಸ್ಸನ್ನು ವಿಕಲ್ಪಹೊಂದುವ ಹಾಗೆ ಮಾಡುತ್ತದೆ.

5. ಅಥವಾ, **ಅವ** ಗ್ರಿಗ್ರಿ **ಲಿಳಿಯಾದವರ್‌ಗಳೈಯುಮುಳ್ಪಡ**- ಆ ಬಾಹ್ಯಕುದೃಷ್ಟಿಗಳ ಮತಸಂಬನ್ಧವಿಲ್ಲದವರನ್ನೂ ಕೂಡ, **ಭಗವತ್ಸ್ವರೂಪ ತಿರೋಧಾನಕರೀಂ** - ಸರ್ವೇಶ್ವರನ ಸ್ವರೂಪವನ್ನು ಆಚ್ಛಾದಿಸುವ, **ವಿಪರೀತಜ್ಞಾನ ಜನನೀಂ** - ಒಂದು ಧರ್ಮಿಯನ್ನು ಬೇರೊಂದು ಧರ್ಮಿಯಾಗಿ ಭಾವಿಸುವದು ವಿಪರೀತಜ್ಞಾನವು, ಅಂತಹ

ಜ್ಞಾನವನ್ನುಂಟುಮಾಡುವ, ಎಂದರೆ ದೇಹವೇ ಆತ್ಮಾ ಎಂಬ ಭ್ರಮೆಯನ್ನುಂಟುಮಾಡುವ, **ಸ್ವವಿಷಯಾಯಾಶ್ಚ** - ತನ್ನ ವಿಷಯವಾದ ಎಂದರೆ ಪ್ರಕೃತಿಯ ವಿಷಯದಲ್ಲಿ, **ಭೋಗಬುದ್ಧೇರ್ಜನನೀಂ** - ಭೋಗಬುದ್ಧಿಗೆ ಉತ್ಪಾದಕರವಾದ ಎಂದರೆ ಭೋಗಬುದ್ಧಿಯನ್ನುಂಟುಮಾಡುವ, ಇವೆಲ್ಲಾ ಮೂಲ ಪ್ರಕೃತಿಗೆ ವಿಶೇಷಣವು, ಮುಂದೆ **"ದೈವೀಂ ಗುಣಮಯೀಂ ಮಾಯಾಂ ಮಾಂತಾರಯ"** ಎಂದು ಮುಂದೆ ಇರುತ್ತದೆ, ಇಂತಹ ಅನಾದಿಯಾಗಿ ಬಂದ ಪ್ರಕೃತಿಯಿಂದ ಬಿಡಿಸು ಎಂದು ಶ್ರೀಯತಿವರ್ಯರು ಶರಣಾಗತಿ ಗದ್ಯದಲ್ಲಿ ಪ್ರಾರ್ಥಿಸುವ ಪ್ರಕರಣವು. **ಎನ್ನಿಗರಪಡಿಯೇ** - ಎಂದು ಹೇಳುವಹಾಗೆ, **ಇಮ್ಮೂಲಪ್ರಕೃತಿ ಮುದಲಾನ** - ಈ ಮೂಲ ಪ್ರಕೃತಿಯೇ ಮೊದಲಾದ; **ಮುದಲಾನ** ಎಂಬುವದರಿಂದ ಶರೀರಕ್ಕೆ ಕಾರಣಗಳಾದ ಮಹದಹಂಕಾರ ಪಂಚಭೂತಾದಿಗಳು ಹೇಳಲ್ಪಟ್ಟವು; **ಮೋಹನಪಿಂಛಿಕೈ** - ಇಂದ್ರಜಾಲ ಮಹೇಂದ್ರಜಾಲ ವಿದ್ಯಾನಿಪುಣರು ಉಪಯೋಗಿಸುವ, ನೋಡುವವರ ಮನಸ್ಸಿಗೆ ಭ್ರಮವನ್ನುಂಟುಮಾಡುವ ನವಿಲುಗರಿಯ ಕಟ್ಟಿನ ಹಾಗೆ ಆಚರಿಸಿ, **ತನ್ನಾಲೆ** - ಅದರ ಮೂಲಕ ಎಂದರೆ ಆಭ್ರಮೆಯುಂಟುಮಾಡುವ ಪ್ರಕೃತಿ ಮೂಲಕವಾಗಿಯೇ, **ತತ್ವಾಜ್ಞಾನ** - ತತ್ವವೇ ತಿಳಿಯದಿರುವ ಅಜ್ಞಾನವೇನು, ಇಲ್ಲಿ ತತ್ವ + ಅಜ್ಞಾನವೆಂದು ಪದಮಾಡತಕ್ಕದ್ದು, **ವಿಪರೀತಜ್ಞಾನ** - ದೇಹವೇ ಆತ್ಮ ಎಂಬುವ ವ್ಯತ್ಯಸ್ತವಾದ ಜ್ಞಾನವೇನು (ಇದರಿಂದ ಸ್ವತನ್ತ್ರಾತ್ಮಭ್ರಾಂತಿಯೂ ಹೇಳಿದಂತಾಯಿತು) ಮತ್ತು **ವಿಷಯಪ್ರಾವಣ್ಯಙ್ಗಳೈ** - ವಿಷಯಸುಖಗಳು ಇಲ್ಲದಿದ್ದರೆ ಪ್ರಾಣವೇ ಉಳಿಯದು ಎಂಬುವಷ್ಟು ಅವುಗಳಲ್ಲಿ ಭೋಗ್ಯ ಬುದ್ಧಿಯ ದುರವಸ್ಥೆಯೇನು, ಇವುಗಳನ್ನೆಲ್ಲಾ ಭಗವನ್ನಿಗ್ರಹವು ಉಂಟುಮಾಡಬಹುದು. ಅಜ್ಞಾನ, ಅನ್ಯಥಾಜ್ಞಾನ, ವಿಪರೀತ ಜ್ಞಾನಗಳು ಚನ್ನಾಗಿ ೧೮೬ನೇ ಪುಟಗಳಲ್ಲಿ ಉಪಪಾದಿತವಾಗಿವೆ. ಯಾವಾಗ ಅಜ್ಞಾನಾದಿಗಳು ಉಂಟಾದವೋ ಒಡನೆ ಭ್ರಮೆಯು **"ಅಜ್ಞಾನೇನಾವೃತಂಜ್ಞಾನಂತೇನ ಮುಹ್ಯನ್ತಿ ಜನ್ತವಃ** (ಗೀ. 5. 15) ಎಂದು ಹೇಳಿರುವ ಹಾಗೆ ಮೋಹವೆಂದರೆ ಭ್ರಮೆಯೂ, ಈ ಕಾರಣದಿಂದ ವಿಷಯ ಪ್ರಾವಣ್ಯತೆಯೂ ಉಂಟಾಗುತ್ತದೆಂಬ **ಭಾವವು**.

6. ಇನ್ಯೆಯಡಿಯಾಕ (1) "ಆವಿತಿಕೈಕ್ಕವೈವರ್ ಕುನ್ಮೈಕ್ಕು ಙ್ಜಿತ್ತಿನ್ಬವ್ । ಪಾವಿಯೇ ನೈಪಲನೀಕಾಟ್ಟ ಪ್ಪಡುಪ್ಪಾ ಯೋ ।" ಎನ್ಗಿರಪಡಿಯೇ ಸುಖಲವಾರ್ಥಮಾನ ವಕೃತ್ಯಕರ ಣಾದಿರೂಪಮಾನ ವಾಜ್ಞಾತಿ ಲಂಘನತ್ತೈ ಪಣ್ಣುವಿತ್ತುವ್

---

6. **ಇನ್ಯೆಯಡಿಯಾಕೆ** - ಈ ತತ್ವಾಜ್ಞಾನ, ವಿಪರೀತಜ್ಞಾನ, ವಿಷಯಪ್ರಾವಣ್ಯಗಳ ಮೂಲಕವಾಗಿ, **"ಆವಿ"** ಪ್ರಾಣವು, ಆದುದ ರಿಂದ ಅದಕ್ಕೆ ಸಹಚರಿಯಾದ ಮನಸ್ಸು, ತಿಕ್ಕೈಕ್ಕ ಚಾಂಚಲ್ಯವನ್ನು ಹೊಂದೋಣ ಹೇಗೋ ಹಾಗೆ, **ಐವರ್** - ಮೊದಲೇ ಚಪಲವಾದ ಮನಸ್ಸನ್ನು ಬಾಧಿಸಲು, ಪಂಚೇಂದ್ರಿಯಗಳೆಂಬ ಐದು ಚೋರರು **ಕುನ್ಮೈಕ್ಕುಂ**-ಬಾಧಿಸುವ ಹಾಗೆ, **ಶಿರು ಅನ್ಬಂ** - ಅಲ್ಪವಾದ ಎಂದರೆ ತುಚ್ಛವಾದ ವಿಷಯಸುಖವನ್ನು, **ಪಲ** - ಬಹು ವಿಧವಾಗಿ **ನೀಕಾಟ್ಟ**- ನೀತೋರಿಸಿಕೊಟ್ಟು, **ಪಡುಪ್ಪಾಯೋ** - ಅಶಕ್ತನಾದ ನನ್ನನ್ನು ಹಿಂಸಿಸುತ್ತೀಯೇ. ಮನಸ್ಸು, "**ಚಞ್ಚಲಂಹಿ ಮನಃ ಕೃಷ್ಣ**"- ಎಂದೂ, (ಗೀ.6.34) "**ಮನಶ್ಚಂ ಚಲಮುಸ್ಥಿರಂ**" (ಗೀ,6.26) ಎಂದೂ, "**ಮನೊದುರ್ನಿಗ್ರಹಂಚಲಂ**" (ಗೀ.6.35) ಎಂನೂ ಹೇಳಿರುವ ಹಾಗೆ ಅತಿಚಞ್ಚಲವು. ಹಾಗೆ ಚಞ್ಚಲವಾದುದರಿಂದಲೇ "**ಇನ್ದ್ರಿಯಾಣಿ ಪ್ರಮಾಥೀನಿ ಹರನ್ತಿ ಪ್ರಸಭಂಮನಃ**" (ಗೀ 2 60) ಇಂದ್ರಿಯಗಳು ಮನಸ್ಸನ್ನು ಅಪಹರಿಸಿ ವಿಷಯಗಳಲ್ಲಿ ಪ್ರವರ್ತಿಸುವ ಹಾಗೆ ಮಾಡಿ ಆತ್ಮನಿಗೆ ಬುದ್ಧಿನಾಶವನ್ನುಂಟುಮಾಡುತ್ತವೆ ಎಂಬ ಭಾವವು. **ಎನ್ಗಿ ರಪಡಿಯೇ** - ಎಂದು ಮೇಲಿನ ಪಾಶುರದಲ್ಲಿ ಉಪಪಾದಿತವಾಗಿರುವ ಹಾಗೆ, **ಸುಖಲವಾರ್ಥಮಾನ** - ಅತ್ಯಲ್ಪ ಸುಖವೇ ಪ್ರಯೋಜನವಾ ಗಿವುಳ್ಳ, **ಅಕೃತ್ಯಕರಣಾದಿ ರೂಪಮಾನ** - ಮಾಡಕೂಡದೆಂದು ನಿಷೇಧಿಸಿರುವದನ್ನು ಮಾಡುವದೇ ಮೊದಲಾದುವುಗಳಾದ, ಇಲ್ಲಿ **ಆದಿ** ಶಬ್ದದಿಂದ, **ಕೃತ್ಯಾಕರಣವು** ಎಂದರೆ ಮಾಡಬೇಕೆಂದು ಶಾಸ್ತ್ರದಲ್ಲಿ ವಿಧಿಸಿರುವುದನ್ನು ಮಾಡದಿರೋಣವು ಹೇಳಲ್ಪಟ್ಟಿತು. ಎರಡೂ, ಸರ್ವೇ ಶ್ವರನ ಆಜ್ಞೆ ಮೀರಿದುದಾಗಿ ಭಗವನ್ನಿಗ್ರಹಕ್ಕೆ ಈತನನ್ನು ಗುರಿ

---

(1) ತಿರುವಾಯ್ಮೊಳಿ 6, 9, 9.

(7) "ಪಾಪಂಪ್ರಜ್ಞಾಂ ನಾಶಯತಿಕ್ರಿಯಮಾಣಂ ಪುನಃಪುನಃ" ನಷ್ಟಪ್ರಜ್ಞಃ ಪಾಪಮೇವ ಪುನರಾರಭತೇ ನರಃ ।" ಎನ್ಗಿರಪಡಿಯೇ, ಮೇಲುಮ್ ಅಪರಾಧ ಪರಂಪರೈಗಳಿಲೇ ಮೂಟ್ಟಿ, ಯದಿನ್ ಫಲಮಾಕ (8) "ಕ್ಷಿಪಾಮ್ಯಜಸ್ರಂ" ಇತ್ಯಾದಿಗಳಿಲ್ ಪಡಿಯೇ ಗರ್ಭಜನ್ಮ ಜರಾಮರಣ ನರಕಾದಿ ಚಕ್ರ ಪರಿವೃತ್ತಿಯಿಲೇ ಪರಿಭ್ರಮಿಪ್ಪಿತ್ತುಮ್ ;

ಮಾಡಿದರೂ ಅಕೃತ್ಯಕರಣವು ಕೃತ್ಯಾಕರಣಕ್ಕಿಂತ ಗುರುತರಾಪರಾಧವೆಂಬ ಭಾವದಿಂದ ಇದೇ ಮುಖ್ಯವಾಗಿ ಹೇಳಲ್ಪಟ್ಟಿತು. ಇಂತಹ **ಆಜ್ಞಾತಿ ಲಂಘನತ್ತೈ ಪಣ್ಣಿಯುಮ್** - ವಿಧಿ ನಿಷೇಧರೂಪವಾದ ಶಾಸ್ತ್ರವಾಕ್ಯಗಳು ಸರ್ವೇಶ್ವರನ ಆಜ್ಞೆಗಳು, ಅಂತಹ ಆಜ್ಞೆಗಳನ್ನುಲ್ಲಂಘಿಸಿ ನಡೆಯುವ ಹಾಗೆ ಮಾಡಿ, "**ಆಜ್ಞಾಚ್ಛೇದಿ ಮಮದ್ರೋಹೀ**" ಎಂದು ಹೇಳಿರುವ ಹಾಗೆ ಭಗವನ್ನಿಗ್ರಹವು ಆತನನ್ನು ತನಗೆ ಪರಮ ದ್ರೋಹಿಯಾಗಿ ಮಾಡುತ್ತದೆಂಬ ಭಾವವು.

7. "**ಪುನಃ ಪುನಃ ಕ್ರಿಯಮಾಣಂ ಪಾಪಂ** - ಅಡಿಗಡಿಗೆ ಮಾಡಲ್ಪಡುವ ಪಾಪವು, **ಪ್ರಜ್ಞಾಂ** - ಬುದ್ಧಿಯನ್ನು, **ನಾಶಯತಿ** - ನಾಶಮಾಡುತ್ತದೆ; **ನಷ್ಟಪ್ರಜ್ಞಃ** - ಹೀಗೆ ನಷ್ಟ ಹೊಂದಿದ ಪ್ರಜ್ಞೆಯುಳ್ಳ, **ನರಃ** - ಮನುಷ್ಯನು, **ಪುನಃಪಾಪಂ** - ಪುನಃ ಪುನಃ ಪಾಪವನ್ನೇ, **ಆರಭತೇ** - ಮಾಡಲುಪಕ್ರಮಿಸುತ್ತಾನೆ," **ಎನ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಮೇಲುಮ್** - ಇನ್ನೂ ಹೆಚ್ಚಾದ, **ಅಪರಾಧಪರಂಪರೈಗಳಿಲೇ** - ಮೇಲೆ ಮೇಲೆ ಬರುವ ಪಾಪಸಮೂಹಗಳಲ್ಲಿ, **ಮೂಟ್ಟಿ** - ಭಗವನ್ನಿಗ್ರಹವು ಪ್ರವರ್ತಿಸುವ ಹಾಗೆ ಮಾಡಿ, **ಅದಿನ್ ಫಲಮಾಕ** - ಆ ಅಪರಾಧ ಪರಂಪರೆಗಳ ಫಲರೂಪವಾಗಿ, "**ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು**" ಎಂದರೆ ಸ್ವಾಮಿಯನ್ನು ಸೇರಲು ಅನುಕೂಲವೇ ಇಲ್ಲದಿರುವ ಅಮಙ್ಗಳಗಳಾದ ಯೋನಿಗಳಲ್ಲಿ ಪುನಃ ಜನಿಸುವ ಹಾಗೆ ಅಂತಹ ನರಾಧಮ

---

(7) ಭಾರತ. ಉದ್ಯೋಗ. 35. 78. 4. (2) ಗೀ. 16. 19.

ಕ್ಷುದ್ರ ಸುಖಾದಿಗಳುಕ್ಕು ಸಾಧನಮಾನ ರಾಜಸತಾಮಸ ದೇವತಾರ್ಚನಙ್ಗಳೈಕ್ಕೊಂಡು "ಯಕ್ಷರಕ್ಷಾಂಸಿ ರಾಜಸಾಃ । ಪ್ರೇತಾನ್ ಭೂತ ಗಣಾಂಶ್ಚಾನ್ಯೇ ಯಜನ್ತೇ ತಾಮಸಾ ಜನಾಃ ॥" ಎನ್ಗಿರ ಪಡಿಯೇ ತನ್ನೋಡುಕ್ಕ ಮೊಳಕು ಶಙ್ಗಲಿಯಾಲೆ ಕಟ್ಟುಂಡುಳ್ಳವಗಿರ ಕ್ಷೇತ್ರಜ್ಞರ್ ಕಾಲಿಲೆ ವಿಳುಪ್ಪಣ್ಣಿಯುಮ್, ಅವರ್ಗಳು ಕೊಡುತ್ತ ಜುಗುಪ್ಸಾವಹ ಕ್ಷುದ್ರ ಪುರುಷಾರ್ಥಙ್ಗಳಾಲೇ ಕ್ರಿಮಿಗಳೈಪ್ಪೋಲೆ ಕೃತಾರ್ಥರಾಗ ಮಾಯ್ಕ್ಕಿಯುಮ್;

ರನ್ನು ತಳ್ಳುವೆನು," ಇತ್ಯಾದಿಗಳಿಲ್ ಪಡಿಯೇ - ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಗರ್ಭಜನ್ಮಜರಾ** - ಮುಪ್ಪು, ಮರಣ, ನರಕ ಮೊದಲಾದ, **ಚಕ್ರ ಪರಿವೃತ್ತಿಯಿಲೆ** - ಚಕ್ರಸುತ್ತುವಹಾಗೆ, **ಪರಿಭ್ರಮಿಪ್ಪಿತ್ತುಮ್** - ಸುತ್ತಿಸಬಹುದು ; ಭಗವನ್ನಿಗ್ರಹವು ಹೀಗೆ ಮಾಡಬಹುದೆಂಬರ್ಥವು.

ಇಲ್ಲಿ "**ಕ್ಷಿಪಾಮ್ಯಜಸ್ರಂ**" ಎಂದು ಹೇಳಿರುವುದರ ಅಭಿಪ್ರಾಯವೇನೆಂದರೆ :—ಆಸುರ ಪ್ರಕೃತಿಯುಳ್ಳ ಚೇತನರನ್ನು ತಾನೇ ಸ್ವತನ್ತ್ರಿಸಿ ಪುನಃ ಪುನಃ ಸಂಸಾರ ಚಕ್ರ ನರಕಾದಿ ಪರಿಭ್ರಮಣಗಳಲ್ಲಿ ತಳ್ಳಿಬಿಡುವುದಿಲ್ಲವು. ಇಷ್ಟಬಂದರೆ ಪರಿಭ್ರಮಿಸುವ ಹಾಗೆ ಮಾಡುವನು, ಇಲ್ಲದಿದ್ದರೆ ಇಲ್ಲವೆಂಬಭಿಪ್ರಾಯವೂ ಅಲ್ಲವು. ಅಂತಹ ಸಂಸಾರ ನರಕಾದಿ ಪರಿಭ್ರಮಣಗಳಿಗೆ ಈತನ ದುಷ್ಕರ್ಮವಾಸನಾದಿಗಳೇ ಕಾರಣವಾದುದರಿಂದ, ತಾನೇ ಸರ್ವನಿಯನ್ತಾವಾಗಿ ಆಯಾಯಾ ದುಷ್ಕರ್ಮಗಳಿಗೆ ಆಯಾಯಾ ಫಲವೆಂದು ಏರ್ಪಡಿಸಿರುವದರಿಂದ, ಆಯಾಯಾ ಕರ್ಮಗಳಿಗನುಸಾರವಾಗಿ ಫಲಗಳನ್ನನುಭವಿಸುವ ಹಾಗೆ ಮಾಡುವನೆಂಬಭಿಪ್ರಾಯವು. ಹಾಗಿಲ್ಲದಿದ್ದರೆ ಸರ್ವೇಶ್ವರನಿಗೆ ವೈಷಮ್ಯ ನೈರ್ಘೃಣ್ಯಗಳು ಪ್ರಾಪ್ತವಾದೀತು.

ಮುಂದೆ, ಇಷ್ಟಾರ್ಥಗಳಿಗಾಗಿ ದೇವತಾ ಭಜನ ಮಾಡಬೇಕೆಂಬ ಅಭಿಲಾಷೆಯುಳ್ಳವರಿಗೆ ಈ ಭಗವನ್ನಿಗ್ರಹವು ಏನನ್ನು ಮಾಡಬಹುದೆಂದರೆ ಹೇಳು

---

(1) ಕ್ಷುದ್ರಸುಖ- ದುಃಖೋದರ್ಕವಾದ ಅಲ್ಪಸುಖ. (2) ಗೀ. 17. 4. " ಯಜನ್ತೆ ಸಾತ್ವಿಕಾದೇವಾನ್ ಎಂದು ಶ್ಲೋಕಾರಂಭವು.

ತ್ತಾರೆ. ಅನ್ಯದೇವತಾ ಭಜನಮಾಡಿ ಕ್ಷುದ್ರಗಳಾದ ಇಹ ಮತ್ತು ಸ್ವರ್ಗ ಲೋಕಗಳ ಭೋಗಗಳನ್ನು ಪ್ರಾರ್ಥಿಸುವ ಹಾಗೆ ಮಾಡುತ್ತದೆಂದು ಹೇಳುತ್ತಾರೆ.

8. **ಕ್ಷುದ್ರಸುಖಾದಿಗಳುಕ್ಕು** – ತುಚ್ಛವಾದ ಅಲ್ಪ ಸುಖ ಮೊದಲಾದವುಗಳಿಗೆ ಎಂದರೆ ವಿಷಯ ಸುಖಗಳಿಗೆ, ಇಲ್ಲಿ **ಆದಿ** ಶಬ್ದದಿಂದ ಆಮುಷ್ಮಿಕವಾದ ಸ್ವರ್ಗಾದಿ ಸುಖಗಳೂ ಸೂಚಿಸಲ್ಪಟ್ಟವು. **ಸಾಧಕಮಾನ** – ಸಾಧಕವಾದ, **ರಾಜಸತಾಮಸ ಶಾಸ್ತ್ರಾರ್ಥಙ್ಗಳೈ** – ರಾಜಸ ತಾಮಸ ಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಉಪಾಯಗಳನ್ನು, **ಕೊಂಡು** – ಅನುಸರಿಸಿ, "**ರಾಜಸಾಜನಾಃ** – ರಜೋಗುಣವಿಶಿಷ್ಟರು, **ಯಕ್ಷರಕ್ಷಾಂಸಿ** – ಯಕ್ಷರನ್ನೂ ರಾಕ್ಷಸರನ್ನೂ, **ಅನ್ಯೇ** – ಇತರರಾದ **ತಾಮಸಾಃ ಜನಾಃ** – ತಮೋಗುಣಯುಕ್ತರು, **ಪ್ರೇತಾನ್ ಭೂತಗಣಾನ್** – ಪ್ರೇತಪಿಶಾಚಾದಿ ಭೂತಗಣಗಳನ್ನು, **ಯಜನ್ತೇ** – ಆರಾಧಿಸುತ್ತಾರೆ." **ಎನ್ಗಿರಪಡಿಯೇ** – ಎಂದು ಹೇಳಿರುವ ಹಾಗೆ, **ತನ್ನೋಡೊಕ್ಕ** – ಜೀವಾತ್ಮನಾದ ತನ್ನೊಂದಿಗೇನೆ ಎಂದರೆ ತನ್ನ ಹಾಗೆಯೇ **ಒಳಕುಶಙ್ಗಲಿಯಿಲೇ** – ಸಂಚಾರವು ಸುಲಭವಾಗುವ ಹಾಗೆ ಇರುವ ದೊಡ್ಡದಾದ ಅಥವಾ ಉದ್ದವಾದ ಶೃಂಖಲವೆಂದರೆ ಬೇಡಿಯಿಂದ, **ಕಟ್ಟುಂಡು** – ಬಂಧಿಸಲ್ಪಟ್ಟವರಾಗಿ, **ಉಳಲುಗಿರ** – ಸಂಚರಿಸುವ, **ಕ್ಷೇತ್ರಜ್ಞರ್** – ಬದ್ಧಜೀವರಾದ ಬ್ರಹ್ಮರುದ್ರೇಂದ್ರರ, **ಕಾಲಿಲೇ ವಿಳುಪ್ಪಣ್ಣಿಯುಂ** – ಕಾಲಲ್ಲಿ ಬೀಳಿಸಿ, ಅವರುಗಳು ಕೊಟ್ಟ, **ಜುಗುಪ್ಸಾವಹ** – ತುಂಬಾ ಅಸಹ್ಯವಾದ, **ಕ್ಷುದ್ರ ಪುರುಷಾರ್ಥಙ್ಗಳಾಲೇ** – ಅತಿತುಚ್ಛವಾದ ಐಹಿಕ ಮೊದಲಾದ ಪುರುಷಾರ್ಥಗಳಿಂದ, **ಕ್ರಿಮಿಗಳ್ಪೋಲೇ** – ಕೊಚ್ಚೆಯಲ್ಲಿರುವ ಕ್ರಿಮಿಗಳು ತೃಪ್ತಿಯನ್ನು ಹೊಂದುವ ಹಾಗೆ, **ಕೃತಾರ್ಥರಾಕ** – ಕೃತಕೃತ್ಯರಾದ ಹಾಗೆ, **ಮಯಕ್ಕಿಯುಮ್** – ಈ ಭಗವನ್ನಿಗ್ರಹವು ಭ್ರಮಿಸುವ ಹಾಗೆ ಮಾಡುತ್ತದೆಂಬಭಿಪ್ರಾಯವು.

ಬ್ರಹ್ಮರುದ್ರೇಂದ್ರಾದಿಗಳೆಲ್ಲಾ ಕ್ಷೇತ್ರಜ್ಞರೇ, ನಮ್ಮ ಹಾಗೆಯೇ ಕರ್ಮಬನ್ಧನಕ್ಕೆ ಸಿಲುಕಿದ ಬದ್ಧಜೀವರು. ಆದರೆ ಅವರುಗಳ ಅಲ್ಪಸುಕೃತ ವಿಶೇಷದಿಂದ ಲೋಕಾಧಿಪತ್ಯಗಳನ್ನು ಹೊಂದಿದವರು. ಆ ಕರ್ಮವು ಬಹು ಬಲಿ

ಷ್ಠವಾದ ಪ್ರಯುಕ್ತ ಬಹುಕಾಲದವರಿವಿಗೂ ಮೋಕ್ಷವಿಲ್ಲದೆ ಈ ಲೋಕದ ಸೃಷ್ಟಿ ಲಯಗಳಿಗೆ ಕಾರಣಭೂತರಾಗಿ ಶ್ರೀಮನ್ನಾರಾಯಣನಿಂದ ಸಙ್ಕಲ್ಪಿಸಲ್ಪಟ್ಟವರು. ಆದುದರಿಂದ ನಮ್ಮ ಹಾಗೆಯೇ ಬದ್ಧದೆಶೆಯನ್ನನು ಭವಿಸುವರು. ನಮಗೆ ಹೇಗೆ ಕರ್ಮವೆಂಬ ಬೇಡಿಯಿಂದ ಬದ್ಧದೆಶೆಯೋ, ಅವರಿಗೂ ಹಾಗೆಯೇ. ಆದರೆ ಅವರಿಗೆ ಅಡಳಿತವು ಹೆಚ್ಚಾದುದರಿಂದ ಶೃಂಖಲವು ನಮಗಿಂತ ಉದ್ದವಾದುದೆಂದೂ, ನಮ್ಮಗಳಿಗೆ ಹ್ರಸ್ವವಾದುದೆಂದೂ ಹೇಳಲ್ಪಟ್ಟರುತ್ತದೆ. ಆದರೆ ಅವರು ರಾಜಸ ತಾಮಸಿಗಳಾದುದರಿಂದ ಮೋಕ್ಷವು ಅವರಿಗೆ ವಿಳಂಬವು. ನಮ್ಮಗಳಿಗಾದರೂ ಒಂದುವೇಳೆ ಅವರಿಗಿಂತ ಮುಂದೆಯೇ ಕ್ಷಿಪ್ರದಲ್ಲಿ ಮೋಕ್ಷಪ್ರಾಪ್ತಿಯಾಗಬಹುದು. ಆದುದರಿಂದ ನಾವು ಸರ್ವೇಶ್ವರನನ್ನು ಆರಾಧಿಸಿ ಆತನಿಗೆ ಶರಣಾಗತರಾಗಿ ನಿರತಿಶಯ ಮೋಕ್ಷಾನಂದವನ್ನು ಹೊಂದುವದನ್ನು ಬಿಟ್ಟು ಅತ್ಯಲ್ಪಸುಖಪ್ರದರಾದ ಇಂಥಾವರನ್ನು ಆಶ್ರಯಿಸಿ ಕೃತಕೃತ್ಯರೆಂದು ಭಾವಿಸುವುದು, ಉಪೋದ್ಘಾತದಲ್ಲಿ ರಾಜಕುಮಾರನು ವ್ಯಾಧ ಮೊದಲಾದವರನ್ನು ಆಶ್ರಯಿಸುವುದು ಎಷ್ಟು ಹೇಳನವಾದುದೋ, ಅಷ್ಟು ಹೇಳನವು. ಹೀಗೆ ತನ್ನ ಸ್ವರೂಪಕ್ಕೆ ಕುಂದಕವಾದರೂ, ಆ ಶಬರನ ಗುಡಿಸಲಿನಿರುವದೇ ಪರಮ ಭೋಗ್ಯವೆಂದು ಹೇಗೆ ಭಾವಿಸಿದನೋ, ಹಾಗೆಯೇ ಈ ಭಗವನ್ನಿಗ್ರಹವು, ಅಂಥಾವರನ್ನು ಆಶ್ರಯಿಸಿ, ಕೊಚ್ಚೆಯಲ್ಲಿ ಕ್ರಿಮಿಯ ಹಾಗೆ, ತೃಪ್ತಿಹೊಂದುವ ಹಾಗೆ ಮಾಡುತ್ತದೆಂಬ ಭಾವವು.

ಆದರೆ ಬ್ರಹ್ಮ ರುದ್ರರು ಸ್ವರ್ಗಲೋಕ ಭೋಗವನ್ನು ಕೊಡಬಲ್ಲರು. ಅಂಥಾವರನ್ನು ಆರಾಧಿಸಕೂಡದೋ ಎಂದರೆ, ಇಹಲೋಕ ಭೋಗ ಸ್ವರ್ಗಲೋಕ ಭೋಗಗಳಿಗೂ ತುಂಬಾ ವ್ಯತ್ಯಾಸವಿಲ್ಲದೆ ಎರಡೂ ಅಲ್ಪಾಸ್ಥಿರವಾದವುಗಳು :—

ಮಾಂಸಾಸೃಕ್ಪೂಯವಿಣ್ಮೂತ್ರಸ್ನಾಯುಮಜ್ಜಾಸ್ಥಿಸಂಯುತಾ।
ದೇಹೇಚೇತ್ಪ್ರೀತಿರ್ಮೂಢೋ ಭವಿತಾನರಕೇಽಪಿ ಸಃ ।
ಮಹೇಂದ್ರಪ್ರತಿನಂದ್ಯಾನಾಂ ವಪುರಪ್ಸರಸಾಮಪಿ ।
ತ್ವಗಸೃಙ್ಮಾಂಸಮೇಧೋಽಸ್ಥಿಮಜ್ಜಾಶುಕ್ಲಮಯಂ ನಕಿಂ ॥

ಎಂಬ ಶ್ಲೋಕದಿಂದ ದೇವ ಮಾನುಷ ದೇಹಗಳಿಗೆ ತುಂಬಾ ವ್ಯತ್ಯಾಸವಿಲ್ಲವೆಂಬುವದು ತೋರಿಬರುತ್ತದೆ. ಆದುದರಿಂದ ಅವರುಗಳು

9. ಯೋಗಪ್ರವೃತ್ತ ರಾನವರ್‌ಗಳ್ಕೈಯುಮ್ ಕ್ಷುದ್ರದೇವತಾ ಯೋಗಙ್ಗಳಿಲೇಯಾದಲ್, ನಾಮಾದ್ಯಚೇತನೋ ಪಾಸನಙ್ಗಳಿಲೇಯಾದಲ್, ಮಾಳಪ್ಪಣ್ಣಿ, ಶಿಲ್ಪನಙ್ಗಳಾನ ಫಲಙ್ಗಳಾಲೇ ಯೋಗತ್ತೈತ್ತಲ್ಲೈ ಶಾಯ್‌ಪ್ಪಿತ್ತುಮ್ ;

ಕೊಡುವ ಫಲಗಳು ಅಲ್ಪವಾಗಿಯೂ ಅಸ್ಥಿರವಾಗಿರುವುವುಗಳು. ಅದೂ ಅಲ್ಲದೆ ಬ್ರಹ್ಮರುದ್ರರು ರಾಜಸ ತಾಮಸಿಗಳು. ಅಂಥಾವರುಗಳ ಸೇವೆಯು ಸಾತ್ವಿಕನಾದ ಮುಮುಕ್ಷುವಿಗೆ ಸರ್ವಾತ್ಮನಾ ಸರಿಯಾದುದಲ್ಲವು. ಅಂಥಾವರು ಕೊಡುವ ಫಲವನ್ನು ಈ ಮೋಕ್ಷಾರ್ಥಿಯು ಬಯಸುವನಲ್ಲವು. ಆದುದರಿಂದ

" ಬ್ರಹ್ಮಾಣಂ ಶಿತಿಕಂಠಂಚ ಯಾಶ್ಚಾನ್ಯಾ ದೇವತಾಸ್ಸ್ಮೃತಾಃ ।
ಪ್ರತಿಬುದ್ಧಾನಸೇವಂತೆ ಯಸ್ಮಾತ್ಪರಿಮಿತಂ ಫಲಂ "

ಎಂದು ಹೇಳಿರುವಹಾಗೆ ಚತುರ್ಮುಖ ಬ್ರಹ್ಮನನ್ನೂ ರುದ್ರನನ್ನೂ ಇನ್ನೂ ಇತರ ದೇವತೆಗಳನ್ನೂ ವಿವೇಕಿಗಳಾದ ಮುಮುಕ್ಷುಗಳು ಆರಾಧಿಸುವದಿಲ್ಲವು. ಏಕೆಂದರೆ, ಅವರುಗಳು ಅಲ್ಪವಾದ ಫಲಗಳನ್ನು ಕೊಡುವ ಶಕ್ತಿಯುಳ್ಳವರೆಂದು ಭಾರತ ಶಾನ್ತಿಪರ್ವದಲ್ಲಿ ಹೇಳಿರುತ್ತದೆ.

"ಕ್ಲೇಶಾನಾಂಚ ಕ್ಷಯಕರಂ ಯೋಗಾದನ್ಯನ್ನವಿದ್ಯತೇ" ಎಂದರೆ ''ಯೋಗದ ಹಾಗೆ ಕ್ಲೇಶಗಳಿಗೆಲ್ಲಾ ನಾಶಕರವಾದುದು ಇನ್ನು ಯಾವುದೂ ಇರುವದಿಲ್ಲವು '' ಎಂದು ಹೇಳಿರುತ್ತದೆ. ಅಂತಹ ಯೋಗದಲ್ಲಿ ಒಂದುವೇಳೆ ಯಿದ್ದು, ಉಪಾಸನೆಗಳಲ್ಲಿ ಪ್ರವರ್ತಿಸಿದ್ದರೂ, ಈ ಚೇತನನು ಭಗವನ್ನಿಗ್ರಹಕ್ಕೆ ಪಾತ್ರನಾದರೆ, ಅಂಥಾವನ ವಿಷಯದಲ್ಲಿ ಇದು ಏನು ಮಾಡಬಹುದು ಎಂಬುವದನ್ನು ಮುಂದೆ ತಿಳಿಸುತ್ತಾರೆ.

9. 'ಯೋಗಪ್ರವೃತ್ತರಾನವರ್‌ಗಳ್ಕೈಯುಂ' - ಯೋಗಾಭ್ಯಾಸದಲ್ಲಿ ನಿರತರಾದವರನ್ನೂ ಕೂಡ, ಈ ಭಗವನ್ನಿಗ್ರಹವು,' ಕ್ಷುದ್ರದೇವತಾ ಯೋಗಙ್ಗಳಿಲೇಯಾದಿಲ್'-ಒಂದು ಶಕ್ತಿ, ಸ್ತ್ರೀವ್ಯಕ್ತಿ, ಇವೇ ಮೊದಲಾದ ಅನ್ಯದೇವತೆಯನ್ನು ಕುರಿತು ಮಾಡುವ ಉಪಾಸನೆಯಲ್ಲಿಯೇ ಆಗಲಿ, ' ನಾಮಾದ್ಯಚೇತನೋ ಪಾಸನಙ್ಗಳಿಲೆಯಾದಿಲ್ '–ಅಥವಾ ''ನಾಮಬ್ರಹ್ಮೇತ್ಯುಪಾಸೀತ'' ಎಂದು ಹೇಳಿರುವಹಾಗೆ, ನಾಮವೇ

10. ಆತ್ಮಪ್ರವಣರ್ಕ್ಕೈಯುಮ್ ಪ್ರಕೃತಿ ಸಂಸೃಷ್ಟಂ, ಪ್ರಕೃತಿ ಯುಕ್ತ ಮೆಙ್ಗರ ವಿವ್ವಿರಣ್ಡು ಪಡಿಯಲುಮ್ ಬ್ರಹ್ಮದೃಷ್ಟಿ ಯಾಲೇ ಯಾದಲ್ ಸ್ವರೂಪಮಾತ್ರತ್ತಿಲೇಯಾದಲ್, ಉಪಾ

ಮೊದಲಾದ ಚೇತನವಲ್ಲದೆ ಇರುವವುಗಳ ಉಪಾಸನದಲ್ಲಿಯೇ ಆಗಲಿ, 'ಮೂಳಪ್ಪಣ್ಣಿ'-ಪ್ರವೇಶಿಸುವಹಾಗೆ ಮಾಡಿ, 'ಶಿಲ್ವಾನಙ್ಗಳಾನ'-ಕ್ಷುದ್ರ ಗಳಾಗಿ ಅಲ್ಪಗಳಾಗಿರುವ, 'ಫಲಙ್ಗಳಾಲೆ'-ಫಲಗಳಿಂದ, 'ಯೋಗತ್ತೈ'- ಉಪಾಸನೆಯನ್ನು 'ತಲೈಕಾಯ್‌ಪ್ಪಿತ್ತುಮ್' - ಸಾಫಲ್ಯ ಹೊಂದಿದಹಾಗೆ ಭಾವಿಸುವಂತೆ ಮಾಡುತ್ತದೆ

ಯೋಗದ ಸ್ವರೂಪವು ಸರ್ವೋತ್ಕೃಷ್ಟವಾದುದು. ಸರಿಯಾಗಿ ಪರಬ್ರ ಹ್ಮೋಪಾಸನೆಯನ್ನೇ ಮಾಡಿದುದಾದರೆ ನಿರತಿಶಯ ಮೋಕ್ಷಸುಖವೇ ಸಿಕ್ಕುತ್ತದೆ. ಈಗ ಭಗವನ್ನಿಗ್ರಹಕ್ಕೆ ಅಂಥಾವನು ಪಾತ್ರನಾಗಿದ್ದರೆ ಪರಬ್ರಹ್ಮನಿಗೆ ಬದಲಾಗಿ, ಒಂದು ಕ್ಷುದ್ರಶಕ್ತಿ, ಕ್ಷುದ್ರದೇವತೆ, ಒಂದು ನಾಮ ಮುಂತಾದವುಗಳನ್ನೇ ಉಪಾಸನೆ ಮಾಡುವಹಾಗೆ ಮಾಡಿ, ತುಚ್ಛವಾಗಿ ಅಲ್ಪವಾದ ಫಲವನ್ನು ಕೊಡು ವಹಾಗೆ ಮಾಡಿ, ಆತನು ಉಪಾಸನ ಕೈಗೂಡಿತೆಂದು ಸಂತೋಷಪಡುವಹಾಗೆ ಮಾಡಿಬಿಡುತ್ತದೆಂಬ ಭಾವವು. ಛಾಂದ್ಯೋಗ್ಯದ ಏಳನೇ ಪ್ರಪಾಠಕದಲ್ಲಿ ಶ್ರೀ ಸನತ್ಕುಮಾರರು ನಾರದರಿಗೆ ಬೋಧಿಸಿದ ಭೂಮ ವಿದ್ಯೆಯಲ್ಲಿ ನಾಮ ಮೊದಲಾದ ಅಚೇತನಗಳ ಉಪಾಸನೆಯ ವಿಷಯವು ಹೇಳಲ್ಪಟ್ಟಿರುತ್ತದೆ.

ಹಿಂದೆ ಚೇತನವಲ್ಲದುದನ್ನು ಉಪಾಸನೆ ಮಾಡುವಹಾಗೆ ಮಾಡಿ, ಹೇಗೆ ಭಗವನ್ನಿಗ್ರಹವು ಚೇತನನನ್ನು ಶಿಕ್ಷಿಸಬಹುದೆಂಬುವದು ಹೇಳಲ್ಪಟ್ಟಿತು, ಮುಂದೆ ಆತ್ಮೋಪಾಸನೆ, ಎಂದರೆ ಜೀವಾತ್ಮನನ್ನು ಉಪಾಸನೆ ಮಾಡುವವರಿಗೆ, ಈ ಭಗವ ನ್ನಿಗ್ರಹವು ಏನುಮಾಡಬಹುದೆಂಬುವದನ್ನು ತಿಳಿಸುತ್ತಾರೆ.

10. 'ಆತ್ಮಪ್ರವಣರ್ಕ್ಕೈಯುಮ್' - ಜೀವಾತ್ಮನ ಸ್ವರೂಪೋ ಪಾಸನೆಯಲ್ಲಿ ಆಸಕ್ತರಾಗಿರುವವರನ್ನೂ, 'ಪ್ರಕೃತಿ ಸಂಸೃಷ್ಟಂ'-ಪ್ರ ಕೃತಿ ಸಂಬನ್ಧದಿಂದ ಕೂಡಿದ, ಮತ್ತು 'ಪ್ರಕೃತಿ ವಿಯುಕ್ತಂ'-ಪ್ರಕೃತಿ ಸಂಬನ್ಧದಿಂದ ಬಿಡಲ್ಪಟ್ಟ, 'ಎನ್ಗಿರ ವಿವ್ವಿರಣ್ಡು ಪಡಿಯಲುಮ್' ಎಂದು ಎರಡು ವಿಧವಾಗಿಯೂ, 'ಬ್ರಹ್ಮದೃಷ್ಟಿಯಾಲೆಯಾದಲ್'-ಆ ಜೀವಾತ್ಮನೇ ಪರಬ್ರಹ್ಮನೆಂಬ ದೃಷ್ಟಿಯಿಂದಲಾಗಲಿ, ಅಥವಾ, 'ಸ್ವರೂಪಮಾತ್ರತ್ತಾ

ಸಿಕ್ಕವುೞಿ, ಅನ್ವೈನಾಲುವಕೈಕ್ಕುಮ್ ಫಲಮಾಕ ಅಲ್ಪಾಸ್ವಾದಙ್ಗಳೈ ಕೊಡುತ್ತು ಪುನರಾವೃತ್ತಿಯೈ ಪಣ್ಣಿಯುಮ್ ;

ಲೆಯಾದಲ್'–ಆ ಆತ್ಮಸ್ವರೂಪ ಪರಿಶುದ್ಧವಾದುದೆಂಬ ದೃಷ್ಟಿಯಿಂದಲಾಗಲಿ, ಹೀಗೆ 'ಉಪಾಸಿಕ್ಕವುೞಿ'–ಉಪಾಸನೆ ಮಾಡುವಹಾಗೆ ಪ್ರವರ್ತಿಸಿ, 'ಅನ್ವೈನಾಲುವಗೈಕ್ಕುಮ್' ಆ ನಾಲ್ಕು ವಿಧವಾದ ಉಪಾಸನೆಗೂ, 'ಫಲಮಾಕ' ಫಲವಾಗಿ, 'ಅಲ್ಪಾಸ್ವಾದಙ್ಗಳೈ ಕೊಡುತ್ತು'–ಅಲ್ಪವಾದ, ಅಸ್ವಾದವಾದ ವೆಂದರೆ ಅನಿಷ್ಟವಾದವುಗಳನ್ನು ಕೊಟ್ಟು, 'ಪುನರಾವೃತ್ತಿಯೈ ಪಣ್ಣಿಯುಮ್'–ಪುನಃ ಜನ್ಮ ಸಂಸಾರಗಳನ್ನು ಹೊಂದುವ ಹಾಗೆ ಈ ಭಗವನ್ನಿಗ್ರಹವು ಮಾಡಬಹುದು. "ಈ ಮೇಲಿನ ವಾಕ್ಯದಲ್ಲಿ ಸಂಗ್ರಹಿಸಲ್ಪಟ್ಟ ನಾಲ್ಕುವಿಧ ಉಪಾಸಕರು ಯಾರೆಂದರೆ" —

1. ಅಚಿತ್ತಿಂದ ಸೇರಿದ ಆತ್ಮನೇ ಪರಬ್ರಹ್ಮವೆಂದು ಉಪಾಸನೆ ಮಾಡುವವನು.
2. ಅಚಿದ್ವಿಮುಕ್ತ ಆತ್ಮವೇ ಪರಬ್ರಹ್ಮವೆಂದು, ಉಪಾಸನೆ ಮಾಡುವವನು.
3. ಅಚಿತ್ತಿನೊಂದಿಗೆ ಸೇರಿದ ಆತ್ಮಸ್ವರೂಪವನ್ನೇ ಉಪಾಸನೆ ಮಾಡುವವನು.

4. ಅಚಿದ್ವಿಮುಕ್ತನಾದ ಕೇವಲ ಆತ್ಮನನ್ನೇ ಉಪಾಸನೆ ಮಾಡುವವನು ಇಂತಹ ಉಪಾಸನೆಗಳೆಲ್ಲಾ ದೋಷಯುಕ್ತವಾದ ಪ್ರಯುಕ್ತ ಅತಿತುಚ್ಛ ಫಲಗಳುಳ್ಳವುಗಳು. ಅವುಗಳಿಗೆಲ್ಲಾ ಪುನರ್ಜನ್ಮ ತಪ್ಪದೆಂಬ ಭಾವವು. ಆದರೆ ತನ್ನ ಆತ್ಮವನ್ನು ತಾನೇ ಉಪಾಸನೆ ಮಾಡುವದರಲ್ಲಿ ಕರ್ಮ ಕರ್ತೃ ದೋಷವಿರುವದರಿಂದ, ಅಲ್ಪಾಸ್ವಾದನ ಫಲತಾನೇ ಹೇಗೆ ಕೂಡುತ್ತದೆ ಎಂದರೆ, ಶ್ರೀಭಾಷ್ಯದಲ್ಲ ಮಧ್ವಾದಿ ವಿದ್ಯೆಗಳಲ್ಲಿ ವಸ್ವಾದಿಗಳಿಗೆ ತನ್ನ ಸ್ವರೂಪೋಪಾಸನೆಯನ್ನೇ ಹೇಳಿರುವದರಿಂದ ಯಾವ ವಿರೋಧವೂ ಇಲ್ಲವು. ಇಲ್ಲಿ "ಬ್ರಹ್ಮದೃಷ್ಟಿ" ಎಂದು ಉಪಯೋಗಿಸಿರುವವರ ಅಭಿಪ್ರಾಯವೇನೆಂದರೆ :— ಪರಬ್ರಹ್ಮವಲ್ಲದೇ ಇರುವ ವಸ್ತುವನ್ನು ಪರಬ್ರಹ್ಮವೆಂದು ತಿಳಿಯುವಿಕೆ. "ಅಲ್ಪಾಸ್ವಾದನ" ವೆಂದು ಹೇಳಿರುವದರಿಂದ ತಾನು ಭಗವಚ್ಛೇಷ ಭೂತನೆಂಬುವದನ್ನು ಮರೆತು, ನಿರತಿಶಯ ಪರಮಪದ ಪ್ರಾಪ್ತಿಯನ್ನು ಬಿಟ್ಟು, ಅಲ್ಪ ಫಲಪ್ರದವಾದ ಆತ್ಮೋಪಾಸನೆಯು ಸೂಚಿಸಲ್ಪ

ಟ್ಟಿತು. ಹೀಗೆ ಮೇಲೆ ಹೇಳಲ್ಪಟ್ಟ ಕೇವಲರಿಗೆಲ್ಲಾ ಕೈವಲ್ಯಪ್ರಾಪ್ತಿಯು ಹೇಳಲ್ಪಟ್ಟಿರುತ್ತದೆ. ಕೈವಲ್ಯಪದವೆಂಬುವದು ವಿರಜಾನದಿಯ ಸಮೀಪದಲ್ಲಿ ಪ್ರಕೃತಿ ಮಂಡಲಕ್ಕೆ ಸೇರಿದುದಾಗಿಯೇ ಇರಬಹುದಾಗಿರುತ್ತದೆ. ಏಕೆಂದರೆ ಈ ಸ್ಥಿತಿಯಲ್ಲಿ ಜೀವಾತ್ಮನಿಗೆ ಪ್ರಕೃತಿ ಸಂಬನ್ಧವಿನ್ನೂ ಉಂಟೆಂದೂ, ಕರ್ಮವೆಲ್ಲಾ ಇನ್ನು ನಶಿಸಿಹೋಗದೆ ಶೇಷವಿರುತ್ತದೆಂದೂ, ಆದುದರಿಂದಲೇ ಇವರುಗಳಿಗೆ ಪುನಃ ಸಂಸೃತಿಯಲ್ಲಿ ಅನ್ವಯ ಉಂಟೆಂದೂ ಶ್ರೀ ನಿಗಮಾನ್ತ ಮಹಾದೇಶಿಕರವರಿಗೆ ಅಭಿಪ್ರಾಯ ಉಂಟು. ಆದರೆ ಪಞ್ಚಾಗ್ನಿವಿದ್ಯಾನಿಷ್ಠನಾಗಿ ಜಿಜ್ಞಾಸುವೆಂದು ಗೀತೆಯಲ್ಲಿ, ''ಚತುರ್ವಿಧಾಭಜನ್ತೇಮಾಂ'' ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟಿರುವ, ಮತ್ತು ಮಧುವಿದ್ಯಾನಿಷ್ಠನೆಂದು ಶ್ರೀಭಾಷ್ಯದಲ್ಲಿ ಉಪಪಾದಿಸಲ್ಪಟ್ಟಿರುವ ಕೇವಲರಿಗೆ ಪುನರಾವರ್ತ್ತಿ ಇಲ್ಲವೆಂದೂ, ಅಲ್ಲಿಂದ ಸರ್ವೇಶ್ವರ ಕೃಪೆಯುಂಟಾಗಿ ಮುಂದಕ್ಕೆ ಪರಮಪದಕ್ಕೇ ಹೋಗುತ್ತಾರೆಂದೂ ಹೇಳಲ್ಪಟ್ಟಿರುತ್ತದೆ ಆದುದರಿಂದ ಇಂತಹ ಪುನರಾವರ್ತ್ತಿಯಿಲ್ಲದ ಕೈವಲ್ಯದೆಶೆಯನ್ನೇ, ಶ್ರೀ ಪರಾಶರಭಟ್ಟರವರು "ಐಶ್ವರ್ಯಮಕ್ಷರಗತಿಂ ಪರಮಪದಂವಾ" ಎಂಬ ಶ್ರೀಗುಣರತ್ನಕೋಶ ಶ್ಲೋಕದಲ್ಲಿ, "ಅಕ್ಷರಗತಿ" ಎಂಬ ಪದದಿಂದ ಹೇಳಿದರು, ಇಂತಹ ಕೈವಲ್ಯವೇ.

ಅವ್ಯಕ್ತೋಽಕ್ಷರ ಇತ್ಯುಕ್ತಃ ತಮಾಹುಃಪರಮಾಂಗತಿಂ ।
ಯಂಪ್ರಾಪ್ಯ ನನಿವರ್ತನ್ತೇ ತದ್ಧಾಮ ಪರಮಂ ಮಮ ॥

ಎಂಬ ಗೀತಾ ೮ ನೇ ಅಧ್ಯಾಯದ ೨೧ನೇ ಶ್ಲೋಕದಲ್ಲಿ ಹೇಳಲ್ಪಟ್ಟಿರುತ್ತದೆ. ಆದುದರಿಂದ ಶ್ರೀ ನಿಗಮಾನ್ತ ದೇಶಿಕರವರು ಭಗವನ್ನಿಗ್ರಹಕ್ಕೆ ಪಾತ್ರರಾದ ಈ ಕೇವಲರಿಗೆ ಪುನರಾವೃತ್ತಿಯೂ, ಶ್ರೀ ಭಾಷ್ಯಕಾರ್ರರು ಹೇಳಿರುವ ಕೇವಲರಿಗೆ ಪುನರಾವೃತ್ತಿರಾಹಿತ್ಯವೂ, ಇರುವದರಿಂದ, ಈ ಎರಡು ವಿಧ ಕೇವಲರೂ ಉಪಾಸನಾಭೇದದಿಂದ ಭಿನ್ನರೆಂದು ಭಾವಿಸತಕ್ಕದ್ದು. ಆದುದರಿಂದ ಶ್ರೀ ಭಾಷ್ಯಕಾರ ಶ್ರೀ ದೇಶಿಕ ಸೂಕ್ತಿಗಳಿಗೆ ಪರಸ್ಪರ ವಿರೋಧವಿಲ್ಲವೆಂದು ತಿಳಿಯತಕ್ಕದ್ದು. ಹೀಗೆ ಆತ್ಮೋಪಾಸನೆಯಲ್ಲಿ ಉಂಟಾಗುವ ವಿಘ್ನಗಳನ್ನು ತೋರಿಸಿ, ಇನ್ನುಮುಂದೆ ಪರಬ್ರಹ್ಮೋಪಾಸನೆಯಲ್ಲಿ ಉಂಟಾಗತಕ್ಕ ವಿಘ್ನಗಳನ್ನು ತಿಳಿಸುತ್ತಾರೆ. ಅಪರ ಬ್ರಹ್ಮೋಪಾಸನೆಯು ಎರಡು ವಿಧವಾಗಿ ನಡೆಯಬಹುದೆಂದೂ ತಿಳಿಸುತ್ತಾರೆ.

11. ಬ್ರಹ್ಮಾತ್ಮಕ ಸ್ವಾತ್ಮಚಿನ್ತನ ಪ್ರವೃತ್ತರಾನವರ್ಗಳೈಯುಮ್, ಸ್ವಾತ್ಮ ಶರೀರಕ ಪರಮಾತ್ಮಚಿನ್ತನ ಪರರೈಯುಮ್, ಅನ್ತರಾಯಮಾನ ವಾತ್ಮಾನುಭವತ್ತಾಲೇಯಾತಲ್, ಅಷ್ಟೈಶ್ವರ್ಯ ಸಿದ್ಧಿಗಳಾಲೇಯಾತಲ್, ವಸ್ವಾದಿಪದಪ್ರಾಪ್ತಿ ಬ್ರಹ್ಮಕಾಯ ನಿಷೇ

---

11. 'ಬ್ರಹ್ಮಾತ್ಮಕ ಸ್ವಾತ್ಮಚಿನ್ತನ ಪ್ರವೃತ್ತರಾನವರ್ಗಳೆಯುಮ್' - ಪರಬ್ರಹ್ಮವು ತನ್ನ ದೇಹದಲ್ಲಿರುವ ಆತ್ಮಾವಿಗೂ ಆತ್ಮಾ ಎಂದು ಭಾವಿಸಿ ತನ್ನ ಆತ್ಮವನ್ನುಪಾಸನೆ ಮಾಡುವವರಿಗೂ, ಅಂದರೆ ತನ್ನ ಆತ್ಮಾ ಪರಬ್ರಹ್ಮನಿಗೆ ಶರೀರವೆಂದು ಭಾವಿಸಿ ತನ್ನ ಆತ್ಮವನ್ನು ಉಪಾಸನೆ ಮಾಡುವವರನ್ನೂ ಮತ್ತು 'ಸ್ವಾತ್ಮ ಶರೀರಕ ಪರಮಾತ್ಮಚಿನ್ತನ ಪರರೈಯುಮ್' - ತನ್ನ ಆತ್ಮವೇ ಶರೀರವಾಗಿವುಳ್ಳ ಪರಬ್ರಹ್ಮನ ಉಪಾಸನೆಯಲ್ಲಿ ಆಸಕ್ತರಾಗಿರುವವರನ್ನೂ 'ಅಂತರಾಯಮಾನ' - ಪರಬ್ರಹ್ಮಪ್ರಾಪ್ತಿಗೆ ವಿಘ್ನವಾದ, 'ಆತ್ಮಾನುಭವತ್ತಾಲೆಯಾದಲ್' - ತನ್ನ ಸ್ವಂತ ಆತ್ಮಾನುಭವದಿಂದಲಾಗಲಿ,' ಅಷ್ಟೈ ಶ್ವರ್ಯಸಿದ್ಧಿಗಳಾಲೆಯಾದಲ್'- ಅಥವಾ ಅಣಿಮಾದಿ ಅಷ್ಟೈಶ್ವರ್ಯಸಿದ್ಧಿಯಿಂದಲಾಗಲಿ, 'ವಸ್ವಾದಿ ಪದ ಪ್ರಾಪ್ತಿ'-ಮಧುವಿದ್ಯೆಯಲ್ಲಿ ಹೇಳಿರುವ ವಸ್ವಾದಿ ಪದಪ್ರಾಪ್ತಿ, ಮತ್ತು "ಬ್ರಹ್ಮಕಾಯನಿಷೇವಣ–ಉಷ್ಯತಾಂ ಮಯಿ ಚೇತ್ಯುಕ್ತ್ವಾ ವ್ಯಾದದೇ ಸತತಂ ಮುಖಂ । ಅಥತಸ್ಯ ವಿವೇಶಾಸ್ಯಂ ಬ್ರಹ್ಮಣೋ ವಿಗತಜ್ವರಃ" ಎಂದರೆ "ಚತುರ್ಮುಖಬ್ರಹ್ಮನು ತನ್ನಲ್ಲಿ ವಾಸಮಾಡಲೆಂದು ಮುಖವನ್ನು ತೆರೆದನು, ಆಗ ಆತನು ಖೇದವನ್ನೀಗಿದವನಾಗಿ ಆತನ ಮುಖವನ್ನು ಪ್ರವೇಶಿಸಿದನು" ಎಂದು ಮೋಕ್ಷ ಧರ್ಮದಲ್ಲಿ ಹೇಳಿರುವಹಾಗೆ, ಚತುರ್ಮುಖನ ಶರೀರವನ್ನು ಹೊಂದಿ, ಆತನಿಗೆ ಸಮವಾದ ಭೋಗವನ್ನು ಹೊಂದಿದವನಹಾಗೆಯಾಗಲಿ, ಹೀಗೆ ಭಗವನ್ನಿಗ್ರಹವು ಪರಬ್ರಹ್ಮಪ್ರಾಪ್ತಿಗೆ ವಿಘ್ನಮಾಡಬಹುದು.

ಪರಬ್ರಹ್ಮೋಪಾಸನೆಯು ಮೂರು ವಿಧವಾಗಿ ನಡೆಯಬಹುದು; ಹೇಗೆಂದರೆ: (1) ತನ್ನ ಆತ್ಮವು ಪರಬ್ರಹ್ಮನಿಗೆ ಶರೀರವೆಂದು ಭಾವಿಸಿ, ಪರಬ್ರಹ್ಮ ಶರೀರಕವಾದ ಆತ್ಮೋಪಾಸನೆಯನ್ನು ಮಾಡುವುದು, (2) ತನ್ನ ಆತ್ಮವು ಪರಬ್ರಹ್ಮನಿಗೆ ಶರೀರವೆಂದು ಭಾವಿಸಿ ಪರಬ್ರಹ್ಮನನ್ನು ಉಪಾಸನೆ ಮಾಡುವದು. (3) ಈ

ವಣಾದಿಗಳಾಲೆಯಾದಲ್, ಅಭಿಷೇಕತ್ತುಕ್ಕು ನಾಳಿಟ್ಟ ರಾಜ ಕುಮಾರನುಕ್ಕು ಶ್ರೈಯಿಲೇ ಯೆಡುತ್ತುಕ್ಕೈ ನೀಟ್ಟಿನ ಚೇಟ ಮಾರ್ ಪಕ್ಕಲಿಲೆ ಕಣ್ಣೋಟ್ಟ ಮುಣ್ಡಾಮಾಪ್ಪೋಲೆ, ಪ್ರಾರಬ್ಧ

ವಿಶೇಷಣ ವಿಶೇಷ್ಯಭಾವಗಳಿಲ್ಲದೆ ಕೇವಲ ಪರಬ್ರಹ್ಮೋಪಾಸನೆಯು, ಈ ಮೂರು ವಿಧಗಳಲ್ಲಿ ಮೊದಲಿನ ಎರಡುವಿಧ ಉಪಾಸನೆಗಳನ್ನು ಕುರಿತು ಭಗವನ್ನಿಗ್ರಹದಿಂದ ಅವುಗಳಿಗುಂಟಾಗುವ ವಿಘ್ನಗಳು ಇಲ್ಲಿ ಹೇಳಲ್ಪಡುತ್ತವೆ. ಈ ಎರಡು ವಿಧ ಉಪಾಸಕರ ವಿಷಯದಲ್ಲೂ ಭಗವನ್ನಿಗ್ರಹವು ಪರಬ್ರಹ್ಮಪ್ರಾಪ್ತಿಯಿಲ್ಲದ ಹಾಗೆ ಮಾಡುತ್ತದೆ, ಹೇಗೆಂದರೆ :—ಆತ್ಮಾನುಭವರೂಪನಾದ ಕೈವಲ್ಯವನ್ನುಂಟುಮಾಡ ಬಹುದು ; ಅಥವಾ ಅಷ್ಟೈಶ್ವರ್ಯಕಾಮಿಯಾಗುವಹಾಗೆ ಮಾಡಿ ಅವುಗಳ ಪ್ರಾಪ್ತಿಯನ್ನುಂಟುಮಾಡಬಹುದು. ಶ್ರೀಭಾಷ್ಯದಲ್ಲಿ ಉಪಪಾದಿಸಿರುವಹಾಗೆ ಮಧು ವಿದ್ಯಾನಿಷ್ಠನಿಗೆ ಉಂಟಾಗುವ ವಸ್ವಾದಿ ಪ್ರಾಪ್ತಿಯುಂಟಾಗಬಹುದು. ಅಥವಾ ಚತುರ್ಮುಖಸಮವಾದ ಆನಂದಪ್ರಾಪ್ತಿಯುಂಟಾಗಬಹುದು. ಹೀಗೆ ಅನೇಕ ವಿಧವಾಗಿ ಪರಮಪದಪ್ರಾಪ್ತಿಗೆ ವಿಳಂಬವನ್ನುಂಟುಮಾಡಬಹುದು. ಕೊನೆಯಲ್ಲಿ ಹೇಳಿದ ಪರಬ್ರಹ್ಮೋಪಾಸಕನಿಗೆ ಕಾಲವಿಳಂಬವೇ ವಿನಾ, ಮೋಕ್ಷವೇ ಇಲ್ಲವೆಂಬ ಭಿಪ್ರಾಯವಲ್ಲವು. ಏಕೆಂದರೆ, ಗೀತೆಯಲ್ಲಿ,

"ನಹಿಕಲ್ಯಾಣ ಕೃತ್ಕಶ್ಚಿದ್ದುರ್ಗತಿಂ ತಾತಗಚ್ಛತಿ'' ಎಂದು ಹೇಳಿರುವ ದರಿಂದ ಒಂದಾನೊಂದು ಕಾಲದಲ್ಲಿ ಈತನಿಗೆ ನಿಶ್ರೇಯಸ್ಸುಂಟಾಗಬಹುದು. ಆದರೆ ಹೀಗೆ ಪರಬ್ರಹ್ಮೋಪಾಸನೆಯಲ್ಲಿರುವವನಿಗೆ ಇಂತಹ ವಿಘ್ನವೂ ದುರ್ದಶೆಯೂ ಪ್ರಾಪ್ತವಾಗಬಹುದೋ ಎಂದರೆ ಉಂಟಾಗಬಹುದೆಂಬುದನ್ನು ಒಂದು ದೃಷ್ಟಾಂತ ಮೂಲಕ ವ್ಯಕ್ತಪಡಿಸುತ್ತಾರೆ. ಮೇಲಿನ ವಾಕ್ಯದಲ್ಲಿ ನಿಷೇವಣಾದಿ ಎಂದು ಆದಿ ಪದ ಪ್ರಯೋಗದಿಂದ ಬ್ರಹ್ಮಲೋಕ ಪ್ರಾಪ್ತಿಯೇ ಮೊದಲಾದವು ಹೇಳಲ್ಪಟ್ಟವು.

'ಶಿರೈಯಿಲೆ'-ಅಪರಾಧಕ್ಕಾಗಿ ಶೆರೆಯಲ್ಲಿರುವ, 'ರಾಜಕುಮಾರನುಕ್ಕು'-ಒಬ್ಬ ರಾಜಕುಮಾರನಿಗೆ, 'ಅಭಿಷೇಕತ್ತುಕ್ಕು ನಾಳಿಟ್ಟ'-ಬಿಡಗಡೆ ಮಾಡಿಸಿ ಯುವರಾಜ್ಯಾಭಿಷೇಕಕ್ಕಾಗಿ ಶುಭಮುಹೂರ್ತವಿಟ್ಟಿರುವಾಗ, 'ಚೇಟಿಮಾರ್ ಪಕ್ಕಲಿಲೆ'-ಅಲ್ಲಿ ಉಪಚಾರಕ್ಕಾಗಿ ನಿಯಮಿಸಲ್ಪಟ್ಟ ದಾಸಿಯರ ವಿಷಯದಲ್ಲಿ, 'ಕಣ್ಣೋಟ್ಟ ಮುಂಡಾಮಾಪ್ಪೋಲೆ'-ಕಣ್ಣಿನದೃಷ್ಟಿ

ಕರ್ಮಫಲಮಾನ ದೇಹೇನ್ದ್ರಿಯಙ್ಗಳಿಲುಮ್ ತದನುಬನ್ಧಿಗಳಾನ ಪರಿಗ್ರಹಙ್ಗಳಿಲುಮ್, ತನ್ಮೂಲ ಭೋಗಙ್ಗಳಿಲುಮ್. ಕಾಲ್ ತಾಳ ಪ್ಪಣ್ಣಿಯಾದಲನ್ಯಪರರಾಕ್ಕಿಯುಮ್, ಇಪ್ಪಡಿ ಪ್ಪಲಮುಖಙ್ಗ ಳಾಲೇ ಭಗವತ್ಪ್ರಾಪ್ತಿಕ್ಕು ವಿಲಕ್ಕಾಯಿರುಕ್ಕುಮ್. ಮುಪ್ಪತ್ತಿರಣ್ಡು

ಪ್ರಸರಣ ಉಂಟಾಗುವಹಾಗೆ, ಎಂದರೆ ಉಪಭೋಗಾಭಿಲಾಷೆಯುಂಟಾಗುವಹಾಗೆ, 'ಪ್ರಾರಬ್ಧಕರ್ಮ ಫಲಮಾನ'-ಪ್ರಾರಬ್ಧಕರ್ಮದ ಫಲರೂಪವಾದ, 'ದೇಹೇನ್ದ್ರಿಯಙ್ಗಳಿಲುಮ್'-ದೇಹ ಇಂದ್ರಿಯಗಳಲ್ಲಾಗಲಿ, 'ತದನುಬನ್ಧಿಗಳಾನ'-ಆ ದೇಹೇನ್ದ್ರಿಯಗಳಿಗೆ ಸಂಬನ್ಧಪಟ್ಟ, 'ಪರಿಗ್ರಹಙ್ಗಳಿಲುಮ್'-ಭಾರ್ಯಾ ಪುತ್ರ ಮೊದಲಾದ ವಿಷಯ ಸುಖಗಳನ್ನು ಪರಿಗ್ರಹಿಸುವದರಲ್ಲಿಯಾಗಲಿ, 'ತನ್ಮೂಲಭೋಗಙ್ಗಳಿಲುಮ್'-ಆ ಮೂಲಕವಾಗಿ ಉಂಟಾಗುವ ಭೋಗಗಳಲ್ಲಿಯಾಗಲಿ, ಅಭಿರುಚಿಯನ್ನುಂಟುಮಾಡಿ ಎಂಬ ಭಾವವು, 'ಕಾಲತಾಳಪ್ಪಣ್ಣಿಯಾದಲ್'-ಕಾಲು ಜಾರುವಹಾಗೆ ಮಾಡಿ, ಅಥವಾ ಮಗ್ನರಾಗುವಹಾಗೆಮಾಡಿಯಾಗಲಿ, 'ಅನ್ಯಪರರಾಕ್ಕಿಯುಮ್'-ಭಗವದ್ವಿಮುಖರನ್ನಾಗಿ ಮಾಡಿ, 'ಇಪ್ಪಡಿ'-ಹೀಗೆ 'ಪಲಮುಖಙ್ಗಳಾಲೇ'-ಅನೇಕ ವಿಧವಾಗಿ, ನಾನಾಬಗೆಯಾಗಿ, 'ಭಗವತ್ಪ್ರಾಪ್ತಿಕ್ಕು'-ಭಗವತ್ಪ್ರಾಪ್ತಿಗೆ, ಆ ಭಗವನ್ನಿಗ್ರಹವು, 'ವಿಲಕ್ಕಾಯಿರುಕ್ಕುಂ'-ಪ್ರತಿಬಂಧಕವಾಗಿರುವದು. ಹೀಗೆ ಉಪಾಸನಾನಿಷ್ಠನಾಗಿದ್ದರೂ ಕೂಡ ಯಾವಾಗ ಭಗವನ್ನಿಗ್ರಹಕ್ಕೆ ತನ್ನ ದುಷ್ಕರ್ಮಗಳಿಂದ ಗುರಿಯಾದನೋ, ಆಗ ಉಪಾಸನೆಯು ಪೂರ್ತಿಯಾಗದೆ ಯಾವುದೋ ಬಂದು ಮೇಲೆಹೇಳಿದ ಕಾರಣಗಳಿಂದ ಯೋಗಭ್ರಷ್ಟನಾಗುವನು ಎಂಬರ್ಥವು. ಈ ದೃಷ್ಟಾನ್ತವು ತುಂಬಾ ಸ್ವಾರಸ್ಯವಾದುದು. ಸೆರೆಯಲ್ಲಿ ಸಿಕ್ಕಿದ ರಾಜಕುಮಾರನು ಎಂದು ಹೇಳಿರುವದರಿಂದ ಬದ್ಧ ದೆಸೆಯಲ್ಲಿ ಬಂಧನಕ್ಕೆ ಸಿಲುಕಿದ ಜೀವನು ಹೇಳಲ್ಪಟ್ಟನು. "ರಾಜಕುಮಾರನು" ಎಂದು ಹೇಳಿರುವದರಿಂದ ಜೀವನ ಪರಿಶುದ್ಧವಾದ ರಾಜನಾದ ಶ್ರೀಮನ್ನಾರಾಯಣನೊಂದಿಗೆ ಇರಲು ಯೋಗ್ಯವಾದ ನೈಜವಾದ ಸ್ವರೂಪವು ಸೂಚಿಸಲ್ಪಟ್ಟಿತು. 'ಅಭಿಷೇಕತ್ತುಕ್ಕು ನಾಳಿಟ್ಟ'-ಎಂಬುವದರಿಂದ ಈತನು ತನ್ನ ಉಪಾಸನಾದಿಗಳಿಂದ ಪರಮಪದಕ್ಕೆ ಹೋಗಿ ಸೇರಿ

ಡಿಯಾನ ತುರುವುತತ್ತುವಾರ್ ಮುನ್ನಡಿಯಿಲೆ ವಿಳುನ್ದದೋಡುಮ್ ಮುಪ್ಪದಾಮಡಿಯಿಲೆ ವಿಳುನ್ದದೋಡುಮ್ ವಾಶಿಯಿಲ್ಲಾದಾಪ್ಪೋಲೆ ಏದೇನು ಮೊರುಪರ್ವತ್ತಿಲೆ ಯನ್ತರಾಯ ಮುಣ್ಡಾನಾಲ್ ಇವನ್‌ಸಂಸಾರತ್ತೈ ಕಡನ್ದಾನಾಕಾ.

ಸ್ವಾಮಿಕೈಂಕರ್ಯರೂಪ ಯುವರಾಜ್ಯಾಭಿಪಟ್ಟವನ್ನು ಹೊಂದುವ ಕಾಲವು ಸನ್ನಿಹಿತವಾಗಿದೆ ಎಂಬುವದು ತೋರಿಬರುತ್ತದೆ. ಅಂತಹ ಬಳ್ಳಿ ಪದವಿಗೆ ಅಂತರಾಯರೂಪದಲ್ಲಿ ಯಾವುದಾದರೂ ಬಂದು ತುಚ್ಛವಾದು ದುಕಾರಣ ವಾಗಬಹುದೆಂಬುವದು 'ಚೇಟಿವರ್ಾರ್ ಪಕ್ಕಲಿಲೇಕಣ್ಣೋಟ್ಟೆ'-ಮೆನ್ನುವ ಪ್ರಯೋಗದಿಂದ ವ್ಯಕ್ತಪಡುತ್ತದೆ. 'ಚೇಟಿವರ್ಾರ್'' ಎಂದು ಹೇಳಿರುವದರಿಂದ ಸ್ತ್ರೀತ್ವೇನ "ಅಜಾಮೇಕಾಂ" ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಪ್ರಕೃತಿ ಸಂಬಂಧವು ಇಲ್ಲಿ ಬೋಧಿತವಾಯಿತು. ಐಹಿಕಾದಿ ವಿಷಯ ಸಂಗದಿಂದ ಈತನಿಗೆ ಪರಮಪದ ಪ್ರಾಪ್ತಿಯಿಲ್ಲದೇ ಹೋಗಬಹುದು ಎಂಬ ತಾತ್ಪರ್ಯವು. 'ಮುಪ್ಪತ್ತಿರಣ್ಡಡಿಯಾನ'-ಮೂವತ್ತೆರಡು ಮೆಟ್ಲುಗಳಿರುವ, 'ತುರುವು'-ಭಾವಿಯನ್ನು, 'ತತ್ತುವಾರ್''-ದಾಟುವವರು, 'ಮುನ್ನಡಿಯಿಲೇ'-ಮೊದಲು ಮೆಟ್ಟಲು ನಲ್ಲಿ 'ವಿಳುನ್ದದೋಡು'-ಬಿದ್ದುದಕ್ಕೂ, 'ಮುಪ್ಪದಾಮಡಿಯಿಲೆ'-ಮೂವತ್ತನೇಮೆಟ್ಟಲಿನಲ್ಲಿ 'ವೀಳನ್ದದೋಡು'-ಬಿದ್ದುದಕ್ಕೂ 'ವಾಶಿಯಿಲ್ಲಾದಾಪ್ಪೋಲೆ'-ತಾರತಮ್ಯವೇನೂ ಇಲ್ಲದಹಾಗೆ, 'ಏದೇನು ಮೊರುಪರ್ವತ್ತಿಲೆ'-ಯಾವದಾದರೂ ಬಂದು ಸಂದರ್ಭದಲ್ಲಿ ಎಂದರೆ ಆ ಉಪಾಸನೆಯು ಪೂರೈಸುವದಕ್ಕೆ ಮಧ್ಯದಲ್ಲಿ ಯಾವ ಸಂದರ್ಭದಲ್ಲಾದರೂ, 'ಅನ್ತರಾಯಮುಣ್ಡಾನಾಲುಮ್''-ವಿಘ್ನವು ಪ್ರಾಪ್ತವಾದರೂ 'ಇವನ್ ಸಂಸಾರತ್ತೈ ಕಡನ್ದಾಕಾನ್''-ಇವನು ಸಂಸಾರವನ್ನು ದಾಟಿದವನಾಗುವದಿಲ್ಲವು. "ಭಾವಿಯನ್ನು ಹತ್ತಿ ಮೇಲಕ್ಕೆ ಬರುವವನು, ಮೊದಲು ಮೆಟ್ಟಲಲ್ಲಿಬಿದ್ದು ಹೋದರೂ ಅಥವಾ ಮೂವತ್ತನೇ ಮೆಟ್ಟಲು ಹತ್ತುವಾಗಲು ಬಿದ್ದರೂ, ಹೇಗೆ, ಎರಡು ಸಂದರ್ಭದಲ್ಲೂ ಭಾವಿಯಮೇಲಕ್ಕೆ ಹೋಗಿ ಸೇರಲು ಸಾಧ್ಯವಿಲ್ಲದಿರುವ ದುರ್ದೆಶೆ ಪ್ರಾಪ್ತವಾಗಿ, ಎರಡರ ಫಲವು ಬಂದೇ ಆಯಿತೋ, ಹಾಗೆಯೇ ಉಪಾಸನಾದಿಗಳಲ್ಲಿ ವಿಘ್ನವು ಯಾವ ಸಂದರ್ಭದಲ್ಲಿ

ಪ್ರಾಪ್ತವಾದರೂ ಫಲವು ಬಂದೇ ; ಪರಮಪದ ಪ್ರಾಪ್ತಿಯು ಇಲ್ಲದೇ ಹೋಗುತ್ತದೆ ಎಂಬ ಭಾವವು. ಅಥವಾ ಈತನು ಪರಮಪದವನ್ನು ಕುರಿತು ಹೋಗುವ ಮಾರ್ಗದಲ್ಲಿ ವಿರಜಾತರಣದೊಳಗೆ ಎಲ್ಲಿ ವಿಘ್ನ ಪ್ರಾಪ್ತವಾದರೂ ಬಂದೇ ಫಲವೆಂಬುವದೂ ತೋರಿಬರುತ್ತದೆ.

" ನಿರಯಾಸ್ತೇ ವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ " (ವಿ. ಪು.)

" ಪರಮಾತ್ಮನ ಸ್ಥಾನವಾದ ದಿವ್ಯ ವೈಕುಂಠಕ್ಕೆ ಸ್ವರ್ಗಲೋಕ ಬ್ರಹ್ಮಲೋಕಾದಿ ಎಂತಹ ಭೋಗಗಳನ್ನು ಹೋಲಿಸಿದರೂ ನರಕಕ್ಕೆ ಸಮಾನವಾದವುಗಳೇ " ಎಂದು ಹೇಳಿರುವಹಾಗೆ ಪರಮಪದಕ್ಕೆ ವಿಘ್ನ ಉಂಟಾಗಿ ಎಂತಹ ಅವಸ್ಥೆ ಪ್ರಾಪ್ತವಾದರೂ ಅವುಗಳೆಲ್ಲಾ ನರಕಸಮಾನವಾದವುಗಳೇ ಎಂಬ ಭಾವವು.

ಆದರೆ ಗೀತೆಯಲ್ಲಿ,

" ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋಭಯಾತ್ ॥ " (2. 40)

ಎಂದರೆ, 'ಇಹ' ಈ ಫಲಾಭಿಸಂಧಿಯಿಲ್ಲದ ಕರ್ಮಯೋಗದಲ್ಲಿ, 'ಅಭಿಕ್ರಮನಾಶಃ' ಪ್ರಾರಂಭಿಸಿ ಬಿಟ್ಟಿದ್ದರಲ್ಲಿ ಕರ್ಮಯೋಗದ ನಾಶವು 'ನಾಸ್ತಿ' ಇರುವದಿಲ್ಲವು. 'ಪ್ರತ್ಯವಾಯೋನವಿದ್ಯತೇ' ದೋಷವೂ ಇರುವದಿಲ್ಲವು, 'ಅಸ್ಯ ಧರ್ಮಸ್ಯ' ಈ ಫಲಾಭಿಸಂಧಿರಹಿತವಾದ ಕರ್ಮದ, 'ಸ್ವಲ್ಪಮಪಿ' ಅಲ್ಪಾನುಷ್ಠಾನವೂ ಕೂಡ, 'ಮಹತಃ ಭಯಾತ್' ಎಂಬಾ ಭಯಂಕರಗಳಾದ ಜನ್ಮ ಮರಣಾದ್ಯವಸ್ಥೆಗಳಿಂದ, 'ತ್ರಾಯತೇ' ರಕ್ಷಿಸುತ್ತದೆ." ಎಂದಿರುತ್ತದೆ. ಹೀಗೆ, ಕರ್ಮಯೋಗಾದಿಗಳಲ್ಲಿದ್ದು ವಿಘ್ನ ಪ್ರಾಪ್ತವಾದರೆ, ಫಲ ಉಂಟು ಎಂದು ಹೇಳುವದೂ, ಈ ಸಂದರ್ಭದಲ್ಲಿ ಆತನಿಗೆ ಪರಮಪದ ಪ್ರಾಪ್ತಿಯಿಲ್ಲವೆಂದು ಹೇಳುವದೂ, ಹೇಗೆ? ಗೀತಾವಾಕ್ಯಕ್ಕೂ ತಮ್ಮ ವಾಕ್ಯಕ್ಕೂ ಏನಾದರೋ ವಿರೋಧವೋ ಎಂದರೆ ಹಾಗೇನೂ ಇಲ್ಲವೆಂದು ಹೇಳುತ್ತಾರೆ. ಪರಮಪದಪ್ರಾಪ್ತಿಗೆ ವಿಘ್ನವೆಂದು ಹೇಳಿದರೇ ವಿನಾ ಬೇರೆಯಲ್ಲವು. ಇದರಿಂದ ಕಾಲ ವಿಳಂಬ ಉಂಟೆಂಬುದು ಮಾತ್ರ ತೋರಿಬರುತ್ತದೆ. ಹಾಗೆಯೇ ಗೀತೆಯಲ್ಲಿ ಇನ್ನೊಂದು ಸ್ಥಳದಲ್ಲೂ,

" ಪಾರ್ಥನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ "
ನಹಿಕಲ್ಯಾಣ ಕೃತ್ಕಶ್ಚಿದ್ದುರ್ಗತಿಂ ತಾತಗಚ್ಛತಿ॥ (6. 40)

ಎಂದರೆ ಹೇ ಪಾರ್ಥ-ಓ ಅರ್ಜುನನೇ, ತಸ್ಯ-ಆ ಯೋಗಭ್ರಷ್ಟನಿಗೆ, 'ಇಹವಾ ಅಮುತ್ರವಾ' ಈ ಲೋಕದಲ್ಲೇ ಆಗಲಿ ಪರದಲ್ಲೇ ಆಗಲಿ

ಕರ್ಮಯೋಗಾದಿಗಳಿಲ್ ಪ್ರವೃತ್ತನುಕ್ಕು "ನೇಹಾಭಿಕ್ರಮನಾಶೋಸ್ತೀ" ತ್ಯಾದಿಗಳಿರ್ ಪಡಿಯೇ ಯಿಟ್ಟಪಡ್ಶೈ ಕರ್ಪಡಿಯಾಯ್ ಎನ್ರೇನು ಮೊರನಾಳ್ ಫಲಸಿದ್ಧಿಯುಣ್ಡಾಮೆಂಗಿರಮಿದುವುಂ ಕಲ್ಪಾನ್ತರ ಮನ್ವನ್ತರ ಯುಗಾನ್ತರ ಜನ್ಮಾಂತರಾದಿಗಳಿಲ್ ಎದಿಲೆ ಯೆನ್ರು ತೆರಿಯಾದು.

ಕೋರಿಕೆಯು ಲಭಿಸಲಿಲ್ಲವೆಂಬುವದಿಲ್ಲವು. ಪರದಲ್ಲೇ ಆಗಲಿ, 'ನವಿನಾಶಃ'ತನು ಕೋರಿಕೆಯು ಲಭಿಸದೇ ಹೋಗುವದೆಂಬುವದು, ಇಲ್ಲವು. 'ಕಲ್ಯಾಣಕೃತ್ಕಶ್ಚಿತ್'-ಸುಕೃತವನ್ನಾಚರಿಸುತ್ತಿದ್ದ ಯಾವನೊಬ್ಬನೂ, 'ದುರ್ಗತಿಂನಗಚ್ಛತಿ' ದುರ್ಗತಿಯನ್ನು ಹೊಂದುವದಿಲ್ಲವು" ಎಂದು ಶ್ರೀ ಕೃಷ್ಣನೇ ಹೇಳಿರುತ್ತಾನೆ. ಆದ್ದರಿಂದ ವಿಳಂಬ ಉಂಟೇ ವಿನಾ ಬೇರೆ ಇಲ್ಲವೆಂಬಭಿಪ್ರಾಯವು. ಯಾವಾಗಲಾದರೂ ಒಂದು ಕಾಲದಲ್ಲಿ ಸದ್ಗತಿಯುಂಟು. ಆದರೆ ಅದು ಯಾವಾಗವೆಂದು ಹೇಳಲಾಗುವದಿಲ್ಲವೆಂದು ಉಪದೇಶಿಸುತ್ತಾರೆ. ಜನ್ಮಾನ್ತರವೋ, ಕಲ್ಪಾನ್ತರವೋ, ಯುಗಾನ್ತರವೋ, ಯಾವಾಗವೆಂದು ಹೇಳಲು ಸಾಧ್ಯವಿಲ್ಲವೆಂದು ಮುಂದೆ ಅಪ್ಪಣೆ ಕೊಡಿಸುತ್ತಾರೆ.

ಆದರೆ 'ಕರ್ಮಯೋಗಾದಿಗಳಿಲ್ ಪ್ರವೃತ್ತನುಕ್ಕು'-ಕರ್ಮಯೋಗಾದಿಗಳಲ್ಲಿ ಪ್ರವರ್ತಿಸಿದವನಿಗೆ, "ನೇಹಾಭಿಕ್ರಮನಾಶೋಸ್ತಿ" ಎಂಬ 'ಇತ್ಯಾದಿಗಳಿರ್‌ಪಡಿಯೇ'- ಇವೇ ಮೊದಲಾದವುಗಳಲ್ಲಿ ಉಪಪಾದಿಸಲ್ಪಟ್ಟಿರುವ ಹಾಗೆ, ಇಲ್ಲಿ ಆದಿ ಶಬ್ದದಿಂದ ಮೇಲೆ ವಿವರಿಸಲ್ಪಟ್ಟ "ಪಾರ್ಥನೈವೇಹ" ಎಂಬ ಶ್ಲೋಕಾರ್ಥವೂ ಸೂಚಿಸಲ್ಪಟ್ಟಿತು, 'ಇಟ್ಟಪಡ್ಶೈ'- ಹಾಕಿದ ಇಟ್ಟಿಗೆಯು ಗೋಡೆಯು 'ಕರ್‌ಪಡಿಯಾಯ್'-ಕಲ್ಲಿನ ಗೋಡೆಯಾಗಿ ಪರಿಣಮಿಸಿ, ಎಂದರೆ ಸ್ಥಿರವಾದ ಉಪಾಯವಾಗಿ ಪರಿಣಮಿಸಿ, 'ಎನ್ರೇನು ಮೊರನಾಳ್' - ಯಾವಾಗಲಾದರೂ ಒಂದು ಕಾಲದಲ್ಲಿ, 'ಫಲಸಿದ್ಧಿಯುಣ್ಡಾಮ್-'ಫಲಪ್ರಾಪ್ತಿ ಉಂಟಾಗುವದು ಎಂದರೆ ಮೋಕ್ಷಪ್ರಾಪ್ತಿಯುಂಟಾಗುವದು, 'ಎಜ್ಗರಮಿದುವುಂ'-ಎಂದು ಹೇಳಿರುವ ಈ ಅಭಿಪ್ರಾಯವು, ಕಲ್ಪಾನ್ತರ ಮನ್ವನ್ತರ ಯುಗಾನ್ತರ ಜನ್ಮಾನ್ತರಗಳಲ್ಲಿ 'ಎದಿಲ್ ಎನ್ರು ತೆರಿಯಾದು' - ಇವುಗಳಲ್ಲಿ ಯಾವುದರಲ್ಲೆಂಬುವದು ಹೇಳಲಾಗುವದಿಲ್ಲವು.

ಆನುಕೂಲ್ಯಂ ಮಿಗುವು ಮುಣ್ಡಾಯಿರುಕ್ಕ ವಸಿಷ್ಠಾದಿಗಳುಕ್ಕು ವಿಳಂಬಜ್ಞಾಣಾ ನಿನ್ರೋಮ್ ; ಪ್ರಾತಿಕೂಲ್ಯಂ ಮಿಗವು ಮುಣ್ಡಾಯಿರುಕ್ಕ ವೃತ್ರ ಕ್ಷತ್ರುಬಂಧು ಪ್ರಭೃತಿಗಳುಕ್ಕು ಕ್ಕಡುಗಮೋಕ್ಷಮುಂಡಾಕಕ್ಕಾಣಾನಿನ್ರೋಮ್

ಒಂದು ಜನ್ಮವನ್ನು ಕೊಟ್ಟು ಒಡನೇ ಮುಂದಿನ ಜನ್ಮದಲ್ಲೇ ಮುಕ್ತಿಯುಂಟಾಗಬಹುದು. ಅಥವಾ ಅನೇಕಜನ್ಮಗಳಾದಮೇಲೆ ಪ್ರಾಪ್ತವಾಗಬಹುದು. ಅಥವಾ ಇನ್ನೂ ಕಾಲವಿಳಂಬವಾಗಿ ಕಲ್ಪಾನ್ತರಾದಿಗಳಲ್ಲಾಗಬಹುದು ಎಂಬರ್ಥವು. 'ನೇಹಾಭಿಕ್ರಮನಾಶೋಸ್ತಿ' ಮತ್ತು 'ಪಾರ್ಥನೈವೇಹ' ಎಂಬ ಶ್ಲೋಕಗಳಲ್ಲಿ ಯಾವಾಗಲಾದರೂ ಒಂದು ಕಾಲದಲ್ಲಿ ಪರಮಪದ ಪ್ರಾಪ್ತಿಯುಂಟೆಂದು ಹೇಳಲ್ಪಟ್ಟಿತೇವಿನಾ ಅದಕ್ಕೆ ಕಾಲನಿಬನ್ಧನೆಯನ್ನು ಹೇಳಲಿಲ್ಲವು. ಹಾಗೆ ಕಾಲ ನಿಬನ್ಧನೆಯನ್ನು ಹೇಳಲಶಕ್ಯವೆಂಬುವದಕ್ಕೆ ಸಹೇತುಕವಾಗಿ ಒಂದೆರಡು ನಿದರ್ಶನಗಳನ್ನು ಮುಂದೆ ಉದಾಹರಿಸುತ್ತಾರೆ.

'ಆನುಕೂಲ್ಯಂ' – ಶಾಸ್ತ್ರಚೋದಿತಗಳಾದ ಭಗವದಾಜ್ಞಾನುಸಾರ ಆಚರಣೆಯು 'ಮಿಗುವುಂ ಉಣ್ಡಾಯಿರುಕ್ಕ'-ಹೆಚ್ಚಾಗಿದ್ದರೂ ಕೂಡ, 'ವಸಿಷ್ಠಾದಿಗಳಿಕ್ಕು'-ವಸಿಷ್ಠರೇ ಮೊದಲಾದವರಿಗೆ, ವಿಳಂಬಜ್ಞಾಣಾನಿನ್ರೋಮ್''-ಮೋಕ್ಷಪ್ರಾಪ್ತಿಗೆ ವಿಳಂಬವನ್ನು ಕಂಡಿರುವೆವು ; 'ಪ್ರಾತಿಕೂಲ್ಯಂ' – ಶಾಸ್ತ್ರವಿಹಿತ ಕರ್ಮಗಳ ವಿರುದ್ಧಾಚರಣೆಯು, ಮಿಗವುಂ ವುಣ್ಡಾ ಇರುಕ್ಕ' – ಹೆಚ್ಚಾಗಿದ್ದರೂ ಕೂಡ, 'ವೃತ್ರಕ್ಷತ್ರಬಂಧು ಪ್ರಭೃತಿಗಳುಕ್ಕು-ವೃತ್ರಾಸುರ ಕ್ಷತ್ರಬನ್ಧು ಮೊದಲಾದವರುಗಳಿಗೆ, 'ಕಡುಗ' – ಶೀಘ್ರವಾಗಿ, 'ಮೋಕ್ಷಮುಣ್ಡಾ ಕಕ್ಕಾಣಾನಿನ್ರೋಮ್''-ಮೋಕ್ಷಪ್ರಾಪ್ತಿಯುಂಟಾದುದನ್ನೂ ಕಂಡಿರುವೆವು ಎಂದರೆ ಶಾಸ್ತ್ರಮುಖೇನ ತಿಳಿದಿರುವೆವು ಎಂಬ ತಾತ್ಪರ್ಯವು. ಕ್ಷತ್ರಬನ್ಧು ವೃತ್ತಾನ್ತಕ್ಕೆ ಗುರುಪರಂಪರಾ ಸಾರದ 50ನೆ ಪುಟವನ್ನು ಪರಾಂಬರಿಸುವದು.

ವೃತ್ರಾಸುರನ ಕಥೆ :— ತ್ವಷ್ಟೃಪುತ್ರನಾದ ಮೂರುತಲೆಗಳುಳ್ಳ ವಿಶ್ವರೂಪನೆಂಬವನು ಇಂದ್ರನಿಗೆ ಪುರೋಹಿತನಾಗಿದ್ದನು. ಶತ್ರು ನಿರಸನಕ್ಕೆ ಸಾಧಕವಾದ ನಾರಾಯಣ ಕವಚವೆಂಬ ಮಂತ್ರವನ್ನು ಇಂದ್ರನು ಈ ವಿಶ್ವರೂಪನ ಕೃಪೆಯಿಂದ ಉಪದೇಶವನ್ನು ಹೊಂದಿದನು. ಆದರೆ ವಿಶ್ವರೂಪನು ರಾಕ್ಷಸರಿಗೂ

ಗೋಪ್ಯವಾಗಿ ಹವಿರ್ಭಾಗವನ್ನು ಸಲ್ಲಿಸುತ ಇದ್ದುದರಿಂದ ಇಂದ್ರನು ಕೋಪಗೊಂಡು ವಿಶ್ವರೂಪನ ಮೂರುತಲೆಗಳನ್ನೂ ಛೇದಿಸಿದನು. ಇದಕ್ಕೆ ವಿಶ್ವರೂಪನ ತಂದೆಯಾದ ತ್ವಷ್ಟೃವು ಕೋಪಿಸಿ, ಇಂದ್ರನನ್ನು ಕೊಲ್ಲುವುದಕ್ಕಾಗಿ ಯಾಗವನ್ನು ಮಾಡಿ, ಅಗ್ನಿ ಕುಂಡದಿಂದ ವೃತ್ರಾಸುರನೆಂಬ ರಾಕ್ಷಸನು ಹುಟ್ಟುವಹಾಗೆ ಮಾಡಿದನು. ಈತನು ದೇವತೆಗಳಿಗೆ ತುಂಬಾ ತೊಂದರೆ ಮಾಡುತ್ತಿದ್ದುದರಿಂದ ಅವರು ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಲಾಗಿ, ಆತನುಪ್ರತ್ಯಕ್ಷನಾಗಿ, ದೇವತೆಗಳನ್ನು ಕುರಿತು, ಹೇಳುತ್ತಾನೇನೆಂದರೆ :— ನೀವು ಹೋಗಿ ದಧೀಚಿ ಮುನಿಯನ್ನು ಪ್ರಾರ್ಥಿಸಿ, ಆತನ ದೇಹವನ್ನು ಪಡೆದು, ಆ ಮುನಿಯ ಎಲುಬಿನಿಂದ ಒಂದು ವಜ್ರಾಯುಧವನ್ನು ಮಯನ ಮೂಲಕ ಮಾಡಿಸಿ ವೃತ್ರಾಸುರನ ಮೇಲೆ ಪ್ರಯೋಗಿಸಿದರೆ, ಅಸುರನು ಹತನಾಗುವನೆಂದು ಹೇಳಲು; ಆಗ ಇಂದ್ರನೇ ಮೊದಲಾದ ದೇವತೆಗಳು ಹಾಗೆ ಮಾಡಲು, ಅದರಿಂದ ವೃತ್ರನು ಸಂಹರಿಸಲ್ಪಟ್ಟನು, ಆದರೆ ವೃತ್ರನು ಶ್ರೀಮನ್ನಾರಾಯಣನ ಅವತಾರವಾದ ಸಂಕರ್ಷಣನನ್ನು ಮಹಾಭಕ್ತಿಯಿಂದ ಉಪಾಸನೆ ಮಾಡುತ್ತಿದ್ದನು. ಕೊನೆಗೆ ತನಗೂ ಇಂದ್ರನಿಗೂ ಆದ ಯುದ್ಧದಲ್ಲಿ ತನ್ನ ಅಂತ್ಯಕಾಲವು ಸನ್ನಿಹಿತವಾದುದನ್ನು ತಿಳಿದವನಾಗಿ ಶ್ರೀಮನ್ನಾರಾಯಣನನ್ನು ಮಹಾಭಕ್ತಿಯಿಂದ ಸ್ತೋತ್ರಮಾಡಿ ಶರಣು ಹೊಂದಿದನು. ಇದರಿಂದ ಆತನು ಮೋಕ್ಷವನ್ನು ಹೊಂದಿದನು. ಈ ಸ್ತೋತ್ರವು ತುಂಬಾ ಅಮೋಘವಾದುದು. ಭಾಗವತ ಷಷ್ಟಸ್ಕಂದ ೧೧-೧೨ನೇ ಅಧ್ಯಾಯವನ್ನು ಪರಾಂಬರಿಸಬಹುದು.

ಈ ಜನ್ಮದಲ್ಲಿ ನಮಗೆ ಕಾಣುವ ಆನುಕೂಲ್ಯ ಪ್ರಾತಿಕೂಲ್ಯಗಳನ್ನು ಮಾತ್ರ ವಿಚಾರಮಾಡಿ, ಮೋಕ್ಷಪ್ರಾಪ್ತಿಗೆ ಅವಿಳಂಬ ವಿಳಂಬಗಳನ್ನುಂಟು ಮಾಡುವದಕ್ಕೆ ಅವುಗಳೇ ಕಾರಣವೆಂದು ಹೇಳಲಾಗುವದಿಲ್ಲವು. ಇನ್ನೇನುಕಾರಣಗಳಿವೆಯೋ ಅವು ಸರ್ವೇಶ್ವರನ ಸರ್ವಜ್ಞತೆಗೆ ಗೋಚರವಾದುದೇ ವಿನಾ ಅವುಗಳನ್ನು ತಿಳಿಯುವದು ನಮಗೆ ಸಾಧ್ಯವಿಲ್ಲೆಂದು ಅಪ್ಪಣೆ ಕೊಡುತ್ತಾರೆ. ಹಾಗೆಯೇ ಐಹಿಕ ಐಶ್ವರ್ಯ ಸುಖಾದಿಪ್ರಾಪ್ತಿಯಲ್ಲೂ ಇಂತಹ ವಿಷಮಭಾವವು ತೋರಿಬರುತ್ತದೆ. ಮಹಾಸಾತ್ವಿಕನಾಗಿ ಪರಮ ಭಾಗವತೋತ್ತಮನಾಗಿ, ನಿರತಿಶಯ ಭಗವದ್ಭಕ್ತಿಯಿಂದ ಭೂಷಿತನಾದವನು, ಮಹಾ ದರಿದ್ರಾವಸ್ಥೆಯಲ್ಲಿ ದುಃಖಭಾಕ್ಕಾಗಿರುವದನ್ನು ಕಂಡಿರುವೆವು ; ಮತ್ತು ಮಹಾ ಮದಾಂಧನಾಗಿ, ದೇವ ಭಾಗವತರಲ್ಲಿ ಅಭಿಮಾನಶೂನ್ಯನಾಗಿ ಅನೇಕ ನಿಷಿದ್ಧಾಚರಣೆಯುಕ್ತನಾಗಿರುವವನು ಸಂಸ್ಥಾನಗಳಲ್ಲಿ ಉನ್ನತ

ಆದಲಾಲ್ ವಿಳಂಬ ರಹಿತ ಮೋಕ್ಷಹೇತುಕ್ಕಳಾನ ಸುಕೃತ ವಿಶೇಷಙ್ಗಳ್ ಆರಪಕ್ಕಲಿಲೇ ಕಿಡಕ್ಕುಮೆನ್ರು ತೆರಿಯಾದು. ವಿಳಂಬ ಹೇತುವಾನ ನಿಗ್ರಹತ್ತುಕ್ಕು ಕಾರಣಙ್ಗಳಾನ ದುಷ್ಕರ್ಮ ವಿಶೇಷಙ್ಗಳುಮ್ ಆರಪಕ್ಕಲಿಲೆ ಕಿಡಕ್ಕುಮೆನ್ರು ತೆರಿಯಾದು

ಪದವಿಗಳನ್ನು ಹೊಂದುತ್ತಾ ಮಹದೈಶ್ವರ್ಯದಲ್ಲಿರುವದನ್ನೂ ಕಂಡಿರುವೆವು. ಆದುದರಿಂದ ಈಗಿನ ಆನುಕೂಲ್ಯ ಪ್ರಾತಿಕೂಲ್ಯಗಳಿಗೂ ಫಲಪ್ರಾಪ್ತಿಗೂ ಸಂಬಂಧವಿರುವದಿಲ್ಲವು. ಆನುಕೂಲ್ಯವಿದ್ದೂ ದುರ್ದಶೆಯೂ,ಪ್ರಾತಿಕೂಲ್ಯವಿದ್ದಗೂ ಸೌಭಾಗ್ಯವೂ ಉಂಟಾಗಬಹುದು. ಅವುಗಳಿಗೆ ಕಾರಣಗಳನ್ನು ಹೇಳಲು ಅಲ್ಪಜ್ಞರಾದ ನಮ್ಮಿಂದ ಸಾಧ್ಯವಿಲ್ಲವೆಂದು ಹೇಳುತ್ತಾರೆ.

'ಆದಲಾಲ್'-ಆ ಕಾರಣದಿಂದ, '**ವಿಳಂಬರಹಿತ ಮೋಕ್ಷ ಹೇತುಕ್ಕಳಾನ**'-ವಿಳಂಬವಿಲ್ಲದೆ ಮೋಕ್ಷಪ್ರಾಪ್ತಿಗೆ ಕಾರಣವಾದ, **ಸುಕೃತ ವಿಶೇಷಗಳು**, '**ಯಾರ ಪಕ್ಕಲಿಲೇ ಕಿಡಕ್ಕುಮೆನ್ರು ತೆರಿಯಾದು**'-ಯಾರ ಬಳಿಯಲ್ಲಿವೆ ಎಂಬುವದು ಗೊತ್ತಾಗುವದಿಲ್ಲವು. ಹಾಗೆಯೇ, '**ವಿಳಂಬ ಹೇತುವಾನ ನಿಗ್ರಹತ್ತುಕ್ಕು**'-ಮೋಕ್ಷಪ್ರಾಪ್ತಿಯಲ್ಲಿ ವಿಳಂಬಕ್ಕೆ ಕಾರಣವಾದ ಭಗವನ್ನಿಗ್ರಹಕ್ಕೆ, '**ಕಾರಣಙ್ಗಳಾನ ದುಷ್ಕರ್ಮ ವಿಶೇಷಙ್ಗಳುಂ**'-ಕಾರಣಗಳಾದ ದುಷ್ಕರ್ಮ ವಿಶೇಷಗಳೂ, **ಯಾರ ಬಳಿಯಲ್ಲಿವೆ ಎಂಬುವದೂ ಗೊತ್ತಾಗುವದಿಲ್ಲವು**.

ಹೀಗೆ ಭಗವನ್ನಿಗ್ರಹವು ನಾನಾ ಬಗೆಯಾಗಿ ಅನಿಷ್ಟ ಪರಂಪರೆಗಳನ್ನುಂಟು ಮಾಡುತ್ತಾ, ಮೋಕ್ಷಪ್ರಾಪ್ತಿಗೆ ವಿರೋಧಿಯಾಗುತ್ತದೆಂದು ಹೇಳಿ, ಮುಂದಿನ ವಾಕ್ಯದಿಂದ ಆ ಪ್ರಾಪ್ತಿ ವಿರೋಧಿಗೆ ಒಂದೇ ಒಂದು ಮುಖ್ಯ ಪರಿಹಾರವೆಂದು ಹೇಳುತ್ತಾರೆ. ಶಾಸ್ತ್ರಬಲದಿಂದಲೂ ಆಚಾರ್ಯಸೂಕ್ತಿಗಳಿಂದಲೂ ಅಂತಹ ಮಹಿಮೆಯು ಅದಕ್ಕೆ ಉಂಟೆಂದು ತಿಳಿಸುತ್ತಾರೆ.

ಪ್ರಾಪ್ತಿ ವಿರೋಧಿ ಪರಿಹಾರ ಪ್ರಕಾರಃ

ಇಪ್ಪಡಿಯನಿಷ್ಟ ಪರಂಪರೈಕ್ಕು ಮೂಲಙ್ಗಳಾನ ಆಜ್ಞಾತಿ ಲಙ್ಘನಂಗಳಾಲೇ ವನ್ದ ಭಗವನ್ನಿಗ್ರಹ ವಿಶೇಷಮಾಗಿರ ಪ್ರಧಾನ ವಿರೋಧಿಕ್ಕು ಶೆಯ್ಯುಮ್ ಪರಿಹಾರತ್ತೈ "ತಸ್ಯಚ ವಶೀಕರಣಂ ತಚ್ಛರಣಾಗತಿರೇವ" ಎನ್ನು ಕಠವಲ್ಲಿಯಿಲ್ ವಶೀಕಾರ್ಯ ಪರಂಪರೈಯೈ ವಕುತ್ತವಿಡುತ್ತಲೇ ಶ್ರೀ ಭಾಷ್ಯಕಾರರ್ ಅರುಳಚ್ಚೆಯ್ದಾರ್.

ಪ್ರಾಪ್ತಿ ವಿರೋಧಿಯನ್ನು ಪರಿಹರಿಸಿಕೊಳ್ಳುವ ಮಾರ್ಗವು.

'ಇಪ್ಪಡಿ'-ಹೀಗೆ, 'ಅನಿಷ್ಟಪರಂಪರೈಕ್ಕು ಮೂಲಙ್ಗಳಾನ'-ಅನಿಷ್ಟ ಸಮೂಹಗಳಿಗೆ ಕಾರಣಗಳಾದ, 'ಆಜ್ಞಾತಿಲಙ್ಘನಂಗಳಾಲೇ'-"ಶ್ರುತಿಸ್ಮೃತಿ ರ್ಮಮೈವಾಜ್ಞಾ" ಎಂದು ಹೇಳಿರುವಹಾಗೆ, ಅಂತಹ ಶಾಸ್ತ್ರಗಳಲ್ಲಿ ವಿಧಿನಿಷೇಧ ರೂಪದಲ್ಲಿ ಹೇಳಿರುವ ಆಜ್ಞೆಗಳನ್ನತಿಕ್ರಮಿಸುವದರಿಂದ, 'ವನ್ದ ಭಗವನ್ನಿಗ್ರಹ ವಿಶೇಷಮಾಗಿರ ಪ್ರಧಾನ ವಿರೋಧಿಕ್ಕು'-ಉಂಟಾದ ಭಗವನ್ನಿಗ್ರಹವಿಶೇಷವಾಗಿರುವ ಮುಖ್ಯ ವಿರೋಧಿಗೆ 'ಶೆಯ್ಯುಮ್ ಪರಿಹಾರತ್ತೈ'-ಮಾಡುವ ಪರಿಹಾರವನ್ನು, "ತಸ್ಯಚ ವಶೀಕರಣಂತಚ್ಛರಣಾಗತಿರೇವ"-(ಬ್ರ. ಸೂ. 1. 4. 1) "ಆ ಮಹಾನುಭಾವನನ್ನು ವಶಮಾಡಿಕೊಳ್ಳುವ ಮಾರ್ಗವು ಆತನ ಪಾದಾರವಿಂದದಲ್ಲಿ ಮಾಡುವ ಶರಣಾಗತಿಯೇ, 'ಎನ್ನು ಕಠವಲ್ಲಿಯಿಲೆ'-ಎಂದು ಕಠೋಪನಿಷತ್ತಿನಲ್ಲಿ 'ವಶೀಕಾರ್ಯ ಪರಂಪರೈಯೇ'-ನಾವು ಯಾವುಯಾವುಗಳನ್ನು ವಶಮಾಡಿಕೊಳ್ಳಬೇಕೋ ಅವುಗಳ ಪರಂಪರೆಯನ್ನು, 'ವಕುತ್ತವಿಡತ್ತಲೆ'-ವಿಮರ್ಶಿಸಿ ವಿಭಾಗಿಸಿ ಹೇಳುವ ಸ್ಥಳದಲ್ಲಿ ಎಂದರೆ ಚನ್ನಾಗಿ ವ್ಯಕ್ತಮಾಡುವ ಸ್ಥಳದಲ್ಲಿ 'ಭಾಷ್ಯಕಾರರ ಅರುಳಚ್ಚೆಯ್ದಾರ್'-ಶ್ರೀ ಭಾಷ್ಯಕಾರರು ಕೃಪೆಮಾಡಿ ಹೇಳಿರುತ್ತಾರೆ.

ಇಂತಹ ವಿರೋಧಿವರ್ಗಕ್ಕೆಲ್ಲಾ ಒಳ್ಳೇ ಭೇಷಜನ್ಯಾವುದು ಎಂದರೆ, ಸ್ವಾಮಿಯಪಾದದಲ್ಲಿ ಮಾಡತಕ್ಕ ಶರಣಾಗತಿಯೇ ಏನಾ ಬೇರೆ ಇಲ್ಲವೆಂಬ ಅಭಿಪ್ರಾಯವು. ಅದಕ್ಕಾಗಿಯೇ 'ಶರಣಾಗತಿರೇವ' ಎಂಬಲ್ಲಿ 'ಏವ' ಎಂಬ ಅವಧಾರಣವು. ಹಾಗೆಯೇ ಶ್ರುತಿಯಲ್ಲೂ 'ನಾನ್ಯಃ ಪನ್ಥಾವಿದ್ಯತೇ ಅಯನಾಯ'-

ಸರ್ವೇಶ್ವರನನ್ನು ಹೊಂದುವದಕ್ಕೆ ಇದಲ್ಲದೇ ಬೇರೆ ಮಾರ್ಗವೇ ಇಲ್ಲವೆಂದು ಹೇಳಿರುತ್ತದೆ. ಆದರೆ ಭಕ್ತಿ ಮಾರ್ಗವೂ ಕೂಡ ಮೋಕ್ಷದಾಯಕವಾಗಿರುವಲ್ಲಿ "ಶರಣಾಗತಿರೇವ" ಎಂದು ಅವಧಾರಣವು ಹೇಗೆ ಎಂದು ಆಕ್ಷೇಪಿಸಿದರೆ; ಆ ಭಕ್ತಿರೂಪವಾದ ಉಪಾಸನೆಗಳಲ್ಲೂ ಕೂಡ ಶರಣಾಗತಿಯು ಅಙ್ಗವಾದುದರಿಂದ, ಶರಣಾಗತಿರೇವ ಎಂಬ, ಅವಧಾರಣ ಪ್ರಯೋಗವು ಸಮಂಜಸವಾದುದೇ. ಹಾಗೆಯೇ ಇನ್ನೊಂದು ಸ್ಥಳದಲ್ಲಿ ಶ್ರೀಮದಾಚಾರ್ಯರವರು "ಪ್ರಪನ್ನಾದನ್ಯೇಷಾಂ ನದಿಶತಿ ಮುಕುಂದೋ ನಿಜಪದಂ" ಮೋಕ್ಷಾರ್ಥಿಯಾಗಿ ಭಕ್ತಿ ಪ್ರಪತ್ತಿ ಮಾರ್ಗಗಳನ್ನವಲಂಬಿಸದಲ್ಲದೆ ಮುಕ್ತಿದಾಯಕನಾದ ವೈಕುಂಠಪತಿಯು ತನ್ನ ಸ್ಥಾನವಾದ ದಿವ್ಯವೈಕುಂಠವನ್ನು ತೋರನು" ಎಂದು ಹೇಳಿರುತ್ತಾರೆ. ಶ್ರೀಭಾಷ್ಯಕಾರರವರು ಮೇಲಿನ ಅಭಿಪ್ರಾಯವನ್ನು ಯಾವ ಸಂದರ್ಭದಲ್ಲಿ ಹೇಳಿರುತ್ತಾರೆ ಎಂದರೆ ಆನುಮಾನಿಕಾಧಿಕರಣದ ಪ್ರಥಮ ಸೂತ್ರದಲ್ಲಿ 1. 4. 1) ಕಠವಲ್ಲಿಯ ವಾಕ್ಯಗಳಾದ "ಇಂದ್ರಿಯೇಭ್ಯಃ ಪರಾಹ್ಯರ್ಥಾ ಅರ್ಥೇಭ್ಯಶ್ಚ ಪರಂಮನಃ| ಮನಸಸ್ತು ಪರಾಬುದ್ಧಿಃ ಬುದ್ಧೇರಾತ್ಮಾ ಮಹಾನ್ಪರಃ| ಮಹತಃ ಪರಮ ವ್ಯಕ್ತಮವ್ಯಕ್ತಾತ್ಪುರುಷಃ ಪರಃ|ಪುರುಷಾನ್ನಪರಃ ಕಿಞ್ಚಿತ್ಸಾ ಕಾಷ್ಠಾಸಾಪರಾಗತಿಃ (ಕಠ. 1. 3. 10. 11) ಎಂಬುವದಕ್ಕೆ ಸಾಂಖ್ಯರ ಪೂರ್ವಪಕ್ಷಾರ್ಥವನ್ನು ಖಂಡಿಸಿ ಸರಿಯಾದ ಅರ್ಥವನ್ನು ಬೋಧಿಸುವ ಸಂದರ್ಭದಲ್ಲಿ ಹೇಳಿರುತ್ತಾರೆ. ಈ ವಾಕ್ಯಗಳ ಅಭಿಪ್ರಾಯವೇನೆಂದರೆ:—ಸ್ವಾಮಿಯನ್ನು ಹೊಂದಿ ನಿರವಧಿಕಾತಿಶಯ ಸುಖವನ್ನನುಭವಿಸಬೇಕಾದರೆ ಯಾವುಯಾವುಗಳನ್ನು ವಶಮಾಡಿಕೊಳ್ಳಬೇಕೆಂಬ ವಿಚಾರದಲ್ಲಿ ಕುದುರೆಗಳಿಗೆ ಹೋಲಿಸಿದ ಇಂದ್ರಿಯಗಳನ್ನು ನಾವು ವಶಮಾಡಿಕೊಳ್ಳುವದಕ್ಕಿಂತಲೂ ಮಾರ್ಗಗಳಿಗೆ ಹೋಲಿಸಿದ ವಿಷಯಗಳನ್ನೇ ವಶಮಾಡಿಕೊಳ್ಳುವುದು ಉತ್ತಮವು; ಹೇಗೆಂದರೆ ಇಂದ್ರಿಯಗಳು ವಶದಲ್ಲಿದ್ದರೂ ಅವುಗಳನ್ನು ವಿಷಯ ಸಾನ್ನಿಧ್ಯದಲ್ಲಿ ನಿಗ್ರಹಿಸುವುದು ದುಸ್ತರವಾದುದರಿಂದ ವಿಷಯಗಳನ್ನು ಬಯಸದೆ ಅವುಗಳನ್ನೇ ವಶಮಾಡಿಕೊಳ್ಳುವದು ಉತ್ತಮವು. ವಿಷಯಗಳ ವಶಮಾಡಿಕೊಳ್ಳುವದಕ್ಕಿಂತಲೂ, ವಿಷಯಗಳಲ್ಲಿ ಪ್ರವರ್ತಿಸುವಹಾಗೆ ಮಾಡುವ ಹಗ್ಗಕ್ಕೆ ಹೋಲಿಸಿರುವ ಮನಸ್ಸನ್ನೇ ವಶಮಾಡಿಕೊಳ್ಳುವದು ಇನ್ನೂ ಉತ್ತಮು. ಹೀಗೆ ಮನಸ್ಸನ್ನು ವಶಮಾಡಿಕೊಳ್ಳುವದಕ್ಕಿಂತ ಸಾರಥಿಯಾದ ಬುದ್ಧಿಯನ್ನೇ ವಶಮಾಡಿಕೊಳ್ಳುವದು ಇನ್ನೂ ಉತ್ತಮು. ಬುದ್ಧಿಗಿಂತಲೂ ರಥದ ಯಜಮಾನನಾದ ಮುಖ್ಯ ಕರ್ತೃವಾದ ಆತ್ಮನನ್ನೇ ವಶ

ರಹಸ್ಯತ್ರಯತ್ತಿಲ್ ವಿರೋಧಿವರ್ಗತ್ಯಾಜ್ಯಸೂಚನೈ.

ಇವ್ವಿರೋಧಿ ವರ್ಗತ್ತೈಯೆಲ್ಲಾಮ್, ರಹಸ್ಯತ್ರಯತ್ತಿಲ್ ವಿಧಿಕ್ಕಿರ ವರ್ಥಂಗಳುಡೈಯ ವ್ಯವಚ್ಛೇದ ಶಕ್ತಿಯಾಲುಮ್, ನಮುಕ್ಕು ಕ್ಕ

ಮಾಡಿಕೊಳ್ಳುವದು ಅದಕ್ಕಿಂತಲೂ ಉತ್ತಮ. ರಥರೂಪದಲ್ಲಿರುವ ದೇಹವನ್ನೇ ವಶಮಾಡಿಕೊಂಡರೆ, ಸಾರಥಿಯಾದ ಬುದ್ಧಿಯಾಗಲಿ, ಇನ್ನ್ಯಾರೇ ಆಗಲಿ ತೊಂದರೆ ಮಾಡಲಾರರಾದುದರಿಂದ, ಅಂತಹ ಶರೀರವನ್ನು ವಶಮಾಡಿಕೊಳ್ಳುವದು ಸರ್ವ ಶ್ರೇಷ್ಠವು. ದೇಹದಿಂದಲ್ಲವೇ ಈ ಆತ್ಮನ ಸರ್ವ ಪ್ರವೃತ್ತಿಗಳು. ಆ ದೇಹವನ್ನೇ ನಿಗ್ರಹಿಸಿದರೆ ಸರ್ವವೂ ವಶವಾಗುತ್ತದೆಂಬ ಭಾವವು ಇಂತಹ ದೇಹಕ್ಕೂ ಅಂತರ್ಯಾಮಿಯಾಗಿ ಸಂಸಾರ ಮಾರ್ಗದ ಕೊನೆಯನ್ನು ಕಾಣಿಸುವ, ಮತ್ತೂ ಸಕಲ ಪ್ರವೃತ್ತಿಯನ್ನುಂಟುಮಾಡುವ ಸಿದ್ಧೋಪಾಯನಾದ ಪರಮ ಪುರುಷನನ್ನೇ ವಶಮಾಡಿಕೊಂಡರೆ ಅದೇ ಸರ್ವೋತ್ಕೃಷ್ಟ ಉಪಾಯವು. ಅದರ ಮೇಲೆ ಇನ್ನು ಯಾವುದನ್ನೂ ವಶಮಾಡಿಕೊಳ್ಳತಕ್ಕದ್ದು ಇರುವದಿಲ್ಲವು ಎಂದು ಸಮರ್ಥನೆ ಮಾಡುವದಕ್ಕಾಗಿ "ಸಾಕಾಷ್ಠಾ ಸಾಪರಾಗತಿಃ" ಎಂದು ಶ್ರುತಿಯು ಉದ್ಘೋಷಿಸಿ ಹೇಳಿರುತ್ತದೆ. ಹಾಗೆ ಪರಮ ಪುರುಷನನ್ನು ವಶಮಾಡಿಕೊಳ್ಳುವ ಪ್ರಧಾನೋಪಾಯವು ಯಾವುದೆಂದರೆ "ತಸ್ಯಚ ವಶೀಕರಣಂ ತಚ್ಛರಣಾಗತಿರೇವ" ಎಂದು ಶ್ರೀ ಭಾಷ್ಯಕಾರರು ಶಾಸ್ತ್ರಾರ್ಥವನ್ನು ಸ್ಫುಟವಾಗಿ ತೋರಿದರು. ಇದೇ ಸರ್ವೋತ್ಕೃಷ್ಟವಾದ ಗತಿಯು. ವಿವೇಕಿಯಾದ ಪ್ರತಿಯೊಬ್ಬನು ಇದನ್ನು ಗುರುಮುಖೇನ ಅನುಷ್ಠಿಸಿ, ಪ್ರಾಪ್ತಿ ವಿರೋಧಿಯಾದ, ಕೃತ್ಯಾಕರಣ, ಅಕೃತ್ಯಕರಣ ಮೊದಲಾದ ಭಗವದಾಜ್ಞೋಲ್ಲಂಘನ ಮೂಲಕ ಬಂದ ಭಗವನ್ನಿಗ್ರಹವನ್ನು ಕಳದುಕೊಳ್ಳತಕ್ಕದೆಂಬುವದು ಮುಖ್ಯ ತಾತ್ಪರ್ಯವು. ಇದೀಗ ವಶೀಕಾರ್ಯಪರಂಪರೆ ಎಂದು ಮೂಲದಲ್ಲಿ ಹೇಳಲ್ಪಟ್ಟಿತು.

ಈ ವಿರೋಧಿ ವರ್ಗವನ್ನೆಲ್ಲಾ ಈ ಮೂರು ರಹಸ್ಯದಲ್ಲೂ ಎಲ್ಲಿ ತಿಳಿಯಬಹುದೆಂದರೆ ಹೇಳುತ್ತಾರೆ.

ರಹಸ್ಯತ್ರಯದಲ್ಲಿ ವಿರೋಧಿವರ್ಗತ್ಯಾಜ್ಯ ಸೂಚನೆಯು.

'ಇವ್ವಿರೋಧಿ ವರ್ಗತ್ತೈ ಯೆಲ್ಲಾಮ್'- ಈ ವಿರೋಧಿ ಸಮೂಹವನ್ನೆಲ್ಲಾ, 'ರಹಸ್ಯತ್ರಯತ್ತಿಲ್'-ಈ ಮೂರು ರಹಸ್ಯದಲ್ಲೂ, (1) 'ವಿಧಿಕ್ಕಿರ ವರ್ಥಂಗಳ ವ್ಯವಚ್ಛೇದ ಶಕ್ತಿಯಾಲುಮ್'-ವಿಧಿರೂಪವಾದ

ಅರ್ಥಗಳಿಂದ ತೋರಿಬರುವ, ಅಂತಹ ವಿಧಿಗೆ ವಿರುದ್ಧವಾದುದು ನಿಷೇಧವಾದುದೆಂದು ಅರ್ಥಕೊಡುವ ಶಕ್ತಿಯಿಂದಲೂ, ಹೇಗೆಂದರೆ ನಿಜ ಹೇಳತಕ್ಕದ್ದು ಎಂಬ ವಿಧಿಯಿದ್ದರೆ, ಆ ನಿಜಕ್ಕೆ ವಿರುದ್ಧವಾದ ಅನೃತ ಹೇಳತಕ್ಕದ್ದಲ್ಲವು ಎಂಬುವದು ವ್ಯವಚ್ಛೇದ ಶಕ್ತಿಯಿಂದುಂಟಾಗುತ್ತದೆಂಬ ಭಾವವು. (2) **ನಮಸ್ಸುಕ್ಕಳಿಲ್ ಮಕಾರಙ್ಗಳಿಲ್ ಷಷ್ಟಿಗಳಾಲುಮ್** – ಮೂಲಮನ್ತ್ರದ್ವಯಗಳಲ್ಲಿರುವ **ನಮ** ಶ್ಯಬ್ದದ ಮಕಾರದ ಷಷ್ಠೀ ವಿಭಕ್ತಿಯಿಂದಲೂ, **ನಮಃ** ಎಂಬಲ್ಲಿ **ಮಃನ** ಅಂದರೆ **ನಮಮ** ಎಂಬ ಯೋಜನೆಯಿಂದ ತೋರಿಬರುವ ಷಷ್ಠಿ ವಿಭಕ್ತಿಯಿಂದಲೂ, ಮತ್ತೂ (3) **ಸರ್ವಪಾಪ ಶಬ್ದತ್ತಾಲುಮ್** – ಚರಮಶ್ಲೋಕದಲ್ಲಿರುವ ಸರ್ವಪಾಪ ಶಬ್ದದಿಂದಲೂ, **ಅನುಸನ್ಧಿತ್ತು**– ಜ್ಞಾಪಕಕ್ಕೆ ತಂದುಕೊಂಡು, **ಸಂಸಾರತ್ತಿಲ್** – ಸಂಸಾರದಲ್ಲಿ, **ಅಡಿಚೂಟ್ಟಾಲೆ** – ಬೇಸಿಗೆಯ ಬಿಸಲಿನಿಂದ ಕಾದ ಮರಳಿನಲ್ಲಿ ಕಾಲಿಟ್ಟರೆ ಕಾಲು ಬೆಂದುಹೋಗುವಹಾಗೆ, ಸಂಸಾರತಾಪದಿಂದ ಬಳಲಿರುವದರಿಂದ, **ಪೇತ್ತುಕ್ಕು** – ಶ್ರೇಯಸ್ಸಿಗೆ ಎಂದರೆ ಭಗವತ್ಪ್ರಾಪ್ತಿಗೆ, **ಉರಿಪ್ಪಾನ** – ಉಪಾಯಭೂತವಾದ, **ವಳಿಗಳಿಲೇ** – ಮಾರ್ಗಗಳಲ್ಲಿ, ಭಕ್ತಿಪ್ರಪತ್ತಿಮಾರ್ಗಗಳಲ್ಲಿ **ತ್ವರಿಕ್ಕ ಪ್ರಾಪ್ತಮ್** – ತ್ವರೆಮಾಡುವದು ಉಚಿತವು.

(ಈ ವಿರೋಧಿವರ್ಗದ ತ್ಯಾಜ್ಯವು ಈ ಮೂರು ರಹಸ್ಯಗಳಲ್ಲಿ ಎಲ್ಲಿ ಹೇಳಿರುತ್ತದೆ ಎಂದರೆ:—(1) ಈ ರಹಸ್ಯಗಳಲ್ಲಿ ನಾವು ವರ್ತಿಸತಕ್ಕ ವಿಧಾನವು ವಿಧಿಸಿರುತ್ತದೆ. ಇಂತಹ ವಿಧಿಯ ಶಕ್ತಿಯಿಂದಲೇ ಅದಕ್ಕೆ ವಿರುದ್ಧಾಚರಣೆಯು ಕೂಡದು ಎಂಬುವದು ತೋರಿಬರುತ್ತದೆ. ಹೇಗೆಂದರೆ:—ನಮಗೆ ವಿರೋಧಿವರ್ಗವು ಯಾವುವೆಂದರೆ ಅವಿದ್ಯಾ, ಕರ್ಮ, ವಾಸನಾ, ರುಚಿ, ಪ್ರಕೃತಿಸಂಬಂಧಗಳು. ಇವುಗಳು ಯಾವುವು ಎಂಬುವದಕ್ಕೆ ೧೮೫ನೇ ಪುಟನೋಡಿ. ವಿಹಿತವಾದುದರಿಂದ ವಿಹಿತವಲ್ಲದುದನ್ನು ಊಹಿಸಬಹುದು. ಪ್ರಣವದಲ್ಲಿ ಭಗವಚ್ಛೇಷತ್ವವು ವಿಹಿತವಾದುದು. ಇದರಿಂದ ಸ್ವಾತಂತ್ರ್ಯವೂ, ದೇವತಾಂತರ ಶೇಷತ್ವವೂ ವಿಹಿತವಲ್ಲದುದೆಂಬುವದು ತೋರಿಬರುತ್ತದೆ. ಇವುಗಳು ವಿರೋಧಿವರ್ಗಗಳು. ಹಾಗೆಯೇ, ಮಕಾರದಲ್ಲಿ ಆತ್ಮನ ಜ್ಞಾನಸ್ವರೂಪವು ವಿಹಿತವಾದುದು, ಇದರಿಂದ ಈತನಿಗೆ ದೇಹವೇ ಆತ್ಮಾ ಎಂಬ ಭ್ರಮವು ವಿಹಿತವಲ್ಲವು ಎಂಬುವದು ವ್ಯವಚ್ಛೇದಶಕ್ತಿಯಿಂದ ತೋರಿಬರುತ್ತದೆ. "ಸರ್ವಂವಾಕ್ಯಂ

ಪೊರುಳೊನ್ರೆನ ನಿನ್ರಪೂಮಗಣಾತ ನವನಡಿ ಚೇರ್
ನ್ದರುಳೊನ್ರು ಮನ್ನನವನ್ ಕೊಳುಮಾಯು ಮಮ್ಮೈನ್ದಪಯನ್।
ಮರುಳೊನ್ರಿಯ ವಿನ್ನೈವಲ್ ವಿಲಜ್ಞ್ ನ್ರಿನ್ನೈ ಯೆನ್ದರಿವಾರ್
ಇರುಳೊನ್ರಿಲಾವಕ್ಕೈ ಯೆನ್ಮನತ್ತೆನ್ರೇರವಿಯುಮ್ಮಿನರೇ ॥೧೧॥

ಸಾವಧಾರಣಂ" ಎಂಬ ನ್ಯಾಯರೀತ್ಯಾ, ಎಲ್ಲಾ ವಾಕ್ಯಗಳೂ ಅವಧಾರಣ ಯುಕ್ತವಾದುದರಿಂದ ಜೀವವಾಚ್ಯನು, ಅಕಾರವಾಚ್ಯರಾದ ಲೋಕದಂಪತಿಗಳಿಗೇಸೇ ಶೇಷಭೂತರೆಂದರೆ ಇತರ ದೇವತೆಗಳಿಗಲ್ಲವೆಂಬುವದು ವ್ಯವಚ್ಛೇದಶಕ್ತಿಯಿಂದುಂಟಾಗುತ್ತದೆಂಬ ಭಾವವು. ಮತ್ತು, ಮೂಲಮಂತ್ರದಲ್ಲೂ, ದ್ವಯಮಂತ್ರದಲ್ಲೂ ಇರುವ ನಮಶ್ಶಬ್ದವನ್ನು ಸಖಂಡವಾಗಿ ಭಾವಿಸಿದರೆ ಮಃ, ನ ಎಂದಾಗುತ್ತದೆ. ಶೇಷತ್ವವೂ ಕೈಂಕರ್ಯಗಳೂ ತನಗಲ್ಲವು ಎಂಬರ್ಥವು, ಉಂಟಾಗುವದರಿಂದ ವಿರೋಧಿವರ್ಗವು ಹೇಳಲ್ಪಟ್ಟಿತು. ಮಃ ನ ಎಂಬಲ್ಲಿ ಮಃ ಎಂಬುವದು ಷಷ್ಠೀವಿಭಕ್ತಿಯಾಗುತ್ತದೆ. ಇದರಿಂದ ಮುಖ್ಯವಾಗಿ ಮಮಕಾರವನ್ನು ತೊಲಗಿಸತಕ್ಕದ್ದೆಂಬುವದು ತೋರಿಬರುತ್ತದೆ. ಚರಮಶ್ಲೋಕದ "ಸರ್ವಪಾಪ" ಶಬ್ದದಿಂದಲೂ ಸರ್ವವಿರೋಧಿವರ್ಗವೂ ಹೇಳಲ್ಪಟ್ಟಿತು.)

ಹೀಗೆ ಈ ಸರ್ವವಿರೋಧಿವರ್ಗವೂ ಮುಖ್ಯವಾಗಿ ತ್ಯಜಿಸಲ್ಪಡತಕ್ಕದ್ದೆಂದು ಅನುಸನ್ಧಾನ ಮಾಡಿ, ಗ್ರೀಷ್ಮಋತುವಿನ ಕಾಡ ಮರಳಲ್ಲಿ ಕಾಲು ಬೆಂದುಹೋಗುವ ಹಾಗೆ, ಸಂಸಾರದಲ್ಲಿ ಮಹತ್ತಾದ ತಾಪವಿರುವದರಿಂದ, ಭಗವತ್ಪ್ರಾಪ್ತಿಗೆ ಸಾಧಕವಾದ ಮಾರ್ಗಗಳಲ್ಲಿ ತ್ವರೆಮಾಡುವದು ಯುಕ್ತವಾಗಿರುತ್ತದೆ.

ಹಿಂದೆ ಹೇಳಿದ ಅಭಿಪ್ರಾಯಗಳನ್ನು ಒಂದು ತಮಿಳ್ ಪಾಶುರದಿಂದಲೂ ಒಂದು ಸಂಸ್ಕೃತ ಶ್ಲೋಕದಿಂದಲೂ ಸಮರ್ಥನೆ ಮಾಡಿಹೇಳಿ ಅಧಿಕಾರ ಸಮಾಪ್ತಿಯನ್ನು ಮಾಡುತ್ತಾರೆ.

ಅರ್ಥ:— (1) **ಪೊರುಳ್**- ಪುರುಷಾರ್ಥವು, **ಒನ್ರು**- ಒಂದೇ ಎಂದು, **ಏನ**- ಹೇಳೋಣ ಹೇಗೋ ಹಾಗೆ, **ನಿನ್ರ**- ಇರುವ ಅಂದರೆ ಪರಮಪುರುಷಾರ್ಥವೂ ಇವನೊಬ್ಬನೇ "**ಏಕಮೇವಾದ್ವಿತೀಯಂ**" ಎಂದು ಶಾಸ್ತ್ರಗಳು ಹೇಳುವಹಾಗೆ ಅನವಧಿಕ ಕಲ್ಯಾಣ ಸ್ವರೂಪಗುಣ

ವಿಭವೈಶ್ವರ್ಯ ಚೇಷ್ಟಿತೆಗಳನ್ನುಳ್ಳವನಾಗಿ, **ಪೂಮಗಳ್‌ನಾತನ್**– ಕಮಲವಾಸಿನಿಯಾದ ಲಕ್ಷ್ಮಿಯ ನಾಥನು, ಶ್ರಿಯಃಪತಿಯು (ಇದರಿಂದ ಲಕ್ಷ್ಮೀವಿಶಿಷ್ಟನಾದ ನಾರಾಯಣನೇ ಪರಮಪ್ರಾಪ್ಯವೆಂದು ಹೇಳಲ್ಪಟ್ಟಿತು) (2) **ಅವನ್ ಅಡಿ ಶೇರ್‌ನ್ದ**– ಆ ಶ್ರಿಯಃಪತಿಯ ಪಾದಗಳನ್ನು ಶರಣುಹೊಂದಿ, **ಅರುಳ್**– ಕೃಪೆಯನ್ನು, **ಒನ್ರು**– ಹೊಂದಲು ಯೋಗ್ಯನಾದ ಅಥವಾ **ಅರುಳ್**– ಕೃಪೆಯಿಂದ, **ಒನ್ರು**– ಏಕೀಭವಿಸಲ್ಪಟ್ಟ **ಒನ್ರು**– ಏಕೀಕೃತನಾದ ಎಂದರೆ ಕೃಪಾವಿಷಯನಾಗಿ ಮಾಡಲ್ಪಟ್ಟ **ಅನ್ಬರ್**– ಪ್ರಿಯಭಕ್ತನಾದ ಜೀವಾತ್ಮನು (ಇದರಿಂದ ಭಗವತ್ಪ್ರೇಮವನ್ನು ಸ್ವಾಭಾವಿಕವಾಗಿ ಹೊಂದಿ ಆತನಿಗೆ ತುಂಬಾ ಪ್ರಿಯನಾದ ಮೋಕ್ಷಾರ್ಥಿಯಾದ ಜೀವಾತ್ಮನು ಪ್ರಾಪ್ತೃವೆಂದು ಹೇಳಲ್ಪಟ್ಟಿತು.) (3) **ಅವನ್ ಕೊಳುಪಾಯಂ**– ಆ ಮೋಕ್ಷಾರ್ಥಿಯಾದ ಭಕ್ತನು ಅವಲಂಬಿಸುವ ಉಪಾಯವು. (ಇದರಿಂದ ಸಿದ್ಧೋಪಾಯ ಸಾಧ್ಯೋಪಾಯರೂಪಗಳಾದ ಪ್ರಾಪ್ತ್ಯುಪಾಯವು ಹೇಳಲ್ಪಟ್ಟಿತು.) (4) **ಅವೈನ್ದ**– ಪರಿಪೂರ್ಣವಾದ, **ಪಯನ್**– ಫಲವು (ಇದರಿಂದ ಪರಿಪೂರ್ಣಬ್ರಹ್ಮಾನುಭವರೂಪವಾದ ಫಲವು ಹೇಳಲ್ಪಟ್ಟಿತು) (5) **ಮರುಳೊನ್ರಿಯ**– ಮರುಳ್ ಅಂದರೆ ಅವಿದ್ಯೆ, ಅಜ್ಞಾನ, ಅನ್ಯಥಾಜ್ಞಾನ, ವಿಪರೀತಜ್ಞಾನವೆಂಬ ತ್ರಿವಿಧವಾದ ಅವಿದ್ಯೆಯಿಂದ ಕೂಡಿಕೊಂಡು ಏಕೀಭವಿಸಿರುವ **ವಿನೈ**– ಪಾಪವೇ, **ವಲ್**– ದೃಢವಾದ, **ವಿಲಙ್ಗು** ಬೇಡಿಯು ಇದರಿಂದ ಪ್ರಾಪ್ತಿವಿರೋಧಿಯು ಹೇಳಲ್ಪಟ್ಟದುದೂ ಅಲ್ಲದೆ, ಅದು ತುಂಬಾ ಬಲವತ್ತರವಾದುದೆಂದೂ ತೋರಿಸಲ್ಪಟ್ಟಿತು- **ಎನ್ನಿನೈ ಐನ್ದುಮ್**– ಎಂಬೀ ಐದು ಅರ್ಥಗಳನ್ನೂ, **ಅರಿವಾರ್**– ಚನ್ನಾಗಿ ವಿಮರ್ಶಿಸಿ ತಿಳಿದ ಮಹನೀಯರಾದ ನಮ್ಮ ಆಚಾರ್ಯರುಗಳು, **ಇರಳೊನ್ರು**– ಮೇಲೆ ಹೇಳಿದ ಮೂರುವಿಧವಾದ ಅಜ್ಞಾನಂಗಳೊಂದೂ, **ಯಿಲಾವಕೈ**– ಇಲ್ಲದಿರೋಣ ಹೇಗೋ ಹಾಗೆ, **ಎನ್ಮನಂ**– ನಮ್ಮ ಮನಸ್ಸು, **ತೇರ**– ಹೇಗೆ ಪ್ರಸನ್ನವಾಗಬೇಕೋ ಹಾಗೆ, **ವಿಯಮ್ಬಿನರೇ**– ಉಪದೇಶಿಸಿದರಲ್ಲವೇ ನಮ್ಮ ಆಚಾರ್ಯರುಗಳು, ಅಜ್ಞಾನಾಂಧಕಾರವನ್ನು ತೊಲಗಿಸಿ, ಜ್ಞಾನವು ವಿಕಾಸವಾಗುವ ಹಾಗೆ ಮಾಡಿ, ಅರ್ಥಪಞ್ಚಕದ ತತ್ವಾರ್ಥಗಳನ್ನೆಲ್ಲಾ ಉಪದೇಶಿಸಿ, ಪರೋಪಕಾರ

ಪ್ರಾಪ್ಯಂ ಬ್ರಹ್ಮ ಸಮಸ್ತ ಶೇಷಿ ಪರಮಂ ಪ್ರಾಪ್ತಾಹ ಮಸ್ಯೋಚಿತಃ । ಪ್ರಾಪ್ತಿ ರ್ದಾಯಧನ ಕ್ರಮಾದಿಹ ಮಮ

ವನ್ನು ಮಾಡಿರುತ್ತಾರೆಂದು ಶ್ಲಾಘಿಸುತ್ತಾರೆ. ಇಲ್ಲಿ ಪ್ರಾಪ್ಯಸ್ವರೂಪವು ಲಕ್ಷ್ಮಿಯೊಂದಿಗೆ ನಿತ್ಯಯೋಗವನ್ನು ಹೊಂದಿದುದೆಂಬದಾಗಿಯೂ ಪ್ರಾಪ್ತಾವಾದ ಜೀವಾತ್ಮನು, ಸರ್ವೇಶ್ವರನೊಂದಿಗೇನೇ ಇರಲು ಯೋಗ್ಯನಾಗಿ ಪರಿಶುದ್ಧನಾಗಿ, ಸ್ವಾಮಿಗೆ ತುಂಬಾ ಪ್ರಿಯವಾಗಿರುವ ಸ್ವರೂಪ ಉಳ್ಳವನೆಂದೂ ಹೇಳಲ್ಪಟ್ಟಿತು. ಹಾಗೆಯೇ ಪ್ರಾಪ್ತ್ಯುಪಾಯವೂ ಅದರಿಂದುಂಟಾಗುವ ಫಲವೂ, ಹೇಳಲ್ಪಟ್ಟು, ಪ್ರಾಪ್ತಿವಿರೋಧಿಯು ಬಹಳ ಪ್ರಬಲವಾದುದೆಂದೂ ಸೂಚಿಸಲ್ಪಟ್ಟಿತು.

ಮುಂದಿನ ಸಂಸ್ಕೃತ ಶ್ಲೋಕದಲ್ಲಿ, **ಈ ಅರ್ಥಪಞ್ಚಕದ** ಜ್ಞಾನವು ಭಗವತ್ಪ್ರಾಪ್ತಿಗೆ ಸಾಧಕವಾದ ಉಪಾಯಾನುಷ್ಠಾನಕ್ಕೆ ತುಂಬಾ ಉಪಯುಕ್ತವಾದುದೆಂದು ಹೇಳಿ, ಶೇಷ ಶೇಷಿಭಾವ ಮೊದಲಾದ ಉತ್ಕೃಷ್ಟ ಜ್ಞಾನದಿಂದ ತನ್ನ ಸ್ವರೂಪವನ್ನು ಯಥಾರ್ಥವಾಗಿ ತಿಳಿಯಲು ಸಹಕಾರಿಯಾಗುತ್ತದೆಂದು ತಿಳಿಸಿ, ಅಧಿಕಾರ ಪರಿಸಮಾಪ್ತಿಯನ್ನು ಮಾಡುತ್ತಾರೆ.

ಅವತಾರಿಕೆ.—ಹಿಂದೆ ಪ್ರಾಪ್ತಿವಿರೋಧಿ ರೂಪವಾದ ನಮ್ಮ ಅಪರಾಧಗಳೇ ಪ್ರಬಲವಾದ ದೃಢವಾದ ಬೇಡಿ ಎಂದು ಹೇಳಲ್ಪಟ್ಟಿತು. ಅಂತಹ ಬೇಡಿಯಿಂದ ಬಿಡುಗಡೆಯನ್ನು ಹೊಂದದಿರುವದು ತನ್ನ ಅಪರಾಧವೇ ಎಂದೂ, ಆ ಸುಲಭೋಪಾಯವು ಆ ಕೃಪಾನಿಧಿಯ ಪಾದಾರವಿಂದದಲ್ಲಿ ಮಾಡುವ ಭರನ್ಯಾಸವೇ ಎಂದೂ ಉಪದೇಶಿಸುತ್ತಾರೆ.

ಅರ್ಥ.—ಪ್ರಾಪ್ಯಂ - ಪ್ರಾಪ್ಯವು, **ಸಮಸ್ತಶೇಷಿಪರಮಂ** - ಸಮಸ್ತಕ್ಕೂ **"ಪತಿಂ ವಿಶ್ವಸ್ಯ"** ಎಂದು ಹೇಳಿರುವ ಹಾಗೆ ಶೇಷಿಯಾದುದರಿಂದಲೇ ಸರ್ವೋತ್ಕೃಷ್ಟನಾದ, **ಬ್ರಹ್ಮ** - ಪರಬ್ರಹ್ಮನು; **"ಪರಮ"**ವೆಂದರೆ ಯಾವುದಕ್ಕಿಂತ ಶ್ರೇಷ್ಠವಾದುದು ಇಲ್ಲವೋ ಅದು ಪರಮವು ; ಅಥವಾ **ಪರಾಮಾಯಸ್ಯಸಃ** ಎಂಬ ಯೋಜನೆಯಿಂದ ಯಾವನಿಗೆ ಶ್ರೇಷ್ಠಳಾದ ಲಕ್ಷ್ಮಿಯು ಪತ್ನಿಯೋ ಅವನು ಪರಮನು. ಆದುದರಿಂದ ಶ್ರಿಯಃಪತಿಯೇ ನಿರುಪಾಧಿಕ ಸರ್ವಶೇಷಿಯಾಗಿ ಪ್ರಾಪ್ಯನು

ಪ್ರಾಪ್ತಾ ಸ್ವತಸ್ಸೂರಿವತ್। ಹಂತೈ ನಾಮತಿ ವೃತ್ತನಾನಹ ಮಹಮ್ಮೃತ್ಯಾ ವಿಮತ್ಯಾಶ್ರಯ। ಸ್ನೇತು ಸ್ಸಂಪ್ರತಿ ಶೇಷಿ ದಂಪತಿ (ಶೇಷಸಂಪದಿ) ಭರನ್ಯಾಸಸ್ತುಮೇ ಶಿಷ್ಯತೇ॥

ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರ ಸ್ವತಂತ್ರಸ್ಯ ಶ್ರೀಮದ್ವೇಂಕಟ ನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಅರ್ಥಪಞ್ಚಕಾಧಿಕಾರಶ್ಚತುರ್ಥಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯನಮಃ

ಎಂಬ ಭಾವವು. **ದಾಸಭೂತಾಸ್ಸ್ವತಸ್ಸರ್ವೇಹ್ಯಾತ್ಮಾನಃ ಪರಮಾತ್ಮನಃ** ಎಂದು ಹೇಳಿರುವದರಿಂದ ನಾವೆಲ್ಲಾ ಶೇಷಭೂತರು. ಆತನು ಸರ್ವಶೇಷಿಯು.

ಅಹಂ- ಜೀವಾತ್ಮರಲ್ಲಿ ನಿದರ್ಶನರೂಪನಾದ ನಾನು, **ಅಸ್ಯ**- ಈ ಸರ್ವಶೇಷಿಯಾದ ಪ್ರಾಪ್ಯನಾದ ಶ್ರಿಯಃಪತಿಗೆ, **ಉಚಿತಃ**- ಜ್ಞಾನತ್ವ, ಅಮಲತ್ವ, ಆನಂದತ್ವ ಮೊದಲಾದವುಗಳಿಂದ ಯೋಗ್ಯನಾದ, ಅಥವಾ, ಅನನ್ಯಗತಿಕನಾಗಿಯೂ, ಅನನ್ಯಾರ್ಹಪ್ರಿಯದಾಸನಾಗಿಯೂ, ಪ್ರಪನ್ನನಾಗಿಯೂ ಇರುವದರಿಂದ ಯೋಗ್ಯನಾದ, **ಪ್ರಾಪ್ತಾ**- ಪ್ರಾಪ್ತೃವು. (1) **"ಅಹಮಸ್ಯಾವರೋಭ್ರಾತಾ ಗುಣೈರ್ದಾಸ್ಯಮುಪಾಗತಃ"** ಎಂಬ ಅಮೋಘ ಲಕ್ಷ್ಮಣೋಕ್ತಿಯು, ಶೇಷಭಾವವೇ ತನಗೆ ಯೋಗ್ಯವಾದ ಸ್ವರೂಪವೆಂಬುವದನ್ನು ವ್ಯಕ್ತಪಡಿಸುತ್ತದೆ. ಅರ್ಥಪಂಚಕದಲ್ಲಿ ಮೂರನೇದಾದ ಉಪಾಯವು ಕೊನೆಯಲ್ಲಿ ಹೇಳಲ್ಪಡುತ್ತದೆ. ನಾಲ್ಕನೇದಾದ ಫಲವು ಈಗ ಹೇಳಲ್ಪಡುತ್ತದೆ.

ಪ್ರಾಪ್ತಿಃ- ಪರಿಪೂರ್ಣಬ್ರಹ್ಮಾನುಭವ, ಕೈಙ್ಕರ್ಯಮೊದಲಾದವು **ಸೂರಿವತ್**- ನಿತ್ಯಸೂರಿಗಳಹಾಗೆ, ಇಲ್ಲಿ ಮುಕ್ತರೂ ಕೂಡಹೇಳಲ್ಪ

---

(1) ಅಸ್ಯ- ಈ ಮಹಾನುಭಾವನಾದ ಸರ್ವಶೇಷಿಯಾದ ಶ್ರೀರಾಮನಿಗೆ **ಅಹಂ**- ನಿತ್ಯಕೈಙ್ಕರ್ಯವನ್ನು ಎಸಗಬೇಕೆಂದಿರುವ ನಾನು, **ಅವರೋಭ್ರಾತಾ** ಪ್ರೀತಿಪಾತ್ರನಾದ ತಮ್ಮನು **ಗುಣೈಃ**- ಸ್ವರೂಪನಿರೂಪಕಧರ್ಮಗಳಿಂದಲೇ **ದಾಸ್ಯಮುಪಾಗತಃ**- ದಾಸಭಾವವನ್ನು ಹೊಂದಿರುವೆನು ಎಂಬರ್ಥವು.

ಟ್ಟರು. **ಮಮ**- ನಿತ್ಯಸೂರಿಗಳಿಗೆ ಸಹೋದರನಾಗಿಯೂ, ಲೋಕಪಿತಾವಿಗೆ ಪುತ್ರನಾಗಿಯೂ, ಇರುವ ನನಗೆ, **ಇಹ**- ಈ ಪ್ರಾಪ್ತಿಯ ಸಂಬನ್ಧದಲ್ಲಿ, **ದಾಯಧನಕ್ರಮಾತ್**– ಪಿತ್ರಾರ್ಜಿತಸ್ವತ್ತಿನ ಕ್ರಮದಲ್ಲಿ, **ಸ್ವತಃಪ್ರಾಪ್ತಾ**– ತಾನಾಗಿಯೇ ಉಂಟಾದುದು. (ಈ ಜೀವಾತ್ಮನ ಪರಿಶುದ್ಧಸ್ವರೂಪವನ್ನು ಕುರಿತು ಆಲೋಚಿಸಿದರೆ ನಿತ್ಯಮುಕ್ತರಿಗೆ ಭಗವದನುಭವಕೈಂಕರ್ಯಾದಿರೂಪಫಲವು ಹೇಗೆ ಉಚಿತವಾದುದೋ, ಹಾಗೆಯೇ ಅವರಗೋಷ್ಟಿಗೇಸೇರಿ, ಅವರ ಸಹೋದರನಾಗಿ ಅವರಹಾಗೆಯೇ ಜೀವಾತ್ಮನಾದ ತಮಗೂ ಅಂತಹ ಪ್ರಾಪ್ತಿಯು ಪಿತ್ರಾರ್ಜಿತದಹಾಗೆ ಸಲ್ಲತಕ್ಕದ್ದು. ಸರ್ವೇಶ್ವರನಿಗೂ ಜೀವಾತ್ಮರಿಗೂ ಪಿತಾಪುತ್ರ ಸಂಬಂಧವಿರುವದರಿಂದ, ಅಂತಹ ಪ್ರಾಪ್ತಿಗೆ ತಮಗೂ ಬಾಧ್ಯತೆಯುಂಟೆಂಬ ಭಾವವು. ಹೀಗೆ ಪ್ರಾಪ್ತಿಗೆ ಸ್ವತಸಿದ್ಧವಾದ ಬಾಧ್ಯತೆ ಇದ್ದರೂ, ದುಷ್ಪುತ್ರನು ಪಿತಾವಿನವಿಷಯದಲ್ಲಿ ವಿಹಿತಾಚರಣೆ ಇಲ್ಲವಾದಪ್ರಯುಕ್ತ, ಆ ಪಿತಾವಿನ ಕೋಪಕ್ಕೆ ಪಾತ್ರನಾಗಿ ದಾಯಧನಕ್ಕೆ ಅನರ್ಹನೆಂದು ತೋರಿಸಿಕೊಂಡುದುದರಿಂದ ಆ ದುಷ್ಪುತ್ರನು ವಿವೇಕಿಯಾಗುವತನಕ ಪಿತಾವಾದವನು ಹೇಗೆ ಕೊಡದೇ ಇರುತ್ತಾನೆಯೋ, ಹಾಗೆಯೇ, ಈ ಕೃಪಾಸಾಗರನಾದ ಲೋಕಪಿತಾವಾದ ಸರ್ವೇಶ್ವರನೂ ದೇಹಾತ್ಮಭ್ರಾಂತಿ, ಸ್ವತಂತ್ರಾತ್ಮಭ್ರಾಂತಿ, ತಾನೇ ಪರಮಾತ್ಮನೆಂಬ ಭ್ರಾಂತಿ, ಇವೇ ಮೊದಲಾದವುಗಳಿಂದ ಸ್ವಾಮಿಯ ಆಜ್ಞೋಲ್ಲಂಘನವನ್ನು ಮಾಡಿ, ಆತನ ಕೋಪಕ್ಕೆ ಈ ಜೀವಾತ್ಮನು ಗುರಿಯಾಗಿರುವದರಿಂದ, ಸರಿಯಾಗಿ ಈತನಿಗೂ ಸಲ್ಲಬೇಕಾದ ದಾಯಧನವಾದ ಭಗವತ್ಪ್ರಾಪ್ತಿಯು ವಿಳಂಬಿಸುವ ಹಾಗೆ ಮಾಡಿರುತ್ತಾನೆ. ಕೃಪಾಶಾಲಿಯಾದುದರಿಂದ ಯಾವುದಾದರೂ ಒಂದು ಕಾಲದಲ್ಲಿ ಈ ಪುತ್ರನಿಗೂ ಸಲ್ಲತಕ್ಕ ಭಾಗವನ್ನು ಕೊಟ್ಟುಬಿಡುವನು. ಆದರೆ ಪ್ರಕೃತದಲ್ಲಿ ಅಯೋಗ್ಯನಾಗಿರುವದರಿಂದ ನಿಲ್ಲಿಸಿರುತ್ತಾನೆಂದು ಮುಂದೆ ಹೇಳುತ್ತಾರೆ.

ವಿನಾಂ – ಈ ಸ್ವತಸ್ಸಿದ್ಧವಾದ ಪ್ರಾಪ್ತಿಯನ್ನು, **ವಿಮುತ್ಯಾಶ್ರಯಃ** – ದುಷ್ಕರ್ಮ ಪರಿಪಾಕದಿಂದುಂಟಾದ ಅಜ್ಞಾನಕ್ಕೆ ಆಶ್ರಯನಾಗಿರುವ, **ಅಹಂ** – ನಾನು, ಸ್ವತಃ ಅಪರಾಧಿಯಾದ ನಾನು, **ಅಹಂಮತ್ಯಾ** – ಅಹಙ್ಕಾರದಿಂದ, ಈ ಅಹಙ್ಕಾರವು ಏನು ಮಾಡುತ್ತದೆಂದರೆ, (1) "**ಅನಾತ್ಮನ್ಯಾತ್ಮ ಬುದ್ಧಿರ್ಯಾ ಅಸ್ವೇ ಸ್ವಮಿತಿಯಾ**

(1) ವಿ. ಪು. 6. 7. 11.

ಮತಿಃ" ಆತ್ಮವಲ್ಲದೇ ಇರುವ ದೇಹವನ್ನು ಆತ್ಮಾ ಎಂಬ ಭ್ರಾಂತಿ, ತನ್ನದಲ್ಲದೇ ಇರುವ ಆತ್ಮವನ್ನು ತನ್ನದೆಂಬ ಸ್ವತನ್ತ್ರಾತ್ಮಭ್ರಾಂತಿ, ಲೋಕದಲ್ಲಿರುವ ಯಾವ ವಸ್ತುವೂ ತನ್ನದಲ್ಲವು; ಹೀಗಿರುವಲ್ಲಿ ತನ್ನದು ಎಂಬ ಭ್ರಾಂತಿ, ಇಂತಹ ಭ್ರಾಂತಿಗಳನ್ನುಂಟುಮಾಡಿ ಭಗವನ್ನಿಗ್ರಹಕ್ಕೆ ಈತನನ್ನು ಬಳಪಡಿಸುತ್ತದೆ ಎಂಬ ಭಾವವು. ಹೀಗೆ **ಅತಿವೃತ್ತವಾ**ಃ – ಕಳಕೊಂಡವನಾಗಿರುತ್ತೇನೆ, ಎಂದರೆ ಇನ್ನೂ ದಾಯಧನವನ್ನು ಹೊಂದದೇ ಇರುತ್ತೇನೆಂಬಭಿಪ್ರಾಯವು. **ಹಂತ** – ಈ ವಿಷಯದಲ್ಲಿ ತುಂಬಾ ಖೇದವು, ಇದರಿಂದ ತುಂಬಾ ಪರಿತಾಪವು ನಿದರ್ಶಿಸಲ್ಪಟ್ಟಿತು.

ಜೀವಾತ್ಮನಿಗೆ ಅಹಂಭಾವಾದಿ ಭ್ರಮೆಗಳು ತೊಲಗುವದು ತುಂಬಾ ಕಷ್ಟವು ಎಂಬುವದು ಶ್ರೀ ಪರಾಶರಭಟ್ಟರ (1) **"ತ್ವಂಮೇ ಹಂಮೇ"** ಎಂಬ ಶ್ಲೋಕದಲ್ಲಿ ಬಹು ಸ್ವಾರಸ್ಯವಾಗಿ ಉಪಪಾದಿತವಾಗಿರುತ್ತದೆ:—ಮುಂದೆ ಈ ಭಗವನ್ನಿಗ್ರಹದಿಂದ ನಿವೃತ್ತಿಯನ್ನು

---

(1) **ತ್ವಂಮೇ ಹಂಮೇ ಕುತಸ್ತತ್ತದಪಿಕುತ ಇದಂ ವೇದಮೂಲ ಪ್ರಮಾಣಾದೇತಚ್ಚಾನಾದಿ ಸಿದ್ಧಾದನುಭವ ವಿಭವಾತ್ತರ್ಹಿ ಸಾಕ್ರೋಶ ಏವ। ಕ್ವಾಕ್ರೋಶಃ ಕಸ್ಯ ಗೀತಾದಿಷು ಮಮ ವಿದಿತಃ ಕೋತ್ರಸಾಕ್ಷೀಸುಧೀಸ್ಸ್ಯಾದ್ಧಂತ ತ್ವತ್ಪಕ್ಷಪಾತೀ ಸ ಇತಿ ನೃಕಲಹೇ ಮೃಗ್ಯ ಮಧ್ಯಸ್ಥವತ್ತ್ವಂ ॥**

ಎಂಬುವದು ಪೂರಾ ಶ್ಲೋಕವು. ಶ್ರೀರಙ್ಗದಲ್ಲಿ ಕೊಠಾರೋತ್ಸವವು ಪೂರೈಸಿದ ನಂತರ ಉತ್ಸವ ಮೂರ್ತಿಗೆ ೧೦೮ ಬೆಳ್ಳಿ ಕಲಶಗಳಲ್ಲಿ ಮನ್ತ್ರಪೂತ ಜಲದಿಂದ ಮಹಾಭಿಷೇಕ ಮಹೋತ್ಸವವು ಜರುಗುತ್ತದೆ. ಅನಂತರ ಸ್ವಾಮಿಗೆ ಅಲಂಕಾರಕಾಲದಲ್ಲಿ ಸ್ವಲ್ಪಕಾಲವಿಳಂಬವು ಸಿಕ್ಕುವುದರಿಂದ, ಆ ಕಾಲದಲ್ಲಿ ನೆರೆದಿರುವ ಶ್ರೀ ವೈಷ್ಣವಗೋಷ್ಠಿಯು, ಶ್ರೀ ರಂಗನಾಯಿಕಿಯ ವರಪ್ರಸಾದದಿಂದವತರಿಸಿದವರಾದುದರಿಂದ ಜ್ಞಾನದೀಪ್ತಿಯಿಂದ ವಿರಾಜಿಸುತ್ತಿರುವ ಶ್ರೀ ಪರಾಶರಭಟ್ಟರವರ ಅಮೋಘವಾದ ಪಾಂಡಿತ್ಯವನ್ನು ಬಲ್ಲವರಾದ ಪ್ರಯುಕ್ತ ಯತ್ಕಿಂಚಿದುಪದೇಶ ಕೃಪೆಗೈಯಬೇಕೆಂದು ಪ್ರಾರ್ಥಿಸಲು; ಆಗ ಭಟ್ಟರು ಈ ಶ್ಲೋಕವನ್ನು ಹೇಳಿ ಅದನ್ನು ಬಹು ವಿಸ್ತಾರವಾಗಿ ಉಪಪಾದಿಸಿದರು. ಇದು ಸ್ವತನ್ತ್ರಾತ್ಮಭ್ರಾಂತಿಯನ್ನು ಪ್ರಕಟನೆ ಮಾಡುವ ಜೀವಾತ್ಮ ಪರಮಾತ್ಮ ಸಂವಾದವು :—

ಹೊಂದಿ ದಾಯಧನವಾದ ಮೋಕ್ಷಸಾಮ್ರಾಜ್ಯವನ್ನು ಪಡೆಯುವದು ಹೇಗೆ? ಅದು ಸಾಧ್ಯವೇ? ಎಂದರೆ, ತುಂಬಾ ಸುಲಭಸಾಧ್ಯವಾದುದೇ ಎಂದು ತಿಳಿಸುತ್ತಾರೆ. ಇಂತಹ ದುರ್ದಿಶೆಯು ಪ್ರಾಪ್ತವಾಗಿದ್ದರೂ ಅಂತಹ ಪ್ರಾಪ್ತಿಯನ್ನು ಹೊಂದುವ ಉಪಾಯು ಉಂಟು. ಅದು ಯಾವುದೆಂಬುವದನ್ನು ಸೂಚಿಸುತ್ತಾರೆ.

ಸಂಪ್ರತಿ – ಇಂತಹ ದುರ್ದಿಶೆಯಲ್ಲೂ, **ಸೇತುಃ** – ಆತನನ್ನು ಹೊಂದುವ ಉಪಾಯುವು, **ಶೇಷಸಂಪದಿ** – ಪರಿಪೂರ್ಣ ಬ್ರಹ್ಮಾನುಭವ ಪೂರ್ವಕ ಕೈಙ್ಕರ್ಯಪ್ರಾಪ್ತಿ ಎಂಬ ಶೇಷಸಾಮ್ರಾಜ್ಯದಲ್ಲಿ, **ಶೇಷಿದಂಪತಿ** – ಎಂಬುವದು ಪಾಠಾಂತರವು, ಎಂದರೆ ನಮಗೆ ಶೇಷಿಗಳಾದ

ಪರಮಾತ್ಮನು ಜೀವಾತ್ಮನನ್ನು ಕುರಿತು ಹೇಳುತ್ತಾನೆ:—ತ್ವಂಮೇ - ನೀನು ನನ್ನವನು.

ಅದಕ್ಕೆ ಜೀವಾತ್ಮನ ಉತ್ತರವು:—ಅಹಂಮೇ - ನಾನು ನನ್ನವನೇ ಅಂದರೆ ನಾನು ಸ್ವತಂತ್ರನು.

ಪರಮಾತ್ಮನು. "ಕುತಸ್ತತ್" - ನೀನು ನಿನ್ನವನು ಎಂದು ಹೇಳಿದೆಯಲ್ಲಾ ಅದು ಹೇಗೆ?

ಜೀವಾತ್ಮನು. "ತದಪಿಕುತಃ" - ನಾನು ನಿನ್ನವನು ಎಂದು ನೀನು ಹೇಳಿದೆಯಲ್ಲಾ ಅದು ಹೇಗೆ?

ಪರಮಾತ್ಮನು. "ಇದಂವೇದಮೂಲಪ್ರಮಾಣಾತ್" - ನೀನು ನನ್ನವನು ಎನ್ನುವದಕ್ಕೆ ವೇದದ ಮುಖ್ಯ ಪ್ರಮಾಣವಿರುವದರಿಂದ; ಅಥವಾ ವೇದಮೂಲವಾದ ಪ್ರಣವದಲ್ಲಿ **ಮಃ ಆಯ್ಕೆವ** ಎಂಬ ಅರ್ಥ ತೋರಿಬರುವದರಿಂದ.

ಜೀವಾತ್ಮನು. "ಏತಚ್ಚಾನಾದಿ ಸಿದ್ಧಾದನುಭವ ವಿಭವಾತ್" - ತಮಗೆ ಪ್ರಮಾಣದ ಒಂದು ಕಾರಣವಾದರೆ, ನನಗೆ ಎರಡು ಕಾರಣಗಳುಂಟು. ನಾನು ನನ್ನವನೇ ಎಂಬುವದಕ್ಕೆ ಇದು ಅನಾದಿ ಸಿದ್ಧವಾಗಿ ಬಂದಿರುತ್ತದೆ, ಮತ್ತೂ ಅದರನುಭವವೂ ಬಹಳ ದಿನಗಳಿಂದ ಬಂದಿರುತ್ತದೆ. ಆದುದರಿಂದ ಪ್ರಮಾಣಕ್ಕಿಂತ ಇವೆರಡೂ ಪ್ರಬಲವಾದವುಗಳು ಎಂಬ ಭಾವವು.

ಪರಮಾತ್ಮನು. "ತರ್ಹಿಸಾಕ್ರೋಶ ಏವ" - ಹಾಗೋ, ಹಾಗಾದರೆ ವಿವಾದಕ್ಕೆ ಕಾರಣವಾದುದೇ.

ಲೋಕದಂಪತಿಗಳಾದ ಲಕ್ಷ್ಮೀನಾರಾಯಣರಲ್ಲಿ ಮಾಡಿದ, **ಭರನ್ಯಾಸಸ್ತು** – ಪ್ರಪದನಾನುಷ್ಠಾನಮಾತ್ರವೇ, ಈ ಎರಡನೇ ಪಾಠದಲ್ಲಿ ದ್ವಯಮಂತ್ರದ ಶ್ರೀಮನ್ನಾರಾಯಣ ಶಬ್ದಾರ್ಥವು ತೋರಿಬಂದು, ಲಕ್ಷ್ಮೀನಾರಾಯಣರಿಬ್ಬರೂ ಸಿದ್ಧೋಪಾಯರೆಂಬ ಭಾವವು ತೋರಿಬರುವದರಿಂದಲೂ, ಸಿದ್ಧೋಪಾಯ ಸಾಧ್ಯೋಪಾಯಗಳೆರಡೂ ಹೇಳಲ್ಪಡುವದರಿಂದಲೂ, ಇದೇ ಉತ್ತಮಪಾಠವು.

ವೃಥೈವ ಭವತೋ ಯಾತಾ ಭೂಯಸೀ ಜನ್ಮಸಂತತಿಃ ।
ತಸ್ಯಾಮನ್ಯತಮಂ ಜನ್ಮ ಸಂಚಿಂತ್ಯ ಶರಣಂವ್ರಜ ॥

(ಶಾಂಡಿ. ಸ್ಮೃ.)

ಜೀವಾತ್ಮನು. "ಕ್ವಾಕ್ರೋಶಃಕಸ್ಯ" – ವಿವಾದ ಎಲ್ಲಿಯದು? ಯಾರ ವಿವಾದವು?

ಪರಮಾತ್ಮನು. "ಗೀತಾದಿಷು ಮಮವಿದಿತಃ" – ಗೀತೆ ಮೊದಲಾದವುಗಳಲ್ಲಿ ವಿವಾದ ನಡೆದು ನೀನು ನನ್ನವನೆಂದು ಹೇಳಲ್ಪಟ್ಟು, ಈ ವಿಷಯವು ಸರ್ವರಿಗೂ ವೇದ್ಯವಾಗಿರುತ್ತದೆ.

ಜೀವಾತ್ಮನು. "ಕೋತ್ರಸಾಕ್ಷೀ" – ಈ ಸಂದರ್ಭದಲ್ಲಿ ನಿನ್ನಕಡೆಯ ಸಾಕ್ಷಿ ಯಾರು?

ಪರಮಾತ್ಮನು. "ಸುಧೀಸ್ಯಾತ್" – ಬ್ರಹ್ಮವಿತ್ತೇ ಸಾಕ್ಷಿಯು, ಅರ್ಜುನನು ಸಾಕ್ಷಿಯು.

ಜೀವಾತ್ಮನು. "ಹಂತ ತ್ವತ್ಪಕ್ಷಪಾತೀ ಸಃ" – ಬಹು ಸ್ವಾರಸ್ಯವು! ನಿನ್ನ ಪಕ್ಷಪಾತಿಯೇ ಅವನು ಎಂದರೆ ನಿನ್ನ ಸಾಕ್ಷಿಯು, "**ಜ್ಞಾನೀತ್ವಾತ್ಮೈವಮೇಮತಂ**" ಜ್ಞಾನಿಯು ನನ್ನವನೇ ಎಂದೂ, "**ಮಾಮುಪಪ್ರಾಣಾಹಿ ಪಾಂಡವಾಃ**" ಎಂದು ನೀನೇ ಹೇಳಿಕೊಂಡಿರುತ್ತೀಯೆ.

"ಇತಿ ನೃಕಲಹೆ" – ಹೀಗೆ ಜೀವಾತ್ಮನೊಂದಿಗೆ ನಡೆದ ವಿವಾದದಲ್ಲಿ, ತ್ವಂ – ನೀನು "ವ್ಯಗ್ರಮಧ್ಯಸ್ಥವತ್" – ಒದ್ದೆಬಟ್ಟೆಯನ್ನುಟ್ಟು ಪ್ರಮಾಣಮಾಡಲು ಉದ್ಯುಕ್ತನಾದವನ ಹಾಗೇನಾದರೂ ತೋರುತ್ತಿಯೋ ಎಂಬದಾಗಿ ಉತ್ಪ್ರೇಕ್ಷೆಯು, ಪರಮಾತ್ಮನು ಎಷ್ಟು ಒಡಂಬಡಿಸಿದರೂ ಜೀವಾತ್ಮನು ಅವೆಲ್ಲವನ್ನೂ ತನ್ನ ಭ್ರಮೆಯ ಸಾಮರ್ಥ್ಯದಿಂದ ನಿರಾಕರಿಸಿದುದರಿಂದ, ವಾದಮಾಡಲು ಏನೂ ಅವಕಾಶವಿಲ್ಲದೆ ಕಡೆಗೆ ಒದ್ದೇಬಟ್ಟೆಯನ್ನುಟ್ಟು ಪ್ರಮಾಣಮಾಡಿ ಹೇಳುವಹಾಗೆ ಇದೆ ಎಂದು ಉತ್ಪ್ರೇಕ್ಷಿಸಿರುತ್ತಾರೆ.

ಎಂದರೆ ಅನೇಕ ಜನ್ಮ ಸಮೂಹವು ವ್ಯರ್ಥವಾಗಿ ಕಳೆದುಹೋಯಿತು. ಅದರಲ್ಲಿ ಈ ಒಂದು ಜನ್ಮವನ್ನಾದರೂ ಸುಸಮಯವೆಂದು ಭಾವಿಸಿ ಪರಮಪುರುಷನನ್ನು ಶರಣು ಹೊಂದು ಎಂದು ಹೇಳಿರುವ ಮೇರೆಗೆ, ಲಕ್ಷ್ಮೀನಾರಾಯಣರನ್ನೇ ಸಿದ್ಧೋಪಾಯರೆಂದು ವರಿಸಿ ಅವರುಗಳ ಪಾದಾರವಿಂದದಲ್ಲಿ ಭರಸಮರ್ಪಣರೂಪವಾದ ಸಾಧ್ಯೋಪಾಯವನ್ನು ಅನುಷ್ಠಿಸತಕ್ಕದ್ದೆಂಬ ಭಾವವು. "**ನಾನ್ಯಃಪನ್ಥಾ ಅಯನಾಯ ವಿದ್ಯತೇ**" ಎಂದು ಹೇಳಿರುವ ಹಾಗೆ ಇದೇ ಸುಲಭವಾದ ಮುಖ್ಯ ಮಾರ್ಗವು.

ಈ ಅರ್ಥಪಞ್ಚಕಾಧಿಕಾರದಲ್ಲಿ (1) ಪ್ರಾಪ್ಯನಾದ ಲಕ್ಷ್ಮೀಪತಿಯನ್ನನುಸಂಧಾನ ಮಾಡುವ ಕ್ರಮವೂ (2) ಪ್ರಾಪ್ತೃಗಳಾದ ಜೀವಾತ್ಮರುಗಳ ಸಾಧಾರಣವಾದ ನೈಜವಾದ ಸ್ವರೂಪವೂ, ಅಸಾಧಾರಣವಾದ ಕರ್ಮದಿಂದುಂಟಾದ ಆಕಾರವೂ, (3) ಸಿದ್ಧೋಪಾಯ ಸಾಧ್ಯೋಪಾಯಗಳೂ, (4) ಪರಿಪೂರ್ಣ ಬ್ರಹ್ಮಾನುಭವ ಕೈಙ್ಕರ್ಯ ಪ್ರಾಪ್ತಿರೂಪ ಫಲವೂ (5) ಅದರ ವಿರೋಧಿವರ್ಗಗಳೂ, ಅವುಗಳಲ್ಲಿ ಪ್ರಧಾನವಾದುದು ಭಗವನ್ನಿಗ್ರಹವೂ, ಅದು ಹೇಗೆ ಅನರ್ಥಗಳಿಗೆ ಕಾರಣವೆಂಬುವದೂ, ಅದಕ್ಕೆ ಪರಿಹಾರವು ಶರಣಾಗತಿಯೇ ವಿನಾ ಬೇರೆ ಇಲ್ಲವೆಂಬುವದೂ ಹೇಳಲ್ಪಟ್ಟಿತು.

ಈ ಅಭಿಪ್ರಾಯವೆಲ್ಲಾ "**ಸಮಾನೇವೃಕ್ಷೇ ಪುರುಷೋನಿಮಗ್ನೋ ಽ ನೀಶಯಾ ಶೋಚತಿ ಮುಹ್ಯಮಾನೋಜುಷ್ಟಂ ಯದಾಪಶ್ಯತ್ಯನ್ಯ ಮೀಶಮಸ್ಯ ಮಹಿಮಾನಮಿತಿ ವೀತಶೋಕಃ**" ಎಂಬ ಮುಂಡಕೋಪನಿಷದ್ವಾಕ್ಯದಿಂದ (3-1-2) ವ್ಯಕ್ತಪಡುತ್ತದೆ. **ಅನೀಶಯಾ**–ಭೋಗ್ಯಭೂತವಾದ ಪ್ರಕೃತಿಸಂಬಂಧದಿಂದ **ಮುಹ್ಯಮಾನಃ**–ದೇಹಪ್ರಾಪ್ತಿಯಾಗುವದರ ಮೂಲಕ ಜ್ಞಾನವು ತಿರೋಹಿತವಾಗಿ ತನ್ನ ಜ್ಞಾನತ್ವ, ಆನಂದತ್ವ, ಅಮಲತ್ವ, ಶೇಷತ್ವಗಳು ತಿಳಿಯದೆ ಭ್ರಮಿಸುವನಾಗಿ, **ಸಮಾನೇವೃಕ್ಷೇ**– ಪಕ್ಷಿಗಳು ವೃಕ್ಷದಲ್ಲಿ ವಾಸಮಾಡುವ ಹಾಗೆ, ಛೇದನಾರ್ಹವಾದ ಈ ದೇಹದಲ್ಲಿ, **ಪುರುಷಃ**–ಜ್ಞಾನತ್ವಾದಿಗಳಿಂದ ತಿರ್ಯಗ್ಜಂತುಗಳಿಗಿಂತಲೂ ಶ್ರೇಷ್ಠನಾದ ಈ ದೇಹದಲ್ಲಿರುವ ಜೀವಾ

ತ್ಮನು, **ನಿಮಗ್ನಃ**— ಆ ಪ್ರಕೃತಿಯೊಂದಿಗೆ ತಾದಾತ್ಮ್ಯವನ್ನು ಹೊಂದಿ ಅದರಲ್ಲಿ ಮುಳುಗಿದವನಾಗಿ, **ಶೋಚತಿ**— ಅದರಿಂದುಂಟಾದ ದುಃಖಗಳನ್ನನುಭವಿಸುತ್ತಾನೆ. **ಯದಾ**— ಯಾವಾಗ, **ಈಶಂ**— ಎಲ್ಲಾದಕ್ಕೂ ನಿಯಾಮಕನಾದ ತನ್ನಲ್ಲೇ ಇರುವ ಸರ್ವೇಶ್ವರನನ್ನು, **ಅನ್ಯಮಿತಿ**— ತನಗಿಂತಲೂ ಧಾರಕತ್ವ, ನಿಯನ್ತೃತ್ವ, ಶೇಷಿತ್ವ ಮೊದಲಾದವುಗಳಿಂದ ವಿಲಕ್ಷಣನೆಂದೂ, **ಅಸ್ಯಮಹಿಮಾನಂ**— ಈತನ ಸ್ವರೂಪ ಗುಣ ವಿಭವೈಶ್ವರ್ಯಾದಿ ಮಹಿಮೆಗಳನ್ನು, **ಪಶ್ಯತಿ**— ಸಾಕ್ಷಾತ್ಕರಿಸುವನೋ, ಆಗ, **ವೀತಶೋಕಃ**— ದುಃಖಗಳನ್ನೆಲ್ಲಾ ಕಳೆದುಕೊಂಡವನಾಗುವನು." ಎಂಬುವದು ಈ ಶ್ರುತಿಯ ಅರ್ಥವು. ಈ ಶ್ರುತಿವಾಕ್ಯದಲ್ಲಿ ಈ ಅರ್ಥಪಞ್ಚಕಾಭಿಪ್ರಾಯಗಳೂ ಎಲ್ಲಿ ತೋರುತ್ತವೆ ಎಂದರೆ:— **ಅನ್ಯಮೀಶಃ ಅಸ್ಯಮಹಿಮಾನಂ**— ಎಂಬುವದರಿಂದ ಪ್ರಾಪ್ಯದ ವಿಲಕ್ಷಣಸ್ವರೂಪವೂ, **ಪುರುಷಃ**— ಎನ್ನುವದರಿಂದ ಪ್ರಾಪ್ತೃವಿನ ಸ್ವರೂಪವೂ, **ಯದಾಪಶ್ಯತಿ**— ಎಂಬುವದರಿಂದ ಉಪಾಯವೂ, **ವೀತಶೋಕಃ**- ಎಂಬುವದರಿಂದ ಫಲವೂ, **ನಿಮಗ್ನೋನೀಶಯಾ ಶೋಚತಿಮುಹ್ಯಮಾನಃ**- ಎಂಬುವದರಿಂದ ವಿರೋಧಿವರ್ಗವೂ ಹೇಳಲ್ಪಟ್ಟವು.

ಇಂತು ಶ್ರೀಮದ್ರಹಸ್ಯತ್ರಯಸಾರದ ನಾಲ್ಕನೆಯ ಅರ್ಥ
ಪಞ್ಚಕಾಧಿಕಾರಕ್ಕೆ ತಿರುನಾರಾಯಣಪುರಂ ವಿಜಯ
ರಾಘವ ಶರ್ಮನ **ಆಚಾರ್ಯಹೃದಯಾನ್ವೇಷಿಣೀ**
ಎಂಬ ಕನ್ನಡ ಅರ್ಥ ತಾತ್ಪರ್ಯಗಳು
ಸಮಾಪ್ತವಾದುವು.

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯನಮಃ.

ಶುದ್ಧಾ ಶುದ್ಧ ಪತ್ರಿಕೆ.

ಪುಟ	ಪಜ್ತ್ತಿ	ಅಶುದ್ಧ	ಶುದ್ಧ
೧ ರಿಂದ ೮ನೇ ಪುಟಗಳಿಗೆ ಬದಲಾಗಿ ೨೪೭ರಿಂದ ೨೫೪ ವುಟಗಳೆಂದಿರಬೇಕು.			
೨೫೪	೭	ಶಾಸಗಳಲ್ಲಿ	ಶಾಸ್ತ್ರಗಳಲ್ಲಿ
೨೫೬	೩	ಸಿದ್ಧಾನ್ತಕ್ಕೇ	ಸಿದ್ಧಾನ್ತುಕ್ಕೇ
೨೫೮	೧೯	ಅವುಗಳಿಗೆ ಸತ್ತೆ	ಸತ್ತೆ
೨೬೧	೧	ಯೆನ್ನಲ್	ಯೆನ್ನಿಲ್
,,	೧೦	ಆಧಾರವಾಗುವ	ಆಧಾರವಾಗುವ ಹಾಗೆ
೨೬೨	೫	ಸ್ವರವುಂ	ಸರ್ವವುಂ
೨೬೬	೧೨	ಅವೆಲಾ	ಅವೆಲ್ಲಾ
೨೬೭	೪	ಒರೊರು ಪಡಿಯೇ	ಒರೊರು
೨೭೦	೧೪	ಲೋಕೆದಲ್ಲೂ	ಲೋಕದಲ್ಲೂ
೨೭೧	ಕೊನೇದು	ಆಶ್ರಯವಾಗಿರುವ	ಸ್ವರೂಪಕ್ಕೆ ಆಶ್ರಯವಾಗಿರುವ
೨೭೨	೩	ನಿತಿ	ನಿತಿವದತಿ
೨೭೩	೯	ಅವಗಳನ್ನ	ಅವುಗಳನ್ನ
೨೭೫	೨೧	ಅನನಿಗೂ	ಅವನಿಗೂ
,,	೨೬	ಭೋಗ್ಯಃ	ಮುಕ್ತಭೋಗ್ಯಃ
೨೭೮	ಕೊನೇದು	ಪ್ರಪತ್ತಿಮಾರವೂ	ಪ್ರಪತ್ತಿಮಾರ್ಗವೂ
೨೮೨	೧೩	ಶೇಷತ್ವವು	ಶೇಷಿತ್ವವು
೨೮೫	೨	ವಶೀಕರಣಾರ್ಥ ಮಾಕ	ವಶೀಕರಣಾರ್ಥವಾಕ ವಿಹಿತಮಾನ
೨೮೭	೯	ಸಯೀಸ್ಯಾತ್ಮಾ	ಸ್ತ್ರಯೀಸಾರಸ್ತ್ರ್ಯತ್ಮಾ
೨೮೯	೬	ಎಂಬೀ	ಎಂದೀ
೨೯೦	೩	ವೆಂದು	ವೆಂದೂ
೨೯೫	೨	ಪ್ರೆರಣೆ	ಪೇರಣೆ

,,	೨೪	ಡ॥	ಡ॥
೩೦೨	೮	ಸ್ವಾಮಿ	ಸ್ವಾಮಿತ್ವ
೩೦೩	೯	ಸಾಮಾನ್ಯ	ಸಾಮ್ಯ
೩೦೪	೨೦	ಮಕಾ	ಮಕಾರ
೩೦೫	೮	ಭಾವಗಳನ್ನು	ಭಾವಗಳನ್ನೂ
,,	೧೧	ಶೇಪ	ಶೇಷ
,,	೨೦	ಆಯನಂ	ಅಯನಂ
೩೧೦	೭	ಯೋಗಿನಿ	ಯೋಗಿಸಿ
,,	೧೭	ಚೆತನ	ಚೇತನ
೩೧೧	೧೪	ವ್ಯಾಜ್ಯ	ವ್ಯಾಜ
,,	೨೩	ಭೋಧಿಸುವ	ಬೋಧಿಸುವ
೩೧೩	೩	ಪ್ರುರುಳೇ	ಪೊರುಳೇ
,,	೧೩	ವಿರ್ಯೇಣ	ವೀರ್ಯೇಣ
೩೧೭	೨	ಹ್ಯವಾಕ	ಹೇವಾಕ
,,	೨೪	ವಿಪಶ್ಚಿತಮಃ	ವಿಪಶ್ಚಿತ್ತಮಃ
೩೧೯	೧೯	ಗೆದ್ದು	ವಾದದಲ್ಲಿ ಗೆದ್ದು
೩೨೧	೭	ಭೆಗವಚ್ಛರೀರ	ಭಗವಚ್ಛರೀರ
,,	೨೧	ಪಜ್ತಿ	ಪಙ್ಕ್ತಿ
೩೨೨	೩	ತ್ರೀವೈಷ್ಣವರಿಗೆ	ಶ್ರೀವೈಷ್ಣವರಿಗೆ
೩೨೫	೧೦	ಸಮ್ಮೆತಃ-ಸರ್ವಸಮ್ಮೆತ	ಸಮ್ಮತಃ-ಸರ್ವಸಮ್ಮತ
೩೨೭	೧	ಪ್ರಧಾನಪ್ರತಿತನ್ತ್ರಾ	ಅರ್ಥಪಂಚಕಾ
೩೨೮	೭	ಪ್ರಪಕ್ತಿ	ಪ್ರಪತ್ತಿ
೩೨೯	೯	ಪ್ರಸನ್ನ	ಪ್ರಪನ್ನ
,,	೨೪	ಮನ್ನಾರಾಯಣ	ಶ್ರೀಮನ್ನಾರಾಯಣ
೩೩೧	೧	ಪ್ರಧಾನಪ್ರತಿತನ್ತ್ರಾ	ಅರ್ಥಪಂಚಕಾ
೩೩೩	೧	ಡ॥	ಡ॥
೩೩೪	೧೧	ಸೇವಿಸವ	ಸೇವಿಸುವ
,,	೧೪	ಪರಜ್ರಹ್ಮನನ್ನ	ಪರಬ್ರಹ್ಮನನ್ನು
೩೩೫	೩	ಚಕ್ರಧರೋ	ಚಕ್ರಾಯುಧೋ

೩೩೮	೨೦	ಮಹಾವ್ರತಃ	ಮಹಾವ್ರತಂ
೩೫೧	೨೨	ಹೇಳುವನು	ಹೇಳುವೆನು
೩೩೨	೯	ದುಂಟಾದ	ದುಂಟಾದ ಜ್ಞಾನದಿಂದ
೩೫೪	೮	ಪ್ರಖ್ಯಾತಿಯ್ನು	ಪ್ರಖ್ಯಾತಿಯನ್ನು
೩೫೫	೧೩	ಪುರಾ	ಪೂರಾ
೩೫೭	೧	ರವಿ	ರಪಿ
೩೫೯	೨	ಪುಯರ್ ನಲ	ವುಯರ್ ನಲ
೩೭೪	ಕೆಳಗೆ ೨	ಸರೂಪಂ	ಸ್ವರೂಪಂ
೩೬೬	೧೦	ಆರ್ಚ್ಯಾವತಾರ	ಅರ್ಚ್ಯಾವತಾರ
೩೭೧	೧೩	ಯಥಾಲೋಕಂ	ಯಥಾಲೋಕಂ
೩೭೨	೨೧	ನಿಶಾಯಮ	ನಿಶಾಮಯ
೩೭೬	೪	ಬಾಗಿ	ಭಾಗಿ
,,	೯	ಡ॥	ಡ॥
,,	೧೮	ಕಾನ್ತೇಯ	ಕೌನ್ತೆಯ
೩,,	೨೧	ತದ್ವಿದಃ	ತದ್ವಿದುಃ
೭೮	೩	ಎಚ್ಚಿರಿ	ಎಚ್ಚಿರ
,,	೨	ಮಿಲ್ಲಾ	ಮಿಲ್ಲಾ
೩,,	೪	ಸಂಸರ	ಸಂಸಾರ
೮೨	೩	ಪ್ರಪದ್ಯೇ ನಾರಶಬ್ದಜ್ಗಳಿಲುಮ್	ನಾರಶಬ್ದಜ್ಗಳಿಲುಮ್
೩೮೩	೪	ಮಿರ್ದಿ	ಮರ್ದಿ
೩೯೨	೭	ಇಂದ್ರಿಯಗ್ಗಳಿಗೆ	ಇಂದ್ರಿಯಗಳಿಗೆ
೩೯೪	೫	ಇವ್ವೈಯಡಿಯಾಕೆ	ಇವ್ವೈಯಡಿ ಯಾಕ
೩೯೫	೨೧	ಅಪರಾಧ	ಅಪರಾಧ
೪೦೨	ಕೆಳಗೆ ೨	ಅ ಪರಬ್ರಹ್ಮೋಪಾಸನೆಯು	ಆ ಪರಬ್ರಹ್ಮೋಪಾಸನೆಯು
೪೦೭	೧೨	ಸ್ವಲ್ಪವಪ್ಯಸ್ಯ	ಸ್ವಲ್ಪಮಪ್ಯಸ್ಯ
೪೦೯	೧೫	ವಸಿಷ್ಠಾದಿಗಳಿಕ್ಕು	ವಸಿಷ್ಠಾದಿಗಳಕ್ಕು
೪೧೨	೮	ಪರಿಹಾರಿಸಿ	ಪರಿಹರಿಸಿ
,,	೧೦	ಆಜ್ಞಾತಿಲಜ್ಗನ	ಆಜ್ಞಾತಿಲಜ್ಘನ

ನಮ್ಮಲ್ಲಿ ದೊರೆಯುವ ಗ್ರಂಥಗಳು.

ಆಚಾರ್ಯಹೃದಯಾನ್ವೇಷಿಣೀ ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೊಡನೆ, ಶ್ರೀ ನಿಗಮಾನ್ತ ಮಹಾದೇಶಿಕರವರ,

1. ಅಭೀತಿಸ್ತವವೆಂಬ ಶ್ರೀ ರಙ್ಗನಾಥ ಸ್ತೋತ್ರವು. 0-12-0
2. ಶ್ರೀ ಸ್ತುತಿ ಎಂಬ ಶ್ರೀ ರಙ್ಗನಾಯಕೀ ಸ್ತೋತ್ರವು. 0-12-0
3. ಶ್ರೀಮದ್ರಹಸ್ಯತ್ರಯಸಾರವು:—ಗುರುಪರಂಪರಾಸಾರವು. 0-12-0
4. ಶ್ರೀಮದ್ರಹಸ್ಯತ್ರಯಸಾರವು:—ಉಪೋದ್ಘಾತಾಧಿಕಾರವು ಮತ್ತು ಸಾರನಿಷ್ಕರ್ಷಾಧಿಕಾರವು. 0- 9-0
5. ಶ್ರೀಮದ್ರಹಸ್ಯತ್ರಯಸಾರವು:—ಪ್ರಧಾನಪ್ರತಿತಂತ್ರಾಧಿಕಾರವು ಮತ್ತು ಅರ್ಥಪಞ್ಚಕಾಧಿಕಾರವು. 0-12-0
6. ಶ್ರೀಮದ್ರಹಸ್ಯತ್ರಯಸಾರವು:—ತತ್ವತ್ರಯಾಧಿಕಾರವು ಪ್ರಿಂಟಾಗುತ್ತಲಿದೆ.
7. ಶ್ರೀಯಾಮುನೇಯರವರ ಚತುಶ್ಶ್ಲೋಕೀ 0 -8-0

ಮೂರು ರೂಪಾಯಿಗಳನ್ನು ಮುಂಗಡವಾಗಿ ಕಳುಹಿಸುವವರಿಗೆ ಮುಂದೆ ಅಚ್ಚಾಗುವ ಪುಸ್ತಕಗಳು ಪೋಸ್ಟು ಚಾರ್ಜು ಇಲ್ಲದೆ ಕಳುಹಿಸಲ್ಪಡುವವು.